

# ಪುಸ್ತಕ ಪ್ರಕಾಶನ

91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ,
ಮೈಸೂರು – 570 009
ಫೋನ್: 0821-2545 774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:
**ಪುಸ್ತಕ ಪ್ರಕಾಶನ**
ಬುಕ್‌ಪೋಸ್ಟ್ ಸರ್ವಿಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ-577 132
ಫೋನ್: 08263-228353,240202,
ಮೊಬೈಲ್: 94482 03730
e-mail: raghu202@bsnl.in

## ಪುಸ್ತಕ ಬೆಲೆ ಪಟ್ಟಿ – 2016 *

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ**

| | |
|---|---|
| ಕಿರಗೂರಿನ ಗಯ್ಯಾಳಿಗಳು | ...90.00 |
| ಕರ್ವಾಲೊ | ...105.00 |
| ಚಿದಂಬರ ರಹಸ್ಯ | ...165.00 |
| ಸಹಜ ಕೃಷಿ | ...60.00 |
| ಪರಿಸರದ ಕತೆ | ...105.00 |
| ಮಿಸ್ಸಿಂಗ್ ಲಿಂಕ್ | ...87.00 |
| ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ | ...114.00 |
| ಜುಗಾರಿ ಕ್ರಾಸ್ | ...165.00 |
| ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು | ...63.00 |
| ಫ್ಲೈಯಿಂಗ್ ಸಾಸರ್ಸ್ (1) | ...75.00 |
| ಫ್ಲೈಯಿಂಗ್ ಸಾಸರ್ಸ್ (2) | ...81.00 |
| ಕಾಡಿನ ಕತೆಗಳು (1) | ...72.00 |
| ಕಾಡಿನ ಕತೆಗಳು (2) | ...72.00 |
| ಕಾಡಿನ ಕತೆಗಳು (3) | ...75.00 |
| ಕಾಡಿನ ಕತೆಗಳು (4) | ...75.00 |
| ರುದ್ರಪ್ರಯಾಗದ ಭಯಾನಕ ನರಭಕ್ಷಕ | ...105.00 |
| ಕನ್ನಡನಾಡಿನ ಹಕ್ಕಿಗಳು(1)–ಮಿಂಚುಳ್ಳಿ | ...81.00 |
| ಕನ್ನಡನಾಡಿನ ಹಕ್ಕಿಗಳು(2)– | ...81.00 |
| ಹೆಜ್ಜೆ ಮೂಡದ ಹಾದಿ | ...90.00 |
| ಹಕ್ಕಿ – ಪುಕ್ಕ | ...369.00 |
| ಅಣ್ಣನ ನೆನಪುಗಳು | ...180.00 |
| ಪುಲಿಯೂರಿನ ಸರಹದ್ದು | ...105.00 |
| ಅಬಚೂರಿನ ಪೋಸ್ಟಾಫೀಸು | ...90.00 |
| ಮಿಲೆನಿಯಮ್(1) – ಹುಡುಕಾಟ | ...81.00 |
| ಮಿಲೆನಿಯಮ್(2) – ಜೀವನ ಸಂಗ್ರಾಮ | ...72.00 |
| ಮಿಲೆನಿಯಮ್(3) – ಪೆಸಿಫಿಕ್ ದ್ವೀಪಗಳು | ...78.00 |
| ಮಿಲೆನಿಯಮ್(4) – ಚಂದ್ರನ ಚೂರು | ...81.00 |
| ಮಿಲೆನಿಯಮ್(5) – ನೆರೆಹೊರೆಯ ಗೆಳೆಯರು | ...81.00 |
| ಮಿಲೆನಿಯಮ್(6) – ಮಹಾಯುದ್ಧ(1) | ...87.00 |
| ಮಿಲೆನಿಯಮ್(7) – ಮಹಾಯುದ್ಧ(2) | ...87.00 |
| ಮಿಲೆನಿಯಮ್(8) – ಮಹಾಯುದ್ಧ(3) | ...81.00 |
| ಮಿಲೆನಿಯಮ್(9) – ದೇಶ ವಿದೇಶ(1) | ...81.00 |
| ಮಿಲೆನಿಯಮ್(10) – ದೇಶ ವಿದೇಶ(2) | ...81.00 |
| ಮಿಲೆನಿಯಮ್(11) – ದೇಶ ವಿದೇಶ(3) | ...81.00 |
| ಮಿಲೆನಿಯಮ್(12) – ದೇಶ ವಿದೇಶ(4) | ...81.00 |
| ಮಿಲೆನಿಯಮ್(13) – ವಿಸ್ಮಯ ವಿಶ್ವ(1) | ...72.00 |
| ಮಿಲೆನಿಯಮ್(14) – ಮಹಾ ಪಲಾಯನ | ...87.00 |
| ಮಿಲೆನಿಯಮ್(15) – ವಿಸ್ಮಯ ವಿಶ್ವ(2) | ...72.00 |
| ಮಿಲೆನಿಯಮ್(16) – ಅಡ್ವೆಂಚರ್ | ...72.00 |
| ಮಾಯಾಲೋಕ–1 | ...216.00 |
| The Stories of my environment | ...144.00 |
| ಪಾಕ ಕ್ರಾಂತಿ ಮತ್ತು ಇತರ ಕತೆಗಳು | ...72.00 |
| ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ | ...60.00 |
| ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು | ...60.00 |
| ವಿಮರ್ಶೆಯ ವಿಮರ್ಶೆ | ...162.00 |
| ಮಾಯೆಯ ಮುಖಗಳು(ಚಿತ್ರ ಲೇಖನ) | ...600.00 |
| ಹೊಸ ವಿಚಾರಗಳು | ...450.00 |
| ಕಾಡು ಮತ್ತು ಕ್ರೌರ್ಯ | ಬರಲಿದೆ |
| ಹಕ್ಕಿಗಳ ಗ್ರೀಟಿಂಗ್ ಕಾರ್ಡ್ (6 ಬಗೆಯವು) ಒಂದು ಕಾರ್ಡಿನ ಬೆಲೆ | ...15.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:**

| | |
|---|---|
| ವಿಸ್ಮಯ(1), (2), (3) ಪ್ರತಿಯೊಂದು | 78.00 |
| ಪ್ಯಾಪಿಲಾನ್(1),(2) ಪ್ರತಿಯೊಂದು | ...147.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ. ವಿ.ವಿ. ಬೆಳವಾಡಿ**

| | |
|---|---|
| ನಡೆಯುವ ಕಡ್ಡಿ ಹಾರುವ ಎಲೆ! | ...63.00 |

| | |
|---|---|
| **ಶ್ರೀ ಪ್ರದೀಪ ಕೆಂಜಿಗೆ**: ಬರ್ಮುಡಾ ಟ್ರ್ಯಾಂಗಲ್ | ...72.00 |
| ಅದ್ಭುತ ಯಾನ | ...108.00 |
| ಹೆಬ್ಬಾವಿನೊಡನೆ ಹೋರಾಟ | ...120.00 |
| **ಶ್ರೀ ಎಂ. ಶಿವಕುಮಾರ್**: ಸೈಕಲ್‌ವಾಲ | ...40.00 |
| ಕಂಪ್ಯೂಟರ್ ಕಲಿಯಿರಿ | ...147.00 |
| ಗಣಿಯಾರ ವಿಕಾಸದ ಹಾದಿಯಲ್ಲಿ | ...66.00 |

**ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ್ಣ ಗೌಡರು**

| | |
|---|---|
| ಅಚ್ಚಗನ್ನಡ ನುಡಿಕೋಶ | ...360.00 |
| **ಶ್ರೀ ನರೇಂದ್ರ ರೈ ದೇರ್ಲ**: ರಾಸಾಯನಿಕ ಕೃಷಿ | ...51.00 |

**ಶ್ರೀ ಕೃಪಾಕರ – ಸೇನಾನಿ**

| | |
|---|---|
| ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು | ...93.00 |
| **ಶ್ರೀ ಕೃಷ್ಣ ಆಲನಹಳ್ಳಿ**: ಗೋಡೆ | ...66.00 |

**ಡಾ. ಎಸ್.ಎಂ.ವೃಷಭೇಂದ್ರ ಸ್ವಾಮಿ:**

| | |
|---|---|
| ತರಗತಿಗಳಲ್ಲಿ ಕುವೆಂಪು | ...198.00 |

**ಶ್ರೀ ದೇವನೂರು ಮಹಾದೇವ:**

| | |
|---|---|
| ಕುಸುಮಬಾಲೆ | ...60.00 |
| ದ್ಯಾವನೂರು ಹಾಗೂ ಒಡಲಾಳ | ...96.00 |

**ಶ್ರೀಮತಿ ತಾರಿಣಿ ಚಿದಾನಂದ:**

| | |
|---|---|
| ಮಗಳು ಕಂಡ ಕುವೆಂಪು | ...330.00 |

**ಶ್ರೀಮತಿ ಪದ್ಮಾ ಶ್ರೀರಾಮ:**

| | |
|---|---|
| ಗಿಡಗಂಟೆಯ ಕೊರಳು | ...78.00 |

**ಡಾ. ಕೆ.ಚಿದಾನಂದ ಗೌಡ:**

| | |
|---|---|
| ಬದುಕು.. ಬೆಳಕು... ಚುಟುಕು...! ಭಾಗ1 | ...89.00 |
| ಬದುಕು.. ಬೆಳಕು... ಚುಟುಕು...! ಭಾಗ2 | ...90.00 |

**ಶ್ರೀಮತಿ ರಾಜೇಶ್ವರಿ ತೇಜಸ್ವಿ:**

| | |
|---|---|
| ನನ್ನ ತೇಜಸ್ವಿ | ...369.00 |

*ಹೊಸ ಆವೃತ್ತಿ(Edition) ಬಿಡುಗಡೆಗೊಂಡಾಗ್ಗ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

ವಾರ್ಷಿಕ ವಿಶೇಷಾಂಕ-೨೦೧೬

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೬ ಸಂಚಿಕೆ: ೧

ಬೆಲೆ: ರೂ. ೭೫/- ಪುಟ: ೮೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೦೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



ಪತ್ರಿಕೆ ಪ್ರತಿ ವರ್ಷದಂತೆ ಈ ಬಾರಿಯೂ ಹೊಸ ಸಂಪುಟದ ಆರಂಭ ಸಂಚಿಕಯನ್ನು ವಿಶೇಷ ಸಂಚಿಕೆಯನ್ನಾಗಿ ರೂಪಿಸಿ ನಿಮ್ಮ ಮುಂದಿಡುತ್ತಿದೆ. ಈ ವಿಶೇಷ ಸಂಚಿಕೆ ಪ್ರತಿ ಸಂಚಿಕೆಯ ಸ್ಥಿರ ಶೀರ್ಷಿಕೆಗಳ ಲೇಖನಗಳ ಜೊತೆಗೆ, ಪತ್ರಿಕೆಯ ಉದ್ದೇಶಗಳ ವಿಶಾಲ ಚೌಕಟ್ಟಿಗೆ ಹೊಂದುವ ಹಲವು ವಿಶೇಷ ಲೇಖನಗಳು, ಸಂದರ್ಶನ ಮತ್ತು ಕಥೆ-ಕಾವ್ಯ-ಲಲಿತ ಪ್ರಬಂಧ-ಸಿನಿಮಾ ಲೋಕಗಳನ್ನೊಳಗೊಂಡ ವಿಶೇಷ ಪುಟಗಳನ್ನೂ ನೀಡಿದೆ. ಈ ವಿಶೇಷ ಸಂಚಿಕೆಯ ದೃಷ್ಟಿ ಕೇಂದ್ರ ಪತ್ರಿಕೆ ತನ್ನ ಹೊಸ ಸಮಾಜವಾದದ ಹೊಳಹುಗಳ ಹುಡುಕಾಟದಲ್ಲಿ ಪದೇ ಪದೇ ಸವಾಲಾಗಿಯೂ, ಪ್ರೇರಣೆಯೂ ಆಗಿ ಎದುರಾಗುವ ಗಾಂಧಿ ವ್ಯಕ್ತಿತ್ವವೇ ಆಗಿದೆ.

ಭಾರತ ಪಶ್ಚಿಮದ ಆಧುನಿಕತೆಯ ಚೌಕಟ್ಟಿಗೆ ಹೆಚ್ಚೆಚ್ಚು ಒಳಗಾಗುತ್ತಾ, ಈ ದೇಶದ ಆಡಳಿತಗಾರರು ಹೆಚ್ಚೆಚ್ಚು ವಿಶ್ವಾಸದಿಂದ ಹೇಳುತ್ತಿರುವಂತೆ ಹೆಚ್ಚೆಚ್ಚು 'ಸಂಪದ್ಭರಿತ'ವೂ, 'ಬಲಿಷ್ಠ'ವೂ ಆಗುತ್ತಿರುವಾಗ ರಾಷ್ಟ್ರಪಿತನೆಂದು ಘೋಷಿತವಾಗಿರುವ ಗಾಂಧಿಯ ವ್ಯಕ್ತಿತ್ವ ಹೆಚ್ಚೆಚ್ಚು ಮಸುಕಾಗುತ್ತಾ, ಅಪ್ರಸ್ತುತತೆಯ ಮಾತುಗಳಿಗೆ ಒಳಗಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಈ ಸಂಪದ್ಭರಿತತೆ ಮತ್ತು ಬಲಿಷ್ಠತೆಗಳ ಮಾದರಿಗಳಲ್ಲಿ ಅಡಗಿರುವ ವಿಕಾರಗಳು ಒಂದೊಂದಾಗಿ ನಮ್ಮ ಮುಂದೆ ಕಾಣಿಸಿಕೊಳ್ಳುತ್ತಿದ್ದಂತೆ ಮತ್ತೆ ಮತ್ತೆ ಗಾಂಧಿಯತ್ತ ನೋಡುವ ಒತ್ತಾಯವೂ ನಮ್ಮಲ್ಲಿ ಉಂಟಾಗುತ್ತಿದೆ.

ವಿಕಾರ ಎಂದೆ. ಅದನ್ನು ನಾನು ಮತ್ತೆ ಇಲ್ಲಿ ವಿವರಿಸುವ ಅಗತ್ಯವಿಲ್ಲ. ಕಳೆದ ಐದು ವರ್ಷಗಳ ಪ್ರತಿ ಸಂಚಿಕೆಯೂ ಹಲವಾರು ನೆಲೆಯ ಈ ವಿಕಾರಗಳನ್ನು ಗುರುತಿಸುತ್ತಾ, ವಿಶ್ಲೇಷಿಸುತ್ತಾ ಬಂದಿದೆ. ಸ್ವತಂತ್ರ ಭಾರತದ ಪ್ರಧಾನ ಲಹರಿಯ ರಾಜಕಾರಣದ ಎರಡು ಆತ್ಯಂತಿಕ ಮಾದರಿಗಳಂತೆ ಹೊಮ್ಮಿರುವ ನರೇಂದ್ರ ಮೋದಿ ಮತ್ತು ಸಿದ್ಧರಾಮಯ್ಯನವರ ಆಡಳಿತಗಳನ್ನು ಕುರಿತ ಪತ್ರಿಕೆಯ ಟೀಕೆ-ಟಿಪ್ಪಣಿಗಳೂ ಇದನ್ನೇ ಮಾಡುತ್ತಾ ಬಂದಿವೆ ಎಂದು ನಾನು ಭಾವಿಸಿದ್ದೇನೆ.

ಈ ಇಬ್ಬರೂ ಹೇಳುವುದು ಅಭಿವೃದ್ಧಿಯನ್ನೇ, ಸಮಾನತೆಯನ್ನೇ. ಆದರೆ ಈ ಕುರಿತ ಇವರ ರಾಜಕಾರಣ ತಮ್ಮದೇ ಎರಡು ರೀತಿಗಳಲ್ಲಿ ಸೃಷ್ಟಿಸುತ್ತಿರುವ ರಾಜಕೀಯ, ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳು ಒಂದೇ ತೆರನಾಗಿವೆ. ಹೆಚ್ಚುತ್ತಿರುವ ಹಿಂಸೆ ಮತ್ತು ಅಶಾಂತಿಗಳ ವೈವಿಧ್ಯತೆ ಹಾಗೂ ಜನಸಮುದಾಯದ ವಿವಿಧ ವರ್ಗಗಳ ಜನ ಆತ್ಮಹತ್ಯೆಗಳಿಗೆ ಕಂಡುಕೊಳ್ಳುತ್ತಿರುವ ಕಾರಣಗಳ ಹಿಂದೆ ಇರುವುದು ಇವರ ಎರಡು ರಾಜಕೀಯ ಮಾದರಿಗಳೇ. ಇವರು ಆಡುವ ರಾಜಕೀಯ ಪರಿಭಾಷೆ ಭಿನ್ನವಾಗಿ ತೋರುವುದಾದರೂ, ಇವರ ರಾಜಕೀಯ ಮಾದರಿಗಳನ್ನು ನಿಯಂತ್ರಿಸುತ್ತಿರುವುದು ಅದೇ ನವ ಉದಾರವಾದಿ ಆರ್ಥಿಕ ನೀತಿಯೇ. ಈ ನೀತಿಯ ಪರಿಣಾಮವಾಗಿ ಕಷ್ಟಕ್ಕೆ ಸಿಕ್ಕಿಕೊಂಡ ಜನವರ್ಗಗಳ ಸಿಟ್ಟು ಸ್ಫೋಟಗೊಂಡಾಗಲೆಲ್ಲ ಇವರು ತಮ್ಮದೇ ರೀತಿಯ ಕೆಲ ತತ್ಕಾಲೀನ ರಿಯಾಯ್ತಿಗಳನ್ನು ಪ್ರಕಟಿಸಿ ಜನರ ಸಿಟ್ಟನ್ನು ಶಮನಗೊಳಿಸುತ್ತಾರೆ. ಜನ ಕೂಡ ಸುಮ್ಮನಾಗುತ್ತಾರೆ, ಇನ್ನೊಂದು ರೀತಿಯ ಕಷ್ಟ ಎದುರಾಗುವವರೆಗೆ. ಜನ ಕೂಡ ಒಂದು ಕ್ಷಣ ನಿಂತು ಪದೇ ಪದೇ ಸ್ಫೋಟಗೊಳ್ಳುವ ಹಿಂಸೆ-ಆತ್ಮಹತ್ಯೆಗಳ ಮೂಲಕ ವ್ಯಕ್ತವಾಗುವ ಸಾಮಾಜಿ ಅಶಾಂತಿಯ ಹಿಂದೆ ವ್ಯವಸ್ಥೆಯ ಯಾವುದೋ ಮೂಲದೋಷವಿರಬೇಕು ಎಂದು ಚಿಂತಿಸಲಾರದಾಗಿದೆ. ಏಕೆಂದರೆ ಅವರ ಮುಂದೆ 'ನವ ಶ್ರೀಮಂತಿಕೆ'ಯ ನವ ಮಧ್ಯಮ ವರ್ಗವೊಂದನ್ನು ನಿರ್ಮಿಸಿ, ಆ ವರ್ಗದೊಳಕ್ಕೆ ಅವರೂ ಪ್ರವೇಶಿಸಬಹುದೆಂಬ ಕನಸನ್ನು ಕಟ್ಟಿಕೊಡಲಾಗಿದೆ. ಆದರೆ ಈ ನವ ಶ್ರೀಮಂತ ವರ್ಗದ ಉದಯಕ್ಕೂ ಈ ಹೊಸ ಹೊಸ ಹಿಂಸೆ-ಅನಾಚಾರ-ಆತ್ಮಹತ್ಯೆಗಳ ಗಾಥೆಗೂ ಸಂಬಂಧವಿದೆ ಎಂಬುದು ಅವರು ಈ ನವ ಶ್ರೀಮಂತಿಗೆಗಾಗಿ ತೊಡಗಿರುವ ಸ್ಪರ್ಧೆಯ ತೀವ್ರತೆಯಲ್ಲಿ ಅವರ ಗಮನಕ್ಕೇ ಬಾರದಾಗಿದೆ. ಇದೊಂದು ವಿಷಚಕ್ರ. ಈ ಮಾತನ್ನು ನಾನು ಈ ನವ ಶ್ರೀಮಂತ ವರ್ಗದ ಪ್ರತಿ ಕುಟುಂಬವೂ ಈಗ ಒಂದಲ್ಲ ಒಂದು ರೀತಿಯ ದುರಂತವನ್ನು ಎದುರಿಸುತ್ತಿರುವುದನ್ನು ಗಮನಿಸಿಯೇ ಆಡುತ್ತಿದ್ದೇನೆ.

ಹೌದು ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ದೇಶದ ಸಂಪತ್ತು ಹೆಚ್ಚಾದಂತೆ ತೋರುತ್ತಿದೆ. ಅದೆಷ್ಟೋ ಕೋಟಿ ಜನರನ್ನು ಬಡತನರೇಖೆಯಿಂದ ಮೇಲೆತ್ತಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಬೆಳವಣಿಗೆ ಎಷ್ಟು ಭದ್ರವಾದ ನೆಲೆಯ ಮೇಲೆ ನಿಂತಿದೆ? ಚೀನಾವೂ ಸೇರಿದಂತೆ ಈ ಉದಾರ ಆರ್ಥಿಕ ನೀತಿಯನ್ನು ಅನುಸರಿಸಿದ ಎಲ್ಲ ದೇಶಗಳೂ ಆರ್ಥಿಕ ಅಸ್ತವ್ಯಸ್ತತೆಗೆ ಸಿಕ್ಕಿ ವಿವಿಧ ರೀತಿಯ ಸಾಮಾಜಿಕ ಅಶಾಂತಿಯನ್ನು ಎದುರಿಸುತ್ತಿವೆ. ಗ್ರೀಸ್‌ನಂತಹ ದೇಶ ಪಾಪರ್‌ಚೀಟಿ ಪಡೆಯುವ ಹಂತ ತಲುಪಿದೆ. ಈ ನೀತಿಯ ಹರಿಕಾರರಾದ ಅಮೆರಿಕಾವೂ ಸೇರಿದಂತೆ ಪಶ್ಚಿಮದ ದೇಶಗಳು ಈ ಆರ್ಥಿ ನೀತಿಯ ಬಗ್ಗೆ ಪುನರಾಲೋಚನೆಗೆ ತೊಡಗಿವೆ ಬ್ರಿಟನ್ ಇರಲಿ, ಅಮೆರಿಕಾದಂತಹ ಅಮೆರಿಕಾದಲ್ಲೂ ಸಮಾಜವಾದಿ ಎಂದು ಬಹಿರಂಗವಾಗಿ ಘೋಷಿಸಿಕೊಂಡ ಬರ್ನಿ ಸ್ಯಾಂಡರ್ಸ್ ಎಂಬ ಜನಪ್ರಿಯ ನಾಯಕನೊಬ್ಬ ಅಲ್ಲಿ ಸೃಷ್ಟಿಯಾಗಿದ್ದಾನೆ. ಭಾರತ ಮಾತ್ರ ಸಮಾಜವಾದ ಎಂಬುದು ಕಳೆದು ಹೋದ ದುಃಸ್ವಪ್ನವೆಂದೇ ಭಾವಿಸಿದಂತಿದೆ. ಹಾಗಾಗಿಯೇ ಅದು ಅಂತಹುದೇ ನಂಬಿಕೆಯ ಬಿಜೆಪಿ ಎಂಬ ರಾಜಕೀಯ ಪಕ್ಷವೊಂದನ್ನು ಇಂದು ಅಧಿಕಾರಕ್ಕೆ ತಂದಿದೆ. ಇದಕ್ಕೆ, ತನ್ನ ರಾಜಕೀಯ ಪ್ರಣಾಳಿಕೆಯೇ ಸಮಾಜವಾದ ಎಂದು ಹೇಳಿಕೊಳ್ಳುತ್ತಿದ್ದ; ಆದರೆ ಥಟ್ಟನೆ ಒಂದು ದಿನ ಅದಕ್ಕೆ ಅಂತಿಮ ವಿದಾಯ ಹೇಳಿದ (ಇದರ ಹಿಂದೆ ಇರುವ ಅಂತಾರಾಷ್ಟ್ರೀಯ ರಾಜಕಾರಣದ್ದೇ ಬೇರೆ ಕಥೆ ಇದೆ.) ಕಾಂಗ್ರೆಸ್‌ನ ದುರಾಡಳಿತವೂ ಕಾರಣವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಆದರೆ ನಮ್ಮ ದೇಶ ಗ್ರೀಸ್‌ನ ಹಾದಿ ಹಿಡಿಯದಂತೆ ತಡೆದು, ಮೋದಿಯವರು ಈಗ ತಮ್ಮ ಕಾಶ್ಮೀರ, ಪಾಕಿಸ್ತಾನ ನೀತಿಗಳ ಟೊಳ್ಳುತನ, ಎನ್.ಎಸ್.ಜಿ. ಮುಖಭಂಗ ಇತ್ಯಾದಿಗಳ ಮೂಲಕ ವ್ಯಕ್ತವಾಗುತ್ತಿರುವ ತಮ್ಮೆಲ್ಲ ರಾಜಕೀಯ ವೈಫಲ್ಯಗಳ ನಡುವೆಯೂ ಒಂದಿಷ್ಟು ಆರ್ಥಿಕ ಸ್ಥಿರತೆಯೊಂದಿಗೆ ಆಡಳಿತ ನಡೆಸುವಂತಾಗಿದ್ದರೆ ಅದಕ್ಕೆ ಕಾರಣ, ಸಮಾಜವಾದಿ ನಂಬಿಕೆಯ ನಮ್ಮ ಎಡ ಪಕ್ಷಗಳು ಮನಮೋಹನ ಸಿಂಗ್ ಅವರು ನಮ್ಮ ದೇಶೀಯ ಬ್ಯಾಂಕುಗಳನ್ನು ಜಾಗತೀಕರಿಸಲು ಹೊರಟಾಗ' ಅದನ್ನು ಸಂಸತ್ತಿನಲ್ಲಿ ಶತಾಯ ಗತಾಯ ವಿರೋಧಿಸಿ ತಡೆದದ್ದು ಎಂಬುದನ್ನು ನೆನಪಿಟ್ಟರೆ ಒಳ್ಳೆಯದು.

ಎರಡು ವರ್ಷಗಳ ಹಿಂದೆ ಭರ್ಜರಿ ಧಾಂ-ಧೂಂನೊಂದಿಗೆ ಅಧಿಕಾರಕ್ಕೆ ಬಂದ ಮೋದಿ ಈಗ ಗಾಳಿ ಕಳೆದುಕೊಂಡ ನಾಯಕನಂತೆ ಕಾಣಿಸತೊಡಗಿದ್ದಾರೆ. ಹಾಗೇ ಮೂರು ವರ್ಷಗಳ ಹಿಂದೆ ಸಮಾಜವಾದಿ ಆಶಯಗಳ ಆಸೆ ಹುಟ್ಟಿಸಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಿದ್ಧರಾಮಯ್ಯನವರ

ರಾಜಕಾರಣದಲ್ಲಿ 'ಅಹಿಂದ'ವೆಂಬ ಅಸ್ತ್ರದ ಹೊರತಾಗಿ ಇನ್ನಾವ ಹೊಸ ಅಸ್ತ್ರವೂ ಇರಲಿಲ್ಲವೆಂಬುದು ಅವರ ಆಡಳಿತ ಇಂದು ಯಾವ ಭ್ರಷ್ಟ ಮತ್ತು ದುಷ್ಟ ಮಟ್ಟ ಮುಟ್ಟಿದೆ ಎಂಬುದರಿಂದ ಗೊತ್ತಾಗುತ್ತಿದೆ. ಹಾಗಾಗಿಯೇ ಅವರ ಯಾವ ಮಾತಿಗೂ, ಅವರ ಆಡಳಿತದ ಯಾವ ಹಂತದಲ್ಲೂ ಮೂರು ಕಾಸಿನ ಕಿಮ್ಮತ್ತಿಲ್ಲವಾಗಿದೆ. ನಿರ್ದಿಷ್ಟವಾಗಿ, ಮೊದಲೇ ಅಧೋಗತಿಗೆ ಇಳಿದಿದ್ದ ನಮ್ಮ ಗೃಹಾಡಳಿತ ಮತ್ತು ವಿಶ್ವವಿದ್ಯಾಲಯಗಳ ಗುಣಮಟ್ಟ ಇಂದು ಪಾತಾಳ ತಲುಪಿವೆ.

ಈ ಸಂದರ್ಭದಲ್ಲಿ ಬಹಳ ದಿನಗಳಿಂದ ನನಗೆ ತೀವ್ರವಾಗಿ ಅನ್ನಿಸುತ್ತಿರುವ ಒಂದು ಮಾತನ್ನು ಇಲ್ಲಿ ಹೇಳಿಬಿಡಬೇಕು. ಕಳೆದ ಏಳು ದಶಕಗಳಲ್ಲಿ ಸ್ವತಂತ್ರ ಭಾರತದಲ್ಲಿ ನಾವೆಲ್ಲ ಒಪ್ಪಬಹುದಾದ ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ರೀತೀಯ ಆಂದೋಲನಗಳೂ, ರಾಜಕೀಯ ಪ್ರಯೋಗಗಳೂ ನಡೆದು ಹೋಗಿವೆ. ಜನ ಸುಸ್ತಾಗಿದ್ದಾರೆ. ಅಂದರೆ ಇದರರ್ಥ, ಈ ದೇಶವನ್ನು ಈಗಿರುವ ಸ್ವರೂಪದಲ್ಲಿ ಇನ್ನೂ ಚೆನ್ನಾಗಿ ಆಳಲು ಸಾಧ್ಯವಿಲ್ಲ. ಈ ವಾಸ್ತವ ಸತ್ಯದ ಆಳ ಹೊಕ್ಕು ನೋಡಿದಾಗ ನನಗನ್ನಿಸಿದ್ದು, ಈ ಎಲ್ಲ ಮಾದರಿಗಳ ವೈಫಲ್ಯಗಳ ಹಿಂದೆ ಇರುವುದು ನಮ್ಮ ದೇಶವನ್ನು ಒಂದು ರಾಷ್ಟ್ರವಾಗಿ ನಾವು ರಚಿಸಿಕೊಂಡಿರುವ ರೀತಿಯಲ್ಲಿ, ಆ ರಚನೆಯ ರಕ್ಷಣೆಯ ಹೊಣೆ ಹೊತ್ತಿರುವ ನಮ್ಮ ಸಂವಿಧಾನದ ಸ್ವರೂಪದಲ್ಲಿ ಮತ್ತು ಅದರ ಕಾವಲು ನಾಯಿಯಂತಿರುವ ನಮ್ಮ ನ್ಯಾಯಾಂಗದ ವಿಧಿ–ವಿಧಾನಗಳಲ್ಲಿ. ಈ ದೇಶದಲ್ಲಿ ಒಂದು ಕೊಲೆ, ಒಂದು ಸಾವು, ಒಂದು ಅತ್ಯಾಚಾರ, ಒಂದು ವಂಚನೆ, ಒಂದು ಭ್ರಷ್ಟಾಚಾರ ಹಗರಣ, ಒಂದು ಭಾಷಾ, ನದಿ, ಅಥವಾ ಗಡಿ ವಿವಾದವನ್ನು ಇತ್ಯರ್ಥಪಡಿಸಲು ನಮ್ಮ ನ್ಯಾಯಾಂಗ ತೆಗೆದುಕೊಳ್ಳುತ್ತಿರುವ ಅವಧಿಗಳನ್ನು ನೋಡಿದರೆ, 'ನ್ಯಾಯ ವಿಳಂಬವೆಂದರೆ ನ್ಯಾಯ ನಿರಾಕರಣೆಯೇ' ಎಂಬ ನಾಣ್ನುಡಿ ಇಲ್ಲಿ ಸತ್ಯಸ್ಯ ಸತ್ಯವಾಗಿ ತೋರುತ್ತಿದೆ. ಈ ಸತ್ಯವೇ ಎಲ್ಲ ದುಷ್ಟ ಶಕ್ತಿಗಳ ರಕ್ಷಣಾ ತಾಣವಾಗಿ ಪರಿಣಮಿಸಿ, ಒಂದು ರಾಷ್ಟ್ರ ಸ್ಥಿರವಾಗಿ ಉಳಿಯಲು ಅಗತ್ಯವಾದ ನ್ಯಾಯದಾನ ಇಲ್ಲಿ ಇದ್ದೂ ಇಲ್ಲದಂತಾಗಿ ರಾಷ್ಟದ ಕಲ್ಪನೆಯೇ ಜನಸಾಮಾನ್ಯರಿಗೆ ಕೆಲಸಕ್ಕೆ ಬಾರದಂತಾಗಿದೆ. ಹಾಗಾಗಿಯೇ ಇಂದು ರಾಷ್ಟ್ರಭಕ್ತಿ ಉದ್ದೀಪಿಸಲೆಂದೇ ಒಂದು ಪಡೆ ಸಿದ್ಧವಾಗುವ ಪರಿಸ್ಥಿತಿ ಉಂಟಾಗಿದೆ!

ಇದೆಲ್ಲವನ್ನೂ ಒಟ್ಟಾಗಿ ಒಂದು ವಾಕ್ಯದಲ್ಲಿ ಹೇಳುವುದಾದರೆ–ಹಿಂದೊಮ್ಮೆಯೂ ಹೇಳಿದ್ದಂತೆ–ಇದೊಂದು ಕಾಗದದ, ಕಛೇರಿಗಳ ರಾಷ್ಟವಾಗಿದೆ. ಇಲ್ಲಿ ಪ್ರತಿಯೊಂದು ಅನ್ಯಾಯವೂ ದನಿ ಕಳೆದುಕೊಂಡು ಕಾಗದವಾಗಿ–ಅರ್ಜಿಗಳಾಗಿ ಪರಿವರ್ತಿತವಾಗುತ್ತದೆ. ನಮ್ಮ ಕಾನೂನುಗಳು ಇರುವುದೂ ಈ ಕಾಗದಗಳ ವಿಲೇವಾರಿಯ ರೀತಿ ನೀತಿಗಳನ್ನು ನೋಡಿಕೊಳ್ಳಲು ಮಾತ್ರ. ಹೀಗಾಗಿ ಇಲ್ಲಿನ ಆಡಳಿತದಲ್ಲಿ ಜೀವದ ಪಸೆ ಕಡಿಮೆ. ಕಡಿಮೆಯೇನು, ಬಹಳಷ್ಟು ಸಂದರ್ಭಗಳಲ್ಲಿ ಜೀವ ಇಲ್ಲದಂತೇ ಆಗಲು ಕಾರಣ ಪ್ರಜೆಗೂ ಆಡಳಿತಗಾರನಿಗೂ ಪರಸ್ಪರ ಮಾನವ ಸಂವೇದನೆಯ ಸಂಬಂಧವೇ ಇಲ್ಲದೆ ಸಂಪೂರ್ಣ ಅಪರಿಚಿತರಾಗಿರುವುದು. ಹಾಗಾಗಿ ಇಲ್ಲಿ ಜನರನ್ನು ಅರ್ಜಿಯಾಗಿ, ಕಾಗದವಾಗಿ ಮಾತ್ರ ನೋಡಲು ಸಾಧ್ಯ.

ಈ ದುರಂತದ ಮೂಲ ಇರುವುದು, ಜನ ಮತ್ತು ಆಡಳಿತದ ನಡುವೆ ಇರುವ 'ದೂರ'ದಲ್ಲಿ. ನೀವು ಹೇಳಿ, ನಿಮ್ಮೂರಲ್ಲಾದ ಒಂದು ಕೊಲೆ ಅಥವಾ ಒಂದು ಅತ್ಯಾಚಾರ ಅಥವಾ ಒಂದು ಆಡಳಿತಾತ್ಮಕ ವಂಚನೆಯನ್ನು ಅಥವಾ ನಿಮ್ಮ ಒಂದು ಅಹವಾಲನ್ನು ಇತ್ಯರ್ಥಪಡಿಸಲು ನಿಜವಾಗಿ ವರ್ಷಗಟ್ಟಲೆ ಬೇಕೆ? ವರ್ಷಗಳನ್ನು ಅಗತ್ಯವಾಗಿಸಿರುವುದು ಇಂತಹ ದೂರಗಳು ಸೃಷ್ಟಿಸಿರುವ ಪರಸ್ಪರ ಅನಾಮಿಕತೆ ಮತ್ತು ಅದು ಸೃಷ್ಟಿಸಿರುವ ಅಪನಂಬಿಕೆಗಳ ನಿವಾರಣೆಗಾಗಿ. ಅದಕ್ಕಾಗಿ ಸಾರ್ವತ್ರಿಕವಾದ ವಿಧಿ–ವಿಧಾನಗಳ ಸರಮಾಲೆ! ಅನ್ಯಾಯ ನಡೆದ ಪರಿಸರಕ್ಕೆ ಸೇರದ; ಹಾಗಾಗಿ ಅನ್ಯಾಯದ ಪರಿಣಾಮಗಳ ತಾಪ ತಾಗದಷ್ಟು 'ದೂರ'ದ ಯಾರೋ ಓರ್ವ ಗುಮಾಸ್ತ, ಒಬ್ಬ ಪೋಲೀಸು, ಒಬ್ಬ ತಹಶೀಲ್ದಾರ ಅಥವಾ ನ್ಯಾಯಾಧೀಶ ನಿಮ್ಮ ಅಥವಾ ನಿಮ್ಮ ಊರಿನ ಪ್ರಕರಣವನ್ನು ಅರ್ಥ ಮಾಡಿಕೊಳ್ಳಲು ಇರುವ ಪರಿಕರಗಳಾದರೂ ಯಾವುವು? ನಿರ್ಜೀವ ಕಾಗದ ಪತ್ರಗಳು ಮತ್ತು ಅದರ ಭವ್ಯ ಆಡಳಿತ ವಿಧಾನಗಳು! ನ್ಯಾಯ ಹುಟ್ಟುವುದು sense of belongingನಲ್ಲಿ;ಬರಡು ಕಾನೂನೂಗಳಿಂದ ಅಲ್ಲ. ಏಕೆಂದರೆ ಕಾನೂನು ಎಂಬುದು ಸ್ಪರ್ಧಾತ್ಮಕ ಮಾತುಗಾರಿಕೆಯಲ್ಲಿ ಅರ್ಥ ಪಡೆಯುವ ವಕೀಲರ ಮಾರುಕಟ್ಟೆಯ ವಸ್ತುವೇ ಆಗಿದೆ!

ನಮಗೆ ಗಾಂಧಿ ನೆನಪಿಗೆ ಬರುವುದು, ಮುಖ್ಯವೆನ್ನಿಸುವುದು ಇಲ್ಲಿಯೇ. ಅವರು ದೂರ ಸೃಷ್ಟಿಸುವ ಅನಾಹುತಗಳನ್ನು ಮನಗಂಡಿದ್ದರು. ಆಧುನಿಕ ರಾಷ್ಟ್ರಗಳನ್ನು ಸೃಷ್ಟಿಸಿದ ನಾಗರೀಕತೆಯ ಎಲ್ಲ ಆವಿಷ್ಕಾರಗಳು ಬೆಳೆದಿರುವುದೇ ಇಂತಹ ದೂರಗಳ ಆಧಾರದ ಮೇಲೆ ಎಂಬುದನ್ನು ಅವರು ಅರಿತಿದ್ದರು. ಹಾಗಾಗಿಯೇ ಅವರು ಪ್ರತಿ ಮನುಷ್ಯನ ಲೌಕಿಕ ಚಟುವಟಿಕೆಗಳ ಲೋಕ ಅವನ ಗ್ರಾಮಕ್ಕೆ ಸೀಮಿತವಾಗಿರಬೇಕು ಎಂದು ನಂಬಿದ್ದರು. ಭಾರತ ಒಂದು 'ಗ್ರಾಮ ಸ್ವರಾಜ್ಯ'ವಾಗಿ ರೂಪುಗೊಳ್ಳದ ಹೊರತು ಅದಕ್ಕೆ ನೆಮ್ಮದಿಯಿಲ್ಲ ಎಂದಿದ್ದರು. ಇಲ್ಲಿ ಗ್ರಾಮ ಎಂದರೆ ಅಂದಿನ ಅಥವಾ ಇಂದಿನ ಹಳ್ಳಿ ಎಂದು ಅರ್ಥ ಮಾಡಿಕೊಳ್ಳುವುದು ಗಾಂಧಿಯ ಜಡ ಓದಿನ ಪರಿಣಾಮವಷ್ಟೆ. ಗಾಂಧಿ ಈ ಕಲ್ಪನೆಯನ್ನು ಮೊದಲ ಬಾರಿಗೆ ವ್ಯಾಪಕವಾಗಿ ಚರ್ಚಿಸಿದ ಅವರ ಮೂಲ ಪುಸ್ತಕ 'ಹಿಂದ್ ಸ್ವರಾಜ್'ನಲ್ಲಿ ಗ್ರಾಮದ ಬಗ್ಗೆ ಹೇಳಿದಾಗಲೂ ಇದೇ ಅಪಾರ್ಥ ಕಲ್ಪಿಸಲಾಯಿತು. ಆದರೆ 'ಗ್ರಾಮ' ಕಲ್ಪನೆಯ ಮೂಲಕ ಗಾಂಧಿ ಹೇಳುತ್ತಿದ್ದುದು ಆಡಳಿತವನ್ನು ಕಾಗದ ಮಾಡುವ ದೂರವನ್ನು ನಿಷ್ಕ್ರಿಯಗೊಳಿಸಿ ಒಂದು ಸಮುದಾಯ ತನ್ನ ನ್ಯಾಯವನ್ನು 'ಅನ್ಯ'ರ ಉಸಾಬರಿ ಇಲ್ಲದೆ ತಾನೇ ಕೂತು ತೀರ್ಮಾನಿಸಿಕೊಳ್ಳಲು ಸಾಧ್ಯವಿರುವ ಸಣ್ಣ ಸಾಮುದಾಯಿಕ ಆಡಳಿತ ಘಟಕಗಳ ರಚನೆಯ ಬಗ್ಗೆ. ಹಾಗಾಗಿ ಭಾರತವೆಂಬುದು ಜನರ ನೇರ ('ಸ್ವ 'ದ) ಭಾಗವಹಿಸುವಿಕೆ ಸಾಧ್ಯವಿರುವ ಸಣ್ಣ ಸ್ವಯಮಾಡಳಿತ ಘಟಕಗಳ ಒಂದು ಒಕ್ಕೂಟವಾಗಿ ನಿಜವಾದ ಅರ್ಥದ 'ಸ್ವ–ರಾಜ್ಯ' ರೂಪುಗೊಳ್ಳಬೇಕು ಎಂದು ಅವರು ಪ್ರತಿಪಾದಿಸಿದರು.

ಆದರೆ ಇಂದು ಈಗಿರುವಂತಹ ಭಾರತದಲ್ಲಿ ಆಗುತ್ತಿರುವುದೇನು? ಭಾರಿ ದೂರಗಳೇ ರಾಷ್ಟ್ರವಾದಂತಿರುವ ಈ ದೇಶದಲ್ಲಿ ಅದನ್ನು ಹಾಗೇ ರಕ್ಷಿಸಿಕೊಳ್ಳಲು ಬೇಕಾದ ಕಾನೂನುಗಳ ಜಟಿಲ ಜಾಲವೊಂದನ್ನು ನಿರ್ಮಿಸಿಕೊಂಡು ನಾವೆಲ್ಲ ಅದರಲ್ಲಿ ಬಂಧಿತರಾಗಿದ್ದು, ಅದಕ್ಷತೆ, ಭ್ರಷ್ಟಾಚಾರಗಳಿಂದ ಪರಿಹಾರ ಪಡೆಯುವುದೇ ದುಸ್ಸಾಧ್ಯವಾಗಿಬಿಟ್ಟಿದೆ. ಅದಕ್ಕೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಜಾತೀಯತೆಯನ್ನೂ ಧಾರ್ಮಿಕತೆಯ ಹೆಸರಿನಲ್ಲಿ ಕೋಮುವಾದವನ್ನೂ ತಾತ್ಕಾಲಿಕ ಪರಿಹಾರ ರೂಪಗಳಾಗಿ ಕಂಡುಕೊಂಡು ಹಿಂಸೆ ಮತ್ತು ಆತ್ಮಹತ್ಯೆಗಳ ಸಂಕೀರ್ಣ ಸಮಾಜವೊಂದನ್ನು ನಿರ್ಮಿಸಿಕೊಂಡಿದ್ದೇವೆ. ಸಾಮಾಜಿಕ ಮತ್ತು ನೈಸರ್ಗಿಕ ಪರಿಣಾಮಗಳ ಪರಿವೇ ಇಲ್ಲದೆ, ಎಲ್ಲರೂ ಸಮಾನ ಶ್ರೀಮಂತರಾಗಿ ಸಮಾನತೆಯನ್ನು ಸಾಧಿಸುವ ವಿಕ್ಷಿಪ್ತ ಕನಸು ನನಸಾಗುವ ದಿನಕ್ಕಾಗಿ ಕಾಯುತ್ತಿದ್ದೇವೆ. ಎಲ್ಲ ರೀತಿಯ –ಆಂತರಿಕ ಮತ್ತು ಬಾಹ್ಯ–ಲೂಟಿಕೋರರಿಗೆ ಇದು ಹೇಳಿ ಮಾಡಿಸಿದಂತಹ ಸಂದರ್ಭವೇ ಆಗಿದೆ.

ಗಾಂಧೀಜಿಯ ಶಿಷ್ಯರಾಗಿದ್ದ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಸಮಾಜವಾದದ ಕೇಂದ್ರ ತತ್ವವಾದ ಸಮಾನತೆ ಎಂಬ ಶಬ್ದದ ಇಂತಹ ರೂಕ್ಷತೆಯನ್ನು–ಇದು ಮನಗಂಡು ಸಮಾನತೆಗೆ ಬದಲಾಗಿ ಸಮತ್ವ ಎಂಬ ಪರಿಕಲ್ಪನೆಯನ್ನು ನಮ್ಮ ಮುಂದಿಟಿದ್ದರು. ಅದನ್ನು 'ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವ'ದ ಸ್ಥಿತಿ ಎಂದು ವ್ಯಾಖ್ಯಾನಿಸಿದ್ದರು. ಆ ಮೂಲಕ ಅವರು ಪಶ್ಚಿಮದ ಸಮಾಜವಾದದ ಪ್ರಭಾವಕ್ಕೆ ಸಿಕ್ಕಿಯೋ ಏನೋ ಗಾಂಧಿಯನ್ನು ವಿಮರ್ಶಿಸುತ್ತಾ ಅವರಿಂದ ಕೊಂಚ ದೂರ ಸಾಗಿದ್ದವರು ಮತ್ತೆ ಅವರ ಹತ್ತಿರಕ್ಕೇ ಬಂದಿದ್ದರು.

ನಾವಿಂದು ಅಭಿವೃದ್ಧಿ ಮತ್ತು ಸಮಾನತೆಗಳ ಹಪಾಹಪಿಯಲ್ಲಿ ಕಳೆದುಕೊಂಡಿರುವ ನಮ್ಮ ಮೂಲ ಸಮತ್ವವನ್ನು ಪಡೆದುಕೊಳ್ಳಲು ಗಾಂಧಿಯ ಮೊರೆ ಹೋಗಬೇಕಿದೆ. ಅದಕ್ಕಾಗಿ ಇಂದು ನಮಗೆ ಬೇಕಾದ ಗಾಂಧಿಯನ್ನು ನಾವು ಕಂಡುಕೊಳ್ಳಬೇಕಿದೆ. ಅದಕ್ಕಾಗಿ, ಇತ್ತೀಚಿನ ವರ್ಷಗಳಲ್ಲಿ ಗಾಂಧಿ ಕುರಿತು ಪಶ್ಚಿಮದ ಆಧುನಿಕತೆಯ ವಕ್ತಾರರು ಹುಟ್ಟಿಹಾಕಿರುವ ಅಪಕಲ್ಪನೆಗಳನ್ನು ಪರಿಹರಿಸಿಕೊಳ್ಳಬೇಕಿದೆ. ಅಂತಹ ಎರಡು ಪುಟ್ಟ ಪ್ರಯತ್ನಗಳನ್ನು ಈ ಸಂಚಿಕೆಯಲ್ಲಿ ಮಾಡಲಾಗಿದೆ. ಓದಿ, ಬರೆಯಿರಿ.

ಅಂದಹಾಗೆ, ಈ ಸಂಚಿಕೆ ನಮ್ಮ ಕೊನೆಯ ಸಂಚಿಕೆಯಲ್ಲ. ಒಂದಿಷ್ಟು ಹಣ ಉಳಿದಿರುವುದರಿಂದ ಸೆಪ್ಟಂಬರ್ ಸಂಚಿಕೆ ನಮ್ಮ ವಿದಾಯ ಸಂಚಿಕೆಯಾಗಿರುತ್ತದೆ. ಇದಕ್ಕೆ ಅನುವು ಮಾಡಿಕೊಟ್ಟ ಪ್ರಸ್ತುತ ಸಂಚಿಕೆಯ ಲೇಖಕರು, ಕಲಾವಿದರು ಮತ್ತು ಜಾಹೀರಾತುದಾರರಿಗೆ ನಮ್ಮ ವಂದನೆಗಳು.

**–ಸಂಪಾದಕ**


**ಈ ಸಂಚಿಕೆ**

ರಕ್ಷಾಪುಟ ವಿನ್ಯಾಸ: **ಚರಿತಾ**

ಸಂಪಾದಕೀಯ ನೆರವು:

**ಸವಿತಾ ನಾಗಭೂಷಣ ಮತ್ತು ಟಿ.ಎಲ್. ರೇಖಾಂಬ**

ಪುಟ ವಿನ್ಯಾಸ ಮತ್ತು ಸಂಪಾದನೆ:

**ಡಿ.ಎಸ್. ನಾಗಭೂಷಣ**

ಮುದ್ರಣ: **ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್,** ಬೆಂಗಳೂರು

## ಪ್ರಿಯ ಸಂಪಾದಕರೇ,

### ಹಠಾತ್ ನಿಲುಗಡೆಯಿಂದ ದುಃಖವಾಗಿದೆ

ಬರಹವೇ ನನ್ನ ಜೀವಾಳ ಎಂದು ಬಗೆದಾತ ನಾನು. ೨೦೦೩ರಲ್ಲಿ ಅಂಕೋಲಾ ಬಿಟ್ಟು ಮಣಿಪಾಲಕ್ಕೆ ಬಂದು ಸ್ಥಾಯಿಕ್ಯನಾದೆ. ಇಲ್ಲಿ ನನ್ನ ಬರವಣಿಗೆ ಸ್ಥಗಿತವಾಯಿತೆಂದರೆ – ಆ ಮಾತು ನನಗೇ ಮುಜುಗರ ಉಂಟು ಮಾಡುವಂಥದ್ದು.

ಓದುವುದು, ಅದರಲ್ಲೂ ಪ್ರಜಾವಾಣಿಯ ಪುಟಗಳನ್ನು ತಿರುವು ಹಾಕಿ ಮುಖ್ಯ ಲೇಖನಗಳನ್ನು ಓದುವುದು ನನ್ನ ಮುಂಜಾನೆಯ ಹವ್ಯಾಸ. ಜೊತೆಜೊತೆಗೆ ಬುಕ್‌ಸ್ಟಾಲ್‌ಗಳಲ್ಲಿ ಮಾರಾಟಕ್ಕಿರುವ ಇಂಗ್ಲಿಷ್ ಹಾಗೂ ಕನ್ನಡ ನಿಯತಕಾಲಿಕಗಳನ್ನು ಕೊಂಡು ಓದುತ್ತಿದ್ದೇನೆ. ಒಂದರ್ಥದಲ್ಲಿ ನಾನು ಹಲವು ಪತ್ರಿಕೆಗಳ ಹುಟ್ಟು, ಬೆಳವಣಿಗೆ ಮತ್ತು ಪ್ರಸರಣಕ್ಕಾಗಿ ದುಡಿದದ್ದು ಉಂಟು. ಧಾರವಾಡದಿಂದ ೧೯೪೮ರಲ್ಲಿ ಪ್ರಕಟವಾಗುತ್ತಿದ್ದ 'ಜಾಗೃತಿ' ವಾರಪತ್ರಿಕೆಯನ್ನು ರಸ್ತೆಬದಿಯಲ್ಲಿ ನಿಂತು, ರೈಲ್ವೆ ಬೋಗಿಗಳಿಗೆ ಹೊಕ್ಕು ಪತ್ರಿಕೆಯ ಮುಖ್ಯ ಶೀರ್ಷಿಕೆಯನ್ನು ಓದಿ ಹೇಳಿ ಅದನ್ನು ಜನರು ಕೊಳ್ಳುವಂತೆ ಮಾಡಿದ್ದೂ ಉಂಟು. ಕರ್ನಾಟಕದಲ್ಲಿ 'ಜಾಗೃತಿ' (ಸಂಪಾದಕರು – ಖಾದ್ರಿ ಶಾಮಣ್ಣ) ನಮಗೆಲ್ಲ ಉತ್ಸಾಹ ಮತ್ತು ಚಳವಳಿಗೆ ಪ್ರೇರಣೆ ನೀಡಿದ ಮೊದಲ ಸಮಾಜವಾದಿ ಸಾಪ್ತಾಹಿಕ ಅದಾಗಿತ್ತು. ಇದು ಬೆಂಗಳೂರಿಗೆ ವರ್ಗಾವಣೆಗೊಂಡು ಅಲ್ಲಿ ಕಣ್ಣುಮುಚ್ಚಿತು. ಅದರ ಬಳಿಕ ಮಂಗಳೂರು, ಮೈಸೂರು, ಅಂಕೋಲಾ ಮುಂತಾದ ಕಡೆಗಳಿಂದ ಹಲವು ನಿಯತಕಾಲಿಕಗಳು ಸಮಾಜವಾದಿ ಒಲವು ಮತ್ತು ನಿಲುವಿನೊಂದಿಗೆ ಪ್ರಕಟವಾಗುತ್ತಿದ್ದುವು. ಅವುಗಳಲ್ಲಿ ನಾನು ಸಂಪಾದಿಸಿದ ಜನಸೇವಕವೂ ೧೯೭೭ರಲ್ಲಿ ನಿಂತುಹೋಯಿತು.

ಈ ನೋವುಗಳು ನನ್ನನ್ನು ಬಾಧಿಸುತ್ತಿರುವಾಗ ಎರಡು ವರ್ಷಗಳ ಹಿಂದೆ ಅಂಕೋಲೆಯ ನನ್ನ ಕಿರಿಯ ಮಿತ್ರ ವಿಷ್ಣು ನಾಯ್ಕ ಶಿವಮೊಗ್ಗದಿಂದ ಹೊರಡುತ್ತಿರುವ 'ಹೊಸ ಮನುಷ್ಯ' ಮಾಸಿಕವನ್ನು ನನಗೆ ಪರಿಚಯ ಮಾಡಿಕೊಟ್ಟರು. ೨೦೧೪ರ ಅಕ್ಟೋಬರ್ ಸಂಚಿಕೆಯಲ್ಲಿ ಅವರು ನನ್ನ ಕುರಿತಾಗಿ ಬರೆದಿದ್ದ ಅವರ ಲೇಖನ ಇದೆ ಎಂದು ಆ ಸಂಚಿಕೆಯನ್ನೇ ನನಗೆ ಕಳಿಸಿಕೊಟ್ಟರು. ಅಷ್ಟರಲ್ಲೇ ಹೊಸ ಮನುಷ್ಯ 'ನಮ್ಮ ಸಮಾಜವಾದಿಗಳು' ಎಂಬ ಶೀರ್ಷಿಕೆಯಡಿಯಲ್ಲಿ ಅನೇಕ ಮಂದಿಯ ಪರಿಚಯ ಲೇಖನ ಪ್ರಕಟಿಸಿತ್ತು. ಆಗಲೇ ಹೊಸ ಮನುಷ್ಯ ತನ್ನ ಐವತ್ತು ಸಂಚಿಕೆಗಳನ್ನು ಪ್ರಕಟಿಸಿದ್ದು ನನ್ನ ಗಮನಕ್ಕೆ ಬಂತು. ಶ್ರೀ ಡಿ.ಎಸ್. ನಾಗಭೂಷಣ ಸಮಾಜವಾದಿಗಳ ಪರಿಚಯ ಲೇಖನಗಳುಳ್ಳ ಒಂದು ಪುಸ್ತಕವನ್ನೇ ಆನಂತರ ಪ್ರಕಟಿಸಿ, ತಮ್ಮ ಸಮಾಜವಾದಿ ಬದ್ಧತೆಯನ್ನು ನನ್ನಂಥವರಿಗೆ ಪರಿಚಯಿಸಿದರು.

ಜಯಪ್ರಕಾಶ ನಾರಾಯಣರ ಬಗ್ಗೆ ಅವರು ಬರೆದಿದ್ದ ಒಂದು ಅಪೂರ್ಣ ಕ್ರಾಂತಿ ಪುಸ್ತಕವನ್ನು ಆಗಲೇ ನಾನು ಓದಿ ಅವರ ಬಗ್ಗೆ ಗೌರವ, ಪ್ರೀತಿಯನ್ನು ನನ್ನ ಮನದಲ್ಲಿಟ್ಟುಕೊಂಡು ಬಂದಿದ್ದೆ.

ಸಮಾಜವಾದಿಗಳಾದ ನನ್ನಂಥವರಿಗೆ ಅತ್ಯಂತ ಪ್ರಿಯರಾದ ಮತ್ತು ಮೇರು ಆದರ್ಶಗಳ ದಿವಂಗತ ಡಾ| ರಾಮಮನೋಹರ ಲೋಹಿಯಾ ಅವರ ಜನ್ಮಶತಾಬ್ದ ಸಮಾರಂಭವನ್ನು ನಡೆಸಿದ್ದಲ್ಲದೆ ಅದರ ನೆನಪಿಗಾಗಿ ಒಂದು ಪ್ರತಿಷ್ಠಾನವನ್ನೂ ಹುಟ್ಟುಹಾಕಿದ್ದು ನನಗೆ ತುಂಬಾ ಖುಷಿ ಕೊಟ್ಟಂತ ವಿಷಯ.

ಒಂದರ್ಥದಲ್ಲಿ ಶಿವಮೊಗ್ಗ ಸಮಾಜವಾದಿಗಳ ನೆಲೆವೀಡಾಗಿತ್ತು ಒಂದು ಕಾಲದಲ್ಲಿ. ದಿವಂಗತರಾದ ಎಚ್. ಗಣಪತಿಯಪ್ಪ, ಜಿ. ಸದಾಶಿವ ರಾವ್, ಗೋಪಾಲ ಗೌಡ, ಬಂಗಾರಪ್ಪ ಮತ್ತು ಈಗಲೂ ನಮ್ಮೊಡನೆ ಇರುವ ಕಾಗೋಡು ತಿಮ್ಮಪ್ಪ ಶಿವಮೊಗ್ಗ ಜಿಲ್ಲೆಯವರು. ಬಂಗಾರಪ್ಪ ಮುಖ್ಯಮಂತ್ರಿಯಾಗಿ ಕಾಗೋಡು ತಿಮ್ಮಪ್ಪ ಆಗಲೂ ಈಗಲೂ ಶಾಸಕ ಮತ್ತು ಸಚಿವರಾಗಿ ಇರುವಂತಹ ಧೀಮಂತರ ಕರ್ಮಭೂಮಿ ಶಿವಮೊಗ್ಗೆ. ೧೯೭೧ರಲ್ಲಿ ಇಂದಿರಾಗಾಂಧಿಯ 'ಗರೀಬಿ ಹಠಾವೋ' ಸುಂಟರಗಾಳಿಗೆ ಸ್ವಲ್ಪ ಮಟ್ಟಿಗಾದರೂ ತಡೆ ನೀಡಿದ್ದ ಪ್ರದೇಶ.

ಇವರಿಗೆಲ್ಲ ಸಮಾಜವಾದಿ ಆಂದೋಲನವು ಅವರ ರಾಜಕೀಯ ಏಳಿಗೆಗೆ ಮೆಟ್ಟಿಲಾಗಿತ್ತಲ್ಲವೆ? ಇಂಥವರೆಲ್ಲಾ ತಮ್ಮನ್ನು ಏರಿಸಿಟ್ಟ ಏಣಿಯನ್ನೇ ತೊಡೆದು ಬಿಟ್ಟಿದ್ದಾರಲ್ಲ? ಈ ಹಳೆಯ ನೆನಪುಗಳು ನಮಗೆಲ್ಲ ನೋವು ಮಾಡುವಂಥವು.

ಇಂತಹ ವಾತಾವರಣದಲ್ಲೇ ಶ್ರೀ ಡಿ.ಎಸ್.ನಾಗಭೂಷಣ ಸಮಾಜವಾದಿ ಮಾಸಿಕವನ್ನು ಹುಟ್ಟುಹಾಕಿ ನಾಡಿನ ಎಲ್ಲೆಡೆಯ ಸಮಾಜವಾದಿಗಳಿಗೆ 'ನಾವಿದ್ದೇವೆ, ನಾವಿದ್ದೇವೆ' ಎಂದು ಹೇಳುವಂತೆ ಮಾಡಿದ್ದರು. ಸಮಾಜವಾದಿಗಳ ಧ್ವನಿ ಹೊಸ ಮನುಷ್ಯನ ಮೂಲಕ ನಿರಂತರವಾಗಿ ಮೊಳಗುತ್ತಿರಲಿ ಎಂದು ಆಶಿಸುತ್ತಿದ್ದ ನಮಗೆಲ್ಲ ಅದರ ಹಠಾತ್ ನಿಲುಗಡೆಯಿಂದ ದುಃಖವಾಗಿದೆ. ನನ್ನ ಮೂಲಕ ಪತ್ರಿಕೆಯ ಚಂದಾದಾರರಾಗಿದ್ದ ಗೆಳೆಯರು ಮಾಸಿಕದ ಜುಲೈ ಸಂಚಿಕೆಯನ್ನು ಓದಿ ತಮಗುಂಟಾದ ಆಘಾತವನ್ನು ಫೋನಾಯಿಸಿ ಹೇಳಿದರು. ಅವರೆಲ್ಲರ ಧ್ವನಿ 'ಇಂಥ ಒಂದು ಪತ್ರಿಕೆ ಬೇಕಾಗಿತ್ತು; ಯಾರಾದರೂ ಮುಂದುವರೆಸಬಹುದೆ?' ಎಂಬಂತೆ ಇತ್ತು.

**–ಅಮ್ಮೆಂಬಳ ಆನಂದ,** ಮಣಿಪಾಲ

### ನಮ್ಮನ್ನು ನಮ್ಮಂತೆಯೆ ಉಳಿಸುವಂತ ಎಚ್ಚರದ ಮಾತುಗಳು

ನಾನು ಮತ್ತು ನನ್ನಂತ ಅನೇಕರು ಸಮಾಜವಾದ,ಲೋಹಿಯಾವಾದ, ಚಳವಳಿ ಇತ್ಯಾದಿ ಪದಗಳನ್ನು ಕಿವಿ ಮೇಲೆ ಹಾಕಿಕೊಂಡು ಬೆಳೆದವರು. ಹಿರಿಯರೊಂದಿಗಿನ ಒಡನಾಟ, ಭಾಷಣ, ಮಾತುಕತೆಗಳ ಆಲೈಸುವಿಕೆ ಇದಕ್ಕೆ ಕಾರಣ. ಆದರೆ, ಈ ಎಲ್ಲ ಸಂಗತಿಗಳ ಕುರಿತಂತೆ ಓದಿನ ಹಿನ್ನೆಲೆಯ ಜ್ಞಾನ ಅಷ್ಟಕ್ಕಷ್ಟೆ. ಓದುವಿಕೆಗೆ ಹೇರಳ ಸಾಹಿತ್ಯ, ಅವಕಾಶಗಳು ಇದ್ದರೂ ಅದೇಕೋ ಪಠ್ಯದಾಚೆಗಿನ ಓದಿಗೆ ಒಡ್ಡಿಕೊಳ್ಳುವುದು ನನಗೆ ಹೆಚ್ಚು ಸಾಧ್ಯವಾಗಿರಲಿಲ್ಲ. ಸೈದ್ಧಾಂತಿಕ ವಿಷಯದಲ್ಲಿನ ಆ ಕೊರತೆಯನ್ನು ಕಳೆದ ಐದು ವರ್ಷದಲ್ಲಿ 'ಹೊಸ ಮನುಷ್ಯ' ಮಾಸಿಕ ಸ್ವಲ್ಪ ಮಟ್ಟಿಗಾದರೂ ತುಂಬಿದೆ.

ಸಮಾಜವಾದಿ ಚಳವಳಿಯ ಮುಖವಾಣಿಯಾಗಿದ್ದ 'ಮ್ಯಾನ್‌ಕೈಂಡ್'ನ ಹಳೆಯ ಸಂಚಿಕೆಗಳ ಮೇಲೆ ಕಣ್ಣು ಹಾಯಿಸಿದ್ದ ನಾನು, 'ಹೊಸ ಮನುಷ್ಯ'ವನ್ನು ಸಂಪೂರ್ಣ ಅಲ್ಲದಿದ್ದರೂ ನಿರಂತರವಾಗಿ ಒಂದಷ್ಟು ಓದಿದ್ದೇನೆ. ನಮ್ಮ ಹಿರಿಯ ತಲೆಮಾರಿನವರ ಹೋರಾಟಗಾಥೆಗಳನ್ನು ಪತ್ರಿಕೆ ಪರಿಚಯಿಸಿದೆ. ಹೋರಾಟಕ್ಕಾಗಿಯೇ ಬದುಕನ್ನು ಮುಡಿಪಿಟ್ಟು, ನುಡಿದಂತೆ ಬದುಕನ್ನು ನಡೆಸಿಯೂ ಎಲೆಯ ಮರೆಯ ಕಾಯಿಗಳಂತಿದ್ದ ತತ್ವಬದ್ಧ ಹಿರಿಯ ಜೀವಗಳನ್ನು, ಅವರ ಆದರ್ಶಗಳನ್ನು 'ನಮ್ಮ ಸಮಾಜವಾದಿಗಳು' ಸರಣಿಯ ಮೂಲಕ ಕಟ್ಟಿಕೊಟ್ಟಿದೆ. ಬಹುತೇಕ ಪ್ರತಿ ತಿಂಗಳು ಒಂದೊಂದು ಗಹನ ವಿಷಯದ ಮೇಲೆ ನಾಡಿನ ಹಲವು ಪ್ರಾಜ್ಞರು ನಡೆಸುತ್ತಿದ್ದ ತಜ್ಞ ಚರ್ಚೆಗಳು ನನ್ನಂತವರ ಜ್ಞಾನಕೋಶವನ್ನು ತುಸುವಾದರೂ ವಿಸ್ತರಿಸಿವೆ.

ಎಲ್ಲಕ್ಕಿಂತ ಮುಖ್ಯ, ಸಂಪಾದಕರಾದ ಡಿ.ಎಸ್.ನಾಗಭೂಷಣರ 'ಒತ್ತಾಯ' ಮತ್ತು ಕೆಲವೊಮ್ಮೆ 'ಮುಲಾಜು'ಗಳಿಗೆ ಕಟ್ಟು ಬಿದ್ದು, ನನ್ನದೆ ಕೆಲವು ಅನುಭವಗಳನ್ನು ಬರೆಯುವಂತಾಯಿತು. ಹಾಗೆ ಬರೆದದ್ದು ಸುಸಂಬದ್ಧವಾಗಿತ್ತೊ, ಇಲ್ಲವೋ ಬೇರೆ ಪ್ರಶ್ನೆ. 'ನಾನೂ ಬರೆಯ ಬಲ್ಲೆ' ಎನ್ನುವ ಆತ್ಮವಿಶ್ವಾಸವಂತೂ ಬೆಳೆಯಿತು. ಇದು ಸ್ವಲ್ಪ ಮಟ್ಟಿಗೆ ಹೊಸ ಓದನ್ನೂ ಸಾಧ್ಯವಾಗಿಸಿತು. ಅದಕ್ಕಾಗಿ ಹೊಸ ಮನುಷ್ಯಕ್ಕೆ ನನ್ನ ಕೃತಜ್ಞತೆ.

ಆಧುನಿಕ ಸಂದರ್ಭದಲ್ಲಿ ನಾವು ನಾವಾಗಿ ಉಳಿಯುವುದು ಸವಾಲಿನ ಸಂಗತಿ. ಮಾರುಕಟ್ಟೆಯ ಮಾಯೆ ನಮ್ಮ ಕಣ್ಣುಗಳನ್ನು, ಆತ್ಮವನ್ನು, ಹಂತ ಹಂತವಾಗಿ ಇಡಿ ದೇಹವನ್ನು ಆವರಿಸಿಕೊಳ್ಳುತ್ತಿರುವ ವರ್ತಮಾನದಲ್ಲಿ, ನಮ್ಮನ್ನು ನಮ್ಮಂತೆಯೆ ಉಳಿಸುವಂತ ಎಚ್ಚರದ ಮಾತುಗಳು, ಆತ್ಮ ಸಂವಾದಗಳು ಅಗತ್ಯ. ಕಳೆದ ಐದು ವರ್ಷ ಈ ಜವಾಬ್ದಾರಿಯನ್ನು ಜತನದಿಂದಲೇ ನಿರ್ವಹಿಸಿದ 'ಹೊಸ ಮನುಷ್ಯ' ಮುನ್ನಡೆಯುವುದಿಲ್ಲ ಎನ್ನುವುದು ನಿಜಕ್ಕೂ ಬೇಸರದ ಸಂಗತಿ.

ಎಲ್ಲ ರೀತಿಯಲ್ಲೂ ಅಬ್ಬರಿಸುವ ವೇಗಕ್ಕೆ ಒಡ್ಡಿಕೊಂಡಿರುವ ಲೋಕವನ್ನು ಒಮ್ಮೆಗೆ ಹಿಂತಿರುಗಿಸಿ ನಿಲ್ಲಿಸುವುದು ಯಾವ ಮಾಯಾ–ಮಂತ್ರದಂಡದಿಂದಲೂ ಸಾಧ್ಯವಿಲ್ಲ. ವೇಗದ ಮುಂದೋಟವೆ 'ನಿಜ' ಎಂಬ ನಂಬಿಕೆಯ ಕಂದಕಕ್ಕೆ ದೊಡ್ಡ ಸಮೂಹ ಬಿದ್ದಿರುವ/ಬೀಳುತ್ತಿರುವ ಹೊತ್ತಿನಲ್ಲಿ ನಿಜಾರ್ಥದ ಸುಧಾರಣೆ ಸುಲಭ ಸಾಧ್ಯವೂ ಅಲ್ಲ. ಹಾಗಂತ, ಲೋಕದ ಡೊಂಕನ್ನು ತಿದ್ದಲಷ್ಟೆ ನಾವು ಏನನ್ನೊ ಮಾಡಬೇಕಿಲ್ಲ. ನಮ್ಮೊಳಗನ್ನು ಎಚ್ಚರವಾಗಿಟ್ಟುಕೊಳ್ಳಲು, ಹಾದಿ ತಪ್ಪದಂತೆ ನಮ್ಮನ್ನು ನಾವು ಕಾಯ್ದುಕೊಳ್ಳಲು, ಹಾದಿ ತಪ್ಪಿದ ನಮ್ಮವರನ್ನು ತಿವಿದೆಚ್ಚರಿಸಲು 'ಹೊಸ ಮನುಷ್ಯ'ದಂತ ಪ್ರಯತ್ನ ಜಾರಿಯಲ್ಲಿರಬೇಕಿತ್ತು. ಈಗಿನ ರೂಪದಲಲ್ಲದಿದ್ದರೂ, ಯಾವುದಾದರೊಂದು ಬಗೆಯಲ್ಲಿ ನಿರಂತರವಾಗಿ ಈ ಎಚ್ಚರದ ನಡೆ–ನುಡಿಗಳು ಮೊಳಗುತ್ತಿರಲಿ. ವಿವೇಕ ಅರಳುತ್ತಿರಲಿ ಎನ್ನುವುದು ನನ್ನ ಕೋರಿಕೆ.

**–ಎನ್. ಆರ್. ಸ್ನೇಹಾ,** ಮೈಸೂರು

## ವಿಮರ್ಶಾತ್ಮಕವಾದ ಪ್ರಬುದ್ಧ ಸಂಪಾದಕೀಯಗಳು

ನವಮಾನವ' ಹಾಗೂ ಅನಂತರದ 'ಹೊಸಮನುಷ್ಯ' ಮಾಸ ಪತ್ರಿಕೆಯ ಚಂದಾದಾರನಾಗಿ ಎಲ್ಲಾ ಸಂಚಿಕೆಗಳನ್ನೂ ಓದಿ ಅವುಗಳ ಪ್ರಯೋಜನ ಪಡೆದಿದ್ದೇನೆ. ಕಳೆದ ಐದು ವರ್ಷಗಳ ಕಾಲಾವಧಿಯ ಕರ್ನಾಟಕದ, ಭಾರತದ ಹಾಗೂ ಜಗತ್ತಿನ ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾಹಿತ್ಯಕ ವಿದ್ಯಮಾನಗಳ ಬಗ್ಗೆ ನಿರಂತರವಾಗಿ ಪ್ರತಿಕ್ರಿಯಿಸುತ್ತಲೆ ಬಂದಿದ್ದೀರಿ. ಲೋಹಿಯಾ ಸಮಾಜವಾದಿಯಾದ ನೀವು ಬಲಪಂಥೀಯ ಹಾಗೂ ಎಡಪಂಥೀಯ ಚೌಕಟ್ಟುಗಳನ್ನೂ ಮೀರಿ ವಿಮರ್ಶಾತ್ಮಕವಾಗಿ ವಿಚಾರ ಮಾಡಿದ್ದೀರಿ. ರಾಜಕಾರಣದಲ್ಲಿ ಕಳೆದು ಹೋದ ಭ್ರಷ್ಟ ಸಮಾಜವಾದಿಗಳನ್ನು ವಿರೋಧಿಸಿದ್ದೀರಿ. ನಿರ್ಲಕ್ಷಿತ ಪ್ರಾಮಾಣಿಕ ಸಮಾಜವಾದಿಗಳನ್ನು ಸಮಾಜದ ಗಮನಕ್ಕೆ ತಂದಿದ್ದೀರಿ. ಜಾತ್ಯತೀತ ಮೌಲ್ಯಗಳನ್ನು ಎತ್ತಿ ಹಿಡಿದಿದ್ದೀರಿ. ಪ್ರಸ್ತುತ ನಾವೆಲ್ಲರೂ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಓದುಗರು ಚಿಂತಿಸಲು ಪ್ರೇರೇಪಿಸುವಂತಹ ಮೌಲಿಕವಾದ ಸ್ವತಂತ್ರ ಹಾಗೂ ಅನುವಾದಿತ ಲೇಖನಗಳನ್ನು ಮತ್ತು ಸಂದರ್ಶನಗಳನ್ನೂ ಪ್ರಕಟಿಸಿದ್ದೀರಿ. ಉಪಯುಕ್ತ ಪುಸ್ತಕಗಳ ಪರಿಚಯ ಮಾಡಿಸಿದ್ದೀರಿ. ಕಮ್ಮಟಗಳ ಮೂಲಕ ಯುವಜನರಿಗೆ ಸಮಾಜವಾದಿ ಮೌಲ್ಯಗಳನ್ನೂ, ತತ್ವಗಳನ್ನೂ, ಅವುಗಳ ಅನುಷ್ಠಾನದ ಮಾದರಿಗಳನ್ನೂ ತಿಳಿಸಿಕೊಟ್ಟಿದ್ದೀರಿ. ಇಂದಿನ ಭಾರತಕ್ಕೆ ಅಗತ್ಯವಾಗಿ ಬೇಕಾಗಿರುವ ಬುದ್ಧ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಕುವೆಂಪು ಮೊದಲಾದವರ ವಿಚಾರಗಳನ್ನು ಹೇಗೆ ಬಳಸಿಕೊಂಡು ದೇಶವನ್ನು ಕಟ್ಟಬೇಕು ಎಂಬುದರ ಬಗ್ಗೆ ಹಲವರು ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದೀರಿ. ಜಾಗತೀಕರಣ ಹಾಗೂ ಆಧುನೀಕರಣದ ಅಪಾಯಗಳು ಹಾಗೂ ಪರಿಸರ ಮಾಲಿನ್ಯ ಮತ್ತು ಪರಿಸರ ಸಂರಕ್ಷಣೆಯ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟಿದ್ದೀರಿ. ಭೂಮಿಯ ಮೇಲೆ ಮಾನವ ಜೀವಿ ಉಳಿಯಬೇಕಾದರೆ ದುರಾಶೆ, ಅತಿಯಾದ ಭೋಗ, ಭಯೋತ್ಪಾದನೆಯಿಂದ ಕೂಡಿದ ಮಾನವಕೇಂದ್ರಿತ ಜೀವನಕ್ರಮಕ್ಕೆ ಬದಲಾಗಿ ಜೀವಕೇಂದ್ರಿತ ಜೀವನ ಕ್ರಮವನ್ನು ಪ್ರತಿಪಾದಿಸಿದ್ದೀರಿ. ಲೋಹಿಯಾ ಪ್ರತಿಪಾದಿಸಿದ ಸರಳ, ಸಭ್ಯ ಜೀವನದ ಅಗತ್ಯವನ್ನು ಒತ್ತಿ ಹೇಳಿದ್ದೀರಿ. ಅಂತರ್ಜಾತಿ ವಿವಾಹವಾದವರು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಕೊಂಡಾಗ ಎದುರಾಗುವ ಸಮಸ್ಯೆಗಳನ್ನು ಬಿ.ಕೃಷ್ಣಪ್ಪನವರ ಜೀವನವನ್ನು ಕುರಿತ ಕೃಷ್ಣಪ್ಪ ಅವರ ಲೇಖನಗಳು ಮನದಟ್ಟು ಮಾಡಿಕೊಡುತ್ತವೆ.

ನನಗೆ ನಿಮ್ಮ ಪತ್ರಿಕೆಯಲ್ಲಿ ತುಂಬ ಇಷ್ಟವಾದದ್ದು ನಿಮ್ಮ ವಿಮರ್ಶಾತ್ಮಕವಾದ ಪ್ರಬುದ್ಧ ಸಂಪಾದಕೀಯಗಳು. ಒಂದು ಪತ್ರಿಕೆಯನ್ನು ನಿರ್ದಿಷ್ಟ ಉದ್ದೇಶದಿಂದ ಹೇಗೆ ಚೆನ್ನಾಗಿ ಪ್ರಕಟಿಸಬಹುದು ಎಂಬುದಕ್ಕೆ ಈ ಪತ್ರಿಕೆ ಒಳ್ಳೆಯ ಮಾದರಿಯಾಗಿದೆ. ಪುಟಗಳನ್ನು ಅನಗತ್ಯವಾಗಿ ವ್ಯರ್ಥಮಾಡದೆ ಸಾರ್ಥಕವಾಗಿ ಬಳಸಿಕೊಂಡಿದ್ದೀರಿ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳ ಬಗ್ಗೆ ವೈಚಾರಿಕ ಭಿನ್ನಾಭಿಪ್ರಾಯಗಳಿರಲು ಸಾಧ್ಯ. ನನಗೂ ಕೆಲವು ಭಿನ್ನಾಭಿಪ್ರಾಯಗಳಿವೆ. ಅವುಗಳ ಬಗ್ಗೆ ಚರ್ಚಿಸಬಹುದು. ಒಂದು ಪತ್ರಿಕೆಯನ್ನು ನಿರಂತರವಾಗಿ, ಸಕಾಲದಲ್ಲಿ ಪ್ರಕಟಿಸುವುದು ಕಷ್ಟದ ಕೆಲಸ. ಆದರೂ ಕಳೆದ ಐದು ವರ್ಷಗಳಿಂದ ಪತ್ರಿಕೆ ಪ್ರಕಟಿಸಿರುವುದು ಒಂದು ಸಾಧನೆ. ಯಾರ ಪ್ರಲೋಭನೆಗೂ ಒಳಗಾಗದೆ, ಒತ್ತಡದ ಕಾರಣದಿಂದ ರಾಜಿ ಮಾಡಿಕೊಳ್ಳದೆ ದಿಟ್ಟತನದಿಂದ ಕಾರ್ಯನಿರ್ವಹಿಸಿದ್ದೀರಿ. ಇದಕ್ಕಾಗಿ ನಿಮಗೆ, ಹಾಗೂ ನಿಮ್ಮ ಪತ್ರಿಕಾ ಬಳಗದ ಎಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

**–ಡಾ. ತೀ.ನಂ. ಶಂಕರನಾರಾಯಣ,** ಶಿವಮೊಗ್ಗ

## ಸಲಹೆ ಕೊಡುವುದು ಸುಲಭ. ಆದರೆ ಹೆಗಲು ಕೊಡುವುದು ಕಷ್ಟ

ತಾವು ಪತ್ರಿಕೆ ನಿಲ್ಲಿಸುವ ನಿರ್ಧಾರಕ್ಕೆ ಪರ್ಯಾಯ ಮಾರ್ಗ ಸೂಚಿಸುವ ಯೋಗ್ಯತೆ ಸಮಾಜವಾದದ ಸಂಸ್ಕೃತಿಯಲ್ಲೇ ಬೆಳೆದು ಬಂದ ನನಗೆ ಇಲ್ಲ. ಹಿಂದೊಮ್ಮೆ ನಾನು 'ಜಾಗೃತಿ' ಹೊತ್ತು ಮಾರುತ್ತಿದ್ದೆ. ಆದರೆ ಅದೇ ಉತ್ಸಾಹ ಈ ಇಳಿವಯಸ್ಸಿನಲ್ಲಿ ಉಳಿದಿಲ್ಲ. ಸಲಹೆ ಕೊಡುವುದು ಸುಲಭ. ಆದರೆ ಹೆಗಲು ಕೊಡುವುದು ಕಷ್ಟ.

'ಜನತಾ' ೭೧ ವರ್ಷಗಳಿಂದಲೂ ಉಳಿದಿದೆ. ಆದರೆ ಅಲ್ಲಿಯೂ ಸಮಸ್ಯೆ ಇದೆ. ತಾವೇ ಹೇಳಿದಂತೆ, ನನ್ನ ಸುತ್ತಮುತ್ತಲ ಸಮಾಜ ಮೂಲಸ್ವಭಾವವನ್ನೇ ಕಳೆದುಕೊಂಡು, ಮಿತಿಯಿಲ್ಲದ ಸುಖದಾಸೆಗಳ ಹಿಂದೆ ಬಿದ್ದಿದೆ. ಈ ವಾತಾವರಣದಲ್ಲಿ ಪರ್ಯಾಯ ವ್ಯವಸ್ಥೆ ಸಾಧ್ಯವೇ?

**–ಎಂ.ಜೆ. ಹೆಗ್ಡೆ,** ಮುಂಬೈ

## ಒಂದು ಕಾಲು ಮುಂದಿಟ್ಟು ಮತ್ತೆರಡು ಹೆಜ್ಜೆ ಹಿಂದೆ...

ನಿಮ್ಮ ಪತ್ರಿಕೆಯನ್ನು ಉದ್ದಕ್ಕೂ ಓದುತ್ತ ಬಂದಿರುವ ನನಗೆ, ಅದರಲ್ಲಿ ನೀವು ಬರೆದ ಹಲವು ಬರಹಗಳೂ ಸಂಪಾದಕೀಯಗಳೂ ತುಂಬ ಹೊಸತಾಗಿ ಯೋಚನೆ ಮಾಡುವ ಮಾರ್ಗವನ್ನು ಕಾಣಿಸಿ ಉತ್ಸಾಹ ಹುಟ್ಟಿಸಿದ್ದಿದೆ. ಆದರೆ, ಅಪರೂಪದ ಕೆಲವು ಲೇಖನ ಬಿಟ್ಟರೆ, ಅದರಲ್ಲಿ ಬರುತ್ತಿದ್ದ ಬಹುತೇಕ ಬೇರೆ ಬರಹಗಳೆಲ್ಲ ಇನ್ನುಳಿದ ಕಡೆಗೆ ಬರೆಯಲಾಗುತ್ತಿದ್ದ ಚರ್ವಿತಚರ್ವಣವೇ ಅನ್ನಿಸಿ ನಿರಾಶೆಯಾಗಿದ್ದೂ ಇದೆ. ಹಾಗಾಗಿ ಹೊಸ ರೀತಿಯಲ್ಲಿ ಯೋಚನೆ ಮಾಡಲು ಹೊರಟ ನಿಮ್ಮ ಪತ್ರಿಕೆಯೇ, ಒಂದು ಕಾಲು ಮುಂದಿಟ್ಟು ಮತ್ತೆರಡು ಹೆಜ್ಜೆ ಹಿಂದೆ ನಡೆಯುತ್ತಿದೆ – ಎಂತಲೂ ಅನ್ನಿಸಿದ್ದಿದೆ. ಇವತ್ತು ಪತ್ರಿಕೆಗಳಿಗೆ ಒಳ್ಳೆಯ ಬರಹಗಳನ್ನು ಪಡೆಯುವುದು ಎಷ್ಟು ಕಷ್ಟ ಎಂಬುದನ್ನು ನಾನು ಬಲ್ಲೆ. ಇದು ಕೇವಲ ಬರಹಗಾರರ ಸಮಸ್ಯೆಯೂ ಅಲ್ಲದಿರಬಹುದು ಎಂದೂ, ಇವತ್ತಿನ ಸಾಂಸ್ಕೃತಿಕ ಹವಾಮಾನದಲ್ಲಿಯೇ ಹೊಸ ರೀತಿಯ ಚಿಂತನೆ ಮಾಡಲಿಕ್ಕೆ ಮನಸ್ಸು ಅಳುಕುವಂಥ ಒಂದು ವಿಚಿತ್ರ ವಾತಾವರಣ ಇದೆಯೇನೋ ಎಂದೂ ನನಗೆ ಹಲವೊಮ್ಮೆ ಅನುಮಾನ ಹುಟ್ಟಿದೆ. ಇವೆಲ್ಲದರ ನಡುವೆಯೂ ಐದು ವರ್ಷ ನಡೆದ ನಿಮ್ಮ ಪತ್ರಿಕೆಗೆ ಶುಭಾಶಯಗಳು.

**–ಕೆ.ವಿ. ಅಕ್ಷರ,** ಹೆಗ್ಗೋಡು

## ಪತ್ರಿಕೆ ಬಿತ್ತಿದ ವಿಚಾರಗಳು ಓದುಗರಲ್ಲಿ ಉಳಿದೇ ಉಳಿಯುತ್ತವೆ

ಜುಲೈ ತಿಂಗಳ ಸಂಚಿಕೆ ಎಂದಿನಂತೆ ಹೊಸದು. ಮೋದಿ ಸರಕಾರ ಕುರಿತು ನಮಗೆ ಏನೇ ಪೂರ್ವಾಗ್ರಹಗಳಿದ್ದರೂ, ವೈಯಕ್ತಿಕವಾಗಿ ಅವರು ಕ್ರಿಯಾಶೀಲರಾಗಿ, ಕಳಕಳಿ ಇರುವವರಾಗಿ ಕಂಡು ಬರುತ್ತಾರೆ. ಅವರಿಗೆ ಇನ್ನೂ ಅಷ್ಟು ಕಾಲಾವಕಾಶ ನೀಡುವುದು ಸರಿ. ಅವರ ಮೌನ ಮತ್ತು ಮಾತುಗಳು ಇನ್ನೂ ಅರ್ಥವಾಗಬೇಕು. ನಮಗೆ ಪರ್ಯಾಯಗಳಾದರೂ ಈಗ ಎಲ್ಲಿವೆ? ಆದರ್ಶ ಪಕ್ಷ, ಆದರ್ಶ ವ್ಯಕ್ತಿ, ಆದರ್ಶ ರಾಜಕೀಯ ಈಗ ಎಲ್ಲೂ ಕಾಣುತ್ತಿಲ್ಲ. ಪರ್ಯಾಯ ಎಂದುಕೊಂಡ ಕೇಜ್ರಿ ಈಗ ಹೇಗಾಗಿದ್ದಾರೆ ನೋಡಿ. ಆದರೂ ಒಳ್ಳೆಯ ಬದಲಾವಣೆಯತ್ತ ನಮ್ಮ ಪ್ರಯತ್ನ ಇರಲೇಬೇಕು. ಪರ್ಯಾಯ ಸಂಘಟನೆಗಳು ಬಲಿಯಬೇಕು. ನಾವು ಒಪ್ಪಲಿ ಅಥವಾ ಬಿಡಲಿ ಭಾರತ ಈಗ ಜಾಗತೀಕರಣಕ್ಕೆ ತೆರೆದುಕೊಂಡಿದೆ. ಹೊಸ ಜನಾಂಗ ಅದನ್ನು ಸ್ವಾಗತಿಸಿದೆ. ಇಲ್ಲದಿದ್ದಲ್ಲಿ ಅವರ 'ಅತೀ ಸುಶಿಕ್ಷಿತ' ಕೈಗಳಿಗೆಲ್ಲ ಕೆಲಸ ಕೊಡುವವರಾರು? ಈಗ ಹಿಂದೆ ಹೋಗುವಂತಿಲ್ಲ. ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಬದುಕು ಪಲ್ಲಟಗೊಳ್ಳುತ್ತಿರುವಾಗ ತಲ್ಲಣಗಳು ಸಹಜ. ಹೊಸ ತಲೆಮಾರಿಗೆ ಬದುಕುವ ಮಾರ್ಗ ಕುರಿತು ಚಿಂತಿಸುವ ವ್ಯವಧಾನ ಇಲ್ಲ. ಅವರ ಒತ್ತಡಗಳು ಭಿನ್ನವಾಗಿವೆ.

ಪತ್ರಿಕೆ ನಿಲ್ಲುತ್ತಿರುವದು ಬೇಸರದ ಸಂಗತಿ. ದ್ವೈಮಾಸಿಕವಾಗಿ ಬಂದಿದ್ದರೂ ಆಗುತ್ತಿತ್ತು. ಹೊಸ ಓದುವ ವರ್ಗ ಬೆಳೆಯುತ್ತಿಲ್ಲ. ಓದದೇ ಯುವ ಪೀಳಿಗೆಗೆ ಸಮಾಜವಾದ ಅಥವಾ ಇತರೆ ತಾಕಲಾಟಗಳು ಅರ್ಥವಾಗುವದಿಲ್ಲ. ನಮ್ಮ ತಲೆಮಾರು ಜಡಗೊಂಡು ಸಿನಿಕ್ ಆಗಿದೆ. ನೀವು ಸಾಕಷ್ಟು ಶ್ರಮಿಸಿದ್ದೀರಿ. ಪತ್ರಿಕೆ ಬಿತ್ತಿದ ವಿಚಾರಗಳು ಓದುಗರಲ್ಲಿ ಉಳಿದೇ ಉಳಿಯುತ್ತವೆ.

**–ವೆಂಕಟೇಶ ಮಾಚಕನೂರ,** ಧಾರವಾಡ

## ಇಂತಹ ಇನ್ನೊಂದು ಪತ್ರಿಕೆ ಕನ್ನಡದಲ್ಲಂತೂ ಇರಲಿಲ್ಲ

ಜುಲೈ ತಿಂಗಳ ನಿಮ್ಮ ಸಂಪಾದಕೀಯವನ್ನು ಮತ್ತೆ ಮತ್ತೆ ಓದಿದೆ. ಅದರ ಆರ್ತತೆ ಮತ್ತು ಉತ್ಕಟತೆ ಮನಕಲಕುವಂತಿದೆ. ಇದನ್ನೂ ನೀವು 'ಓದಿನ ಸುಖ' ಎಂದು ಛೇಡಿಸುತ್ತೀರೋ ಏನೋ! ನಿಮ್ಮ ಬರಹದಲ್ಲಿ ಒಂದೆಡೆ 'ಒಬ್ಬರು ಮಾತ್ರ ಪತ್ರಿಕೆ ನಿಲ್ಲುತ್ತಿರುವುದರ ಬಗ್ಗೆ 'ಸಂತೋಷ' ವ್ಯಕ್ತಪಡಿಸಿದ್ದರ ಬಗ್ಗೆ ಬರೆದಿದ್ದೀರಿ. ಆದರೆ ಅವರ ಪತ್ರದ ಮಾತು ನನಗೆ ವಂಗ್ಯದ ಹಾಗೆ ಕೇಳಿಸಿತು. ಬುದ್ಧ, ಬಸವ, ಅಂಬೇಡ್ಕರ್ ಮುಂತಾದವರು ಈಗ ಹಳಸಲಾಗಿರುವಂತೆ ಕಾಣುವುದು ಹೌದಲ್ಲವೇ?

'ಹೊಸ ಮನುಷ್ಯ'ದಂತಹ ಇನ್ನೊಂದು ಪತ್ರಿಕೆ ಕನ್ನಡದಲ್ಲಂತೂ ಇರಲಿಲ್ಲ. ಹಾಗೆಂದು ನಿಮ್ಮ ದೇಹಾರೋಗ್ಯವನ್ನು ಕಡೆಗಣಿಸಿ ಪತ್ರಿಕೆಯನ್ನು ನಡೆಸಿಕೊಂಡು ಹೋಗಬೇಕು ಎಂದು ಅಪೇಕ್ಷಿಸುವುದು ಯುಕ್ತವಲ್ಲ. ನನಗೆ ನಿಮ್ಮ ಧರ್ಮಸಂಕಟ ಅರ್ಥವಾಗುತ್ತದೆ. ಆದರೆ ಪತ್ರಿಕೆ ನಿಲ್ಲಿಸುವ ನಿಮ್ಮ ನಿರ್ಧಾರದಿಂದ ಯಾವ ಕಾರಣಕ್ಕೂ ಹಿಂದೆ ಸರಿಯಬೇಡಿ.

**–ಜಿ. ರಾಜಶೇಖರ,** ಉಡುಪಿ

**ಚಿಂತನೆಗಳ ಸ್ಪಷ್ಟತೆಗೆ ಹಾಗೂ ಅನುಷ್ಠಾನಕ್ಕೆ ದಾರಿದೀಪವಾಯಿತು**

ಪತ್ರಿಕೆ ನಿಲ್ಲಿಸಲು ನೀವು ತೆಗೆದುಕೊಂಡಿರುವ ನಿರ್ಧಾರದ ಹಿಂದೆ ೪೦ರ ಆಸುಪಾಸಿನಲ್ಲಿರುವ ನನ್ನಂಥವರ ಜೀವನ ಶೈಲಿ, ಬದುಕಿನ ಕ್ರಮವೂ ಇದೆ ಎಂಬುದನ್ನು ಅರಿತು ಬೇಸರವಾಯಿತು.ವಿಷಾದವೂ ಉಂಟಾಯಿತು. ಅಪರಾಧಿ ಪ್ರಜ್ಞೆಯಂತೂ ಇದ್ದೇ ಇರುತ್ತೆ. ಆದರೂ ಎಬಿವಿಪಿ ಹಿನ್ನೆಲೆಯಿಂದ ಬಂದ ನನಗೆ, ಲೋಹಿಯಾ ಮೊದಲಿಂದಲೂ ಆಕರ್ಷಣೆ. ಪರಿಷತ್‌ನಲ್ಲಿ ದತ್ತಾ ಹೊಸಬಾಳೆ ಅವರು ಲೋಹಿಯಾ ಬಗ್ಗೆ ಪ್ರೀತಿಯಿಂದ ಮಾತನಾಡುತ್ತಿದ್ದದ್ದು ಹಾಗೂ ಪತ್ರಕರ್ತನಾದ ಮೇಲೆ ನಾನು ಆಲಿಸುತ್ತಿದ್ದ ಪ್ರೊ. ಕೆ.ರಾಮದಾಸ್, ನಾಗವಾರ ಅವರಂಥವರ ಭಾಷಣ ಲೋಹಿಯಾರೆಡೆಗೆ ನಾನು ಸೆಳೆಯುವಂತೆ ಮಾಡಿತು. ಪತ್ರಕರ್ತನಾಗಿ ಐದಾರು ವರ್ಷ ದಾಟಿದ ಬಳಿಕ (ಅಂದ್ರೆ ವಯಸ್ಸು ೩೨ ಆದ್ಮೇಲೆ) ಲೋಹಿಯಾರನ್ನು ಓದಲು ಆರಂಭಿಸಿದೆ. ನೀವು ಹಾಗೂ ನಿಮ್ಮಂಥವರ ಪುಸ್ತಕಗಳಿಂದ ತಿಳಿಯಲಾರಂಭಿಸಿದೆ.

ಬಳಿಕ ಬಂದ ನಿಮ್ಮ ಪತ್ರಿಕೆ ಸಮಾಜವಾದಿ ಚಿಂತನೆಗಳ ಸ್ಪಷ್ಟತೆಗೆ ಹಾಗೂ ಅದರ ಅನುಷ್ಠಾನ ಮಾರ್ಗಕ್ಕೆ ದಾರಿದೀಪವಾಯಿತು. ನಾನಂತೂ ನನ್ನೆಲ್ಲಾ ಮಿತಿ ಹಾಗೂ ಶಕ್ತಿ ಸಾಮರ್ಥ್ಯದ ನಡುವೆಯೂ, ಆ ದಾರಿಯಲ್ಲಿ ಹೆಜ್ಜೆ ಹಾಕುತ್ತಿರುವೆ. ಅದರ ವೇಗ. ನೀವು ನಿರೀಕ್ಷಿಸಿದಷ್ಟು ಇರದೇ ಇರಬಹುದು. ಒಮ್ಮೊಮ್ಮೆ ದಾರಿ ತಪ್ಪಿರಲೂಬಹುದು. ಆದರೆ, ಆ ಮಾರ್ಗವನ್ನಷ್ಟೆ ತುಳಿಯಬೇಕೆಂಬ ಎಚ್ಚರವನ್ನಂತೂ ಪತ್ರಿಕೆ ಈ ಐದು ವರ್ಷಗಳಲ್ಲಿ ನನಗೆ ನೀಡಿದೆ. ಒಟ್ಟಾರೆ ಪತ್ರಿಕೆ ನನ್ನ ಪಾಲಿಗಂತೂ, ಕೇವಲ ಓದಿನ ಸುಖವಾಗಿರಲಿಲ್ಲ. ಇರಲಿ, ನಿಮ್ಮ ಸಿಟ್ಟು ಯಾವಾಗಲೂ ನನ್ನಂಥವರನ್ನು ಎಚ್ಚರದಲ್ಲಿಡಲಿ.

**–ಚೀ.ಜ. ರಾಜೀವ,** ಮೈಸೂರು

**ನಿಮ್ಮ ಅನಿಸಿಕೆ ಸಂಪೂರ್ಣ ಸತ್ಯ.**

ಪತ್ರಿಕೆ ನಿಲ್ಲಿಸಲು ನೀವು ನೀಡಿರುವ ಕಾರಣಗಳು ಸಕಾರಣಗಳೇ ಆಗಿದ್ದು, ನಿಮ್ಮ ನಿರ್ಧಾರ ಸರಿಯಾದುದೇ ಆಗಿದೆ. ಈಗಿನ ಮನುಷ್ಯನ ಮನೋಭಾವನೆಗಳ ಬಗ್ಗೆ ನಿಮ್ಮ ಅನಿಸಿಕೆ ಸಂಪೂರ್ಣ ಸತ್ಯ.

ಪ್ರತಿ ಸಂಚಿಕೆಯ ನಿಮ್ಮ ಸಂಪಾದಕೀಯ ಹೊಸ ಹೊಸ ಚಿಂತನೆಗಳ ಮೂಲಕ ಹೊಸ ಮನುಷ್ಯನನ್ನೇ ರೂಪಿಸಲು ಹೊರಟ ನಿಮ್ಮ ಪ್ರಯತ್ನ ಮತ್ತು ಹಲವು ಪ್ರತಿಭಾವಂತ ಲೇಖಕರು ಕೆಲ ಓದುಗರನ್ನಾದರೂ ಬಡಿದೆಬ್ಬಿಸಿದ್ದೇನೋ ಹೌದು. ಆದರೆ ಸುಮಾರು ಸಾವಿರ ಚಂದಾದಾರರಿಗೆ ಪ್ರತಿ ತಿಂಗಳೂ ಕಾಲಕ್ಕೆ ಸರಿಯಾಗಿ ಪತ್ರಿಕೆ ತಲುಪಿಸುವ ನಿಮ್ಮ ಜವಾಬ್ದಾರಿ ಸಾಮಾನ್ಯವಾದುದೇನಲ್ಲ. ಇದಕ್ಕೆಲ್ಲ ನಿಮ್ಮ ಅಮೂಲ್ಯ ಸಮಯ, ಆರೋಗ್ಯ, ವಯಸ್ಸು ಇತ್ಯಾದಿ ತುಂಬ ಅವಶ್ಯ.

ಪತ್ರಿಕೆ ನಿಂತರೂ ಆಳವಾದ ನಿಮ್ಮ ಚಿಂತನೆ, ಆಲೋಚನೆಗಳ ಮೂಲಕ ವಾಸ್ತವಕ್ಕೆ ಹತ್ತಿರವಾದ ಸಂಗತಿಗಳನ್ನು ಓದುಗರಿಗೆ ತಿವಿದು ಹೇಳುವ ನಿಮ್ಮ ಪ್ರಬುದ್ಧ ಲೇಖನಗಳು ಬೇರಾವ ರೀತಿಯಲ್ಲಾದರೂ ಓದುಗರಿಗೆ ತಲುಪುವಂತಾದರೆ ತುಂಬ ಸಂತೋಷ.

**–ಕೆ.ಟಿ. ಮೋಹನ,** ಬೆಂಗಳೂರು

**ಮಿತ್ರರು ಸೇರಿ ಪತ್ರಿಕೆಯನ್ನು ಓದಿ ಚರ್ಚಿಸುತ್ತಿದ್ದೆವು.**

'ಹೊಸ ಮನುಷ್ಯ' ನಿಲ್ಲುತ್ತಿರುವುದು ತುಂಬಾ ಬೇಸರದ ಸಂಗತಿ. ಪತ್ರಿಕೆ ಯಾರನ್ನೂ ಪ್ರಭಾವಿಸುತ್ತಿಲ್ಲ ಎಂಬ ನಿಮ್ಮ ಅಭಿಪ್ರಾಯ ಸರಿಯಲ್ಲ. ಪತ್ರಿಕೆಯ ಮೊದಲ ಸಂಚಿಕೆಯಿಂದ ನಾವು ಇಲ್ಲಿನ ಅನೇಕ ಮಿತ್ರರು ಸೇರಿ ಪತ್ರಿಕೆಯನ್ನು ಓದಿ ಚರ್ಚಿಸುತ್ತಿದ್ದೆವು. ನಿಮ್ಮ ಪತ್ರಿಕೆಯಿಂದ ನಮ್ಮ ಸುತ್ತಮುತ್ತ ಒಂದು ಸಮಾಜವಾದಿ ವಾತಾವರಣ ನಿರ್ಮಾಣವಾಗಿದೆ. ನಿಮ್ಮ ಪತ್ರಿಕೆ ನಿಲ್ಲುವುದರಿಂದ ಇಂತಹ ಚರ್ಚೆ, ವಾತಾವರಣ ಕಳೆಗುಂದುವುದು. ಯೋಚಿಸಿ. ನನ್ನಿಂದೇನಾದರೂ ಸಹಾಯ ಅಗತ್ಯವಿದ್ದರೆ ದಯವಿಟ್ಟು ತಿಳಿಸಿ.

**–ರಮೇಶ,** ಕೊಳಚಗಾರು(ಇಡುವಾಣಿ)

**ಪತ್ರಿಕೆಯಿಂದ ಕಲಿತಿದ್ದೇನೆ; ಇನ್ನೂ ಕಲಿಯಬಯಸುವೆ**

ನಿಮ್ಮ ಪತ್ರಿಕೆ ಮತ್ತು ಅದರಲ್ಲಿನ ಹಲವು ಲೇಖನಗಳು ನನಗಿಷ್ಟವಾಗಿದ್ದವು. ಅವುಗಳಿಂದ ನಾನು ಹಲವು ವಿಷಯ ಕಲಿತಿದ್ದೇನೆ. ನಿಮ್ಮ ಪತ್ರಿಕೆ ಮತ್ತಷ್ಟು ಕಾಲ ನನಗೆ ಕಲಿಸಲಿ ಎಂಬುದಷ್ಟೇ ನನ್ನ ಬಯಕೆ. ಹೇಗಾದರೂ 'ಹೊಸಮನುಷ್ಯ' ನಿಲ್ಲದೆ ಬರುತ್ತಿರಲಿ ಎಂಬ ಹಾರೈಕೆಯೊಡನೆ ಉಳಿಯುತ್ತೇನೆ.

**–ಬಿ.ಸುರೇಶ,** ಬೆಂಗಳೂರು



ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಇಡೀ ಜಗತ್ತು ಒಬ್ಬನ ಅಧಿಕಾರದಲ್ಲಿ ನಡೆಯುತ್ತಿದೆ. ಹೀಗಿರುವಾಗ ಇನ್ನೊಬ್ಬನ ಮೇಲೆ ಅಧಿಕಾರ ನಡೆಸುವವನು ಮೂರ್ಖ, ಅಶಿಕ್ಷಿತ.

– ಗುರು ನಾನಕ್

**ಸಿ.ಎಂ.ಅಂಗಡಿ**
ಸುಪ್ರೀಂ ಕೋರ್ಟ್ ವಕೀಲರು
ನಂ.೪, ಲಾಯರ್ಸ್ ಚೇಂಬರ್ಸ್(ಓಲ್ಡ್ ಬ್ಲಾಕ್)
ಸುಪ್ರೀಂ ಕೋರ್ಟ್
ನ್ಯೂ ಡೆಲ್ಲಿ –110 001



**ಮನೆ:**

ಫ್ಲ್ಯಾಟ್ ನಂ. 402/O – ಟವರ್
ಸೂಪರ್‌ಟೆಕ್ ಇಕೊ ಸಿಟಿ
ಸೆಕ್ಟರ್ ನಂ. 137
ನೊಯಿಡಾ – 201 301(ಉಪ್ರ)
ದೂ :09811118334

# ಹೊಸ ಮನುಷ್ಯ ಒಂದು ವರ್ಷದ ಹಿನ್ನೋಟ: ಆತ್ಮಸಾಕ್ಷಿಯನ್ನು ಮುಟ್ಟುವ ಬರಹಗಳು

–ಆರ್.ತಾರಿಣಿ ಶುಭದಾಯಿನಿ





'**ಹೊ**ಸಮನುಷ್ಯ'ದ ಈ ವರ್ಷದ ಸಂಚಿಕೆಗಳು ಸಮೀಕ್ಷೆಯನ್ನು ಬೇಸರದಿಂದಲೇ ಮಾಡಬೇಕಾಗಿದೆ. 'ಹೊಸ ಮನುಷ್ಯ'ದಂತಹ ಪತ್ರಿಕೆ ಸೀಮಿತ ವಲಯವನ್ನು ತಲುಪುತ್ತಿದ್ದರೂ ಅದರ ಗುಣಮಟ್ಟ ಮತ್ತು ಉದ್ದೇಶಗಳ ದೃಷ್ಟಿಯಿಂದ ಅದರ ಮಹತ್ವ ಹೆಚ್ಚಿನದೇ. ಒಂದು ಸಮುದಾಯದ ಯೋಚನಾ ಕ್ರಮವನ್ನು ರೂಪಿಸಿಕೊಡುವ ಇಂತಹ ಪತ್ರಿಕೆಗಳು ಇರಲಿ ಎನ್ನುವುದು ಅದರ ಎಲ್ಲ ಓದುಗರ ಅಪೇಕ್ಷೆ. ಅದಕ್ಕೆ ಸಂಪಾದಕರಿಗೆ ಬಂದ ಪತ್ರಗಳೇ ಸಾಕ್ಷಿ. ಆದರೆ ಸಂಪಾದಕರು ಮಾತ್ರ ಸ್ಪಷ್ಟವಾಗಿ ಇಂದಿನ ಮಧ್ಯಮ ವರ್ಗದ ಆಲೋಚನೆ ಹಾಗು ಕ್ರಿಯೆಗಳ ನಡುವೆ, ನಡೆ ಮತ್ತು ನುಡಿಗಳ ನಡುವೆ ಬಿರುಕುಗಳೆದ್ದಿವೆ ಎನ್ನುವುದನ್ನು ತುಸು ಖಾರವಾಗಿ, ತುಸು ವಿಷಾದದಿಂದಲೇ ಗುರುತಿಸಿ ಹೇಳಿ ಪತ್ರಿಕೆಯನ್ನು ನಿಲ್ಲಿಸುವ ಬಗ್ಗೆ ಖಚಿತವಾದ ಸೂಚನೆಗಳನ್ನು ನೀಡಿದ್ದಾರೆ. ಸದ್ಯದ ಕನ್ನಡ ಸಾಹಿತ್ಯ ಮತ್ತು ಸಂವಾದಗಳ ದೃಷ್ಟಿಯಿಂದ ದುರದೃಷ್ಟಕರ ಎಂದೇ ಹೇಳಬಹುದು.

ಕಳೆದ ವರ್ಷ ಬಂದ ಸಂಚಿಕೆಗಳು ಉತ್ಕೃಷ್ಟವಾದ ಬರಹಗಳನ್ನು ಹೊಂದಿವೆ. ಪತ್ರಿಕೆಯ ಐದು ವರ್ಷದ ನಡಿಗೆಯಲ್ಲಿ ಆಯಾಸವಾಗಲೀ ಏಕತಾನತೆಯಾಗಲೀ ಇಲ್ಲ. (ಹಾಗೆ ನೋಡಿದರೆ ಜುಲೈ ತಿಂಗಳ ಸಂಚಿಕೆಯಲ್ಲೇ ಲವಲವಿಕೆ ಕೊಂಚ ಮಾಯವಾಗಿದೆ. ಇದಕ್ಕೆ ಪತ್ರಿಕೆ ನಿಲ್ಲಿಸುವ ನಿರ್ಧಾರ ಕಾರಣವಿರಬೇಕೆಂದು ಊಹಿಸುವೆ).

ಪ್ರತಿ ವರ್ಷದಂತೆ ಆಗಸ್ಟ್ ತಿಂಗಳು ಹೊಸ ಮನುಷ್ಯದ ಹುಟ್ಟುಹಬ್ಬದ ಸಂಚಿಕೆ. ಆದಕಾರಣ ಪತ್ರಿಕೆಯ ಕೆಲವು ಪುಟಗಳು ಹೆಚ್ಚಿರುತ್ತವೆ. ಪ್ರತಿಬಾರಿಯ ವಿಚಾರ, ಚರ್ಚೆಗಳ ಜೊತೆ ಕತೆ, ಕಾವ್ಯಗಳಿಗೆ ಕೆಲವು ಪುಟಗಳನ್ನು ಮೀಸಲಿಡಲಾಗಿದೆ. ಈ ಸಂಚಿಕೆಯಲ್ಲಿ ಗಮನ ಸೆಳೆಯುವಂತಿರುವುದು ಪಂಕಜ್ ಮಿಶ್ರಾ ಜೊತೆಗಿನ ಮಾತುಕತೆ. ಆಧುನಿಕತೆಯ ಬಗ್ಗೆ ಕನ್ನಡದಲ್ಲಿ ಆಗಿಂದಾಗ್ಗೆ ಪ್ರಸ್ತಾಪವಾಗುತ್ತಲೇ ಇರುತ್ತದೆಯಾದರೂ ಅದರ ಸ್ವರೂಪ ಅನೇಕ ಸಾರಿ ತಾತ್ವಿಕತೆಯ ಚೌಕಟ್ಟಿನಲ್ಲಿರುವುದಿಲ್ಲ. ಆಧುನಿಕತೆಯನ್ನು ಸಾಮಾನ್ಯವಾಗಿ ಪಾಶ್ಚಾತ್ಯ ಎಂದೂ ಅದಕ್ಕೆ ಪ್ರತಿರೋಧ ತೋರುವುದೇ ಪೌರ್ವಾತ್ಯವೆಂದೂ ನಿರ್ವಚಿಸಲಾಗುತ್ತದೆ. ಇಲ್ಲಿ ಪಂಕಜ್ ಮಿಶ್ರಾ ಅವರು ಈ ಚರ್ಚೆಗೆ ಒಂದು ತಾತ್ವಿಕ ತಿರುವು ನೀಡುತ್ತಾ ಪೌರ್ವಾತ್ಯವೆನ್ನುವುದು ಪಾಶ್ಚಾತ್ಯಗಳ ಅನುಕರಣೆ ಮಾಡುತ್ತಾ ಅದರಂತೆ ಆಗುತ್ತಿರುವಾಗ ಪೌರ್ವಾತ್ಯದ ನಿಜಸ್ವರೂಪವೇನು? ಎಂಬುದು ಸಮಸ್ಯಾತ್ಮಕವಾಗಿಯೇ ಉಳಿಯುತ್ತದೆ ಎನ್ನುತ್ತಾರೆ. ಆಧುನಿಕೋತ್ತರ ಸಮಾಜಗಳಲ್ಲಿ ಘಟಿಸುತ್ತಿರುವ ಉಗ್ರವಾದ, ಮುಸ್ಲಿಂ ಮೂಲಭೂತವಾದ ಹಾಗು ಇಂಡಿಯಾದಲ್ಲಿ ಹುಟ್ಟುತ್ತಿರುವ ಹಿಂದುತ್ವವಾದಗಳು ಹಾಗು ಪುಟಿನ್ ಮತ್ತು ಎರ್ಡೋಗಾನ್ ರಾಜಕೀಯ ಮೂಲಭೂತವಾದಗಳು ಕಾಲವನ್ನು ವರ್ತಮಾನದಿಂದ ಹಿಂದಕ್ಕೆ ಒಯ್ಯುತ್ತವೆ ಎನ್ನುವ ಮಿಶ್ರಾ ಅವರ ಅಭಿಪ್ರಾಯ ಮೌಲಿಕವಾಗಿದೆ. ಟೆಕ್ಕಿಗಳು ಸಹ ಈ 'ಕಾಲಜ್ಞಾನ ವಿದ್ಯೆ'ಯನ್ನು ಇನ್ನಷ್ಟು ಬಲಗೊಳಿಸುತ್ತಿವೆಯೆಂದೇ ಅವರ ಅಭಿಪ್ರಾಯ. ಈ ವಿಶ್ಲೇಷಣೆ ಆಧುನಿಕತೆಯ ಚರ್ಚೆಗೆ ಹೊಸ ಆಯಾಮವನ್ನು ಒದಗಿಸಿಕೊಟ್ಟಿದೆ. ಇದರ ಮುಂದಿನ ಭಾಗವಾಗಿ ಎಸ್.ಮಂಜುನಾಥ್ ಅವರ 'ಜೋಡಿಸಬಹುದೇ ಹರಿದ ಎಳೆಯನ್ನು' ಲೇಖನವನ್ನು ಓದಿಕೊಂಡರೆ ಆಧುನಿಕತೆಯ ಬಗೆಗೆ ಕನ್ನಡದ ಪ್ರತಿಕ್ರಿಯೆ ಮನದಾಳದಿಂದ ಬಂದಿರುವುದನ್ನು ನೋಡಬಹುದು. ಡಿ.ಎಸ್.ನಾಗಭೂಷಣ ಅವರ 'ಲೋಹಿಯಾ ಮತ್ತು ಅಂಬೇಡ್ಕರ್–ಒಂದು ತುಲನಾತ್ಮಕ ನೋಟ' ಲೇಖನ ಚಿಂತನೆಗೆ ಹಚ್ಚುವಂತದ್ದು. ಇದೀಗ ನಮ್ಮ ರಾಜಕೀಯ ತತ್ವಚಿಂತಕರನ್ನು ಮತ್ತೊಮ್ಮೆ ಪರಿಶೀಲಿಸುವ ಕಾಲವಂತೂ ಬಂದಿದೆ. ನಾಗಭೂಷಣರು ಲೋಹಿಯಾ ಮತ್ತು ಅಂಬೇಡ್ಕರ್ ಅವರ ನಡುವೆ ಇರುವ ಸಮಾನ ಅಂಶಗಳನ್ನು ಗುರುತಿಸುವುದರ ಜೊತೆಗೆ ಅವರ ನಡುವಿನ ಭಿನ್ನತೆಗಳನ್ನೂ ವಿಶ್ಲೇಷಿಸಿದ್ದಾರೆ. ಅನೇಕ ಒಳನೋಟಗಳುಳ್ಳ ಈ ಲೇಖನದಲ್ಲಿ ಅಂಬೇಡ್ಕರ್ ಪ್ರಭುತ್ವವಾದಿ ರಾಜಕೀಯತತ್ವಗಳಲ್ಲಿ ನಂಬಿಕೆಯಿಟ್ಟಿದ್ದರೆ ಲೋಹಿಯಾ ಪ್ರಭುತ್ವವನ್ನು ಅನುಮಾನಿಸುವ 'ಅನಧಿಪತ್ಯದ' ಧೋರಣೆ ಹೊಂದಿದ್ದರು ಎನ್ನುವುದು ಮುಖ್ಯವೆನಿಸುತ್ತದೆ. ಇದೇ ನೋಟಕ್ರಮದಲ್ಲಿಯೇ ಸಾಗುವಂತಿರುವುದು, ಡಿಎಸ್ಎನ್ ಅವರದೆ ಲೇಖನ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ'. ಇಲ್ಲಿ ಲೇಖಕರು ಎತ್ತುವ ಮೂಲಭೂತ ಪ್ರಶ್ನೆ ಎಂದರೆ ಜಾತಿ ವಿನಾಶ ಅಂಬೇಡ್ಕರ್ ಅವರು ಆಶಿಸಿದಂತೆ ನಡೆದಿದೆಯೇ? ಎನ್ನುವುದು. ಹಿಂದುಳಿದ ಜಾತಿಗಳು ಉದ್ಧಾರವಾಗಿವೆ ನಿಜ, ಆದರೆ ಇದರಿಂದ ಜಾತಿಗಳು ನಾಶವಾದಂತೆ ಆಗಲಿಲ್ಲ ಎನ್ನುವ ನಿಷ್ಠುರ ಸತ್ಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇದೇ ವಿಚಾರವನ್ನು ವಾಸುದೇವ ಬೆಳ್ಳೆಯವರು ಮುಂದುವರೆಸುತ್ತಾ ದಲಿತ ಸಂಘರ್ಷ ಸಮಿತಿಗಳು ರೂಪಿಸಿಕೊಂಡ ಈಸ್ಥೆಟಿಕ್ಸ್ ಹಾಗು ಐಡಿಯಾಲಜಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಇದು ಈ ಹೊತ್ತಿನ ಸಾಮಯಿಕವಾದ ಕೇಳಿಕೊಳ್ಳಲೇಬೇಕಾದ ಸಂದಿಗ್ಧಗಳು. ಇಲ್ಲಿ ಅಂಬೇಡ್ಕರ್ ಅವರು ಐಕಾನ್ ಆಗಿ ಬಳಕೆಯಾಗುತ್ತಿದ್ದು ಆ ರಾಜಕಾರಣದಿಂದ ಭಾರತದ ದಲಿತ ನಡೆಗಳಿಗೆ ಯಾವುದೇ ಬಗೆಯಲ್ಲಿ ಉಪಕಾರವಾಗದು ಎನ್ನುವ ಮೂಲಕ ಅಂಬೇಡ್ಕರೋತ್ತರ ದಲಿತ ರಾಜಕಾರಣವನ್ನು ಪರಿಶೀಲಿಸಲಾಗಿದೆ.



ಅಕ್ಟೋಬರ್ ತಿಂಗಳು ಗಾಂಧಿಯನ್ನು ನೆನಪಿಸುವ ಮಾಸ. ಗಾಂಧಿ ಪ್ರತಿಪಾದಿಸುತ್ತಿದ್ದ ಆಧುನಿಕ ತಂತ್ರಜ್ಞಾನವಿರೋಧಿ ಅರ್ಥಶಾಸ್ತ್ರವನ್ನು ಮತ್ತೊಮ್ಮೆ ಪ್ರತಿಪಾದಿಸುವ ಲೇಖನಗಳು ಇಲ್ಲಿವೆ. ಇಂದು ನವಉದಾರೀಕರಣದ ಆರ್ಥಿಕ ಅಭಿವೃದ್ಧಿ ಮಾದರಿಯ ಬಿಕ್ಕಟ್ಟನ್ನು ಗ್ರೀಸಿನ ಉದಾಹರಣೆಯೊಂದಿಗೆ ವಿವರಿಸುವ ಎಚ್.ಎ. ಶಂಕರನಾರಾಯಣ ಲೇಖನ ಗಾಂಧಿ ಮಾದರಿಯ ಮೌಲಿಕತೆಯನ್ನು ಹೇಳುತ್ತದೆಯಾದರೆ ಜಿ.ಎಸ್.ಜಯದೇವ 'ಗಾಂಧಿ, ಸ್ವಾಮಿ ವಿವೇಕಾನಂದ ಮತ್ತು ಮೋದಿ' ಲೇಖನ ಇಂದಿನ ಆಸೆಬುರುಕ ಅರ್ಥಶಾಸ್ತ್ರದ ಐಡಿಯಾಲಜಿಯ ಬಗ್ಗೆ ಸರಳ ಮಾತುಗಳಲ್ಲಿ ಬಿಡಿಸಿಡುತ್ತದೆ. ಇಂದು ಲಾರ್ಡ್ ಕೇನ್ಸ್ ಎಂಬ ಅರ್ಥಶಾಸ್ತ್ರಜ್ಞ ಹೇಳಿದ 'ಒಳ್ಳೆಯದು ನಿರುಪಯುಕ್ತ, ಕೆಟ್ಟದು ಉಪಯುಕ್ತ' ಎನ್ನುವ










ಮಾತುಗಳು ಇಂದು ನಿಜವಾಗುತ್ತಿರುವುದರ ಬಗ್ಗೆ ಉಲ್ಲೇಖಿಸಲಾಗಿದೆ. ಈ ಸಂಚಿಕೆಯಲ್ಲಿ ಗಾಂಧಿ ಹೊಸ ನಿಲುವುಗಳ ಬಗ್ಗೆ ಒಂದಿಷ್ಟು ಮಾಹಿತಿಗಳಿವೆ. ಅವು ಗಾಂಧಿಯನ್ನು ಮತ್ತೊಮ್ಮೆ ಹೊಸದೃಷ್ಟಿಯಿಂದ ನೋಡುವ ಅವಕಾಶ ನೀಡುತ್ತವೆ ಎನ್ನಬಹುದು. ಫೆಬ್ರುವರಿ ಸಂಚಿಕೆಯಲ್ಲಿ ಸಂಪಾದಕರು ಬರೆದಂತೆ ಅರ್ಥಶಾಸ್ತ್ರವು ಗಾಂಧಿಯವರು ಹೇಳಿದಂತೆ ಮಾನವತೆಯ ಅರ್ಥಶಾಸ್ತ್ರವಾಗಿ ಬದಲಾಗಬೇಕೆಂಬುದು ಈ ವರ್ಷದ ಎಲ್ಲ ಸಂಚಿಕೆಗಳ ಹೈಲೈಟ್.


ಜಾಗತೀಕರಣಕ್ಕೆ ತುತ್ತಾದ ನಂತರದ ಆರ್ಥಿಕ ಪರಿಸ್ಥಿತಿ ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲೂ ಪರಿಣಾಮ ಬೀರಿದೆ. ಇಂದು ಬಂಡವಾಳಶಾಹಿ ಸ್ವರೂಪ ಪಡೆದುಕೊಂಡ ಶಿಕ್ಷಣವು ಸೃಷ್ಟಿಸುತ್ತಿರುವ ಜ್ಞಾನಗಳು ಬಹುತೇಕ ನಿರುಪಯುಕ್ತವಾಗಿವೆ. ಈ ಬಗ್ಗೆ ರಮೇಶ್ ಪಟ್ನಾಯಕ್ ಬರೆದ 'ಗ್ಯಾಟ್ ಮತ್ತು ಡಬ್ಲ್ಯೂಟಿಓ ಒಪ್ಪಂದಗಳಿಗೆ ಸಹಿ-ಸಾರ್ಥಕ ಶಿಕ್ಷಣಕ್ಕೆ ತಿಲಾಂಜಲಿ' ಎನ್ನುವ ಅನುವಾದಿತ ಲೇಖನ ಹೇಳುತ್ತದೆ. ಉನ್ನತಶಿಕ್ಷಣದ ವೈಫಲ್ಯಗಳನ್ನು, ಮರೆತ ಗುರಿಗಳನ್ನೂ ಕುರಿತು ಎಂ.ಜಿ.ಚಂದ್ರಶೇಖರಯ್ಯ ಬರೆದಿದ್ದಾರೆ. ಒಟ್ಟಾರೆ ಪರಿಣಾಮಗಳ ದೃಷ್ಟಿಯಿಂದ ಆಧುನಿಕತೆಯ ಫಲವೇ ಈ ಎಲ್ಲ ಬೆಳವಣಿಗೆಗಳು ಎನಿಸುವಂತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಗ್ಗೆ ಸಮಕಾಲೀನ ಅಂಕಣದಲ್ಲಿ ಮತ್ತೊಮ್ಮೆ ಚರ್ಚೆ ನಡೆದಿದ್ದು ಮತ್ತೆ ಮತ್ತೆ ಗಾಂಧಿಯನ್ನು ನೆನಪಿಸಿಕೊಡುವ ಸಂಗತಿಗಳು ಅಭಿವ್ಯಕ್ತಗೊಂಡಿವೆ. ಪ್ರಸನ್ನರ ಯಂತ್ರಗಳನ್ನು ತೊರೆಯುವ ಮಾತುಗಳು ಎಲ್ಲೋ ಒಂದೆಡೆ ಗಾಂಧಿಯ ಅನಾಧುನಿಕತೆಯ ತತ್ವಕ್ಕೆ ಹತ್ತಿರವಿದೆ. ಆಧುನಿಕ ತಂತ್ರಜ್ಞಾನವು ಪ್ರಪಂಚದ ಸರ್ವಸ್ವವೂ ತನಗಾಗಿ ಇದೆ ಎನ್ನುವ ದೃಷ್ಟಿಯಿಂದ ಲೋಕವನ್ನು ನೋಡುತ್ತದೆ. ಲಕ್ಷ್ಮೀಶ ತೋಳ್ಪಾಡಿಯವರು ವಿವರಿಸಿರುವಂತೆ ಎಲ್ಲವನ್ನೂ ಅನುಭೋಗಿಸುವ, ಉಪಯೋಗಿಸುವ ಮನೋಭಾವ ದುರಂತಗಳಿಗೆ ಎಡೆ ಮಾಡಿಕೊಡುತ್ತದೆ. ಮತ್ತೆ ಈ ಬಗೆಯ ಲೇಖನಗಳು ನಮಗೆ ಸತ್ ಸಮಾಜದ ಬಗ್ಗೆ ಒಂದಿಷ್ಟು ಆಸ್ಥೆಯನ್ನು ಮೂಡಿಸುತ್ತವೆ. ಆದರೆ ಪ್ರಶ್ನೆಯೆಂದರೆ ಈ ಬಗೆಯ ಥಿಂಕಿಂಗ್ ಪ್ರೊಸೆಸ್‌ಗೆ ಸಾಮಾಜಿಕರಲ್ಲಿ ಅರುಚಿ ಬೆಳೆದಿರುವುದು. ಇದು ಅವರೀಗಾಗಲೇ ಒಂದು ಭೋಗಸಂಸ್ಕೃತಿಗೆ ಒಡ್ಡಿಕೊಂಡವರು ಎನ್ನುವುದನ್ನು ಒಪ್ಪಬೇಕಷ್ಟೆ. ಆದ್ದರಿಂದಲೇ ಈ ಬಗೆಯ ಲೇಖನಗಳು ಷೋಕೇಸಿನ ಸಂಗತಿಗಳಾಗಿ ನೋಡಲು ಹಿತವಾಗಿ ಕಾಣುವಂತಹ ಲೇಖನಗಳಾಗಿಬಿಟ್ಟಿವೆ. ಇದೇ ವಿಷಾದ ಹುಟ್ಟಿಸುವ ಸಂಗತಿ.

ಇದೇ ಸಂಗತಿಯನ್ನು ಸದ್ಯದ ಸಾಹಿತ್ಯಲೋಕದ ರಾಜಕಾರಣಕ್ಕೂ ಅನ್ವಯಿಸಿ ಹೇಳುವುದಾದರೆ ನಡೆ ಮತ್ತು ನುಡಿಯಲ್ಲಿ ಇರುವ ಅಂತರಗಳು ಅವರ ಧ್ಯೇಯಧೋರಣೆಗಳ ಬಗ್ಗೆಯೇ ಅನುಮಾನ ಹುಟ್ಟಿಸುವಂತಿವೆ. ಸಾಹಿತ್ಯದ ಒಡನಾಟದಿಂದ ಇರಬೇಕಾದ ಲಜ್ಜೆ, ವಿಮರ್ಶಾತ್ಮಕತೆಗಳನ್ನು ಕಳೆದುಕೊಂಡಂತಿರುವ ಸಾಹಿತ್ಯ ಲೋಕದ ಬುದ್ಧಿಜೀವಿಗಳ ಪ್ರಶಸ್ತಿ ವಾಪಾಸಾತಿ ಕ್ರಿಯೆಯನ್ನು ಪತ್ರಿಕೆ ಸರಿಯಾಗಿಯೇ ಗುರುತಿಸಿದೆ. ಹಾಗೆಯೇ ಅಕಾಡೆಮಿಗಳು ಸಮಾಜ ಕಲ್ಯಾಣ ಇಲಾಖೆಗಳ ಅಂಗಭಾಗಗಳಂತೆ ಕುರುಡು ಮೀಸಲಾತಿಗನುಗುಣವಾಗಿ ಪ್ರಶಸ್ತಿ ಹಾಗು ಸಾಹಿತ್ಯಕ ಮೌಲ್ಯಮಾಪನ ಮಾಡುತ್ತಿರುವುದರ ಬಗ್ಗೆಯೂ ಸಂಪಾದಕರು ಬರೆದಿದ್ದಾರೆ. ಆದರೆ ಈ ಬಗೆಯ ಟೀಕೆಗಳಿಂದ 'ಹೊಸ ಮನುಷ್ಯ' ಸಾಹಿತ್ಯಕ ಚಟುವಟಿಕೆಗಳ ಬಗ್ಗೆ ಸಿನಿಕ ನಿಲುವನ್ನು ತಾಳಿದೆ ಎಂದು ಭಾವಿಸಕೂಡದು. ಸಾಹಿತ್ಯಕ್ಕಾಗಿ ಮೀಸಲಿಟ್ಟ ಪತ್ರಿಕೆಯ ವಿಶೇಷಾಂಕಗಳ ಕತೆ, ಕವನಗಳು ಹಾಗು ಸಮಕಾಲೀನ ಸಾಹಿತ್ಯದ ಚರ್ಚೆಗಳನ್ನೊಳಗೊಂಡ ಪ್ರಶ್ನೋತ್ತರಗಳು, ಲೇಖನಗಳು ಪತ್ರಿಕೆಯ ಆರೋಗ್ಯಕರ ನಿಲುವನ್ನು ಎತ್ತಿಹಿಡಿಯುತ್ತವೆ. ನವೆಂಬರ್ ತಿಂಗಳಿನಲ್ಲಿ ಬಂದ ಕನ್ನಡ ಕಾಲಘಟ್ಟದ ಸಂವೇದನೆಗಳನ್ನಾಧರಿಸಿದ ನಾಲ್ಕು ವಿಶೇಷ ಲೇಖನಗಳು ಕನ್ನಡ ಸಾಹಿತ್ಯದ ಒಟ್ಟಾರೆ ಗತಿಯನ್ನು ವಿಭಿನ್ನವಾಗಿ ನೋಡುವ ಅವಕಾಶವನ್ನು ಒದಗಿಸಿಕೊಡುತ್ತವೆ(ಮುಖ್ಯವಾಗಿ ಸತ್ಯನಾರಾಯಣ ಅವರ 'ಜನಪ್ರಿಯ ಸಾಹಿತ್ಯ'ದ ಮೇಲಿನ ಲೇಖನ). ಮಹಿಳಾ ಸಂಚಿಕೆಯಲ್ಲಿ ಇರುವ ಲೇಖನಗಳು, ಕವಿತೆ, ಕತೆಗಳು ಸಾಹಿತ್ಯಕ ಉತ್ಕೃಷ್ಟತೆಯನ್ನು ಪ್ರಸ್ತುತ ಪಡಿಸುತ್ತವೆ.


ಕಳೆದ ೪೫ ಸಂಚಿಕೆಗಳಿಂದ ಇಂದಿರಾ ಕೃಷ್ಣಪ್ಪ ಅವರ ಬಿ.ಕೃಷ್ಣಪ್ಪ ನೆನಪಿನ ಮಾಲೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದ್ದು ದಲಿತ ಅಸ್ಮಿತೆಯನ್ನು ವಿವಿಧ ಆಯಾಮಗಳಲ್ಲಿ ವಿವೇಚನೆ ಮಾಡುತ್ತಾ ಬಂದ ಪತ್ರಿಕೆಯ ಇನ್ನೊಂದು ಅಂಗವಾಗಿ ಈ ಅಂಕಣ ಕಾಣುತ್ತದೆ. ಸಾಮಾಜಿಕ ನ್ಯಾಯ ಎನ್ನುವುದು ಕ್ಲೀಷೆಯಾಗುತ್ತಾ ಅದರ ನಿಜ ಸ್ವರೂಪವನ್ನು ಕಳೆದುಕೊಳ್ಳುತ್ತಿರುವ ಸಂದರ್ಭವಿದು. ಇಂತಹ ಕಾಲದಲ್ಲಿಯೇ ಬಾಲಗಂಗಾಧರರಂತಹ ಬ್ಲೈಂಡ್ ಮೈಂಡೆಂಡ್ ಬುದ್ಧಿಜೀವಿಗಳು ಸಾಮಾಜಿಕ ನ್ಯಾಯದ ಚಹರೆಯನ್ನು ಬದಲಾಯಿಸಿ, ಅದರ ಆಶಯಗಳನ್ನು ನಿಶ್ಶಸ್ತ್ರಗೊಳಿಸುವ ಕಾಯಕದಲ್ಲಿ ತೊಡಗುವುದು. ಈ ಬಗ್ಗೆ ವಿಶೇಷ ಟಿಪ್ಪಣಿಯೊಂದು ಜನವರಿ ೨೦೧೬ರ ಸಂಚಿಕೆಯಲ್ಲಿ ಪ್ರಕಟವಾಗಿದೆ ('ಬಾಲಗಂಗಾಧರ ಎಂಬ ಆಧುನಿಕ ವಸಿಷ್ಠ'). ಜಾತಿ ಮೀಸಲಾತಿಯ ಬಗ್ಗೆ ಪತ್ರಿಕೆ ನಡೆಸಿದ ಸಮೀಕ್ಷೆಯಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಬಾಲಗಂಗಾಧರರಂತವರು ಮಂಡಿಸುವ ವೈಚಾರಿಕ ಸಿದ್ಧಾಂತಗಳು ಹುಸಿ ಎನ್ನುವುದನ್ನು ತೋರಿಸುವಂತಿವೆ. ಹಾಗೆಯೇ ಸಾಹಿತ್ಯ-ಸಂಸ್ಕೃತಿ-ಪರಂಪರೆಯ ಅಂಕಣದಲ್ಲಿ ತೃತೀಯ ಲಿಂಗಿಯ ಬಗ್ಗೆ ತೆಗೆದ ಪಾಕಿಸ್ತಾನಿ ಚಲನಚಿತ್ರವನ್ನು ಹಿಂದೂಪರವಾದಿಯಾದವರು ಮೆಚ್ಚಿ ಅದನ್ನು ನೋಡುವಂತೆ ಹೇಳುವ ಅದ್ಭುತ ಸಂಗತಿಯೂ ಅಡಕವಾಗಿದೆ. ಇದು ಕೂಡ ಪತ್ರಿಕೆಯ ಒಟ್ಟು ನಿಲುವಿನ ಸೂಚಕವಾಗಿದೆ ಎನ್ನಬಹುದು.

'ಹೊಸಮನುಷ್ಯ'ದ ಒಟ್ಟಾರೆ ಚಹರೆಯಲ್ಲಿ 'ಸಮಕಾಲೀನ' ಅಂಕಣ ದಿನದಿಂದ ದಿನಕ್ಕೆ ಹೆಚ್ಚಿನ ಗಮನ ಸೆಳೆಯುತ್ತಲಿದೆ. ಇಂದು ನಡೆಯುತ್ತಿರುವ ಸಮಕಾಲೀನ ಚರ್ಚೆಗಳು ಕನ್ನಡದ ಚಿಂತಕರ ಮೂಲಕ, ಜಾಗತಿಕ ಚಿಂತಕರ ಚಿಂತನೆಗಳನ್ನು ಅನುವಾದಗಳ ಮೂಲಕ ಇಲ್ಲಿ ಲಭ್ಯವಿವೆ. ಇದರ ಜೊತೆಗೆ ಸಾಹಿತ್ಯ-ಸಂಸ್ಕೃತಿ-.. ..ಇತ್ಯಾದಿ ಅಂಕಣದಲ್ಲಿ ಆಗಾಗ ವಿಮರ್ಶೆಗೆ ಒಳಪಡಿಸುವ ವರ್ತಮಾನದ ಸಂಗತಿಗಳು ಆತ್ಮಸಾಕ್ಷಿಯನ್ನು ಮುಟ್ಟಿಕೊಳ್ಳುವಂತಿರುತ್ತವೆ. ಕಲ್ಬುರ್ಗಿಯವರ ಹತ್ಯೆ ರಾಜಕೀಯೀಕರಣಗೊಂಡ ಸಂಗತಿಯೂ ಸೇರಿದಂತೆ ಸಾಹಿತ್ಯ ಪ್ರಶಸ್ತಿಗಳು ಕಲುಷಿತಗೊಂಡಿರುವುದು ಇದರಡಿಯಲ್ಲಿ ಬಂದಿವೆ. ಎಲ್ಲಕ್ಕಿಂತ ಮುಖ್ಯವಾಗಿ ಬೌದ್ಧಿಕ ದಿವಾಳಿತನದ ದ್ಯೋತಕದಂತಿರುವ ಇಂಗ್ಲಿಷ್ ಬುದ್ಧಿಜೀವಿಗಳು ಹಲವಾರು ವರ್ಷ ಬೆಂಗಳೂರಿನಲ್ಲಿದ್ದರೂ ಕನ್ನಡ ಕಲಿಯದೆ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕೆಲವು ಅಷ್ಟೇನು ಮಹತ್ವವಲ್ಲದ ಸಂಗತಿಗಳನ್ನು ಹೈಪ್ ಮಾಡಿ ಜಗತ್ತಿಗೆ ಸುಳ್ಳನ್ನು ಹೇಳುವುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇಂತಹ ಹತ್ತು ಹಲವು ಸೂಕ್ಷ್ಮಗಳಿಗೆ ಕಣ್ಣು ತೆರೆಸುವ ಸಮಾಜವಾದಿ ನಿಲುವನ್ನು 'ಹೊಸ ಮನುಷ್ಯ' ಪತ್ರಿಕೆ ಪ್ರಕಟಿಸುತ್ತಲೇ ಬಂದಿದ್ದು ಕನ್ನಡದ ಮಟ್ಟಿಗೆ ಇಂತಹ ಸಮಾಜವಾದಿ ನಿಲುವಿನ ಪತ್ರಿಕೆ ಪೂರೈಸುವ ಚಿಂತನೆಗಳ ಮಹತ್ವ ಗಮನಾರ್ಹವಾದುದು ಎಂದು ಭಾವಿಸುತ್ತೇನೆ.



**(ಚಿತ್ರದುರ್ಗ ಮಹಿಳಾ ಪ್ರ. ದ. ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿರುವ ತಾರಿಣಿ ಕನ್ನಡದ ಹೊಸ ತಲೆಮಾರಿನ ಪ್ರತಿಭಾವಂತ ಸಾಹಿತ್ಯ ಚಿಂತಕಿ ಮತ್ತು ಕವಯತ್ರಿಯರಲ್ಲೊಬ್ಬರಾಗಿದ್ದಾರೆ).**

# ನಮ್ಮ ಸಮಾಜವಾದಿಗಳು : ಧೀಮಂತ ನಾಯಕ ಮಧು ಲಿಮಯೆ



**ಲೋ**ಹಿಯಾ ಅವರ ಸಮಾಜವಾದಿ ಗರಡಿಯಲ್ಲಿ ಪಳಗಿ ತತ್ವ ಚಿಂತನೆ, ಜನಪರ ಹೋರಾಟ, ಸಂಸದೀಯ ರಾಜಕಾರಣ ಹಾಗೂ ಸಮಾಜವಾದಿ ಸಾಹಿತ್ಯ ರಚನೆ ಈ ಎಲ್ಲ ಕ್ಷೇತ್ರಗಳಿಗೆ ಅಮೂಲ್ಯ ಕೊಡುಗೆ ನೀಡಿರುವ ಮಧು ಲಿಮಯೆ ಸಮಾಜವಾದಿ ಚಳುವಳಿ ರೂಪಿಸಿದ ಧೀಮಂತ ವ್ಯಕ್ತಿತ್ವಗಳಲ್ಲೊಬ್ಬರು.

ರಾಮಚಂದ್ರ ಮಹದೇವ ಲಿಮಯೆ ಅವರ ಮಗನಾಗಿ ೧೯೨೨ ಮೇ ೧ ರಂದು ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಧು ಲಿಮಯೆ ತನ್ನ ಪ್ರಾಥಮಿಕ ಶಿಕ್ಷಣದ ೫, ೬ಮತ್ತು ೭ನೇ ತರಗತಿಗಳನ್ನು ಒಂದೇ ವರ್ಷ ಪಾಸು ಮಾಡಿದರೂ, ೧೩ನೇ ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಬರೆಯುವ ಅವಕಾಶ ಸಿಗಲಿಲ್ಲ. ಈ ಅವಧಿಯಲ್ಲಿ ಬೇರೆ ಬೇರೆ ದೇಶದ ಇತಿಹಾಸ, ಸ್ವಾತಂತ್ರ್ಯ ಸಂಗ್ರಾಮ ಮತ್ತು ಶ್ರೇಷ್ಠ ವ್ಯಕ್ತಿತ್ವಗಳ ಜೀವನ ಕತೆಗಳನ್ನು ಓದಿಕೊಂಡ ಬಾಲಕ ಲಿಮಯೆ, ಮೆಟ್ರಿಕ್ಯುಲೇಷನ್ ನಂತರ ಉನ್ನತ ಶಿಕ್ಷಣದಲ್ಲಿ ವಿಶ್ವ ಇತಿಹಾಸ, ಭಾರತೀಯ ಆಡಳಿತ, ಇಂಗ್ಲಿಷ್ ಮತ್ತು ಸಂಸ್ಕೃತ ವಿಷಯಗಳನ್ನು ಆಯ್ದುಕೊಂಡು ತಮ್ಮ ವ್ಯಕ್ತಿತ್ವಕ್ಕೊಂದು ಭದ್ರ ಬುನಾದಿ ಹಾಕಿಕೊಂಡರು. ಈ ಹಂತದಲ್ಲೆ ಅವರು ಸಮಾಜವಾದಿ ವಿಚಾರಗಳಿಂದ ಆಕರ್ಷಿತರಾಗಿ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ಚಟುವಟಿಕೆಗಳಲ್ಲಿ ಸಕ್ರಿಯರಾಗಿ, ವಸಾಹತುಶಾಹಿ ಮತ್ತು ಎಲ್ಲ ರೀತಿ ಅನ್ಯಾಯಗಳ ವಿರುದ್ಧದ ಹೋರಾಟದ ಪಯಣ ಆರಂಭಿಸಿದರು.

೧೯೩೭ ಮೇ ೧. ಅಂದು ಮಧು ಅವರ ೧೫ನೇ ಹುಟ್ಟು ಹಬ್ಬ. ಮೇ ದಿನದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಲಿಮಯೆ ಭಾಗವಹಿಸಿದ್ದರು. ಈ ಮೆರವಣಿಗೆಯ ಮೇಲೆ ಆರೆಸ್ಸೆಸ್ ಕಾರ್ಯಕರ್ತರಿಂದ ತೀವ್ರ ಹಲ್ಲೆ ನಡೆದು ಮೆರವಣಿಗೆ ಮುಂಚೂಣಿಯಲ್ಲಿದ್ದ ಮುಖಂಡರಾದ ಸೇನಾಪತಿ ಬಾಪಟ್ ಮತ್ತು ಎಸ್.ಎಂ.ಜೋಷಿ ತೀವ್ರ ಗಾಯಗೊಂಡರು. ಇದೇ ಲಿಮಯೆ ಅವರ ರಾಜಕೀಯ ಮತ್ತು ಹೋರಾಟ ಜೀವನದ ಮೊದಲ ಹೆಜ್ಜೆ. ಇಲ್ಲಿಂದ ಎನ್.ಜಿ.ಗೋರೆ, ಎಸ್.ಎಂ.ಜೋಷಿ ಮತ್ತು ಪಾಂಡುರಂಗ ಎಸ್. ಸಾಣೆ ಅವರ ಆತ್ಮೀಯ ಒಡನಾಟದಲ್ಲಿ ಬೆಳೆದ ಅವರು ಸ್ವಾತಂತ್ರ್ಯ ಸಂಗ್ರಾಮದೆಡೆಗೆ ತೀವ್ರವಾಗಿ ಸೆಳೆಯಲ್ಪಟ್ಟು ೧೯೩೮ರ ಡಿಸೆಂಬರ್‌ನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಗಳಲ್ಲಿ ಪೂರ್ಣ ಪ್ರಮಾಣದ ಕಾರ್ಯಕರ್ತರಾಗಿ ಮಾರ್ಪಟ್ಟರು.

ತಮ್ಮ ಬುದ್ಧಿಮತ್ತೆ ಮತ್ತು ಸಂಘಟನಾ ಕೌಶಲ್ಯಗಳ ಮೂಲಕ ೧೯೩೯ರಲ್ಲಿ ಲಿಮಯೆ ತಮ್ಮ ೧೭ನೇ ವಯಸ್ಸಿನಲ್ಲೇ ಕಾಂಗ್ರೆಸ್ ಸಮಾಜವಾದಿ ಪಕ್ಷದ ಪುಣೆ ಘಟಕದ ಪ್ರಧಾನ ಕಾರ್ಯದರ್ಶಿಯಾದರು.

೧೯೪೦ ಅಕ್ಟೋಬರ್‌ನಿಂದ ಆರಂಭವಾದ ವಿಶ್ವ ಯುದ್ಧ ವಿರೋಧಿ ಆಂದೋಲನದಲ್ಲಿ ಭಾಗವಹಿಸಿದ ಮಧು ಅವರು ಬ್ರಿಟಿಷ್ ಪ್ರಭುತ್ವದಿಂದ ಮೊದಲ ಬಾರಿಗೆ ಬಂಧಿಸಲ್ಪಟ್ಟು ಧುಲಿಯಾ ಜೈಲಿನಲ್ಲಿ ೧ ವರ್ಷ ಕಳೆಯಬೇಕಾಯಿತು. ನಂತರ ಮಹಾರಾಷ್ಟ್ರದಾದ್ಯಂತ ರಾಷ್ಟ್ರೀಯ ಸೇವಾದಳ ಮತ್ತು ಯುವಕರಿಗಾಗಿ ಶಿಬಿರಗಳ ಸಂಘಟನೆಯಲ್ಲಿ ತೊಡಗಿಕೊಂಡ ಅವರು 'ಕ್ವಿಟ್ ಇಂಡಿಯಾ' ಚಳುವಳಿಯ ಘೋಷಣೆಯ ಸಂದರ್ಭ ಗಾಂಧೀಜಿ ಮುಂಬೈಗೆ ಬಂದಾಗ ಮೊದಲ ಬಾರಿ ಅವರನ್ನು ಹತ್ತಿರದಿಂದ ಕಂಡು ಅವರ ಪ್ರಭಾವ ವಲಯದಲ್ಲಿ ಬಂಧಿತರಾದರು. ನಂತರದಲ್ಲೇ ಗಾಂಧೀಜಿಯೂ ಸೇರಿ ಬಹುತೇಕ ಹಿರಿಯ ಕಾಂಗ್ರೆಸ್ ನಾಯಕರ ಬಂಧನವಾದಾಗ ಮಧು ಅವರು ಅಚ್ಯುತ್ ಪಟವರ್ಧನ್, ಅರುಣಾ ಆಸೀಫ್ ಅಲಿ ಮತ್ತಿತರ ಸಮಾಜವಾದಿಗಳೊಂದಿಗೆ ಭೂಗತರಾಗಿ ಚಳವಳಿ ಮುನ್ನಡೆಸಿದರು. ಭೂಗತ ಹೋರಾಟದ ಭಾಗವಾಗಿ 'ಕ್ರಾಂತಿಕಾರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಆದರೆ ಸ್ವಲ್ಪ ಸಮಯದಲ್ಲೇ ಬ್ರಿಟಿಷ್ ಸರ್ಕಾರ ಮಧುಲಿಮಯೆ ಅವರನ್ನು ಬಂಧಿಸಿ, ಯಾವುದೇ ವಿಚಾರಣೆ ಇಲ್ಲದೆ ವರ್ಲಿ, ಯೆರವಾಡ ಮತ್ತು ವೈಸಪುರ ಜೈಲುಗಳಿಗೆ ತಳ್ಳಲಾಯಿತು.

೧೯೪೫ರಲ್ಲಿ ಎಲ್ಲ ರಾಜಕೀಯ ಸೆರೆಯಾಳುಗಳೊಂದಿಗೆ ಬಿಡುಗಡೆಯಾದ ಮಧು ಅವರು ನಂತರ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡರು. ೧೯೪೭ರಲ್ಲಿ ಬೆಲ್ಜಿಯಂನ ಆಂಟ್‌ವರ್ಪ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದ ಸಮ್ಮೇಳನಕ್ಕೆ ಭಾರತದ ಏಕೈಕ ಪ್ರತಿನಿಧಿಯಾಗಿ ಹೋದ ಮಧು ಲಿಮಯೆ ಆ ಸಂದರ್ಭದಲ್ಲಿ ಯೂರೋಪಿನ ಐದು ದೇಶಗಳ ಪ್ರವಾಸ ಮಾಡಿ ತಮ್ಮ ರಾಜಕೀಯ ಅನುಭವವನ್ನು ಶ್ರೀಮಂತಗೊಳಿಸಿಕೊಂಡರು. ೧೯೪೮ರಲ್ಲಿ ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರಬರಬೇಕಾಗಿ ಬಂದಾಗ ಮಧು ಅವರೂ ಕಾಂಗ್ರೆಸ್‌ನಿಂದ ಹೊರಬಂದರು. ೧೯೪೮ರಲ್ಲಿ ನಾಸಿಕ್‌ನಲ್ಲಿ ನಡೆದ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿಗೆ ಆಯ್ಕೆಯಾದ ಅವರು ಪಕ್ಷದ ವಿದೇಶಿ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದರು. ೧೯೫೨ರಲ್ಲಿ ಪ್ರೊ. ಚಂಪಾ ಗುಪ್ತೆ ಅವರನ್ನು ಪ್ರೇಮಿಸಿ ಮದುವೆಯಾದ ಲಿಮಯೆಗೆ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನಗಳೆರಡರಲ್ಲೂ ಅತ್ಯಂತ ಪ್ರೋತ್ಸಾಹದಾಯಕ ಮತ್ತು ಪ್ರೇರಣಾ ಶಕ್ತಿ ಎನಿಸಿದರು. ೧೯೫೩ರಲ್ಲಿ ಜೆಪಿ ಅವರ ಒತ್ತಾಸೆಯಂತೆ ಏಷಿಯನ್ ಸೋಷಿಯಲಿಸ್ಟ್ ಬ್ಯೂರೋದ ಕಾರ್ಯದರ್ಶಿಯಾದ ಮಧು ಅವರು ೧೯೫೩–೫೪ರಲ್ಲಿ ನೆಹ್ರೂ–ಜೆಪಿ ಮಾತುಕತೆಗಳೇ ನೆಪವಾಗಿ ಪಕ್ಷದಲ್ಲಿ ಸೈದ್ಧಾಂತಿಕ ಗೊಂದಲಗಳೇರ್ಪಟ್ಟಾಗ ಲೋಹಿಯಾರ ಜೊತೆ ನಿಂತ ಕಾರಣಕ್ಕಾಗಿ ಪಕ್ಷದಿಂದ ಅಮಾನತುಗೊಳ್ಳಬೇಕಾಯಿತು. ನಂತರ ೧೯೫೫ರಲ್ಲಿ ಲೋಹಿಯಾ ಸ್ಥಾಪಿಸಿದ ಸಮಾಜವಾದಿ ಪಕ್ಷವನ್ನು ಸೇರಿದರು.

೧೯೪೬ರಲ್ಲಿ ಲೋಹಿಯಾರಿಂದ ಮೊದಲ್ಗೊಂಡಿದ್ದ ಗೋವಾ ಸ್ವಾತಂತ್ರ್ಯ ಹೋರಾಟಕ್ಕೆ ೫೦ರ ದಶಕದಲ್ಲಿ ಧುಮುಕಿದ ಲಿಮಯೆಯವರು ಅಲ್ಲಿನ ಪೋರ್ಚುಗೀಸ್ ಸರ್ಕಾರದಿಂದ ದೈಹಿಕವಾಗಿ ತೀವ್ರ ಹಲ್ಲೆಗೊಳಗಾಗಿ, ೫ ತಿಂಗಳು ಪೊಲೀಸ್ ವಶದಲ್ಲಿದ್ದರು. ಮಾತ್ರವಲ್ಲ, ೧೯೫೫ರಲ್ಲಿ ಪೋರ್ಚುಗೀಸ್ ಸೈನ್ಯದ ನ್ಯಾಯಾಧಿಕರಣ ೧೨ ವರ್ಷ ಜೈಲು ಶಿಕ್ಷೆ ಘೋಷಿಸಿತು. ಅದಕ್ಕವರು ಗಾಂಧಿ ಪರಂಪರೆಯ ಸತ್ಯಾಗ್ರಹಿಯಾಗಿ ತಾವು ಇದಕ್ಕೆ ಪ್ರತಿರೋಧ ವ್ಯಕ್ತಪಡಿಸುವುದಿಲ್ಲವೆಂದರು. ಭಾರತ ಸರ್ಕಾರದ ಮಧ್ಯಪ್ರವೇಶದಿಂದಾಗಿ ಅವರನ್ನು ಬಿಡುಗಡೆಗೊಳಿಸುವವರೆಗೂ ಪೋರ್ಚುಗೀಸರ ವಶದಲ್ಲಿದ್ದ ೧೯ ತಿಂಗಳಲ್ಲಿ ಅವರು ಬರೆದ ಜೈಲು ದಿನಚರಿ ೧೯೯೬ರಲ್ಲಿ ನಡೆದ ಗೋವಾ ಹೋರಾಟದ ಸುವರ್ಣ ಮಹೋತ್ಸವ ಸಂದರ್ಭ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿತು.

೧೯೫೭ರ ಲೋಕಸಭಾ ಚುನಾವಣೆಗಳಲ್ಲಿ ಮುಂಬೈನ ಬಾಂದ್ರಾ ಕ್ಷೇತ್ರದಿಂದ ಲಿಮಯೆ ಸ್ಪರ್ಧಿಸಿದರಾದರೂ ಗೆಲ್ಲಲಾಗಲಿಲ್ಲ. ಆದರೆ ನಂತರದ ದಿನಗಳಲ್ಲಿ ಅಲ್ಲಿ ಕಾರ್ಮಿಕ ನಾಯಕ ಜಾರ್ಜ್ ಫರ್ನಾಂಡೀಸರ ಜೊತೆಗೂಡಿ ರೈಲ್ವೇ ಮತ್ತು ಬಂದರು ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಕೊಂಡು ಸಮಾಜವಾದಿ ಪಕ್ಷದ ಪರವಾಗಿ ಸುಭದ್ರವಾದ ಕಾರ್ಮಿಕ ಸಂಘಟನೆಗಳನ್ನು ಕಟ್ಟುವಲ್ಲಿ ಯಶಸ್ವಿಯಾದರು. ೧೯೫೮ರ ಗಯಾ ಸಮಾವೇಶದಲ್ಲಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದ ಅವರು ಸಮಾಜವಾದದ ಆಶಯಗಳು ಸಾಮಾಜಿಕವಾಗಿ ಮೂರ್ತರೂಪಗೊಳ್ಳುವ ದಿಶೆಯಲ್ಲಿ ಪಕ್ಷವನ್ನು ಸಂಘಟಿಸುವ ಕೆಲಸಗಳಲ್ಲಿ ತೊಡಗಿದರು. ಇದರ ಫಲವಾಗಿಯೇ ಪಕ್ಷದ ಬನಾರಸ್ ಸಮಾವೇಶ(೧೯೫೯) ಜಾತಿ ವಿನಾಶದ ಅಂಗವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ನೀತಿಯನ್ನು ಅಂಗೀಕರಿಸಿತು. ೧೯೬೪ರಲ್ಲಿ ಪಿಎಸ್‌ಪಿ ಮತ್ತು ಸಮಾಜವಾದಿ ಪಕ್ಷಗಳು ವಿಲೀನಗೊಂಡು ಸಂಯುಕ್ತ ಸಮಾಜವಾದಿ ಪಕ್ಷ ಸ್ಥಾಪಿತವಾದ ಸಂದರ್ಭದಲ್ಲಿ ಬಿಹಾರದ ಮುಂಘೈರ್ ಕ್ಷೇತ್ರಕ್ಕಾಗಿ ನಡೆದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ ಲಿಮಯೆ ವಿಜಯಿಯಾಗಿ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದರು.

ನಂತರ ಸತತವಾಗಿ ನಾಲ್ಕು ಬಾರಿ ಬಿಹಾರದಿಂದಲೇ ಲೋಕಸಭೆಗೆ ಆಯ್ಕೆಯಾದ ಅವರು ಪಕ್ಷದ ಸಂಸದೀಯ ಪಕ್ಷದ ನಾಯಕರಾಗಿ ಲೋಕಸಭಾ ಕಾರ್ಯಕಲಾಪಗಳಿಗೆ ತಮ್ಮ ವಿದ್ವತ್ಪೂರ್ಣ ಮತ್ತು ಜನಪರ ಮಾತುಗಾರಿಕೆಯ ಮೂಲಕ ಒಂದು ಹೊಸ ಘನತೆಯನ್ನೇ ಒದಗಿಸಿದರು.

ಸಮಾನತೆಯ ಆಶಯಗಳ ಜೊತೆಗೆ ನಾಗರಿಕ ಹಕ್ಕುಗಳ ಬಲವಾದ ಸಮರ್ಥಕರೂ ಆಗಿದ್ದ ಲಿಮಯೆಯವರು, ಅಲಿಪ್ತ ವಿದೇಶಾಂಗ ನೀತಿಯ ಪ್ರಬಲ ಬೆಂಬಲಿಗರೂ ಆಗಿದ್ದರು. ಅವರು ಅಣ್ವಸ್ತ್ರ ಹೊಂದಿರುವ ಎಲ್ಲ ದೇಶಗಳು ತಮ್ಮಲ್ಲಿನ ಈ ಎಲ್ಲ ಅಸ್ತ್ರಗಳನ್ನು ನಾಶ ಮಾಡುವ ತನಕ ಭಾರತ ಅಣ್ವಸ್ತ್ರ ನಿಷೇಧ ನೀತಿಗೆ ಸಮ್ಮತಿ ನೀಡಬಾರದೆಂದೂ, ನಾವು ನಮ್ಮದೇ ಅಣು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದೂ ಪ್ರತಿಪಾದಿಸುತ್ತಿದ್ದರು. ಬಂಗ್ಲಾ ಯುದ್ಧ ಸಮಯದಲ್ಲಿ ಬಂಗ್ಲಾ ದೇಶದ ವಿಮೋಚನೆಯ ಪರವಾಗಿ ಜಾಗತಿಕ ಅಭಿಪ್ರಾಯವನ್ನು ರೂಪಿಸಲು ಜೆಪಿಯವರೊಂದಿಗೆ ಕೆಲಸ ಮಾಡಿದರು.

ಎಪ್ಪತ್ತರ ದಶಕದ ಆರಂಭದಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಪ್ರಜಾಪ್ರಭುತ್ವ ವಿರೋಧಿ ಆಡಳಿತದ ವಿರುದ್ಧದ ಆಂದೋಲನದಲ್ಲಿ ಜೆಪಿಯವರಿಗೆ ಸಾಥ್ ನೀಡಿದ ಮಧು, ಇಂದಿರಾ ಸರ್ಕಾರ ತುರ್ತು ಪರಿಸ್ಥಿತಿ ಘೋಷಿಸಿ ವಿರೋಧ ಪಕ್ಷಗಳ ಎಲ್ಲ ನಾಯಕರನ್ನು ಸೆರೆಮನೆಗೆ ದೂಡಿದಾಗ ಮಧ್ಯಪ್ರದೇಶದ ಹಲವು ಜೈಲುಗಳಲ್ಲಿ ಬಂಧಿತರಾಗಿದ್ದರು. ಇಂದಿರಾ ಸಂವಿಧಾನಕ್ಕೇ ತಿದ್ದುಪಡಿ ತಂದು ಲೋಕಸಭೆಯ ಅವಧಿಯನ್ನು ಏಳು ವರ್ಷಗಳಿಗೆ ವಿಸ್ತರಿಸಿದಾಗ ಅವರು ತಮ್ಮ ಕಿರಿಯ ಸಮಾಜವಾದಿ ಗೆಳೆಯ ಶರದ್ ಯಾದವ್‌ರೊಂದಿಗೆ ಲೋಕಸಭಾ ಸದಸ್ಯತ್ವಕ್ಕೇ ರಾಜೀನಾಮೆ ನೀಡಿದರು.

೧೯೭೭ರಲ್ಲಿ ತುರ್ತುಪರಿಸ್ಥಿತಿಯ ನಂತರ ಜನತಾ ಪಕ್ಷವನ್ನು ರೂಪಿಸುವಲ್ಲಿ ಜೆಪಿಯವರೊಂದಿಗೆ ಕೈಜೋಡಿಸಿದ ಲಿಮಯೆ ಈ ಹೊಸ ಪಕ್ಷ ಚುನಾವಣೆಗಳಲ್ಲಿ ಗೆದ್ದು ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾದಾಗ ಮಂತ್ರಿಯಾಗಲು ನಿರಾಕರಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾಗಿ ಪಕ್ಷ ಸಂಘಟಿಸುವ ಜವಾಬ್ದಾರಿ ಹೊತ್ತರು. ಆದರೆ ಜನತಾಪಕ್ಷದಲ್ಲಿ ಸಮಾಜವಾದಿ ಪಕ್ಷದೊಂದಿಗೆ ಲೀನಗೊಂಡಿದ್ದ ಜನಸಂಘದ ಸದಸ್ಯರು ತಮ್ಮ ಆರೆಸ್ಸೆಸ್ ಸದಸ್ಯತ್ವವನ್ನು ಬಿಟ್ಟುಕೊಡದಿದ್ದಾಗ ಲಿಮಯೆ ಪ್ರತಿಭಟಿಸಿದರು. ಗಾಂಧಿ ಸಮಾಜವಾದದ ದೀಕ್ಷೆ ಪಡೆದಿದ್ದ ಜನತಾ ಪಕ್ಷವು ಮೂಲ ಜನಸಂಘೀಯರ ಮುಂದುವರೆದ ಆರೆಸ್ಸೆಸ್ ನಿಷ್ಠೆಯಿಂದ ಕ್ರಮೇಣ ಒಂದು ಫ್ಯಾಸಿಸ್ಟ್ ಪಕ್ಷವಾಗಿ ಪರಿವರ್ತಿತವಾಗುತ್ತದೆಂಬ ಆತಂಕದಲ್ಲಿ ಅವರು ಪಕ್ಷ ಸಂಘಟನೆಯ ವಿಷಯದಲ್ಲಿ ಎತ್ತಿದ ತಾತ್ವಿಕ ಪ್ರಶ್ನೆಗಳು ಜನತಾ ಪಕ್ಷದಲ್ಲಿ ಒಡಕಿಗೆ ಕಾರಣವಾಗಿ ಅದರ ಸರ್ಕಾರ ಅಧಿಕಾರ ಕಳೆದುಕೊಳ್ಳುವಂತಾಯಿತು. ನಂತರ ಚರಣಸಿಂಗ್ ನೇತೃತ್ವದ ಜನತಾ(ಸೆಕ್ಯುಲರ್) ಪಕ್ಷದ ನಾಯಕರಾಗಿದ್ದ ಲಿಮಯೆ ಸ್ವಲ್ಪ ಕಾಲ ಅದನ್ನೂ ತ್ಯಜಿಸಿ, ಕೊನೆಗೆ ೧೯೮೨ರಲ್ಲಿ ರಾಜಕೀಯದಿಂದಲೇ ನಿವೃತ್ತಿ ಪಡೆದರು. ವಿಪರ್ಯಾಸವೆಂದರೆ ಅವರ ಸಾರ್ವಜನಿಕ ಜೀವನದ ಕೊನೆಯ ರಾಜಕೀಯ ಪ್ರತಿಪಾದನೆ ಎಂದರೆ, ಯಾವ ಪಕ್ಷವನ್ನು ಅವರು ರಾಜಕೀಯ ಜೀವನದುದ್ದಕ್ಕೂ ವಿರೋಧಿಸುತ್ತಾ ಬಂದಿದ್ದರೋ ಆ ಕಾಂಗ್ರೆಸ್ ಪಕ್ಷವನ್ನು ಕೋಮುವಾದಿ ರಾಜಕಾರಣದ ವಿರುದ್ಧದ ಹೋರಾಟದ ಅಸ್ತ್ರವಾಗಿ ಬಲಪಡಿಸಬೇಕು ಎಂಬುದಾಗಿತ್ತು!

ಸಕ್ರಿಯ ರಾಜಕಾರಣದಿಂದ ನಿವೃತ್ತಿ ಹೊಂದಿದ ಮೇಲೂ, ೧೯೯೫ರ ಜನವರಿ ೮ರಂದು ನವದೆಹಲಿಯಲ್ಲಿ ನಿಧನ ಹೊಂದುವವರೆಗೂ ಮಧು ಲಿಮಯೆ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದರು. ಮರಾಠಿ, ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಅವರು ಮುಖ್ಯವಾಗಿ ಬರೆದದ್ದು ಭಾರತದ ಸಮಾಜವಾದಿ, ಕಮ್ಯೂನಿಸ್ಟ್ ಚಳುವಳಿಗಳ ಇತಿಹಾಸ, ನಾಗರಿಕ ಹಕ್ಕುಗಳ ಮತ್ತು ಸಾಂವಿಧಾನಿಕ ಮೌಲ್ಯಗಳ ಮಹತ್ವದ ಬಗ್ಗೆ. ಸ್ವಾತಂತ್ರ್ಯ ಹೋರಾಟ, ಗೋವಾ ವಿಮೋಚನಾ ಹೋರಾಟ ಮತ್ತು ಸಂಸತ್ ಸದಸ್ಯತ್ವ– ಇವುಗಳಿಗೆ ಪ್ರತಿಫಲವಾಗಿ ಸರ್ಕಾರ ನೀಡಿದ ಯಾವುದೇ ಪ್ರಶಸ್ತಿ, ಸನ್ಮಾನ, ಪಿಂಚಣಿ ಇತ್ಯಾದಿಗಳನ್ನು ಸ್ವೀಕರಿಸಲು ನಿರಾಕರಿಸಿದ ಮಧು ಲಿಮಯೆ ಈಗ ಸಂಪೂರ್ಣ ಮರೆಯೇ ಆಗಿ ಹೋಗಿರುವ ಸಾರ್ವಜನಿಕ ಸೇವೆಯ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿ ಬಹುಕಾಲ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ

**–ಡಿಎಸ್ಸೆನ್**

**ಹೊಸ ಮನುಷ್ಯ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**

**SET DeMS®**

**ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರು,**
**ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ**

**ಜೆ. ಹೆಚ್. ಪಟೇಲ್ ಪದವಿ ಕಾಲೇಜು**

**ಹೇಮಾವತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ ರಸ್ತೆ,**
**ದಾವಣಗೆರೆ–೫೭೭೦೦೪**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ–೪೬

–ಇಂದಿರಾ ಬಿ.ಕೃಷ್ಣಪ್ಪ

## ಬಿ.ಎಸ್.ಪಿ.ಗೆ ಸೇರ್ಪಡೆ : ಬೆಂಗಳೂರಿಗೆ ಸ್ಥಳಾಂತರ

**ವಿ**ಶ್ವದ ಹೆಸರಾಂತ ಚಿತ್ರ ನಿರ್ಮಾಪಕರಾದ, ರಿಚರ್ಡ್ ಆಟಿನ್‌ಬರೋ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಬಗೆಗೆ ಚಿತ್ರವೊಂದನ್ನು ನಿರ್ಮಿಸಿದ್ದು, ಅದು ಏಕಕಾಲದಲ್ಲಿ ಭಾರತ ಮತ್ತು ವಿದೇಶಗಳಲ್ಲಿ ಬಿಡುಗಡೆಯಾಗುವುದಿತ್ತು. ಪತ್ರಿಕೆಗಳಲ್ಲಿ ಚಿತ್ರವಿವರಣೆಗಳು ಸಾಕಷ್ಟು ಪ್ರಚಾರದಲ್ಲಿದ್ದವು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ದೃಶ್ಯ ಮಾಧ್ಯಮದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ಮಾಣ ಮಾಡಿದಾಗ, ಅದರಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ರವರ ಪಾತ್ರವೇ ಇಲ್ಲದಂತೆ ಮಾಡಿರುವಲ್ಲಿ ವ್ಯವಸ್ಥಿತ ಷಡ್ಯಂತ್ರವೇ ಇದೆಯೆಂದು ದಸಂಸ ನಿರ್ಣಯಿಸಿತು. ರಾಜ್ಯ ಸಮಿತಿಯ ತೀರ್ಮಾನದಂತೆ, ಈ ಸಿನಿಮಾವನ್ನು ಕರ್ನಾಟಕದಲ್ಲಿ ಬಹಿಷ್ಕರಿಸಲಾಗುವುದೆಂದು ಪ್ರಚಾರವಾಯಿತು. 'ಗಾಂಧಿ ಚಿತ್ರ ಪ್ರದರ್ಶಿಸಿದರೆ, ಸಿನಿಮಾ ಮಂದಿರ ಉಳಿಯುವುದಿಲ್ಲ' ಎಂಬ ಮಾತುಗಳನ್ನೂ ಕೆಲವರು ಆಡಿದರು. ಚಿತ್ರ ಬಿಡುಗಡೆಯ ಹಿಂದಿನ ದಿನ ಕೋಲಾರದಲ್ಲಿ ನಡೆದ ದಲಿತ ವಿದ್ಯಾರ್ಥಿ ಒಕ್ಕೂಟದ ಪ್ರಥಮ ಸಮ್ಮೇಳನದಲ್ಲಿ ಶ್ರೀಮತಿ. ಸವಿತಾ ಅಂಬೇಡ್ಕರ್, ರಾಮದಾಸ್ ಅಠಾವಳೆ, ಪ್ರೊ. ಕೃಷ್ಣಪ್ಪ, ಗಾಂಧಿ ಚಿತ್ರವನ್ನು ವಿರೋಧಿಸಿದ್ದರು. ಚಿತ್ರಪ್ರದರ್ಶನದಂದು, ಲಿಡೋ ಚಿತ್ರಮಂದಿರದೆದುರು ೨೦೦೦ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿ ಸುಮಾರು ೪೦೦ ಜನ ವಿದ್ಯಾರ್ಥಿಗಳ ಬಂಧನವೂ ನಡೆದಿತ್ತು. ಕೃಷ್ಣಪ್ಪ, ಎಂ.ವೆಂಕಟಸ್ವಾಮಿ, ಸಿ.ಮುನಿಯಪ್ಪನವರ ನೇತೃತ್ವದಲ್ಲಿ, ಕಬ್ಬನ್ ಪಾರ್ಕ್‌ನಿಂದ, ಶಾಂತಿಯುತ ಪ್ರತಿರೋಧ ನಡೆದಿತ್ತು.

ಹೀಗಿದ್ದೂ 'ಗಾಂಧಿ' ಚಿತ್ರವನ್ನು ದೇವನೂರು ಮಹಾದೇವರವರು, ವೀಕ್ಷಿಸಿದ್ದೂ ಅಲ್ಲದೆ, "ಆಕಾಶದೆತ್ತರಕ್ಕೆ ಎರಡು ಗೇಣು ಕಮ್ಮಿ" – ಎಂಬ ಶೀರ್ಷಿಕೆಯ ಲೇಖನವನ್ನು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟಿಸಿದರು. ಇದು ಸಂಘಟನೆಯ ಶಿಸ್ತಿಗೆ, ನಿರ್ಣಯಕ್ಕೆ ಧಕ್ಕೆ ಉಂಟಾಗುವಂತಹದೆಂದು, ಕಾರ್ಯಕರ್ತರು ಅಸಮಧಾನಗೊಂಡರು. ೧೯೮೨ರ ನಂತರ ದಲಿತ–ರೈತ ಚಳುವಳಿಯ ಸಮನ್ವಯದ ಪ್ರಕ್ರಿಯೆಯಾಗಿ ಡಿ.ಎಸ್.ನಾಗಭೂಷಣ–ಎಚ್. ಗೋವಿಂದಯ್ಯನವರ ಜಂಟಿ ಸಂಪಾದಕತ್ವದಲ್ಲಿ ಮತ್ತು ದೇವನೂರು ಮಹಾದೇವರವರ ವ್ಯವಸ್ಥಾಪಕತ್ವದಲ್ಲಿ ಹೊರತರಲಿದ್ದ ಪಂಚಮ ವಿಶೇಷಾಂಕಕ್ಕಾಗಿ ಬರೆಯಲಾಗಿದ್ದ ಈ ಲೇಖನವನ್ನು ಅದಕ್ಕೂ ಮೊದಲು 'ಲಂಕೇಶ್' ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಕ್ಷಮೆ ಕೋರಿ ದೇವನೂರು ಆ ಲೇಖನವನ್ನು ಅಲ್ಲಿಯೂ ಮತ್ತೊಮ್ಮೆ ಪ್ರಕಟಿಸಿದರು.(೧೯೮೩) ಇದಕ್ಕೂ ನೂರಾರು ಪ್ರತಿಕ್ರಿಯೆಗಳು ಬಂದಿದ್ದವು. ಸಂಘಟನೆಯ ನಿರ್ಣಯಕ್ಕಿಂತಲೂ, ಅಭಿವ್ಯಕ್ತಿ ಸ್ವಾತಂತ್ರ್ಯವೇ ದೇವನೂರು ಮಹಾದೇವರವರಿಗೆ ಪ್ರಮುಖವಾದುದರ ಬಗ್ಗೆ, ಸಂಘಟನೆಯೊಳಗೆ ಬಹುಚರ್ಚೆ ತಂದೊಡ್ಡಿತ್ತು. ಹೀಗಿದ್ದೂ, ಪ್ರೊ.ಬಿ.ಕೃಷ್ಣಪ್ಪರವರಾಗಲೀ, ದೇಮಾರವರಾಗಲೀ ವಾದ ಪ್ರತಿವಾದದ ಬಹಿರಂಗ ಚರ್ಚೆಗೆ ತರಲಿಲ್ಲ.

ಜನತಾ ಪಕ್ಷದ ಜನವಿರೋಧಿ ತೀರ್ಮಾನಗಳು, ಯೋಜನೆಗಳ ಬಗ್ಗೆ ಅಂದಿನ ದಸಂಸ ರಾಜ್ಯ ಸಮಿತಿ ಪ್ರತಿಭಟಿಸದೆ ಇದ್ದುದರ ಬಗ್ಗೆ ಮತ್ತು ಪ್ರತಿಕೆಗಳಲ್ಲಿ ಬಂದ ಟೀಕೆಗಳ ಕುರಿತು ಗೊಂದಲ ನಿವಾರಣೆಗಾಗಿ, ಸಂಘಟನೆಯ ದೃಷ್ಟಿಯಿಂದ ಪ್ರೊ. ಬಿ. ಕೃಷ್ಣಪ್ಪ, ದೇವನೂರು ರವರಿಗೆ ದೀರ್ಘ ಪತ್ರ ಬರೆದರು. ಇದಕ್ಕೆ ಪ್ರತಿ ಸ್ಪಂದಿಸಿ ಬರೆದ ದೇವನೂರು ರವರ ಪತ್ರದಲ್ಲಿನ ಎದೆಯಾಳದ ಮಾತು ಇಬ್ಬರ ಹೃದಯಾಂತರಾಳವನ್ನು ತೆರೆದಿಟ್ಟಿದೆ. "ಪ್ರಿಯ ರಾಜ್ಯ ಸಮಿತಿ ಗೆಳೆಯರೇ," ಎಂದು ಹೆಸರಿಸುತ್ತಾ ಇಂಥ ಪತ್ರಿಕೆಗಳು, ಅಥವಾ ಬೇರೆ ಯಾರೋ ಆದರೂ ಸಾವಿರ ಆರೋಪಗಳನ್ನು ಮಾಡಿದರೂ ನಾನು ಎಲ್ಲಿಯವರೆಗೆ ಅಪರಾಧ ಮಾಡಿರುವುದಿಲ್ಲವೋ ಅಲ್ಲಿಯವರೆಗೆ ಆ ಆರೋಪಗಳು ನನಗಾವ ಘಾತವನ್ನು ಉಂಟು ಮಾಡುವುದಿಲ್ಲ. ಆದರೆ ಹಾಲಿ ರಾಜ್ಯ ಸಮಿತಿ ಸದಸ್ಯರು, ಮಾಜಿ ರಾಜ್ಯ ಸಂಚಾಲಕರು, ಎಲ್ಲಕ್ಕಿಂತ ಹೆಚ್ಚಾಗಿ, ನಾನು ನಂಬಿಕೆ ಪ್ರೀತಿ ವಿಶ್ವಾಸ ಇಟ್ಟಿರುವ ಶ್ರೀ ಕೃಷ್ಣಪ್ಪನವರು ಬಹಳ ಕಾಲದಿಂದಲೂ ನಾವು ಪರಸ್ಪರ ಏನೇನು ಎಂದು ಗೊತ್ತಿದ್ದೂ ಕೂಡ ನನ್ನ ಬಗ್ಗೆ ಅಂಥದ್ದೇ ಅಪನಂಬಿಕೆ ವ್ಯಕ್ತಪಡಿಸುವುದು ನನಗೆ ವಿಷಾದ ಉಂಟು ಮಾಡಿದೆ. ಇದರಿಂದ ನಾನು ರಾಜ್ಯ ಸಂಚಾಲಕತ್ವಕ್ಕೆ ರಾಜೀನಾಮೆ ನೀಡುತ್ತಿರುವೆ" – ಎಂದೂ ಮುಂದುವರಿದು, ಬರೆಯುತ್ತಾ, "ಶ್ರೀ



ಬಿ.ಎಸ್.ಪಿ. ನಾಯಕ ಮತ್ತು ಇತರ ಗೆಳೆಯರೊಂದಿಗೆ ಬಿ. ಕೃಷ್ಣಪ್ಪ

ಕೃಷ್ಣಪ್ಪನವರ ಸುತ್ತೋಲೆಯನ್ನಾಗಲೀ, ನನ್ನ ರಾಜೀನಾಮೆಯನ್ನಾಗಲಿ, ಬಿಕ್ಕಟ್ಟು ಎಂದು ಪರಿಗಣಿಸದೆ ರಾಜ್ಯ ಸಮಿತಿ ಸಹ ಸದಸ್ಯರು ನಡೆಯಬೇಕೆಂದು ಪ್ರಾರ್ಥಿಸುವೆ.

ನಂತರದ ಕಾಲಘಟ್ಟದಲ್ಲಿ ರಾಜ್ಯ ಸಂಚಾಲಕತ್ವವನ್ನು ವಹಿಸಿಕೊಂಡ, ಸಿ.ಎಂ. ಮುನಿಯಪ್ಪ, ಚಂದ್ರಪ್ರಸಾದ್ ತ್ಯಾಗಿ, ಎನ್. ಮುನಿಸ್ವಾಮಿ, ಡಿ.ಜಿ. ಸಾಗರ್‌ರವರಿಗೆ ಮಾರ್ಗದರ್ಶಕರಾಗಿ, ಇವರಿಬ್ಬರೂ, ಚಳುವಳಿಯ ತೇರನ್ನು ಮುನ್ನೆಡೆಸಿದ್ದರು. ಬೆಳಗಾವಿಯ ಬೆಂಡಿಗೇರಿಯಲ್ಲಿ ದಲಿತರಿಗೆ ಮಲ ತಿನ್ನಿಸಿದ ಪ್ರಕರಣದಲ್ಲಿ, "ಜಾತಿ ಬಿಡಿ ಮತ ಬಿಡಿ ಮಾನವತೆಗೆ ಜೀವ ಕೊಡಿ" ಎಂಬ ಘೋಷವಾಕ್ಯ, "ಹಿಂದೂಗಳು ಸಂತರಂತೆ ಮಾತನಾಡುತ್ತಾರೆ. ಕಟುಕರಂತೆ ನಡೆದುಕೊಳ್ಳುತ್ತಾರೆ" ಎಂಬ ಕೃಷ್ಣಪ್ಪನವರ ಮಾತುಗಳು, "ಮುಂದಿನ ಆಗಸ್ಟ್ ೧೫ ರಂದು ನಾವಿಲ್ಲಿ ನೆಲ ಗುಡಿಸುವ ಬದಲು ಮೇಲು ಜಾತಿಯ ಕೊಳಕಿನ ಮನಸ್ಸುಗಳನ್ನು ಗುಡಿಸಲು ಮುಂದಾಗಬೇಕಿದೆ" ಎಂಬ ದೇವನೂರುರವರು ಮಾತುಗಳು – ಇಂದಿಗೂ ಸತ್ಯದ ನುಡಿಗಳಾಗಿವೆಯಲ್ಲವೇ?

ರಾಮಕೃಷ್ಣ ಹೆಗಡೆಯವರ ಆಡಳಿತದ ಸಂದರ್ಭದಲ್ಲಿ, "ವಿಷದ ಹೆಂಡ ಬೇಡ – ವಸತಿ ಶಾಲೆ ಕೊಡಿ" ಎಂಬ ಬೇಡಿಕೆಯನ್ನಿಟ್ಟು ಮಾಡಿದ ಹೋರಾಟದಲ್ಲಿ ಪ್ರತಿ ಜಿಲ್ಲೆಯಿಂದ ತಲಾ ೫ ಬಾಟ್ಲಿ ಹೆಂಡವನ್ನು ಸರ್ಕಾರಕ್ಕೆ ಕಳುಹಿಸಿದ್ದೂ ಅಲ್ಲದೆ, ಸಚಿವರ ಮನೆಗಳ ಮುಂದೆ ಧರಣಿ ನಡೆಸಿದರು. ಮುಖ್ಯಮಂತ್ರಿಗಳನ್ನು, ಪ್ರೊ.ಬಿ.ಕೃಷ್ಣಪ್ಪ, ದೇವನೂರು, ಚಂದ್ರ ಪ್ರಸಾದ್‌ತ್ಯಾಗಿ ಮತ್ತು ಅನೇಕ ಮುಖಂಡರು ಭೇಟಿಯಾಗಿ "ಹೆಂಡದ ನಿಷೇಧ, ೧೭೫ ವಸತಿ ಶಾಲೆ, ತೆರೆಯುವುದು, ಪ್ಲಾಂಟೇಶನ್ ಒತ್ತುವರಿ ತೆರವು ಮತ್ತು ಬಡವರಿಗೆ ಹಂಚಿಕೆ" ಇತ್ಯಾದಿ ಬೇಡಿಕೆಗಳಿಗೆ ಮಾನ್ಯತೆ ದೊರತ ನಂತರ ಧರಣಿ ಮುಕ್ತಾಯಗೊಂಡಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನ್ಮ ಶತಮಾನೋತ್ಸವವನ್ನು ಜನಕಲಾಮೇಳವಾಗಿ ೧೯೯೦–೯೧ರಲ್ಲಿ ಬೃಹತ್ ಮೆರವಣಿಗೆ, ಭಾರಿ ಬಹಿರಂಗ ಸಭೆ ಮೂಲಕ ಆಚರಿಸಿದ್ದು ಇವರಿಬ್ಬರ ಒಗ್ಗಟ್ಟು ಮತ್ತು ಸಹೃದಯತೆಯಿಂದ ಮಾತ್ರ ಸಾಧ್ಯವಾಗಿತ್ತು. ಬಹಿರಂಗ ಸಭೆಯ ಉದ್ಘಾಟನೆಯನ್ನು ಪ್ರೊ.ಬಿ.ಕೃಷ್ಣಪ್ಪನವರು, ಮುಖ್ಯ ಅತಿಥಿಗಳಾಗಿ, ದೇವನೂರು, ಕಿಷನ್ ಪಟ್ನಾಯಕ್, (ಒರಿಸ್ಸಾ) ಕತ್ತಿ ಪದ್ಮರಾವ್ (ಆಂಧ್ರ), ಚಂದ್ರ ಪ್ರಸಾದ್ ತ್ಯಾಗಿ ಇದ್ದರು. ಎನ್. ಮುನಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ನಾನೂ ಎಲ್ಲರೊಳಗೊಂದಾಗಿದ್ದೆ.

ದಸಂಸ ಷರತ್ತು ಬದ್ಧ ಹೊಂದಾಣಿಕೆಯೊಂದಿಗೆ ಜನತಾ ಪಕ್ಷದ ಚಿನ್ಹೆಯಲ್ಲಿ ಲೋಕ ಸಭಾ ಚುನಾವಣೆಯಲ್ಲಿ (ಕೋಲಾರ) ಸ್ಪರ್ಧಿಸಿ, ತದನಂತರದಲ್ಲಿ ಆಗ ಪ್ರಬಲ ಜನಾಭಿಪ್ರಾಯದ ಶಕ್ತಿಗಳಾಗಿದ್ದ, ರೈತ ಸಂಘಟನೆ, ದಲಿತ ಸಂಘಟನೆಗಳಲ್ಲಿ ರಾಜಕೀಯ ಅಧಿಕಾರ, ರಾಜಕಾರಣದ ಬಗ್ಗೆ ಬಹಳ ಚರ್ಚೆಗಳು ನಡೆದಿದ್ದು. ಪತ್ರಿಕಾ ಮಾಧ್ಯಮದಿಂದ ಯುವಜನರ ಒಲವುಗಳಿಸಿದ್ದ, ಲಂಕೇಶ್ ಪತ್ರಿಕೆಯ, ಪಿ.ಲಂಕೇಶ್ ರವರು 'ಪ್ರಗತಿ ರಂಗ' ವನ್ನು ಕಟ್ಟಿದ್ದರು. ದಲಿತ ರೈತ ಪ್ರಗತಿರಂಗ ಮೂರು ಜನಾಂದೋಲನಗಳು ಸೇರಿ, ತೃತೀಯ ಪ್ರಾದೇಶಿಕ ರಾಜಕಾರಣದ ಮಾತುಕತೆಗಳ ಹಲವಾರು ಸುತ್ತುಗಳು ನಡೆದವು. ಹಲವರ ಪ್ರತಿಷ್ಠೆಯ ಕಾರಣಗಳಿಂದ, ಮಾತುಕತೆಗಳಲ್ಲಿ ಒಮ್ಮತ ಮೂಡಲಿಲ್ಲ. ಆದರೆ ಕೃಷ್ಣಪ್ಪ ವಿರಮಿಸಲಿಲ್ಲ. ೧೯೯೩–೯೪ ರಲ್ಲಿ ಕೃಷ್ಣಪ್ಪ ದಲಿತ–ಹಿಂದುಳಿದ–

ಅಲ್ಪಸಂಖ್ಯಾತರ ಜನಾಂದೋಲನ ಕಟ್ಟಲು ರಾಜ್ಯಾದ್ಯಂತ ಬಿರುಸಿನ ನಡೆಗೆ ಶ್ರಮಿಸಿದರು. ಈ ನಡಿಗೆಯೊಂದಿಗೆ, ಬಾನು ಮುಷ್ತಾಕ್, ಶ್ರೀಕಂಠ ಕೂಡಿಗೆ, ರಹಮತ್ ತರೀಕೆರೆ ಮುಂತಾದವರು ತಮ್ಮ ನಡಿಗೆಯನ್ನು ಜೋಡಿಸಿದರು. ದಲಿತ – ಹಿಂದುಳಿದ – ಅಲ್ಪಸಂಖ್ಯಾತರ ಸಮನ್ವಯ ಸಮಿತಿಯೊಂದನ್ನು ರಚಿಸಲಾಯಿತು ಕೃಷ್ಣಪ್ಪನವರ ಈ ನಡೆ, ಚರ್ಚೆಗೆ ಗ್ರಾಸವಾಗಿತ್ತು. ಕೃಷ್ಣಪ್ಪನವರ ಗೆಳೆಯರು, ಬುದ್ಧಿ ಜೀವಿಗಳು, ನನ್ನೊಡನೆ ಈ ವಿಷಯ ಪ್ರಸ್ತಾಪಿಸಿದರು. "ದೇವರಾಜ ಅರಸುರವರೇ ಈ ಅಹಿಂದ ಕಾರ್ಡ್ ಪ್ರಯೋಗಿಸಿ ಎಳ್ಗೆ ಕಾಣಲಿಲ್ಲ. ಕರ್ನಾಟಕದಲ್ಲಿ ಈಗಾಗಲೇ ಅಂತಹ ಪ್ರಯೋಗಗಳಾಗಿವೆ. ಪುನಃ ಅಂತಹ ಮಾರ್ಗ ಕೃಷ್ಣಪ್ಪ ಏಕೆ ಮಾಡುತ್ತಿದ್ದಾರೆ? ವೃಥಾ ಪ್ರಯತ್ನ. ನೀವು ಹೇಳಿ" – ಅಂತ ಹೇಳಿದ್ದರು. ನಾನು – "ಇವರದೊಂದು ಪ್ರಯತ್ನವಾದರೆ ತಪ್ಪೇನಿದೆ? ಅವರ ಪ್ರಯತ್ನದಲ್ಲಿ ಹೊಸ ಆಶಯ ಕಾಣುತ್ತಿದೆ ನೋಡೋಣ" – ಎಂದಿದ್ದೆ.

೧೯೯೪ರ ಮಾರ್ಚ್ ೧೯ ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾನತಾ ಸಮಾವೇಶ ನಡೆಯಿತು. ಈ ಸಮಾವೇಶವೇ, ಕೃಷ್ಣಪ್ಪನವರು "ಬಹುಜನಪಕ್ಷ"ವನ್ನು ಒಪ್ಪಿಕೊಳ್ಳಲು ಸಜ್ಜುಗೊಳಿಸಿರುವುದಾಗಿ ಕಂಡು ಬರುತ್ತದೆ. ದಸಂಸದಲ್ಲಿ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸುವ ಚರ್ಚೆಯ ಉತ್ತರದಾಯಿಯಾಗಿ, ರಾಜಕೀಯ ವ್ಯವಹಾರ ಸಮಿತಿಯೊಂದನ್ನು ರಚಿಸಿತು. ಸಮಿತಿಯು ಅಧ್ಯಯನ ನಡೆಸಿ, ವರದಿ ಸಲ್ಲಿಸಲು, ಪ್ರೊ.ಬಿ.ಕೃಷ್ಣಪ್ಪ ಅಧ್ಯಕ್ಷರಾಗಿಯೂ ಶ್ರೀಧರ ಕಲಿವೀರ, ಸಿ.ಕೆ. ಮಹೇಶ್‌ರವರು ಸದಸ್ಯರಾಗಿಯೂ ನಿಯೋಜಿಸಿತು. ಸಮಿತಿ ತನ್ನ ಅಧ್ಯಯನದ ವರದಿಯನ್ನು ೧೯೯೪ ಮೇ ೮ ರಂದು ಸಲ್ಲಿಸುತ್ತಾ, "ಬಿ ಎಸ್ ಪಿ ಯನ್ನು ಒಪ್ಪಿಕೊಳ್ಳುವುದು, ದಸಂಸ ಸಿದ್ಧಾಂತಕ್ಕೆ, ಸಮಾನತಾ ಸಮಾಜ ರಚನೆಯ ದೃಷ್ಟಿಯಿಂದ ಸೂಕ್ತವಾಗಿದೆ ಎಂದು ಅಭಿಪ್ರಾಯವನ್ನು ಮಂಡಿಸಿತ್ತು. ಸಮಿತಿಯ ವರದಿಯ ಮೇಲಿನ ಚರ್ಚೆಯಂತೆ, ಬಹುಜನ ಸಮಾಜ ಪಕ್ಷದೊಂದಿಗೆ, ಅಧ್ಯಕ್ಷರಾದ ಕಾನ್ಶಿರಾಂರವರೊಂದಿಗೆ ಭೇಟಿ ಮಾತುಕತೆಗಳು ನಡೆದವು. ಬಿಎಸ್‌ಪಿ ರಾಜಕೀಯ ಮುಖವಾಣಿಯಾಗಿಯೂ, ದಸಂಸ ಸಾಮಾಜಿಕ ಜನಾಂದೋಲನವಾಗಿ ಮುಂದುವರೆಯಲು ನಿರ್ಣಯಗಳಾದವು. ಅದರಂತೆ ೧೯೯೪ರ ಜುಲೈ ೭ ನೇ ದಿನಾಂಕದಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬಹುಜನ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಕಾನ್ಶಿರಾಂರವರ ಸಮಕ್ಷಮದಲ್ಲಿ, ಬೃಹತ್ ಸಮಾವೇಶದಲ್ಲಿ ದಸಂಸ ಬಸಪವನ್ನು ರಾಜಕೀಯ ಮುಖವಾಣಿಯಾಗಿ ಅಂಗೀಕರಿಸಿತು. ಶ್ರೀ. ಎ.ಕೆ. ಸುಬ್ಬಯ್ಯನವರು ಅಧ್ಯಕ್ಷರಾಗಿಯೂ, ಪ್ರೊ.ಬಿ.ಕೃಷ್ಣಪ್ಪ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯಾರಂಭ ಮಾಡಿದರು.

ದಸಂಸದಲ್ಲಿ ತೆಗೆದುಕೊಂಡ ನಿರ್ಣಯಗಳನ್ವಯ ಪ್ರೊಫೆಸರ್, ಪಕ್ಷ ರಾಜಕಾರಣ ಪ್ರವೇಶಿಸಿದ್ದರು. ಅಧಿಕೃತವಾಗಿ ಪಕ್ಷಕ್ಕೆ ಸೇರ್ಪಡೆಯಾದ ನಂತರ ಪ್ರಿನ್ಸಿಪಾಲರ ಹುದ್ದೆಯಲ್ಲಿ ಮುಂದುವರೆಯುವಂತಿಲ್ಲದ್ದರಿಂದ, ಪೂರ್ವ ಭಾವಿಯಾಗಿ ದಿನಾಂಕ ೦೪.೦೧.೧೯೯೫ ರಲ್ಲಿಯೇ ದಿನಾಂಕ ೨೦.೦೫.೧೯೯೫ ರಂದು ಸ್ವಯಂ ನಿವೃತ್ತಿಗೊಳಿಸಲು ಕೋರಿದ್ದರು. ಈ ವಿಷಯದಲ್ಲಿ ಕೃಷ್ಣಪ್ಪ ನನ್ನೊಂದಿಗೆ ಎಂದೂ ಗಂಭೀರವಾಗಿ ಚರ್ಚಿಸಿರಲಿಲ್ಲವಾದ್ದರಿಂದ, ಅವರ ಸ್ವಯಂ ನಿವೃತ್ತಿಯಿಂದ ಉದ್ಭವಿಸಬಹುದಾದ ಸಮಸ್ಯೆ ಬಗ್ಗೆ ನಾನು ಆಲೋಚಿಸಿಯೇ ಇರಲಿಲ್ಲ. ಪೂರ್ಣಕಾಲಿಕವಾಗಿ ಚಳುವಳಿಯಲ್ಲಿ ತೊಡಗಿರಬೇಕೆಂಬುದು ಬಹುದಿನಗಳ ಆಶಯವಾಗಿದ್ದರೂ ಜೀವನ ನಿರ್ವಹಣೆಗೆ, ಪರ್ಯಾಯ ದುಡಿಮೆಯ ಮೂಲಗಳಿಲ್ಲದ್ದರಿಂದ, ಉದ್ಯೋಗ ಬಿಡುವಂತಿರಲಿಲ್ಲ. ಆಗಾಗ ಸಂಘಟನೆಯೊಳಗೆ, ಕೃಷ್ಣಪ್ಪನವರು, 'ಕೆಲಸ ಬಿಡಬೇಕು' ಎಂಬ ಪ್ರಸ್ತಾಪಗಳು ಬರುತ್ತಿದ್ದವು. ಹಾಗಾಗಿ, ಈಗಲೂ ರಾಜೀನಾಮೆಯ ಸುದ್ದಿ, ಸುಳಿದಾಡಿ ಹೋಗುವ ಸುಳಿಗಾಳಿಯೆಂದೇ ಭಾವಿಸಿದ್ದೆ. ಆದರೆ ಅವರು 'ಕಾಲೇಜಿನ ಋಣ ತೀರಿತು' ಎಂದು ಹೇಳಿದಾಗಲೇ, ಇದು ನಿಜ ಸುದ್ದಿ ಎಂದು ತಿಳಿಯಿತು. ಭದ್ರಾವತಿಯಲ್ಲಿಯೇ, ಬೇರೆ ಮನೆ ನೋಡಬೇಕಾಗುತ್ತೆ ಅಂತ ಭಾವಿಸಿದವಳಿಗೆ, ಬೆಂಗಳೂರಿಗೆ ನಾವು ಸ್ಥಳಾಂತರವಾಗುವ ವಿಷಯ ಹೇಳಿ ಕೃಷ್ಣಪ್ಪ ನಿರಾಳವಾದರು; ಕಳವಳ ನನ್ನನ್ನು ತುಂಬಿಕೊಂಡಿತು.

ನನ್ನ ವರ್ಗಾವಣೆ, ಒಬ್ಬಳು ಮಗಳು ಶಿವಮೊಗ್ಗ, ಒಬ್ಬಳು ಮೈಸೂರು, ಬೆಂಗಳೂರಿನಲ್ಲಿ ಮನೆ, ಮನೆ ಮುಂಗಡ ಹಣಕಾಸಿನ ವ್ಯವಸ್ಥೆ ಎಲ್ಲವೂ ಒಟ್ಟಾಗಿ ಮುತ್ತಿಕೊಂಡಿತ್ತು. ಇದರೊಂದಿಗೆ ಬಹುಜನ ಸಮಾಜ ಪಕ್ಷದ (ಬಸಪ) ಕಚೇರಿಗೆ ಸ್ಥಳ ಹುಡುಕಾಟದೊಂದಿಗೆ ನಮ್ಮ ಮಿತಿಗೊಳಪಟ್ಟ ಮನೆ ಹುಡುಕಾಟವೂ ಶುರುವಾಯಿತು. ಜೊತೆಗೆ ಕೃಷ್ಣಪ್ಪ ಪಕ್ಷದ ಕೆಲಸದೊಂದಿಗೆ, ನನ್ನ ವರ್ಗಾವಣೆಗಾಗಿ ಬೆಂಗಳೂರಿನಲ್ಲಿ ಬಹಳ ದಿನಗಳನ್ನು ಕಳೆಯಬೇಕಾಯಿತು. ಬೆಂಗಳೂರಿನಲ್ಲಿ ಲಾಲ್‌ಬಾಗ್ ಬಳಿಯಲ್ಲಿನ ಆರ್ಕೋ ಟವರ್ಸ್‌ನಲ್ಲಿ ಪಕ್ಷದ ಕಛೇರಿಗೆ ಸ್ಥಳ ದೊರಕಿತು. ನನಗೆ ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿಗೆ (ಯಲಹಂಕ) ವರ್ಗಾವಣೆಯಾಯಿತು ಎಂದು ಕೇಳಿದಾಕ್ಷಣ, ನನ್ನ ಎದೆ ಬಡಿತಗಳು ಶರವೇಗಗೊಂಡವು. ಸುಮಾರು ೪೦ ವರ್ಷದ ಆ ನೆಲದ ಬಂಧುತ್ವ, ಪರಿವಾರ, ಗೆಳೆಯರ ಬಳಗ, ಒಡನಾಡಿಗಳು ಎಲ್ಲವನ್ನು ಬಿಟ್ಟು ಹೋಗಬೇಕಾದ ದುಃಖ ನೂರ್ಮಡಿಯಾಯಿತು. ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಆಗಿರುವ ವರ್ಗಾವಣೆ ಮನಸ್ಸಿಗೆ ಹಿಡಿಸಲಿಲ್ಲ. ಕಚೇರಿ ಬದಲಾವಣೆಗೆ ಪ್ರಯತ್ನಿಸಿ ಎಂದು ಕೃಷ್ಣಪ್ಪನಿಗೆ ಕೇಳಿಕೊಂಡೆ. ಆ ಪ್ರಯತ್ನ ಮಾಡುತ್ತಾ, ಕೃಷ್ಣಪ್ಪ ಬೆಂಗಳೂರಿನಲ್ಲೇ ಹೆಚ್ಚಿನ ಅವಧಿ ಇರಬೇಕಾಯಿತು.

ಮಿತ್ರರು, ಒಡನಾಡಿಗಳ ಮನೆಗಳಿಗೆ ಹೋಗಿ, ವಿದಾಯ ಹೇಳಿ, ದುಃಖವನ್ನು ತಗ್ಗಿಸಿಕೊಂಡೆ, ಈ ನೆಪದಲ್ಲಿ ಹಲವರ ಮನೆಯ ಔತಣಕೂಟಗಳು, ಹಾರೈಕೆಗಳು ಹೃದಯವನ್ನು ತಣಿಸಿದ್ದವು. ಮನೆಯಲ್ಲಿ ಪುಸ್ತಕಗಳು, ದಾಖಲೆಗಳ ರಾಶಿರಾಶಿ ಜೊತೆಗೆ ಸಾಮಾನು ಸರಂಜಾಮುಗಳನ್ನು ೩ ತಿಂಗಳು ಮುಂಚಿತವಾಗಿ ಪ್ಯಾಕಿಂಗ್ ಶುರುಮಾಡಿಕೊಂಡಿದ್ದೆ. ಕೆಜಿಐಡಿ ಸಾಲಕ್ಕೆ ಅರ್ಜಿ ಹಾಕಿಕೊಂಡಿದ್ದೆ. ನನ್ನ ಹುದ್ದೆಗೆ ವರ್ಗಾಯಿಸಿದವರು, ಕೆಲಸಕ್ಕೆ ಹಾಜರಾದಾಗ ನನ್ನ ಶಿವಮೊಗ್ಗ ನಗರಾಭಿವೃದ್ಧಿ ಕಛೇರಿ ಕೆಲಸದಿಂದ ಬಿಡುಗಡೆ ಮಾಡಲಾಯಿತು. ನಾನು ಬೆಂಗಳೂರಿನ ಕಛೇರಿಗೆ ಕೆಲಸಕ್ಕೆ ಹಾಜರಾಗಬೇಕಾದ ದಿನ ಬಂದರೂ ನನಗೆ, ಹತ್ತಿರ ತಾಲ್ಲೂಕು ಪಂಚಾಯಿತಿ ಯಲಹಂಕ ಬಿಟ್ಟು ಬೇರೆ ಕಚೇರಿ ಸಿಗಲಿಲ್ಲ. ಆಗಲೇ ಒಂದೂವರೆ ತಿಂಗಳು ಕಳೆದು ಹೋಗಿತ್ತು.

ಬೆಂಗಳೂರಿನಲ್ಲಿ ನನ್ನ ವರ್ಗಾವಣೆಗಾಗಿ ಕೃಷ್ಣಪ್ಪನವರ ಓಡಾಟವನ್ನು ಕಂಡು, ರುದ್ರಪ್ಪ ಹನಗವಾಡಿಯವರು (ಆಗ ಸಮಾಜ ಕಲ್ಯಾಣ ಸಚಿವರಾದ ಕಾಗೋಡು ತಿಮ್ಮಪ್ಪನವರ ಆಪ್ತ ಕಾರ್ಯದರ್ಶಿ) ನನಗೆ ಫೋನಾಯಿಸಿ – "ಬೆಂಗಳೂರು ಸಿಗೋದೇ ಕಷ್ಟ, ಸಿಕ್ಕಿದೆ, ಬೇಗ ಬಂದು ರಿಪೋರ್ಟ್ ಮಾಡಿಕೊಳ್ಳಿ, ನಂತರ ನೋಡೋಣ", ಅಂತ ಸ್ವಲ್ಪ ಗದರಿಕೆಯ ಧ್ವನಿಯಲ್ಲಿಯೇ ಹೇಳಿದ್ದರು. ಯಾವುದೇ ಕಾಲಾವಧಿ ಉಳಿದಿಲ್ಲವಾದ್ದರಿಂದ, ಅವರ ಮಾತಿನಂತೆ, ತಕ್ಷಣ ಭದ್ರಾವತಿ ಬಿಡುವ ತಯಾರಿ ತುರಾತುರಿಗೊಂಡಿತು. ಮಗಳು ಶಾಲಿನಿಯನ್ನು ಮನೋರಮ ನಿಸಾರ್ ಅಹ್ಮದ್‌ರವರ ಮನೆಯಲ್ಲಿ ಉಳಿದುಕೊಳ್ಳಲು ಒಪ್ಪಿಸಿದ್ದಾಯಿತು. ಜೂನ್ ಕಡೆಯ ದಿನ, ರಾತ್ರಿ, ನಾವಿಬ್ಬರು ಮತ್ತು ತಿಪ್ಪೇಶ ಬೆಂಗಳೂರಿಗೆ ತೆರಳಿದೆವು.

ನಾಲ್ಕಾರು ದಿನಗಳು ಕೃಷ್ಣಪ್ಪ ನನ್ನೊಂದಿಗೆ ಬಸ್ಸಿನಲ್ಲಿ ಕಛೇರಿಗೆ ಬೆಂಗಳೂರು ನನಗೆ ಹೊಸದು ಎಂದು ಓಡಾಡಿದರು. ನಾವಿದ್ದ ವಿಜಯನಗರದ ಬಾಡಿಗೆ ಮನೆಯ ಮಾಲೀಕರಾದ ಗೌರಮ್ಮ–ಮುನಿಸ್ವಾಮಪ್ಪನವರೂ ನಮ್ಮನ್ನು ಅವರ ಮನೆಯವರೆಂದೇ ಪರಿಗಣಿಸಿದ ಪರಿ, ತೋರಿಸಿದ ಪ್ರೀತಿ ನಮ್ಮ ಅನೇಕ ನೋವು–ಕಷ್ಟಗಳನ್ನು ಶಮನಗೊಳಿಸಿತ್ತು. ತಾಲ್ಲೂಕು ಪಂಚಾಯಿತಿಯಲ್ಲಿ ಖಾಲಿ ಇದ್ದ ವಸತಿ ಗೃಹವೊಂದು ನನಗೆ ದೊರಕಿತು. ವಿಜಯನಗರದಿಂದ ಯಲಹಂಕ ವಸತಿಗೃಹಕ್ಕೆ ಮನೆ ಬದಲಾಯಿಸಿದೆವು. ಯಾವ ತಾಲ್ಲೂಕು ಪಂಚಾಯಿತಿ ಕೆಲಸಕ್ಕೆ ಬರಲು ನಾನು ಮೊದಲು ನಿರಾಕರಣದ ಮನಸ್ಸು ತಾಳಿದ್ದನೋ, ಅದೇ ಕಛೇರಿ ಕೆಲಸ ಬೆಂಗಳೂರಿನಲ್ಲಿ ನನಗೆ ಭದ್ರತೆಯನ್ನು, ಗೌರವವನ್ನು ಸ್ಥಾನಮಾನವನ್ನು, ಅವಕಾಶವನ್ನು ಮತ್ತು ಅಪಾರ ಅನುಭವವನ್ನು ಕೊಟ್ಟಿದೆ. ಆದರೆ ಬೆಂಗಳೂರಿಗೆ ಬಂದು, ಕೃಷ್ಣಪ್ಪನನ್ನು ಕಳೆದುಕೊಂಡೆನೇನೋ ಎಂದು ಒಮ್ಮೊಮ್ಮೆ ಅನಿಸುತ್ತದೆ.


ಕೃಷ್ಣಪ್ಪನವರು ನಾನು ಕಛೇರಿಗೆ ಹೊರಡುವ ಮೊದಲೇ, ಪಕ್ಷ ಸಂಘಟನೆಗಾಗಿ ಕಚೇರಿಗೆ ಹೊರಟು ಬಿಡುತ್ತಿದ್ದರು. ವಾಪಸಾಗುವ ವೇಳೆ ನಿಗದಿ ಇರಲಿಲ್ಲ. ಪಕ್ಷದಿಂದ ಇವರ ಓಡಾಟಕ್ಕಾಗಿ ಅಂಬಾಸಿಡರ್ ಕಾರೊಂದನ್ನು ಕೊಟ್ಟಿದ್ದರು. ಅಪಾರ ಸಂಘಟನಾತ್ಮಕ ಅನುಭವಿ ಕೃಷ್ಣಪ್ಪನವರು ಆಯೋಜಿಸಿದ "ಜಾತಿ ಬಿಟ್ಟು ಸಮಾಜ ಕಟ್ಟು" ಘೋಷಣೆಯೊಂದಿಗಿನ ಬಸಪ ಸಮಾವೇಶ (ಬೀದರ್), ಬಹುಜನ ವಿಚಾರ ಸಂಕಿರಣಗಳು, ಹುಬ್ಬಳಿ – ಈದ್ಗಾ ವಿವಾದ ಕುರಿತು ವಿಚಾರಗೋಷ್ಠಿ, ದಲಿತ ಕ್ರೈಸ್ತರಿಗೆ ಮೀಸಲಾತಿ – ರಾಷ್ಟ್ರೀಯ ಸಮಾವೇಶ, ಜೀತದಾಳುಗಳ ಬಿಡುಗಡೆಯ ಸಮಾವೇಶ, ಸೂಲ್ಯನಾಯ್ಕನಹಳ್ಳಿ ದಲಿತರ ಮೇಲಿನ ಪೋಲಿಸ್ ದೌರ್ಜನ್ಯದ ವಿರುದ್ಧ ಮುಖ್ಯಮಂತ್ರಿ ಮನೆ ಮುಂದೆ ಧರಣಿ, ಅಂಬೇಡ್ಕರವರ ಪರಿನಿರ್ವಾಣ ದಿನದ – ಪರಿವರ್ತನಾ ಸೈಕಲ್ ರ್‍ಯಾಲಿ – ಇತ್ಯಾದಿ ಸಂಘಟನಾತ್ಮಕ ಪ್ರಕ್ರಿಯೆಗಳು ಬಸಪವನ್ನು ಕರ್ನಾಟಕದಲ್ಲಿ ನೆಲಗೊಳಿಸಿತ್ತು. ಬೆಂಗಳೂರಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಮದ್ಯಾಭಿಷೇಕ ಪ್ರಕರಣ ಸಾರ್ವಜನಿಕವಾಗಿ, ದಸಂಸ ಮತ್ತು ಬಸಪದೊಳಗೂ ಮತ್ತು ಕೌಟುಂಬಿಕವಾಗಿ ಅನೇಕ ನಿರ್ಣಯಗಳಿಗೆ ಕಾರಣವಾಯಿತು.

**(ಮುಂದುವರೆಯುವುದು)**

ಸ್ಮರಣೆ

# ಸಮಾಜವಾದಿ ಸರದಾರ ಶ್ಯಾಮ ಐತಾಳರು

– ಡಾ. ಜೆ.ಕೆ. ರಮೇಶ



**ಕ**ಳೆದ ಶತಮಾನದ ಐವತ್ತರ ದಶಕದಿಂದ ಸುಮಾರು ೨೫ ವರ್ಷಗಳ ಅವಧಿಯಲ್ಲಿ ಸಮಾಜವಾದಿ ಪಕ್ಷದ ಯಾವುದೇ ಕಾರ್ಯಕ್ರಮ ತೀರ್ಥಹಳ್ಳಿ ಪರಿಸರದಲ್ಲಿ ನಡೆಯುತ್ತಿದ್ದರೆ ಅದರ ಸೂತ್ರಧಾರರಾಗಿರುತ್ತಿದ್ದವರು ಶ್ರೀ ಶಾಮೈತಾಳರು. ಪಕ್ಷದ ಚಟುವಟಿಕೆಗಳನ್ನು ರೂಪಿಸುವುದು, ಅವು ಅಚ್ಚುಕಟ್ಟಾಗಿ ನಡೆಯುವಂತೆ ನಿರ್ವಹಿಸುವುದು, ಚುನಾವಣೆ ಮತ್ತಿತರ ಸಂದರ್ಭಗಳಲ್ಲಿ ಧನ ಸಂಗ್ರಹಣೆ, ಅದರ ಸಂರಕ್ಷಣೆ, ಸಂದರ್ಭ ಬಂದಾಗ ಜಾಗರೂಕತೆಯಿಂದ ಅದನ್ನು ವ್ಯಯ ಮಾಡುವುದು ಇವೆಲ್ಲ ಅವರ ಜವಾಬ್ದಾರಿಗಳಾಗಿರುತ್ತಿದ್ದವು. ಖರ್ಚು ಮಾಡುವಾಗ ಅಲ್ಲಿ ದುಂದಿಗೆ ಎಡೆ ಇರಲಿಲ್ಲ. ಚುನಾವಣಾ ಸಂದರ್ಭದಲ್ಲಿ ಪ್ರಯಾಣ ವೆಚ್ಚಕ್ಕೆ ಊಟಕ್ಕೆ ಎಂದೆಲ್ಲ ಹಣ ಕೇಳುವ ಕಾರ್ಯಕರ್ತರಿಗೆ ಅವರಿಂದ ಸಿಗುತ್ತಿದ್ದ ಉತ್ತರ, ನಡೆದುಕೊಂಡು ಹೋಗಿ, ಯಾರದಾದರೂ ಮನೆಯಲ್ಲಿ ಊಟ ಮಾಡಿ ಎಂಬುದಾಗಿರುತ್ತಿತ್ತು. ಹೀಗೆ ಪಕ್ಷದ ನಿಧಿಗೆ ಶಾಮೈತಾಳರ ಸರ್ಪಗಾವಲು ಇರುತ್ತಿತ್ತು. ಅವರನ್ನು ಬಲ್ಲ ಯಾರೂ ಇದಕ್ಕಾಗಿ ಮುನಿಸಿಕೊಳ್ಳುತ್ತಿರಲಿಲ್ಲ. ಅವರ ಪ್ರಾಮಾಣಿಕತೆಯಲ್ಲಿ ಸಂಶಯಕ್ಕೆ ತಾವಿರುತ್ತಿರಲಿಲ್ಲವಾದ್ದರಿಂದ ಉಳ್ಳವರು ಉದಾರವಾಗಿ ಕೊಡುತ್ತಿದ್ದರು. ಖರ್ಚಿಗೆ ಹಣ ಕೇಳುವವರೂ ಎರಡು ಬಾರಿ ಯೋಚಿಸಿ ಕೇಳುತ್ತಿದ್ದರು. ಹೀಗಾಗಿ ಐತಾಳರ ಮುಂದಾಳತ್ವ ಇದ್ದಲ್ಲಿ ಹೆಚ್ಚು ಹಣ ಸಂಗ್ರಹವೂ ಆಗುತ್ತಿತ್ತು. ಉಳಿತಾಯವೂ ಆಗುತ್ತಿತ್ತು. ದೇಶದ ಕಾನೂನು ಕಟ್ಟಳೆ, ಕಛೇರಿ ವ್ಯವಹಾರಗಳ ಕುರಿತು ಅವರಿಗೆ ವಿಶೇಷ ಅರಿವು ಇತ್ತು. ಇಂಥ ವಿಚಾರಗಳಲ್ಲಿ ಸಂಕಷ್ಟಕ್ಕೆ ಸಿಕ್ಕಿಕೊಂಡವರೆಲ್ಲ ಪಕ್ಷಾತೀತವಾಗಿ ಶಾಮೈತಾಳರ ಬಳಿ ಪರಿಹಾರ ಕೇಳಿ ಬರುತ್ತಿದ್ದರು. ಗೋಪಾಲಗೌಡರಾದಿಯಾಗಿ ಯಾರೂ ಅವರ ಸಲಹೆ, ಸೂಚನೆ ಆದೇಶಗಳನ್ನು ತೆಗೆದುಹಾಕುತ್ತಿರಲಿಲ್ಲ. ಹಾಗೆಂದೇ ಐತಾಳರು ತೀರ್ಥಹಳ್ಳಿ ಸೋಷಲಿಸ್ಟ್ ಪಕ್ಷದ ಮಟ್ಟಿಗೆ ಸರದಾರ (ಕಮ್ಯಾಂಡರ್) ರಾಗಿದ್ದರೆಂದು ಹಿರಿಯ ಸೋಷಲಿಸ್ಟರೊಬ್ಬರು ಹೇಳಿದರು.

ಶಾಮೈತಾಳರ ಮೂಲ ಊರು ತೀರ್ಥಹಳ್ಳಿಗೆ ಸಮೀಪದ ಭೀಮನಕಟ್ಟೆ. ಜನಿಸಿದ್ದು ೧೯೧೩ರಲ್ಲಿ. ಸ್ವಾತಂತ್ರ್ಯ ಪೂರ್ವದಲ್ಲಿ ಪಟೇಲಿಕೆ ಇತ್ತು. ಹಿರಿಯರು ಅಡಿಕೆ ತೋಟದ ಸಾಗುವಳಿ ಮಾಡುತ್ತಿದ್ದರು. ರಂಜದಕಟ್ಟೆಯಲ್ಲಿ ಸಣ್ಣದೊಂದು ದಿನಸಿ ಅಂಗಡಿ ಇವರದ್ದಾಗಿತ್ತು. ನಂತರ ತೀರ್ಥಹಳ್ಳಿಗೆ ಬಂದು ನೆಲೆಸಿ ಅಲ್ಲೊಂದು ಚಿಕ್ಕ ಜವಳಿ ಅಂಗಡಿ ನಡೆಸುತ್ತಿದ್ದರು. ಐತಾಳರು ತೀರ್ಥಹಳ್ಳಿಯ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ೧೯೨೭ರ ಆಗಸ್ಟ್‌ನಲ್ಲಿ ಗಾಂಧೀಜಿ ಪತ್ನಿ ಕಸ್ತೂರಬಾ, ರಾಷ್ಟ್ರನಾಯಕರಾದ ಚಕ್ರವರ್ತಿ ರಾಜಗೋಪಾಲಾಚಾರಿ, ದೇಶ್‌ಪಾಂಡೆ ಗಂಗಾಧರರಾಯರೊಂದಿಗೆ ಇಲ್ಲಿಗೆ ಬಂದಿದ್ದು ಭಾಷಣ ಮಾಡಿ ಸ್ತ್ರೀ ಪುರುಷರಿಂದ ಒಡವೆ, ಹಣ ಸಂಗ್ರಹಿಸಿದ ಐತಿಹಾಸಿಕ ಸಂದರ್ಭ ಅದು. ಅಂದಿನ ಸಭೆಯಲ್ಲಿದ್ದು ಭಾಷಣ ಕೇಳಿದ ಬಾಲಕ ಐತಾಳರು ಅದರಿಂದ ಪ್ರಭಾವಿತರಾದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು.

೧೯೩೬ ರಲ್ಲಿ ಕಾಂಗ್ರೆಸ್ ಪಕ್ಷ ಸೇರಿಕೊಂಡು ತಾಲ್ಲೂಕು ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರಾದರು. ೧೯೩೮ರ ಅರಣ್ಯ ಸತ್ಯಾಗ್ರಹದಲ್ಲಿ ಪೋಲೀಸರ ಕೈಗೆ ಸಿಗದೆ ಸಂಘಟನೆ, ಪ್ರಚಾರ, ನಿಧಿ ಸಂಗ್ರಹ ಇತ್ಯಾದಿ ಚಟುವಟಿಕೆ ನಡೆಸಿದರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸಭೆ ಮೆರವಣಿಗೆ ನಡೆಸಿದ್ದಲ್ಲದೆ, ಟೆಲಿಗ್ರಾಫ್ ತಂತಿ ಕತ್ತರಿಸುವ ಕಿರುಕುಳದಲ್ಲಿ ತೊಡಗಿದ್ದರು. ಗೋಪಾಲಗೌಡರೂ ಇವರೊಂದಿಗೆ ಸೇರಿಕೊಂಡಿದ್ದರು. ಎರಡು ಬಾರಿ ಈ ಕೃತ್ಯ ನಡೆಸಿ ಪೋಲೀಸರ ಕಣ್ಣು ತಪ್ಪಿಸಿ ಪಾರಾಗಿದ್ದ ಈ ಯುವಕರ ತಂಡ ಮೂರನೆಯ ಬಾರಿ ಸಿಕ್ಕಿಕೊಂಡಿತು. ಒಟ್ಟು ಏಳು ಜನರಿಗೆ ಏಳು ತಿಂಗಳ ಜೈಲು ಶಿಕ್ಷೆಯಾಯಿತು. ಅದನ್ನು ಅನುಭವಿಸಿ ಹೊರಬಂದರು.

ಗಾಂಧೀಜಿಯವರ ಅಭಿಮಾನಿ ಮತ್ತು ಕಟ್ಟಾ ಅನುಯಾಯಿಯಾದ ಐತಾಳರು ಕಾಂಗ್ರೆಸ್ ಸದಸ್ಯರಾದಾಗಿನಿಂದ ಸಾರ್ವಜನಿಕರಿಂದ ಚಂದಾ ಹಣ ಸಂಗ್ರಹಿಸಿ ಅದಕ್ಕಿಂತ ಹೆಚ್ಚು ತಮ್ಮ ಸ್ವಂತ ಹಣ ಹಾಕಿ ಚರಕಾ ಸಂಘವನ್ನು ಸ್ಥಾಪಿಸಿ ಇಲ್ಲೇ ಚರಕಾಗಳನ್ನು ತಯಾರಿಸಿ ನೂಲುವವರಿಗೆ ಕೊಟ್ಟರು. ಹತ್ತಿಯ ಹಂಜಿಯನ್ನೂ ಅವರಿಗೆ ಸರಬರಾಜು ಮಾಡಿ ಅವರು ನೂತ ನೂಲನ್ನು ಖರೀದಿಸುತ್ತಿದ್ದರು. ಖಾದಿ ಮಳಿಗೆಯನ್ನು ಸ್ಥಾಪಿಸಿ ಖಾದಿ ಬಟ್ಟೆ ಮಾರಾಟ ಮಾಡಿದರು. ಹತ್ತು ವರ್ಷ ನಷ್ಟದಲ್ಲೇ ಸಾಗಿ ಬಂದ ಈ ವ್ಯವಹಾರ, ಸಂಗ್ರಹಿಸಿದ ಬಂಡವಾಳ ಕರಗಿ ಹೋದದ್ದರಿಂದ ನೂಲುವಿಕೆ ನಿಂತು ಮಾರಾಟ ಮಳಿಗೆ ಮುಚ್ಚಿ ಸಂಘವೂ ೧೯೪೬ ರಲ್ಲಿ ವಿಸರ್ಜಿತವಾಯಿತಂತೆ.

೧೯೪೭ರಲ್ಲಿ ನಡೆದ 'ಮೈಸೂರು ಚಲೋ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಐತಾಳರು ಒಂದು ತಿಂಗಳು ಇಪ್ಪತ್ತೆರಡು ದಿನಗಳ ಕಾಲ ದಸ್ತಗಿರಿಯಾಗಿ ಇನ್ನೊಮ್ಮೆ ಜೈಲುವಾಸ ಅನುಭವಿಸಿದರು. ನಂತರ ೧೯೪೮ರಲ್ಲಿ ತೀರ್ಥಹಳ್ಳಿಯ ಪ್ರಸಿದ್ಧ ರಾಮೇಶ್ವರ ದೇವಸ್ಥಾನ ಮತ್ತು ಸುತ್ತಲ ಇತರ ದೇವಾಲಯಗಳಿಗೆ ಮತ್ತು ಸಾರ್ವಜನಿಕ ಸ್ಥಳಗಳಿಗೆ ಹರಿಜನರನ್ನು ಪ್ರವೇಶ ಮಾಡಿಸುವ ಸೂಕ್ಷ್ಮ ಚಳವಳಿಯ ಮುಂದಾಳತ್ವ ವಹಿಸಿದರು. ಹೀಗೆ ಸ್ವಾತಂತ್ರ್ಯ ಪೂರ್ವ ಮತ್ತು ಪ್ರಾರಂಭದ ವರ್ಷಗಳಲ್ಲಿ ೧೨ ವರ್ಷ ಕಾಂಗ್ರೆಸ್‌ನಲ್ಲಿದ್ದುಕೊಂಡು ಜನರ ಸಂಘಟನೆ, ಧನ ಸಂಗ್ರಹಣೆ, ಸತ್ಯಾಗ್ರಹ, ಸಾರ್ವಜನಿಕ ಸಭೆ ಹೀಗೆ ಹಗಲಿರುಳು ದುಡಿಯುತ್ತಿದ್ದ ಐತಾಳರು ಇದಕ್ಕಾಗಿ ವೈಯ್ಯಕ್ತಿಕ ಆಸ್ತಿ ಪಾಸ್ತಿಗಳನ್ನೂ ತ್ಯಾಗ ಮಾಡಬೇಕಾಗಿ ಬಂದಿತು. ಮನೆತನಕ್ಕಿದ್ದ ಪಟೇಲಿಕೆಯನ್ನು ಪ್ರತಿಭಟನಾ ರೂಪದಲ್ಲಿ ಮೊದಲೇ ತ್ಯಜಿಸಿದ್ದರು.

ಸ್ವಾತಂತ್ರ್ಯಾನಂತರ ಜೆಪಿ, ಲೋಹಿಯಾ ಮುಂತಾದ ರಾಷ್ಟ್ರನಾಯಕರು ತಮ್ಮ ಸಮಾಜವಾದಿ ಅನುಯಾಯಿಗಳೊಂದಿಗೆ ಕಾಂಗ್ರೆಸ್‌ನಿಂದ ಹೊರಬಂದು ಸಮಾಜವಾದಿ ಪಕ್ಷವನ್ನು ರಚಿಸಿಕೊಂಡಾಗ ಐತಾಳರೂ ಕಾಂಗ್ರೆಸ್‌ನಿಂದ ಹೊರಬಂದು ಸಮಾಜವಾದಿ ಪಕ್ಷ ಸೇರಿದರು. ಎಂಥ ಸಂದರ್ಭದಲ್ಲೂ ಮತ್ತೆ ಕಾಂಗ್ರೆಸ್ ಕಡೆ ತಿರುಗಿ ನೋಡಲಿಲ್ಲ. ತೀರ್ಥಹಳ್ಳಿಯಲ್ಲಿ ಅವರ ಸ್ವಂತದ ಸಣ್ಣ ಖಾದಿ (ಜವುಳಿ) ಅಂಗಡಿ ಮುಂದುವರಿದಿತ್ತು. ಬಹುತೇಕ ಅದು ಸ್ಥಳೀಯ ಸಮಾಜವಾದಿ ನಾಯಕರು ಸಮಾಲೋಚನೆಗೆ ಸೇರುವ ಸ್ಥಳವಾಗಿತ್ತು. ಬಹಳ ವಿದ್ಯಾವಂತರಲ್ಲವಾದರೂ ಪಕ್ಷ ಸಿದ್ಧಾಂತಗಳ ನಿಚ್ಚಳ ತಿಳಿವಳಿಕೆ, ವ್ಯವಹಾರ ಜ್ಞಾನದ ನೈಪುಣ್ಯವಿದ್ದ ಐತಾಳರಿಗೆ ಎಲ್ಲರಿಂದ ಗೌರವ ಸಲ್ಲುತ್ತಿತ್ತು. ಅಶಿಸ್ತಿನಿಂದ ವರ್ತಿಸುವವರನ್ನು, ದುರ್ವ್ಯಸನ ಪ್ರದರ್ಶನ ಮಾಡುವವರನ್ನು ಹದ್ದುಬಸ್ತಿನಲ್ಲಿಡುವ ಶಕ್ತಿ ಅವರಿಗಿತ್ತು. ಒಂದಿಷ್ಟು ಮುಂಗೋಪವೂ ಇತ್ತು. ಕಾಗೋಡು ಚಳವಳಿಯಲ್ಲಿ ನೇರ ಭಾಗಿಗಳಾಗಿರದಿದ್ದರೂ ಹಿನ್ನೆಲೆಯಲ್ಲಿ ಕಾರ್ಯತಂತ್ರ ರೂಪಿಸುತ್ತಿದ್ದವರಲ್ಲಿ ಐತಾಳರು ಮುಖ್ಯರಾಗಿದ್ದರು. ಅದಕ್ಕೆ ಮೊದಲೇ ತೀರ್ಥಹಳ್ಳಿಯಲ್ಲಿ ಗೇಣಿದಾರರ ಸಂಘ ಸ್ಥಾಪಿಸಿದ ಪ್ರಮುಖರಲ್ಲಿ ಇವರೂ ಒಬ್ಬರು.

ಗೋಪಾಲಗೌಡರು ಚುನಾವಣೆಗೆ ನಿಂತ ಸಂದರ್ಭಗಳಲ್ಲಿ ಕೀಲಿ ಕೈಯಾಗಿ ಕೆಲಸ ಮಾಡಿದ ಐತಾಳರಿಂದಾಗಿ ಅವರ ಬಂಧುಗಳಾಗಿದ್ದ ಬಹುಸಂಖ್ಯೆಯ ಬ್ರಾಹ್ಮಣರು ಗೌಡರ ಬೆಂಬಲಕ್ಕೆ ನಿಂತರು. ಸದಾಶಿವರಾಯರು, ಗುರುಮೂರ್ತಿ ಭಟ್ಟರು, ಶಂಕರನಾರಾಯಣ ಭಟ್ಟರು ಮುಂತಾದವರ ಪ್ರಭಾವದಿಂದಾಗಿ ಇಡೀ ಬ್ರಾಹ್ಮಣ ಸಮುದಾಯ ಗೌಡರ ಬೆನ್ನಿಗೆ ನಿಂತದ್ದು ಗೌಡರ ಗೆಲುವಿಗೆ ಕಾರಣವಾಗಿತ್ತೆಂಬುದು ಗಮನಿಸಬೇಕಾದ ಸಂಗತಿ. ಒಟ್ಟಿನಲ್ಲಿ ಮಲೆನಾಡು ಪ್ರಾಂತದಲ್ಲಿ ಸಮಾಜವಾದಿ ಪಕ್ಷದ ಸ್ಥಾಪನೆ, ಪೋಷಣೆ, ಅದರ ಗೆಲುವುಗಳನ್ನು ಕುರಿತು ಯೋಚಿಸುವಾಗ ಶಾಮೈತಾಳರೆಂಬ ವ್ಯಕ್ತಿ ಹಿನ್ನೆಲೆಯ ಶಕ್ತಿಕೇಂದ್ರವಾಗಿದ್ದುದನ್ನು ಯಾರೂ ಮರೆಯುವಂತಿಲ್ಲ. ಜನನಾಯಕರೆಂದು ಮೆರೆದ ಅಧಿಕಾರಗಳನ್ನು ಅನುಭವಿಸಿದ ಯಾವ ದೊಡ್ಡ ನಾಯಕರ ಸಾಧನೆಗೂ ಇದು ಕಡಿಮೆಯದಲ್ಲ. ೧೯೭೭ರಲ್ಲಿ ಜೈಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಒಗ್ಗೂಡಿ ಜನತಾಪಕ್ಷವಾಗಿ ಚುನಾವಣೆ ಎದುರಿಸಿದಾಗ ಸೋಷಲಿಸ್ಟರು ಮತ್ತು ಇತರರ ನಡುವೆ ಉಂಟಾಗುತ್ತಿದ್ದ ಭಿನ್ನಾಭಿಪ್ರಾಯ, ಸಂಘರ್ಷಗಳನ್ನು ಹತ್ತಿಕ್ಕಿ ಸಮನ್ವಯ ಸಾಧಿಸುವಲ್ಲಿ ಐತಾಳರ ಪಾತ್ರ ಈ ಭಾಗದಲ್ಲಿ ಮಹತ್ವದ್ದಾಗಿತ್ತು.

ಐತಾಳರಿಗೆ ಸಮಾಜ ಸೇವೆಯ ಸಣ್ಣ ಅವಕಾಶಗಳು ದೊರೆತಿವೆ. ತೀರ್ಥಹಳ್ಳಿ ಪುರಸಭೆಗೆ ಮೂರು ಬಾರಿ ಅವರು ಸದಸ್ಯರಾಗಿ ಆಯ್ಕೆಯಾಗಿದ್ದರು.

. .

(ಮುಂದಿನ ಪುಟಕ್ಕೆ

**ಯುವ ಸಮಾಜವಾದಿ ಚಿಂತನ ವೇದಿಕೆ**

# ಹೀಗೇ ಸಮಾಜವಾದಿಯಾಗುತ್ತಾ...

**–ಸುಘೋಷ್ ಕೌಲಗಿ**



ನನ್ನದು ಕನಸಿನ ಲೋಕ. ಅದೊಂದು 'ಅದ್ಭುತ–ರಮ್ಯ' ಮಂಚ. ಅಲ್ಲಿ ಎಲ್ಲವೂ ಸಾಧ್ಯ. ನಾವು ಇಷ್ಟಪಟ್ಟರೆ ಏನನ್ನೂ ನಿಭಾಯಿಸಬಹುದು ಎನ್ನುವ ವಿಶ್ವಾಸ. ಅಲ್ಲಿ ಎಲ್ಲರೂ ಖುಷಿಯಾಗಿರಬೇಕು. ಯಾರೊಬ್ಬರು ಸಪ್ಪಗಿದ್ದರೂ ಎಲ್ಲರಿಗೂ ಬೇಸರ. ದುಃಖದ ಕಾರಣವನ್ನು ಪ್ರೀತಿ, ಅನುಕಂಪ, ಸಹಾನುಭೂತಿ, ಸಾಂತ್ವನಗಳಿಂದ ಮುಚ್ಚಿದಾಗ ಹೊರಹೊಮ್ಮುವ ಮಗುವಾದ ಮನಸ್ಸು ಒಂದು ಉಡುಗೊರೆ. ಅದರಲ್ಲೂ ಶ್ರಮವನ್ನು ಹಂಚಿಕೊಂಡಾಗ ಮನುಷ್ಯರ ನಡುವೆ ಮೂಡುವ ಬಾಂಧವ್ಯ ತುಂಬಾ ಹತ್ತಿರವಾದದ್ದು, ಸೋದರತ್ವದ ಭಾವನೆಯನ್ನು ಮೂಡಿಸುವಂಥದು. ಅಲ್ಲಿ ಶರೀರವಷ್ಟೆ ಮಾತನಾಡಲು ಸಾಧ್ಯ.

ಒಂದು ಸಲ ಗೆಳೆಯನನ್ನು ನೋಡಲು ಹೋದೆ. ಹೊಲ ಕುಯ್ಯುತ್ತಿದ್ದ. ಹೋಗಿ ನಿಂತೆ. 'ಇರೋ ಬಂದೆ' ಎಂದ. ಬಿಸಿಲು, ಬೂದುಗಾಜಿನಿಂದ ಹಾದುಬಂದಂತೆ ನಾಟುತ್ತಿತ್ತು. ಮಳೆ ಬರುವ ಎಲ್ಲಾ ಲಕ್ಷಣಗಳೂ ಇದ್ದವು. ಗೆಳೆಯನ ಗಮನ ನನ್ನತ್ತ ಸುಳಿಯಲೇ ಇಲ್ಲ.. ನಾನೇ ಶುರು ಮಾಡಿದೆ, ವ್ಯವಸಾಯ, ರೈತ, ರಾಜಕೀಯ, ಶಿಕ್ಷಣ, ಸಾಹಿತ್ಯ, ಸಿನೆಮಾ ಹೀಗೆ ಅನೇಕ ಸಮಾನಾಸಕ್ತಿಯ ವಿಷಯಗಳನ್ನು ಕುರಿತು ಸುಮಾರು ಹೊತ್ತು ಮಾತಾಡ್ತಾನೇ ಇದ್ದೆ. ಮೂಗನಂತೆ ಆಗೀಗ 'ಹಾಂ ಹೂಂ' ಅನ್ನುತ್ತಿದ್ದ ನನ್ನ ಸ್ನೇಹಿತ ಇದ್ದಕ್ಕಿದ್ದಂತೆ ನನ್ನ ಕಡೆ ತಿರುಗಿ 'ಮಗಾ, ಅಲ್ಲಿ ಕುಡುಗೋಲು ಇದೆ, ತಗೊಂಡು ಕೈಹಾಕು, ಇಲ್ಲ, ರೈಟ್ ಹೇಳು. ಯಾರ್ದಾದ್ರೆ ಏನು? ಸಂಜೆ ಹೊತ್ತಿಗೆ ಹೊಲಗಳನ್ನು ಕುಯ್ಯದಿದ್ದರೆ ಕೂಳು ದಂಡ ಆಗ್ತದೆ' ಎಂದ.

ಆಗ ನನ್ನಲ್ಲಿ ನನಗೆ ಒಂದು ವಿಚಿತ್ರ ಅನುಭವವಾಯಿತು. ಒಂದು ಕ್ಷಣ ನಿಂತ ನೆಲ ವಿದ್ಯುತ್‌ಸ್ಪರ್ಶಕ್ಕೆ ಒಳಗಾದಂತೆನಿಸಿ ಒಂದರೆಕ್ಷಣ ಬಿಟ್ಟು ಚುರುಚುರುಕೆ ಸೊಪ್ಪು ತಗೊಂಡು ಯಾರೋ ಮೈಗೆಲ್ಲ ಬಾರಿಸಿದ ಹಾಗೆ ಆಯ್ತು. ದಡಬಡಾಯಿಸಿ ಬಿದ್ದು ಎದ್ದು ಕುಡುಗೋಲು ಕೈಗೆ ತಗೊಂಡೆ. ಎಲ್ಲಾ ಮುಗಿಸಿ, ಗುಡ್ಡೆ ಹಾಕಿ ಮುಚ್ಚುವಷ್ಟರಲ್ಲಿ ಮಿಂಚು ಗುಡುಗಿನ ಮಳೆ ಸುರೀತು. ಮೈಯೆಲ್ಲ ಒದ್ದೆ ಮುದ್ದೆಯಾತ್ತು. ಹೊಟ್ಟೆ ಊಳಿಡುತ್ತಿತ್ತು. ಸ್ನೇಹಿತನ ಮನೆಯ ಬೆಚ್ಚನೆಯ ಆತಿಥ್ಯದ ಸಂತೃಪ್ತಿಯನ್ನು ಸವಿಯುತ್ತಾ ಹೊರಟು ನಿಂತಾಗ ಸ್ನೇಹಿತ ನನ್ನನ್ನು ಕುರಿತು ಹೇಳಿದ, 'ನೀನು ನಿಜವಾಗಿಯೂ ನಿನ್ನ ಸ್ನೇಹವನ್ನು ರುಜುವಾತು ಮಾಡಿದೆ.'

ನನಗೆ ತುಂಬಾ ಖುಷಿಯಾಯಿತು. 'ಹೌದು ಕೆಲವು ಸಲ ನಮ್ಮ ಅಗತ್ಯವನ್ನು ದೈಹಿಕ ಕೆಲಸದ ಮೂಲಕ ಕಂಡುಕೊಳ್ಳುವುದರಲ್ಲಿ ನಿಜವಾದ ಖುಷಿಯಿದೆ ಅನ್ನೋದು ನನಗೆ ಮನವರಿಕೆಯಾಯ್ತು. ಅದಕ್ಕಾಗಿ ನಿನಗೆ ಧನ್ಯವಾದಗಳು' ಎಂದು ಹೇಳಿದೆ. ಈಗ ನಾಟಕೀಯ ಅನಿಸುವ ಘಟನೆಗಳು ಆಗಿನ ಕಾಲದ ಅಗತ್ಯಗಳಾಗಿದ್ದವು ಎನ್ನಿಸುತ್ತದೆ. ನಾಟಕೀಯತೆ ಜೀವನದ ಪ್ರಮುಖ ಲಕ್ಷಣ. ನಾಟಕೀಯತೆಗೂ ಹೊರಗಾದ ಜೀವನ ಎಲ್ಲರಿಗೂ ಸ್ವಲ್ಪ ಬೇಸರವೇ.

ಬಹಳ ಹಿಂದೆ ಆಗ ನಾನಿನ್ನು ಹುಡುಗ. ಊರಿಗೆ ಹೊರಟಿದ್ದೆ. ಕಡಿದಾದ ಬೆಟ್ಟಗುಡ್ಡದ ದಾರಿ. ಅಜ್ಜಿಯೊಂದು ಸೌದೆ ಹೊರೆ ಹೊತ್ತು ಕೈಯಲ್ಲೊಂದು ಕೋಲು ಹಿಡಿದು ತೂರಾಡುತ್ತಾ, ಏದುಸಿರು ಬಿಡುತ್ತಾ ನಿಧಾನವಾಗಿ ಸಾಗುತ್ತಿತ್ತು. ನಾನು ಅಜ್ಜಿಯ ಪಕ್ಕ ಹಾಯುತ್ತಿದ್ದಾಗ ತಿರುಗಿ ಅಜ್ಜಿಯ ಮುಖವನ್ನು ನೋಡಿದೆ. ನನ್ನಲ್ಲಿ ಉಂಟಾದ ಭಾವೋದ್ವೇಗವನ್ನು ಇಲ್ಲಿ ಹೇಳಲಾರೆ. ತಕ್ಷಣ ಅಜ್ಜಿಯನ್ನು ಒಪ್ಪಿಸಿ ಸೌದೆ ಹೊರೆಯನ್ನು ಪಡೆದು, ನಾನೇ ಹೊತ್ತುಕೊಂಡು ನಡೆದೆ. ಮೆಟ್ಟಿಲುಗಳನ್ನು ಹತ್ತಿ ಹೊರೆಯನ್ನು ಕೆಳಗಿಳಿಸಿ, ತಿರುಗಿ ನೋಡಿದೆ. ಅಜ್ಜಿ ಇನ್ನೂ ಬಹಳ ಹಿಂದೆ ಇತ್ತು. ನನಗೂ ಬೆವರು ಕಿತ್ತು, ಏದುಸಿರು ಬರುತ್ತಿತ್ತು. ಒಂದೆರಡು ನಿಮಿಷ ವಿಶ್ರಮಿಸಿ, ಮೆಲ್ಲನೆ ಮನೆಕಡೆ ನಡೆದೆ. ಯಾಕೋ ಶರೀರ ಬಹಳ ಹಗುರವೆನಿಸತೊಡಗಿತು. ಮನಸ್ಸು ಒಂದು ಅನನ್ಯ ಆನಂದದಿಂದ ತುಂಬಿತ್ತು. ನನಗೇ ನನ್ನ ಬಗ್ಗೆ ಹೆಮ್ಮೆ ಎನಿಸಿತು. ಆದರೆ ಆ ದಿವಸವನ್ನು ನಾನೆಂದಿಗೂ ಮರೆಯಲಾರೆ. ಅದೊಂದು ಸಣ್ಣ ಕೆಲಸ ನನ್ನನ್ನು ಸಮಾಜದೊಂದಿಗೆ ಆಪ್ತವಾಗಿಸುವಲ್ಲಿ ಬಹಳ ನೆರವಾಯ್ತು.

ನನ್ನ ತಿಳುವಳಿಕೆಯ ಪ್ರಕಾರ ನಾವು ಸಮಾಜಕ್ಕೆ ಕೊಡಲಾಗುವುದು ಏನೂ ಇಲ್ಲ. ಸಾಧ್ಯವಾದರೆ ಪ್ರೀತಿ ಮಾತ್ರ. ಸಮಾಜದ ದೊಡ್ಡ ಕೊರತೆ ಅದು.

ಒಂದು ಸಲ ಏನಾಯ್ತು ಎಂದರೆ, ಇದ್ದಕ್ಕಿದ್ದ ಹಾಗೆ ಹೊಸ ಪರಿಸರದಲ್ಲಿ ಕಾಣಿಸಿಕೊಳ್ಳಬೇಕಾಯಿತು. ಹೊಸದಾಗಿ ಮನೆ ಹೂಡಬೇಕಾಯ್ತು. ಅದು ನಮಗೆ ಸಂಪೂರ್ಣ ಹೊಸ ಊರು. ನನಗೆ ಏನೂ ಮಾಡುವ ಯೋಚನೆಯಿರಲಿಲ್ಲ. ಸುಮ್ಮನೆ ಆ ಹಳ್ಳಿಯಲ್ಲಿ ಇದ್ದು ಬಿಟ್ಟೆ. ವ್ಯಕ್ತಿಗಳು ಪರಿಚಯವಾಗ್ತಾ ಅವರೆಲ್ಲರೂ ಮನೆಯವರೇ ಆಗಿಬಿಟ್ಟರು. ಊರೇ ನಮ್ಮ ಮನೆಯಾಯ್ತು. ಪ್ರಾತಃಸ್ಮರಣೀಯರಾದ ಡಿ.ವಿ.ಗುಂಡಪ್ಪನವರು ಹೇಳಿದಂತೆ 'ಎಲ್ಲರೊಳಗೊಂದಾಗು'ವುದರಲ್ಲಿ ಎಲ್ಲವೂ ಇದೆ. ನನಗೆ ಎಲ್ಲವೂ ಸಿಕ್ಕಿತು. ನಾನು ಹಂಚಿಕೊಂಡದ್ದು ತೀರಾ ಚೂರು ಚೂರಾದ ಪ್ರೀತಿ, ಆಪ್ತತೆ, ಸಾಂತ್ವನ, ಸಹಾನುಭೂತಿ, ಅನುಕಂಪ, ಸಹಾಯ ಮಾತ್ರ. ಅವೆಲ್ಲ ನನಗೆ ಬಗೆ ಬಗೆಯ ವಸ್ತು ರೂಪದ ಕೊಡುಗೆಗಳಾಗಿ ಹಿಂದಿರುಗಿದವು. ಎಂಥ ಯಕ್ಷಿಣಿ! ಬೀದಿ ಬದಿಯಲ್ಲಿ ಹೂವಾಗಿ ಅರಳಿ ನಗುಚೆಲ್ಲಿದವು. ಉಪ್ಪಿನಕಾಯಿ, ಹಪ್ಪಳ, ಬೆಲ್ಲ, ಕಬ್ಬು, ನೇರಳೆ ಹಣ್ಣು, ಮಲ್ಲಿಗೆ, ಹಾಲು, ಅಕ್ಕಿ, ಹೆಂಡ, ಬಟ್ಟೆ, ಬರಲು, ಎಲೆಯಡಿಕೆ, ಮೆಣಸಿನಕಾಯಿ, ಮರಳು, ಸೌದೆ, ಸೋಗೆ, ತಿಂಡಿ, ಸಿಹಿ, ಏನೆಲ್ಲ ರೂಪ ತಾಳಿ, ಏನೇನೋ ರೂಪದಲ್ಲಿ ಪ್ರೀತಿ ಹಿಂತಿರುಗಿ ಬಂತು. ಕೈ ಕುಲುಕಿತು. ಊರು ಬಿಡುವಾಗ ಊರೇ ನಮ್ಮ ತೌರುಮನೆಯಾಯಿತು. ಇಷ್ಟಲ್ಲದೆ ಮಾತಿಗೆ ನಿಲುಕದ ಅನೇಕ ತಥ್ಯಗಳು ಗೋಚರವಾದವು.

ಸ್ನೇಹಿತ ಹೇಳುತ್ತಿರುತ್ತಾನೆ. ನಾವೆಲ್ಲ ಸಮಾಜ'ವಾದಿ'ಗಳು ಮಾತ್ರ. ಏಕೆಂದರೆ ವಾದ ಮಾಡುವುದಷ್ಟೇ ನಮ್ಮ ಕೆಲಸ. ಹೌದು ನಿಜ. ನಾವು ಮನುಷ್ಯರು ನಮ್ಮ ಆದರ್ಶ, ಅನಿಸಿಕೆ, ವಿಚಾರಗಳ ಸಾರ್ಥಕತೆಯನ್ನು ಮಾತಿನ ಮೂಲಕವೇ ಅನುಭವಿಸುವ ಒಂದು ಭ್ರಮಾಲೋಕವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ. ಅದರಿಂದ ಆಚೆ, ಎಲ್ಲ ವಾದಗಳ ವ್ಯಾಖ್ಯೆಗಳಿಂದ ಆಚೆ ಜೀವನವಿದೆ ಎಂಬುದು ಸರ್ವಥಾ ಸತ್ಯ. ಜಾರ್ಜ್ ಆರ್ವೆಲ್ ಹೇಳುವಂತೆ ಸಮಾಜದ ರಚನೆಯ ಬೇರೆ ಬೇರೆ ಸ್ತರಗಳಲ್ಲಿ 'ಎಲ್ಲರೂ ಸಮಾನರು, ಕೆಲವರು ಹೆಚ್ಚು ಸಮಾನರು' ಎಂಬುದು ರೂಢಿಯಲ್ಲಿದೆ ಅನಿಸುತ್ತದೆ. ಅದರ ಸ್ವರೂಪವೇ ಹಾಗಿರಬಹುದು. ಬಿಡಿ, ಆದ್ದರಿಂದ ಇಡೀ ಸಮಾಜವನ್ನು ನನ್ನ ಮನೆ ಎಂದು ನೋಡುತ್ತಾ ಯಾವ ಸಮಾನತೆಗೂ ಒಳಗಾಗದೆ ಸಣ್ಣ ಸಣ್ಣ ಆಪ್ತತೆಗಳ ಮೂಲಕ ಸಮಾಜದಲ್ಲಿ ನೆಮ್ಮದಿಯನ್ನು ಉಂಟುಮಾಡಲು ಪ್ರಯತ್ನಿಸುವುದು ವ್ಯಕ್ತಿಗತ ಮಟ್ಟದಲ್ಲಿ ಪ್ರತಿಯೊಬ್ಬರೂ ಮಾಡಬಹುದಾದ ಪ್ರಯತ್ನ ಎನ್ನುವುದು ನನ್ನ ತಿಳುವಳಿಕೆ.




**(ಇಂಗ್ಲಿಷ್ ಸಾಹಿತ್ಯದ ಸ್ನಾತಕೋತ್ತರ ಪದವೀಧರರಾದ ಸುಘೋಷ್ ಈಗ ಹೆಗ್ಗೋಡಿನಲ್ಲಿ ನೆಲೆಸಿದ್ದು ಕರಕುಶಲ ಸಾಮಗ್ರಿಗಳ ತಯಾರಿಕೆ ಮತ್ತು ಸಾಮುದಾಯಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ)**

---

**ಹಿಂದಿನ ಪುಟದಿಂದ)**

ನಾಲ್ಕು ವರ್ಷ ಅದರ ಉಪಾಧ್ಯಕ್ಷ ಪದವಿಯನ್ನೂ ಅಲಂಕರಿಸಿದ್ದರು. ಇಲ್ಲಿಗೆ ಶಾಲಾ ಕಾಲೇಜುಗಳ ಅಗತ್ಯವನ್ನು ಮನಗಂಡು ಅವುಗಳನ್ನು ಪ್ರಾರಂಭಿಸುವಲ್ಲಿ ಶ್ರಮವಹಿಸಿದ್ದಲ್ಲದೆ ಆಡಳಿತ ಮಂಡಳಿಗಳಲ್ಲಿಯೂ ಇದ್ದು ಬೆಳೆಸಿದ್ದಾರೆ.

ಹತ್ತು ಮಕ್ಕಳ ತುಂಬು ಕುಟುಂಬ ನಿರ್ವಹಿಸುತ್ತಲೇ ಸಾರ್ವಜನಿಕರ ಸುಖಕ್ಕಾಗಿಯೂ ಶ್ರಮವಹಿಸಿ ದಣಿದ ಐತಾಳರನ್ನು ಕಡೆಗಾಲದಲ್ಲಿ ದುರ್ಭರವಾದ ಖಾಯಿಲೆಗಳು ಕಾಡಿದವು. ಜೀವನವೆಲ್ಲ ಚಟುವಟಿಕೆಯಿಂದ ಓಡಾಡಿದ ಮನುಷ್ಯ ಕಾಲುಗಳನ್ನೇ ಕಳೆದುಕೊಂಡು ದೀರ್ಘಕಾಲ ಹಾಸಿಗೆ ಹಿಡಿದು ೯೫ರಲ್ಲಿ ಇಹಲೋಕವನ್ನು ತ್ಯಜಿಸಿ ನೆನಪಾಗಿ ಉಳಿದಿದ್ದಾರೆ.



**(ತೀರ್ಥಹಳ್ಳಿಯಲ್ಲಿ ನೆಲೆಸಿರುವ ಜೆ.ಕೆ. ರಮೇಶ್ ನಿವೃತ್ತ ಕನ್ನಡ ಅಧ್ಯಾಪಕರು ಹಾಗೂ ಮಲೆನಾಡಿನ ಜಾನಪದ ತಜ್ಞರೂ ಮತ್ತು ಹಿರಿಯ ಲೇಖಕರೂ ಆಗಿದ್ದಾರೆ)**

## ಸಮಕಾಲೀನ ರಾಜಕೀಯ ಪರ್ಯಾಯದ ಹುಡುಕಾಟದಲ್ಲಿರುವ ಎಸ್.ಆರ್.ಹಿರೇಮಠ್



ಕರ್ನಾಟಕದಲ್ಲಿ ಸಾಮಾಜಿಕ ಹೋರಾಟಗಳಿಗೆ ಇನ್ನೊಂದು ಹೆಸರಾಗಿ ಪ್ರಸಿದ್ಧರಾಗಿರುವವರು ಎಸ್.ಆರ್.(ಸಂಗಯ್ಯ ರಾಚಯ್ಯ) ಹಿರೇಮಠರು. ಕಡುಬಡತನದಲ್ಲಿ ಬಾಲ್ಯವನ್ನು ಕಳೆದು, ತಮ್ಮ ಪ್ರತಿಭೆಯ ಮೂಲಕ ಉನ್ನತ ವಿದ್ಯಾಭ್ಯಾಸ ಮುಗಿಸಿ, ಅಮೆರಿಕಾಗೆ ಹೋಗಿ ಅಲ್ಲಿ ಮತ್ತಷ್ಟು ಉನ್ನತ ಶಿಕ್ಷಣ ಪಡೆದುದಲ್ಲದೆ, ಅಲ್ಲಿ ವಿವಿಧ ಕ್ಷೇತ್ರಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದವರು. ಆದರೆ ಅವರು ಯಾವುದೇ ಹುದ್ದೆಯಲ್ಲಿರಲಿ, ಅವರ ಮನಸ್ಸಿನಲ್ಲಿ ಇದ್ದುದು ತಮ್ಮ ತವರು ದೇಶವಾದ ಭಾರತವೇ; ಅಲ್ಲಿನ ಕಷ್ಟ-ಸುಖಗಳೇ. ತನ್ನ ದೇಶಕ್ಕೆ ಏನಾದರೂ ಒಳ್ಳೆಯದನ್ನು ಮಾಡುವ ತುಡಿತವೇ. ಅದಕ್ಕಾಗಿ ಅಲ್ಲಿನ ಸಮಾನ ಮನಸ್ಕರ ಜೊತೆ ಚರ್ಚೆ, ಅಭ್ಯಾಸ ಮತ್ತು ಅಲ್ಲಿನ ನಾಗರಿಕ ಹಕ್ಕುಗಳ ಹೋರಾಟಗಳಲ್ಲಿ ಅನುಭವ. ಇದೆಲ್ಲದರ ಫಲವಾಗಿ ಒಂದು ದಿನ ಅವರು ಅಮೆರಿಕಾ ಬಿಟ್ಟು ಭಾರತಕ್ಕೆ, ಕರ್ನಾಟಕಕ್ಕೆ ವಾಪಸಾಗಲು ಪ್ರೇರೇಪಿಸಿತು.

೧೯೭೯ರಲ್ಲಿ ಭಾರತಕ್ಕೆ ಮರಳಿದ ಹಿರೇಮಠರು ಹಾವೇರಿ ಜಿಲ್ಲೆ ರಾಣೆಬೆನ್ನೂರು ಬಳಿಯ ಮೆಡ್ಲೇರಿ ಗ್ರಾಮದಲ್ಲಿ ತಮ್ಮ ಕುಟುಂಬದೊಂದಿಗೆ ನೆಲೆನಿಂತರು. ಅದೇ ವರ್ಷ ಧಾರವಾಡದಲ್ಲಿ 'ಭಾರತ ಅಭಿವೃದ್ಧಿ ಸೇವಾ ಸಂಸ್ಥೆ'(ಅಂತಾರಾಷ್ಟ್ರೀಯ) ಎಂಬ ಸರ್ಕಾರೇತರ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಊರಿನ ಸುತ್ತಮುತ್ತಲಿನ ಆಯ್ದ ಹಳ್ಳಿಗಳಲ್ಲಿ ನೈರ್ಮಲ್ಯೀಕರಣ ಮತ್ತು ಸ್ವಯಂಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಿದರು. ಮೂರು ವರ್ಷಗಳಲ್ಲಿ ಈ ಸಂಸ್ಥೆ ಈ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಾಗಿ ನೆದರ್‌ಲ್ಯಾಂಡ್‌ನ ಜ್ಯಾಪ್‌ವ್ಯಾನ್ ಪ್ರಾಗ್ ಪ್ರಶಸ್ತಿ ದೊರಕಿತು.

ಹರಿಹರದ ಪಾಲಿಫೈಬರ್ ಕಾರ್ಖಾನೆ ತನ್ನ ತ್ಯಾಜ್ಯಗಳ ಮೂಲಕ ತುಂಗಭದ್ರಾ ನದಿಯನ್ನು ಕಲುಷಿತಗೊಳಿಸಿ ನದಿಗುಂಟದ ಹಳ್ಳಿ-ಪಟ್ಟಣಗಳ ಜನರ ಆರೋಗ್ಯವನ್ನು ಹದಗೆಡಿಸುತ್ತಿದ್ದುದರ ವಿರುದ್ಧ ಸಾಮುದಾಯಿಕ ಹೋರಾಟ ಆರಂಭಿಸಿದ ಹಿರೇಮಠರು, ಈ ಹೋರಾಟದ ಸವಾಲುಗಳಿಗೆದುರಾಗಿ; ಸಮಾಜ ಪರಿವರ್ತನಾ ಸಮುದಾಯ'ವೆಂಬ ಜನಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಹೋರಾಟದ ಸಿಹಿ-ಕಹಿ ಅನುಭವಗಳೇ ಅವರನ್ನು ತಮ್ಮ ಹೋರಾಟವನ್ನು ಇನ್ನಷ್ಟು ವ್ಯಾಪಕ ಮತ್ತು ಸಾರ್ವತ್ರಿಕಗೊಳಿಸಲು ಪ್ರೇರೇಪಿಸಿತು. ಇದರ ಪರಿಣಾಮವೇ ಹಿರೇಮಠರನ್ನು ರಾಜ್ಯಾದ್ಯಂತ ಮನೆಮಾತನ್ನಾಗಿಸಿದ ಅಕ್ರಮ ಗಣಿ ಹೋರಾಟಕ್ಕೆ ದೂಡಿದ್ದು. ಜನಪರವಾದ ನೀತಿ ಮತ್ತು ಶಾಸನಗಳ ನಿರೂಪಣೆ, ನೈಸರ್ಗಿಕ ಸಂಪತ್ತಿನ ಮೇಲೆ ಆದಿವಾಸಿ ಮತ್ತು ಗ್ರಾಮೀಣರ ಅಧಿಕಾರ, ಪರಿಸರ ಸಂರಕ್ಷಣೆ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಬಲೀಕರಣ ಇವನ್ನು ತನ್ನ ಧ್ಯೇಯಗಳನ್ನಾಗಿ ಹೊಂದಿರುವ ಈ ಸಂಸ್ಥೆ, ಇದಕ್ಕಾಗಿ ಹಿರೇಮಠರು ಸಮಾನ ಮನಸ್ಕರೊಡಗೂಡಿ ಜನಸಂಗ್ರಾಮ ಪರಿಷತ್ ಎಂಬ ವೇದಿಕೆ ರಚಿಸಿಕೊಂಡು ರಾಜ್ಯದಲ್ಲಿ ಭ್ರಷ್ಟಾಚಾರ ಪ್ರಕರಣಗಳ ವಿರುದ್ಧ ಪ್ರಬಲ ಹೋರಾಟಗಳನ್ನೂ ನಡೆಸುತ್ತಾ, ಅಗತ್ಯ ಬಿದ್ದಾಗ ನ್ಯಾಯಾಧೀಶರನ್ನೂ ತರಾಟೆಗೆ ತೆಗೆದುಕೊಳ್ಳುವ ಧೀಮಂತಿಕೆ ಮತ್ತು ನಿರ್ಭೀತಿಗಳನ್ನು ಪ್ರದರ್ಶಿಸಿದ್ದಾರೆ. ರಾಜ್ಯ ಕುಪ್ರಸಿದ್ಧವಾಗಿದ್ದ ಅಕ್ರಮ ಗಣಿಗಾರಿಕೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಲೂಟಿ ಸದ್ಯದಲ್ಲಿ ನಿಯಂತ್ರಣದಲ್ಲಿದ್ದರೆ ಅದರ ಕೀರ್ತಿ ಹಿರೇಮಠರಿಗೇ ಸಲ್ಲಬೇಕು.

ಇಂತಹ ಧೀಮಂತ ಹೋರಾಟಗಾರ ಈಗ ಒಂದು ರಾಜಕೀಯ ಪರ್ಯಾಯ ರೂಪಿಸುವ ಚಿಂತನೆ ನಡೆಸಿದ್ದಾರೆ. ಅದಕ್ಕಾಗಿ ರಾಜ್ಯದ ಇತರ ಜನಪರ ಹೋರಾಟಗಳ ನಾಯಕರೊಂದಿಗೆ *ಜನ ಸಂಗ್ರಾಮ ಪರಿಷತ್* ಒಂದು ಮಾತುಕತೆಗೆ ತೊಡಗಿದೆ. ಅದಕ್ಕಾಗಿ ಇತ್ತೀಚೆಗೆ ಧಾರವಾಡದಲ್ಲಿ ನಡೆದ ಸಭೆಯ ಸಂದರ್ಭದಲ್ಲಿ ನಮ್ಮ ಪತ್ರಿಕೆಗಾಗಿ ಸರ್ಜಾಶಂಕರ ಹರಳಿಮಠ, ಅವರನ್ನು ಸಂದರ್ಶಿಸಿದ್ದಾರೆ. ಈ ಸಂದರ್ಶನ ಮುಖ್ಯವಾಗಿ ಹಿರೇಮಠರ ವ್ಯಕ್ತಿತ್ವವನ್ನು ರೂಪಿಸಿದ ವ್ಯಕ್ತಿ ಮತ್ತು ಶಕ್ತಿಗಳಾರು, ಅವರು ನಡೆದುಬಂದ ಹಾದಿಯ ಸ್ವರೂಪವೇನು, ಅವರ ಮುಂದಿನ ಹಾದಿ ಯಾವುದು ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುವಂತಿದೆ-ಸಂ.

# ಸಮಗ್ರ ಪರಿವರ್ತನೆಯೇ ನಮ್ಮ ಹೋರಾಟದ ಗುರಿ

## ಎಸ್.ಆರ್.ಹಿರೇಮಠ ಅವರೊಂದಿಗೆ ಒಂದು ಸಂದರ್ಶನ

ಸಂದರ್ಶಕರು: **ಸರ್ಜಾಶಂಕರ ಹರಳಿಮಠ**

**ನಿಮ್ಮ ಕುಟುಂಬದ ಮತ್ತು ಬಾಲ್ಯದ ಪರಿಸರ ನೀವು ಇಂದು ಒಬ್ಬ ಹೋರಾಟಗಾರನಾಗಿ ರೂಪುಗೊಳ್ಳಲು ಪ್ರೇರಣೆ ಒದಗಿಸಿತ್ತೇ?**

ನನ್ನ ಕುಟುಂಬ ಮತ್ತು ಬಾಲ್ಯದ ಪರಿಸರದಲ್ಲಿ ಇಂತಹ ಪ್ರೇರಣೆ ಅಷ್ಟೊಂದು ಸ್ಪಷ್ಟವಾಗಿ ಇರಲಿಲ್ಲ. ನಮ್ಮ ತಂದೆಯವರು ಬಾಲ್ಯದಲ್ಲಿಯೇ ತೀರಿಹೋದರು. ಆನಂತರ ತುಂಬ ಬಡತನದ ಕಷ್ಟದ ದಿನಗಳು ಶುರುವಾದವು. ನಮ್ಮ ತಾಯಿಯವರು ನಮ್ಮನ್ನು ಪ್ರವಚನಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ವಿಶೇಷವಾಗಿ ಶರಣರ ಜೀವನದ ಪರಿಕಲ್ಪನೆ, ಯಾವ ರೀತಿಯ ಜೀವನ ಮಾಡಬೇಕು ಎನ್ನುವ ಮಹತ್ವದ ವಿಷಯಗಳು ನನಗೆ ಬಾಲ್ಯದಲ್ಲಿಯೇ ಸಿಕ್ಕಿತು. ಇದೊಂದು ನನ್ನ ಬಾಲ್ಯದಲ್ಲಿ ಸಿಕ್ಕ ಅಪೂರ್ವ ಕೊಡುಗೆ.

ಆಗ ನಮಗೆ ಪ್ರವಚನ ಕೊಡುತ್ತಿದ್ದವರು ಬಂತನಾಳ ಸ್ವಾಮೀಜಿ ಎಂಬುವರು.. ಅವರು ಸಾರ್ವಜನಿಕ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು. ಅವರು ಅನ್ನ ದಾಸೋಹ, ಶಿಕ್ಷಣಸಂಸ್ಥೆಗಳ ಮೂಲಕ ವಿದ್ಯೆಯನ್ನು ನೀಡುವ ಕೆಲಸವನ್ನು ಬಹಳ ಉತ್ಕೃಷ್ಟವಾಗಿ ಮಾಡುತ್ತಿದ್ದರು. ಇನ್ನೊಬ್ಬರು ಮಲ್ಲಿಕಾರ್ಜುನ ಸ್ವಾಮೀಜಿ ಅನ್ನುವವರು. ಸಿದ್ದೇಶ್ವರ ಸ್ವಾಮೀಜಿ ಅವರ ಗುರುಗಳು. ಅವರು ತುಂಬ ಮೇಧಾವಿ ಸ್ವಾಮೀಜಿ. ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳು ಹೇಳಿರಬಹುದಾದಂತೆ ತತ್ವಜ್ಞಾನವನ್ನು ಭಗವದ್ಗೀತೆ, ಶೂನ್ಯಸಂಪಾದನೆ, ಸಿದ್ಧಾಂತ ಶಿಖಾಮಣಿಗಳ ಮೂಲಕ ಹೇಳುತ್ತಿದ್ದರು. ಇದರ ಪ್ರಭಾವ ನನ್ನ ಮೇಲೆ ಬಹಳ ಆಯಿತು. ಅದರಿಂದ ನಾವು ಮನುಷ್ಯರಾಗಿ ಜೀವನದ ಅರ್ಥ ತಿಳಿದುಕೊಳ್ಳಬೇಕು ಎನ್ನುವ ಬಯಕೆ ಮೂಡಿತು. ಶರಣರು ಏನು ಹೇಳುತ್ತಾರೆ, 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಎನ್ನುವ ನೀತಿ ನನ್ನ ಜೀವನದ ದಾರಿ ದೀಪವಾಯಿತು. ಆಗ ಜೀವನದಲ್ಲಿ ಇವು ನೈತಿಕ ಅಡಿಪಾಯ ಹಾಕಿತು ಅನ್ನಿಸುತ್ತದೆ. ಇದು ಇದ್ದಾಗ ಯಾರು ಏನು ಮಾಡಿದರೂ ಹೆದರುವ ಅವಶ್ಯಕತೆ ಇಲ್ಲ. ಶರಣರು ಹೇಳಿದ ಸಮಾನತೆ, ಪರಸ್ಪರ ಗೌರವ ಇದು ನನಗೆ ಹೆಚ್ಚು ಪ್ರಭಾವ ಬೀರಿದ ಅಂಶಗಳು.

**ನಿಮ್ಮ ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ ಎಲ್ಲೆಲ್ಲಿ ನಡೆಯಿತು?**

ನಾನು ಮೊದಲು ಹೋಗಿದ್ದು ಬಿಜಾಪುರದ ಷಹಪುರ್ ಪೇಟೆಯಲ್ಲಿನ ೧೧ನೇ ನಂಬರ್ ಶಾಲೆಗೆ. ನಂತರ ೫ನೇ ನಂಬರ್ ಶಾಲೆಗೆ. ಅವಾಗೆಲ್ಲ ಮುನ್ಸಿಪಾಲ್ಟಿ ಶಾಲೆಗಳನ್ನು ಹೀಗೆ ನಂಬರ್‌ಗಳಲ್ಲಿ ಹೇಳುತ್ತಿದ್ದರು. ಪ್ರೌಢ ಶಿಕ್ಷಣ ಸಿದ್ದೇಶ್ವರ ಹೈಸ್ಕೂಲ್‌ನಲ್ಲಿ ಆಯಿತು. ಇದನ್ನು ಬಂತನಾಳ ಸ್ವಾಮೀಜಿ ಅವರು ನಡೆಸ್ತಿದ್ದರು. ಬಿ.ಎಲ್.ಡಿ ಸಂಸ್ಥೆಯಲ್ಲಿ ಎಸ್.ಎಸ್.ಸಿ ಮುಗಿಸಿದೆ. ಮೊದಲಿನಿಂದಲೂ ಶಾಲೆಯಲ್ಲಿ ನನ್ನ ಫಲಿತಾಂಶ ಉತ್ತಮವಾದುದರಿಂದ ಎಸ್.ಎಸ್.ಸಿ ಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ, ಬೋರ್ಡ್‌ಗೆ ಸೆಕೆಂಡ್ ಸ್ಥಾನ



ಸರ್ಜಾಶಂಕರರೊಂದಿಗೆ ಮಾತುಕತೆಯಲ್ಲಿ ಎಸ್. ಆರ್. ಹಿರೇಮಠ ಅವರು

ಬಂತು. ಇದರಿಂದ ನ್ಯಾಷನಲ್ ಮೆರಿಟ್ ಸ್ಕಾಲರ್‌ಷಿಪ್ ದೊರಕಿ ಶಿಕ್ಷಣಕ್ಕೆ ತುಂಬ ತುಂಬ ಸಹಾಯ ಆಯ್ತು.

ಈ ಸಮಯದಲ್ಲಿ ಸಾಹಿತಿಗಳಾದ ಶಿವರಾಮ ಕಾರಂತರು ಅಲ್ಲಿನ 'ಅನ್ಯೂಯಲ್ ಸೋಷಿಯಲ್ ಗ್ಯಾದರಿಂಗ್'ಗೆ ಬಂದಿದ್ದರು. ಅವರು ಅಲ್ಲಿ ಮಾತನಾಡುತ್ತ ನಾವು ಜವಾಬ್ದಾರಿ ಮನುಷ್ಯರಾಗಿ ಜೀವನ ಮಾಡಿದ್ರೆ, ನಾವು ಮಾತೃಋಣ, ಪಿತೃಋಣ ಹೇಗೆ ತೀರಿಸಬೇಕೋ, ಹಾಗೆ ಸಮಾಜದ ಋಣ ತೀರಿಸಬೇಕು. ಈ ಸಮಾಜದಿಂದ ನಾವು ಏನು ಪಡೀತೇವೆ ಅದನ್ನು ತಿರುಗಿ ಕೊಟ್ರೆ ಅದರಿಂದ ಮುಂದಿನ ಪೀಳಿಗೆಯವರಿಗೆ ಕೂಡ ಬೆಳೀಲಿಕ್ಕೆ ಅವಕಾಶವಾಗ್ತದೆ. ನಾವು ಪಡೆದಿದ್ದನ್ನು ಮರಳಿ ಕೊಡುವ ಮಾನವೀಯ ಪ್ರವೃತ್ತಿ ಬಹಳೇ ಮಹತ್ವದ ವಿಷಯ ಅಂತ ಅವರು ಹೇಳಿದ್ರು. ಇದು ನನ್ನ ತಲೇಲಿತ್ತು.

**ನೀವು ಇಂಜಿನಿಯರಿಂಗ್ ಮಾಡಿದ್ದು ಯಾವ ಕಾಲೇಜಿನಲ್ಲಿ ಸರ್?**

ಎಸ್.ಎಸ್.ಸಿ ಆದ ಕೂಡಲೇ ನಾನು ಇಲ್ಲೇ ಇಳಕಲ್ ಕಾಲೇಜಿಗೆ ಹೋಗಿ ಬರ್ತಾ ಇದ್ದೆ. ಮುಂದೆ ಏನು ಮಾಡಬೇಕು ಅನ್ನೋ ಬಗ್ಗೆ ಎಳ್ಳಷ್ಟೂ ಏನೂ ತಿಳಿದಿರ್ಲಿಲ್ಲ. ಮನೆತನದ ಕೆಲವು ಸಮಸ್ಯೆಗಳು ಇರೋದ್ರಿಂದ ನಾನು ಹಳ್ಳಿಗೆ ಹೋಗ್ಲಿಲ್ಲ. ತಿರುಗಿ ಬಂದಾಗ ಅವರು ನನಗೆ ಫ್ರೀ ಸೀಟ್ ಕೊಟ್ಟು ತುಂಬಾ ಚೆನ್ನಾಗಿ ನೋಡ್ಕೊಂಡ್ರು. ಇಲ್ಲೇ ಪಿ.ಯು.ಸಿ ಮಾಡ್ದೆ. ಯುನಿವರ್ಸಿಟಿಗೆ ಮೊದಲ ರ್‍ಯಾಂಕ್ ಬಂದಿದ್ದರಿಂದ ಅವರು ತುಂಬಾ ಸಂತೋಷ ಪಟ್ಟರು. ಆನಂತರ ನಾನು ಇಂಜಿನಿಯರಿಂಗ್ ಕಾಲೇಜಿಗೆ ಬಂದೆ. ಪಾವಟೆ ಅಂತ ವೈಸ್ ಚಾನ್ಸಲರು, ಶಿಕ್ಷಣ ತಜ್ಞರು ಕರ್ನಾಟಕ ಯುನಿವರ್ಸಿಟೀಲಿ. ಇಲ್ಲಿ ಒಂದು ಸ್ಕಾಲರ್ ಶಿಪ್ ನನಗೆ ಸಿಕ್ಕಿತು. ಈ ಭಾಗದಲ್ಲಿ ಒಂದೇ ಇಂಜಿನಿಯರಿಂಗ್ ಕಾಲೇಜು ಹೋಮರೆಡ್ಡಿ ಕಾಲೇಜು ಅಲ್ಲಿಗೆ ಸೇರಿದೆ.

**ವಿದ್ಯಾಭ್ಯಾಸದ ಸಂದರ್ಭದಲ್ಲಿಯೇ ಈ ಸಮಾಜಕ್ಕೆ ಏನಾದರೂ ಮಾಡಬೇಕು ಎನ್ನುವ ಹಂಬಲ ನಿಮ್ಮಲ್ಲಿ ಮೂಡಿತ್ತೇ?**

ಜೀವನವನ್ನು ಸರಿಯಾಗಿ ನಿರ್ವಹಿಸಬೇಕು ಎನ್ನುವ ಆಲೋಚನೆ ಇತ್ತೇ ವಿನಹ ಸಮಾಜ ಬದಲಾವಣೆಯ ಬಗ್ಗೆ ವಿಶೇಷವಾಗಿ ಯೋಚಿಸಿರಲಿಲ್ಲ. ಯಾಕೆಂದ್ರೆ ಆಗ ತುಂಬಾ ಬಡತನ, ಸಮಸ್ಯೆಗಳು ಇದ್ದಿದ್ದರಿಂದ, ಸೋದರಿಯ ಮದುವೆ ಮಾಡಬೇಕಿದ್ದರಿಂದ, ನಮ್ಮ ಕುಟುಂಬದ ಆಸ್ತಿಯ ವ್ಯಾಜ್ಯಗಳಿಂದಾಗಿ ಇವುಗಳಲ್ಲೇ ನನ್ನ ಬಹಳಷ್ಟು ಸಮಯ ಹೋಗುತ್ತಿತ್ತು. ಹೀಗಿದ್ದಾಗ ಅಷ್ಟು ಸ್ಪಷ್ಟವಾಗಿ ಈ ಬಗ್ಗೆ ನಾನು ಯೋಚನೆ ಮಾಡಿರ್ಲಿಲ್ಲ. ಆದರೆ ಮನಸ್ಸಿನಲ್ಲಿ ಜವಾಬ್ದಾರಿಯ ಜೀವನ ಎಂದರೆ ಏನಾದ್ರೂ ಸಮಾಜಕ್ಕೆ ಕೊಡಬೇಕು ಅಂತ ಕಾರಂತರು ಹೇಳಿದ್ರೋ ಅದು ಅಪ್ಪಟ ಸತ್ಯ ಅನ್ನಿಸಿತ್ತು. ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವ ಉತ್ಕಟ ಇಚ್ಛೆ ಇತ್ತು.

**ಈ ಸಮಾಜ ಪರಿವರ್ತನೆ ಬಗ್ಗೆ ನಿಮ್ಮ ಒಲವು ಆರಂಭವಾದದ್ದು ಯಾವಾಗ?**

ನಮ್ಮ ಚಳವಳಿ ಅಮೆರಿಕದಲ್ಲಿ ಶುರುವಾಯಿತು. ಇಂಜಿನಿಯರಿಂಗ್ ಮತ್ತು ಮ್ಯಾನೇಜ್ ಮೆಂಟ್ ಮಾಸ್ಟರ್ ಇನ್ ಸೈನ್ಸ್ ನಂತರ ಎಂ.ಬಿ.ಎ ಮಾಡಿದ್ದೆ. ಅಲ್ಲಿ ೧೧ ವರ್ಷ ಇದ್ದೆ, ೧೦ ವರ್ಷ ಕೆಲಸ ಮಾಡಿದ್ದೆ. ಅವಾಗ ತಿರುಗಿ ಭಾರತಕ್ಕೆ ಬರಬೇಕು. ಕೈಗಾರಿಕೆ ಆರಂಭ ಮಾಡಬೇಕು, ಸಮಾಜದ ಕೆಲಸಗಳಿಗೆ ಹಣ ಕೊಡಬೇಕು. ಹಳ್ಳಿಗಳಿಗೆ ಒಳ್ಳೆಯ ಶಿಕ್ಷಣದ ಅವಕಾಶಗಳನ್ನು ಸೃಷ್ಟಿಸಬೇಕು. ಆರೋಗ್ಯ ಕ್ಷೇತ್ರವನ್ನು ಸುಧಾರಿಸಬೇಕು ಈ ರೀತಿಯ ಆಲೋಚನೆಗಳಿದ್ದವು. ಆದರೆ ನಾನೇ ಇದರಲ್ಲಿ ಫುಲ್ ಟೈಮರ್ ಆಗಿರ್ತೀನಿ ಅನ್ನೋದಿರಲಿಲ್ಲ.

**ಅಂದರೆ ನಿಮ್ಮ ಹೆಚ್ಚಿನ ಕಾಳಜಿ ಇದ್ದದ್ದು ಶಿಕ್ಷಣ ಮತ್ತು ಆರೋಗ್ಯದ ಮೇಲೆ?**

ಶಿಕ್ಷಣದಿಂದ ನನಗೆ ಒಳ್ಳೆಯದಾಯಿತು. ನನ್ನ ಅನುಭವದ ಆಧಾರದ ಮೇಲೆ. ಇದಕ್ಕೂ ಮೊದಲು ನಾನೂ, ನಮ್ಮ ತಾಯಿಯವರು ಚಿಕ್ಕಂದಿನಲ್ಲಿ ಹಳ್ಳಿಗೆ ಹೋದಾಗ ಈ ಕುಡಿಯೋ ನೀರಿನದು ಬಹಳಾ ದೊಡ್ಡ ಸಮಸ್ಯೆಯಿತ್ತು. ಅಲ್ಲೆಲ್ಲಾ ಸವಳು ನೀರು. ಒಂದೂವರೆ ಕಿಲೋಮೀಟರ್ ದೂರದ ಹಳ್ಳಕ್ಕೆ ಹೋಗಿ, ಅಲ್ಲಿ ವರ್ದಿ ಅಂತಾರೆ ಅದರಿಂದ ನೀರು ತರಬೇಕಿತ್ತು. ಇದೆಲ್ಲಾ ಸಮಸ್ಯೆಗಳು ಕಂಡಿದ್ದು. ನೂರಕ್ಕೆ ಎಂಬತ್ತರಷ್ಟು ರೋಗಗಳು ಬರೋದು ನೀರಿನಿಂದಲೇ.

**ಸಾಮಾನ್ಯವಾಗಿ ಮದುವೆಯಾಗುವವರೆಗೂ ಸಮಾಜಕ್ಕಾಗಿ ಏನಾದರೂ ಮಾಡಬೇಕು ಎನ್ನುವ ಆದರ್ಶ ಇರುತ್ತದೆ. ನಂತರ ಕುಟುಂಬದ ಜವಾಬ್ದಾರಿಗಳಿಂದಾಗಿಯೋ ಅಥವಾ ಇತರ ಕಾರಣಗಳಿಗಾಗಿಯೋ ನಮ್ಮ ಆದ್ಯತೆಗಳು ಬದಲಾಗುತ್ತವೆ. ನಿಮ್ಮ ಸಾಮಾಜಿಕ ಚಟುವಟಿಕೆಗಳಿಗೆ, ಹೋರಾಟಗಳಿಗೆ ಮದುವೆ ನಂತರ ನಿಮ್ಮ ಕುಟುಂಬದ ಪ್ರತಿಸ್ಪಂದನೆ ಹೇಗಿತ್ತು?**

ನಾನು ಕಾಮನ್ ಸ್ಕೂಲ್‌ನಲ್ಲಿ ಕಲಿತವನಾದ್ದರಿಂದ ಪರಸ್ಪರ ಒಬ್ಬರಿಗೆ ಒಬ್ಬರು ಸಹಾಯ ಮಾಡುವುದು, ಪರಸ್ಪರ ವಿಶ್ವಾಸ, ಗೆಳೆತನದ ಮಹತ್ವ ಇವನ್ನೆಲ್ಲ ನಾನು ಆಗಲೇ ಕಲಿತಿದ್ದೆ. ಇಂಜಿನಿಯರಿಂಗ್ ಮುಗಿಸಿ ಒಂದು ವರ್ಷ ಇಲ್ಲೇ ಅಧ್ಯಾಪಕನಾಗಿದ್ದು ಅಮೆರಿಕಕ್ಕೆ ಹೋದೆ. ಅಲ್ಲಿ ಹೋದ ಸಂದರ್ಭದಲ್ಲಿ ಫೆಡರೇಷನ್ ಆಫ್ ಇಂಡಿಯಾ ಸ್ಟೂಡೆಂಟ್ ಅಸೋಸಿಯೇಷನ್ ಆಫ್ ಅಮೇರಿಕದಲ್ಲಿ ಕಾರ್ಯದರ್ಶಿಯಾಗಿದ್ದೆ, ನಂತರ ಅಧ್ಯಕ್ಷನಾದೆ.

ಅವಾಗ ಏನು ವಿಚಾರ ಬಂತು ಅಂದರೆ ನಮ್ಮ ಭಾರತ ದೇಶದ ಪರಿಸ್ಥಿತಿ ಹೇಗಿದೆ, ಪಾಶ್ಚಾತ್ಯರ ಪರಿಸ್ಥಿತಿ ಹೇಗಿದೆ? ಇಲ್ಲಿ ಯಾಕೆ ಅಲ್ಲಿಗಿಂತ ವಿಭಿನ್ನವಾದ ಪರಿಸ್ಥಿತಿ ಇದೆ? ಇವೆಲ್ಲ ಚಿಂತನೆ ಮಾಡಿದ ನಂತರ ನಮ್ಮ ದೇಶ ಸುಧಾರಿಸಲು ನಾವೇನಾದರೂ ಮಾಡಬೇಕು ಅಂತ ವಿಚಾರ ಬಂತು. ನನ್ನ ಚಿಂತನೆ ಹೀಗಿರೋದ್ರಿಂದ ಇಂತಹ ಆಸಕ್ತಿಯುಳ್ಳ ಜೀವನ ಸಂಗಾತಿಯನ್ನು ಆರಿಸಿಕೊಳ್ಳೊವಂತಹ ಅವಕಾಶ ನನಗೆ ಬಂತು. ಅಲ್ಲಿರುವ ಒಬ್ಬರು ಆಫ್ರಿಕಾ ಖಂಡದ ಪಶ್ಚಿಮ ಭಾಗದಲ್ಲಿ ಸಿರಿಲಿಯೋನ್ ಅನ್ನುವ ಚಿಕ್ಕ ದೇಶದಲ್ಲಿ ಎರಡು ವರ್ಷ ಶಿಕ್ಷಕಿಯಾಗಿ ಹಳ್ಳಿಯಲ್ಲಿ ಸೇವೆ ಸಲ್ಲಿಸಿದ್ದರು. ಬೇರೊಂದು ಸಂಸ್ಕೃತಿಯಲ್ಲಿ, ಅಲ್ಲಿನ ಜೀವನ ಶೈಲಿಗೆ ಹೊಂದಿಕೊಂಡು ಎರಡು ವರ್ಷ ಅಲ್ಲಿರುವುದು ಸಣ್ಣ ಸಂಗತಿಯಲ್ಲ. ಅಂತಹವರೊಬ್ಬರು ಸಿಕ್ಕಿದ್ದರಿಂದ, ಅವರಿಗೂ ಕೂಡ ಜೀವನದಲ್ಲಿ ಕೂಡಿ ಏನಾದರೂ ಕೆಲಸ ಮಾಡಬೇಕು ಎನ್ನುವ ಬಯಕೆ ಇದ್ದಿದ್ದರಿಂದ ನಾವು ಲಗ್ನ ಆಗಬೇಕು ಎಂದು ನಿರ್ಧರಿಸಿದೆವು. ಈ ನಿರ್ಧಾರಕ್ಕೆ ಬರುವ ಮೊದಲೇ ಭಾರತಕ್ಕೆ ಮರಳಿ ಬರುವುದರ ಬಗ್ಗೆ ಚರ್ಚಿಸಿದೆವು. ಭಾರತಕ್ಕೆ ಬರಲು ಅವರಿಗೂ ಆಸಕ್ತಿ ಇದ್ದಿದ್ದರಿಂದ ತುಂಬಾ ಅನುಕೂಲವಾಯ್ತು.

ಜೀವನದಲ್ಲಿ ಅನೇಕ ಅವಕಾಶಗಳು ಅನಿರೀಕ್ಷಿತವಾಗಿ ಬರುತ್ತವೆ. ನಾನೊಬ್ಬ ಇಂಜಿನಿಯರು ಜೊತೆಗೆ ಮ್ಯಾನೇಜಮೆಂಟ್ ಸರ್ವಿಸಸ್‌ನ ಬಗ್ಗೆ ನಾನು ರಿಸರ್ಚ್ ಮಾಡಿದ್ದೀನಿ. ಅವರು ಸೋಷಿಯಲ್ ವರ್ಕ್‌ನಲ್ಲಿ ಮಾಸ್ಟರ್ ಡಿಗ್ರಿ ಮಾಡಿದ್ದರು. ಈ ಸೋಷಿಯಲ್ ವರ್ಕ್ ಸಮಾಜದಲ್ಲಿ ಅವಶ್ಯವಾಗಿದೆ. ಸಾಕ್ರಟೀಸನ ಕಾಲದಿಂದ ಸಮಾನತೆ, ಸ್ವಾತಂತ್ರ್ಯ ಎಲ್ಲಾ ಮಾತನಾಡುತ್ತೇವೆ. ಆದರೆ ವ್ಯವಹಾರಿಕವಾಗಿ ಸಮಾಜದಲ್ಲಿ ಇದು ಹೀಗೆ ಇರೋದಿಲ್ಲ. ಸಮಾಜದಲ್ಲಿ ಯಾರಿಗೆ ಅನ್ಯಾಯ ಆಗಿದೆ, ಕನಿಷ್ಠ ಅವರಿಗೆ ಮೂಲಭೂತ ಅವಶ್ಯಕತೆಗಳನ್ನು ದೊರಕಿಸಿಕೊಡಬೇಕು ಎನ್ನುವ ಅರಿವು ಅವರಿಗೆ ಇತ್ತು. ನಮ್ಮಿಬ್ಬರ ವಿಚಾರಗಳು ಪೂರಕವಾಗಿದ್ರಿಂದ ಒಳ್ಳೆಯದಾಯಿತು.

ನಮ್ಮ ತಾಯಿಯವರು ತುಂಬ ಮಹತ್ವದ ಪಾತ್ರ ವಹಿಸಿದ್ದರಿಂದ ನಮ್ಮ ಮದುವೆ ಸಾಧ್ಯವಾಯಿತು. ನಮ್ಮ ತಾಯಿಯವರು ನಮ್ಮ ಲಗ್ನದ ವಿಚಾರದಲ್ಲಿ ಎರಡು ಕಂಡಿಷನ್‌ಗಳನ್ನು ಹಾಕಿದ್ರು. ಒಂದು ಇಲ್ಲಿ ಅಂದ್ರೆ ಭಾರತದಲ್ಲಿ ಲಗ್ನ ಮಾಡ್ಕೊಳ್ಳಬೇಕು. ಎರಡನೆಯದು, ನಾನು ಮದುವೆ ಆಗೋರು ಲಿಂಗಾಯಿತ ಧರ್ಮಕ್ಕೆ ಬರಬೇಕು ಅಂತ. ಆದ್ರೆ ನನಗೆ ಈ ಧರ್ಮಗಳಲ್ಲೆಲ್ಲ ನಂಬಿಕೆ ಇರಲಿಲ್ಲ. ಜೀವನವನ್ನು ಜವಾಬ್ದಾರಿಯುತವಾಗಿ ಮಾಡಿಕೊಂಡು ಹೋದ್ರೆ ಸಾಕು ಎನ್ನುವುದು ನನ್ನ ನಂಬಿಕೆ. ಇದನ್ನೇ ನಮ್ಮ ಶರಣರು ಹೇಳಿದ್ದು. ಇದನ್ನೆಲ್ಲ ನಾನು ತಾಯಿಗೆ ಹೇಳಿದೆ. ಅದಕ್ಕೆ ಅವರು ನಿನಗೆ ಇದನ್ನೆಲ್ಲ ಯಾರು ಭಾಷಣ ಮಾಡು ಅಂತ

**ನನಗೆ ಖಾಸಗಿ ಆಸ್ತಿ ಮಾಡೋಕೆ ಅವಾಗಲೂ ಆಸಕ್ತಿ ಇರಲಿಲ್ಲ, ಈಗಲೂ ಇಲ್ಲ. ನಮ್ಮದೇನಿದೆ ಅದನ್ನೆಲ್ಲ ಸಮಾಜಕ್ಕೆ ಕೊಟ್ಟು ಹೋಗೋದು ಇದೆ. ಪೂರ್ವಾರ್ಜಿತ ಆಸ್ತೀನೂ ನಾನು ಯಾವುದೂ ಇಟ್ಕೊಂಡಿಲ್ಲ.**

ಹೇಳಿದ್ರು, ನಾಳೆ ನನ್ನ ಸೊಸೆ ಆಗೋಳಿಗೆ ನನ್ನ ವಿಚಾರ ಹೀಗಿದೆ ಅಂತ ತಿಳಿಸು, ನಾನು ಅವಳೂ ಮಾತಾಡ್ತೀವಿ, ನೀನ್ಯಾಕೆ ಮಧ್ಯ ಬರ್ತೀಯ ಅಂತ ಕೇಳಿದ್ರು. ನನ್ನ ಕೈಹಿಡಿಯಲಿದ್ದ ಮೆಫಿಸ್ ಅವರಿಗೆ ಅಮ್ಮನ ವಿಚಾರ ತಿಳಿಸಿದೆ. ಆಗ ಅವರು 'ಏನಿದು ಲಿಂಗಾಯತ ಧರ್ಮ?' ಅಂತ ಕೇಳಿದ್ರು. ಅದಕ್ಕೆ ನಾನು ಹಿಂದೂ ಧರ್ಮದಲ್ಲಿ ಏನು ಗಂಡು–ಹೆಣ್ಣು ಅಂತ ಭೇದ ಇದೆ, ಆ ಜಾತಿ ಈ ಜಾತಿ ಅಂತ ಭೇದಭಾವ ಇದೆ ಇದನ್ನು ಹನ್ನೆರಡನೇ ಶತಮಾನದಲ್ಲಿ ಶರಣರು ಪ್ರತಿಭಟಿಸಿ ಹೊಸ ಧರ್ಮ ಹುಟ್ಟುಹಾಕಿದರು. ಕ್ರಿಶ್ಚಿಯಾನಿಟಿಯಲ್ಲಿ ಪ್ರೋಟೆಸ್ಟಂಟರಿದ್ದಾರಲ್ಲ ಹಾಗೆ ಅಂತ ಅಂದೆ. ಅವರು ಒಂದು ವಾರ ವಿಚಾರ ಮಾಡಿ ನಾವು ಜೀವನದಲ್ಲಿ ಹೇಗೆ ಜವಾಬ್ದಾರಿಯಿಂದ ನಡೀತೇವೆ ಹಾಗೆ ಆ ಧರ್ಮದ ತಿರುಳಿದ್ರೆ ನನಗೇನೂ ಅಭ್ಯಂತರ ಇಲ್ಲ ಎಂದು ಹೇಳಿದರು. ನಾವು ಭಾರತಕ್ಕೆ ಬಂದು ಡಿಸೆಂಬರ್ ೭೨ರಲ್ಲಿ ಹುಬ್ಬಳ್ಳಿನಲ್ಲಿ ಮದುವೆಯಾದ್ವಿ.

**ನಿಮ್ಮನ್ನು ಈಗ ನಾವು ನೋಡ್ತಾ ಇರೋದು ಭ್ರಷ್ಟಾಚಾರದ ವಿರುದ್ಧದ ಐಕಾನ್ ಆಗಿ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕು ಎನ್ನುವ ಚಿಂತನೆ ನಿಮ್ಮಲ್ಲಿ ಹೇಗೆ ಬಂತು?**

ನಾವೇನಾದ್ರೂ ಭಾರತದಲ್ಲಿ ಮಾಡಬೇಕು ಅಂತ ೧೯೭೧ ರಲ್ಲಿ ತೀವ್ರವಾಗಿ ಅನ್ನಿಸತೊಡಗಿತು. ಅಲ್ಲಿ ಶಿಕ್ಷಣದ ವೆಚ್ಚ ತುಂಬ ಕಡಿಮೆ. ಫೀಜು ವಗ್ಯೆರೆ ಅಷ್ಟೇನೂ ಇರಲಿಲ್ಲ. ಇದು ಸಮಾಜದ ದೊಡ್ಡ ಕೊಡುಗೆ. ಅವಾಗ ಭಾರತದ ಶಿಕ್ಷಣಕ್ಕೆ ನಾವು ಪಡೆದದ್ದನ್ನು ತಿರುಗಿ ಕೊಡಬೇಕು ಎನ್ನುವ ಚಿಂತನೆ ಮಾಡ್ತಿದ್ವಿ. ಅವಾಗ ಒಬ್ಬರು ಪಿ.ಕೆ ಮೆಹ್ತಾ ಅಂತ. ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ, ಬರ್ಕಿಲಿ ಒಳಗೆ ಪ್ರೊಫೆಸರ್ ಆಗಿ ಬಂದಿದ್ರು. ಅವರು ಐಐಟಿ ಕಾನ್ಪುರದಲ್ಲಿ ಒಂದು ವರ್ಷ ವಿಸಿಟಿಂಗ್ ಪ್ರೊಫೆಸರ್ ಆದ್ರು. ಅವರು ಒಂದು ಸಂಸ್ಥೆ ಕಟ್ಟಿದಾರೆ. 'ಫ್ರೆಂಡ್ ಫಾರ್ ರ್‍ಯಾಪಿಡ್ ರೂರಲ್ ಅಡ್ವಾನ್ಸ್‌ಮೆಂಟ್ ಆಫ್ ಇಂಡಿಯಾ' ಅಂತ. ಅವರು ಇಬ್ಬರ ಹೆಸರು ಕೊಟ್ಟಿದ್ದರು. ಒಬ್ಬರು ದುನಿರಾಯ್ ಅನ್ನುವವರು. ಇನ್ನೊಬ್ಬರು ಜಾವೇದ್ ಅಹ್ಮದ್ ಅಂತ. ಈಗ ಜಾವೇದ್ ಆನಂದ್ ಅಂತ ಹೆಸರಾಗಿದ್ದಾರೆ. 'ಕಂಬ್ಯಾಟ್ ಕಮ್ಯುನಲಿಸಂ' ಪತ್ರಿಕೆ ತರೋದು ಅವರೆ. (ತೀಸ್ತಾ ಸೆಟಲ್ವಾಡ್ ಅವರ ಪತಿ) ಅವರಿಬ್ಬರು ಆರ್ಟ್ಸ್ ನಲ್ಲಿ ಗ್ರಾಜ್ಯೂಯೇಟ್ಸ್. ಅವರು ಹಳ್ಳಿಗಳಲ್ಲಿ ಕೆಲಸ ಮಾಡೋರು. ಅವರನ್ನು ನಾನು ಭೇಟಿ ಮಾಡಿ ನಾನು ಇಲ್ಲಿ ಒಂದು ಕೈಗಾರಿಕೆ ಮಾಡಬೇಕಂತ ನಿರ್ಧಾರ ಮಾಡಿದ್ದೇನೆ. ಅದಕ್ಕೆ ನಿಮ್ಮ ಸಲಹೆಯೇನು ಎಂದು ಕೇಳಿದೆ. ನನಗೆ ಖಾಸಗಿ ಆಸ್ತಿ ಮಾಡೋಕೆ ಅವಾಗಲೂ ಆಸಕ್ತಿ ಇರಲಿಲ್ಲ, ಈಗಲೂ ಇಲ್ಲ. ನಮ್ಮದೇನಿದೆ ಅದನ್ನೆಲ್ಲ ಸಮಾಜಕ್ಕೆ ಕೊಟ್ಟು ಹೋಗೋದು ಇದೆ. ಪೂರ್ವಾರ್ಜಿತ ಆಸ್ತೀನೂ ನಾನು ಯಾವುದೂ ಇಟ್ಕೊಂಡಿಲ್ಲ. ಆಗ ಅವರು ಒಂದು ಚಿಕ್ಕ ಲೇಖನ ತಂದುಕೊಟ್ಟರು. "ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಇನ್ ಇಂಡಿಯಾ'. ಅದು ನನಗೆ ಬಹಳ ಮಾನಸಿಕವಾಗಿ ಇಂಪ್ಯಾಕ್ಟ್ ಮಾಡಿತು. ಒಂದೆರಡು ಪ್ಯಾರ ಓದುತ್ತಿದ್ದಂತೆ ತುಂಬ ಆಸಕ್ತಿ ಮೂಡಿತು. ಈ.ಎಫ್. ಶುಮಾಕರ್ ಅನ್ನುವವರು ಇದನ್ನು ಬರೆದಿದ್ದು. ನಾನು ಅವರ ವಿಳಾಸ ಪಡಕೊಂಡೆ. ಅವರು ಇಂಗ್ಲೆಂಡ್‌ನಲ್ಲಿದ್ದರು. ಅವರು ಆರ್ಥಿಕ ತಜ್ಞರು. ಅವರಿಗೆ ನಾನು ತಕ್ಷಣ ಬರೆದೆ. ಯುವಕನನ್ನು ಒಂದು ಕಾಲೇಜಿನಲ್ಲಿ ೪–೫ ವರ್ಷ ಕಲಿಸಬೇಕಾದರೆ ಸರ್ಕಾರದ ಬಹಳ ದೊಡ್ಡ ಪ್ರಮಾಣದ ಹಣ ವ್ಯಯವಾಗುತ್ತದೆ. ಇದನ್ನು ಪಡೆದವರು ತಿರುಗಿ ಕೊಡಬೇಕು ಎನ್ನುವ ಭಾವನೆ ಇರಬೇಕು ಎನ್ನುವ ಚಿಂತನೆ ಅವರ ಲೇಖನದಲ್ಲಿತ್ತು. ನಾನೂ ಹೀಗೆ ಯೋಚಿಸುವವನಾಗಿದ್ದೆ. ನನ್ನ ಪತ್ರಕ್ಕೆ ಅವರು ತುಂಬ ಸಂತೋಷದಿಂದ ಉತ್ತರ ಬರೆದರು. ನನ್ನ ಒಂದು ಲೇಖನ ನಿಮಗೆ ಅಷ್ಟು ಪ್ರಭಾವ ಬೀರಿದ್ದರೆ ನನ್ನದೊಂದು ಪುಸ್ತಕ ಬರ್ತಾ ಇದೆ. 'ಸ್ಮಾಲ್ ಈಸ್ ಬ್ಯೂಟಿಫುಲ್' ಅಂತ ಹೇಳಿದರು. ಬಿಡುಗಡೆಯಾದ ನಂತರ ಅದನ್ನು ನಾನು ಓದಿದಾಗ ಒಬ್ಬ ಇಂಜಿನಿಯರ್ ಅಂದ್ರೆ ಬಾವಿಯೊಳಗಿನ ಕಪ್ಪೆ. ಇದೊಂದು ವಿಶಾಲವಾದ ಜಗತ್ತಿದೆ. ದೇಶ ಯಾವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು? ಯಾವ ಕೈಗಾರಿಕೆ

**ನನ್ನದು ಸಮಗ್ರ ಪರಿವರ್ತನೆಗಾಗಿನ ಹೋರಾಟ. ಸಮಾಜದಲ್ಲಿ ಮತ್ತು ಎಲ್ಲರನ್ನೂ ಸಮಾನವಾಗಿ ಕಾಣುವಂತಹ ಆರ್ಥಿಕ, ಸಾಮಾಜಿಕ, ರಾಜಕೀಯ ಅಧಿಕಾರ ಏನಿದೆ ಇದು ಜನರ ಕೈಯಲ್ಲಿ ಮಾತ್ರ ಇರಬೇಕು....ಹಿಂದೆ ಸಾಕ್ರಟಿಸ್, ಪ್ಲೇಟೊ, ಅರಿಸ್ಟಾಟಲ್ ಏನು ಹೇಳಿದ್ದರೋ ಅದು ಮತ್ತು ಶರಣರ ನುಡಿಗಳೇನಿವೆಯೋ ಅದು ನನ್ನ ಪರಿಕಲ್ಪನೆಯ ಅಡಿಪಾಯ.**

ಆರಂಭಿಸಬೇಕು ಇವೆಲ್ಲಾ ನನ್ನ ಮನಸ್ಸಿಗೆ ಬಂತು. ಇನ್ನೊಬ್ಬ ಎಡ್ಗರ್ ಓನ್ ಎನ್ನುವವರು ೩೦ ವರ್ಷ ಯು.ಎಸ್.ಎ.ಡಿ ಅಂತ ಅದರಲ್ಲಿ ಕೆಲಸ ಮಾಡಿದ್ದರು. ಅವರು ಒಂದು ಪುಸ್ತಕ ಬರೆದಿದ್ದರು. 'ಡೆವಲಪ್‌ಮೆಂಟ್ ಇನ್ ಕನ್ಸಿಡರ್‌ಡ್' ಅಂತ. ಅಭಿವೃದ್ಧಿಯ ಸ್ವರೂಪದ ಬಗೆಗಿನ ಚಿಂತನೆಯಿದು. ಈ ಅಭಿವೃದ್ಧಿ ಮಾನದಂಡಗಳಿವೆಯಲ್ಲ, ಈ ಜಿ.ಡಿ.ಪಿ ಇತ್ಯಾದಿ, ಇವೆಲ್ಲ ನಿಜವಾದ ಮಾನದಂಡಗಳೇ ಅಲ್ಲ. ಒಂದು ದೇಶದಲ್ಲಿ ನಡೆಯುವ ಅನ್ಯಾಯ ಅತ್ಯಾಚಾರಗಳನ್ನು ತಡೆಗಟ್ಟಿದ, ಸ್ವಾತಂತ್ರ್ಯ, ಸಮಾನತೆಗಳಂತಹ ಉದಾತ್ತ ಆದರ್ಶಗಳು ನಿಜವಾಗಿ ಜಾರಿಯಲ್ಲಿರುವ ನಾಡು ಮಾತ್ರ ಅಭಿವೃದ್ಧಿ ಹೊಂದಿದೆ ಎಂದು ಹೇಳಲು ಸಾಧ್ಯ. ಇಂತಹ ಸಮಾಜವನ್ನು ಕಟ್ಟುವುದು ಮುಖ್ಯ. ಅಭಿವೃದ್ಧಿ ಎಂದರೆ ಜನರ ಅಭಿವೃದ್ಧಿ ಮಾತ್ರ. ಅನಕ್ಷರತೆ, ಅನಾರೋಗ್ಯ, ಶೋಷಣೆ, ನಿರುದ್ಯೋಗ, ಇವೆಲ್ಲವನ್ನು ನಿರ್ಮೂಲನೆ ಮಾಡಿ ನಿಜವಾದ ಅಭಿವೃದ್ಧಿ ಸಾಧಿಸಬೇಕು. ರಾಷ್ಟ್ರವೊಂದರ ಒಟ್ಟಾರೆ ದೇಶೀ ಉತ್ಪನ್ನವನ್ನು ಮಾನವ ಅಭಿವೃದ್ಧಿ ಸೂಚ್ಯಂಕಗಳ ಮೂಲಕ ಅಳೆಯಲು ಆರಂಭವಾಗಿದ್ದು ಹೀಗೆ. ಇದು ನನಗೆ ತುಂಬಾ ಪರಿಣಾಮ ಬೀರಿತು. ನನ್ನ ಮೇಲೆ ಪರಿಣಾಮ ಬೀರಿದ ಇನ್ನೊಂದು ಲೇಖನವೆಂದರೆ, ಅಮೂಲ್ಯಕುಮಾರ್ ರೆಡ್ಡಿ ಅನ್ನುವವರು ಬರೆದ 'ಈಸ್ ಇಂಡಿಯನ್ಸ್ ಟ್ರೂ ಇಂಡಿಯನ್ಸ್' ಎಂಬ ಲೇಖನ.

ನನ್ನ ಚಿಂತನಾ ಕ್ರಮದಲ್ಲಿ ಅತೀ ಬದಲಾವಣೆಯಾಗಿದ್ದೆಂದರೆ ಇಂದಿರಾ ಗಾಂಧಿ ಅವರು ಹೇರಿದ ತುರ್ತುಪರಿಸ್ಥಿತಿಯಿಂದ. ಇದರ ಬಗ್ಗೆ ಆಗ ಆಳವಾದ ವೈಚಾರಿಕ ತಿಳುವಳಿಕೆಯಿಲ್ಲದಿದ್ದರೂ ಒಬ್ಬ ವ್ಯಕ್ತಿಯ ಪರಮಾಧಿಕಾರ ಏನು ಅನಾಹುತ ಮಾಡುತ್ತದೆ ಎನ್ನುವುದು ತಿಳಿಯಿತು. ಇದು ನಿಜವಾಗಲೂ ಸಂವಿಧಾನ ವಿರೋಧಿ; ಅದನ್ನು ವಿರೋಧಿಸಲೇಬೇಕು ಎಂದು ಅಲ್ಲಿ ಪ್ರತಿಭಟಿಸಿದೆವು. ಕೇವಲ ಮೂರು ದಿನಗಳಲ್ಲಿ ನಾವು ಸಾವಿರ ಮೈಲಿ ದೂರದಿಂದ ಬಂದು ಪ್ರತಿಭಟನೆ ಮಾಡಿದೆವು. ಕೆಲವರು ಶಿಕಾಗೋದಿಂದ ಬಂದರು. ನಮ್ಮ ನಾಲ್ಕು ಜನರ ಪಾಸ್ ಪೋರ್ಟುಗಳನ್ನು ಆಗ ಅಮೇರಿಕ ಸರ್ಕಾರ ಸೀಜ್ ಮಾಡಿತು.

ದಕ್ಷಿಣ ಆಫ್ರಿಕಾದಲ್ಲಿದ್ದಾಗ ಗಾಂಧಿ ನಡೆಸುತ್ತಿದ್ದ *ಇಂಡಿಯನ್ ಒಪಿನಿಯನ್* ಹೆಸರಿನಲ್ಲೇ ನಾವು ಪತ್ರಿಕೆ ಮಾಡಿದೆವು. ಅದು ನಮ್ಮ ಜೀವನದ ಅತ್ಯಂತ ಸೃಜನಶೀಲ ಅವಧಿ. ಅವತ್ತು ನಾವು ಏನು ಒಂದು ರಾಜಕೀಯ ಬದಲಾವಣೆ ಬಗ್ಗೆ ಕಲಿತೆ ಅದು ಇವತ್ತಿನವರೆಗೂ ನನ್ನ ರಕ್ತದಲ್ಲಿ ಬಂದಿದೆ.

ಇವತ್ತು ನೀವು ಏನು ಭ್ರಷ್ಟಾಚಾರ ವಿರೋಧಿ ಹೋರಾಟ ಹೇಳುತ್ತೀರಲ್ಲ, ಇದು ಏನೂ ಅಲ್ಲ. ನನ್ನದು ಸಮಗ್ರ ಪರಿವರ್ತನೆಗಾಗಿನ ಹೋರಾಟ. ಸಮಾಜದಲ್ಲಿ ಮತ್ತು ಎಲ್ಲರನ್ನೂ ಸಮಾನವಾಗಿ ಕಾಣುವಂತಹ ಆರ್ಥಿಕ, ಸಾಮಾಜಿಕ, ರಾಜಕೀಯ ಅಧಿಕಾರ ಏನಿದೆ ಇದು ಜನರ ಕೈಯಲ್ಲಿ ಮಾತ್ರ ಇರಬೇಕು. ಯಾವ ಅಧಿಕಾರಸ್ಥರಲ್ಲೂ ಕೇಂದ್ರೀಕೃತವಾಗಿರಬಾರದು ಅಂತ ಎರಡು ಸಾವಿರಕ್ಕೂ ವರ್ಷಗಳ ಹಿಂದೆ ಸಾಕ್ರಟಿಸ್, ಪ್ಲೇಟೊ, ಅರಿಸ್ಟಾಟಲ್ ಏನು ಹೇಳಿದ್ದರೋ ಅದು ಮತ್ತು ಶರಣರ ನುಡಿಗಳೇನಿವೆಯೋ ಅದು ನನ್ನ ಪರಿಕಲ್ಪನೆಯ ಅಡಿಪಾಯ. ನನ್ನ ಮೇಲೆ ಬಹಳ ಪರಿಣಾಮ ಬೀರಿದ ಪುಸ್ತಕ "ಸ್ಮಾಲ್ ಈಸ್ ಬ್ಯೂಟಿಫುಲ್". ಈ ಪುಸ್ತಕದೊಳಗೆ ಸಮಾಜದ ಬಗ್ಗೆ, ಎಕಾನಮಿಕ್ಸ್ ಬಗ್ಗೆ. ಒಂದು ಸಮಗ್ರ ಪರಿಕಲ್ಪನೆಯಿದೆ.

೧೯೭೩ರಲ್ಲಿ ಬಂದ ಈ ಪುಸ್ತಕದ ಮೇಲೆ ಗಾಂಧಿಯವರ ಚಿತ್ರ ಇದೆ. ಜ್ಯೋಸೆಫ್(ಜೆ.ಸಿ.) ಕುಮಾರಪ್ಪ ಅಂತ ಅವರ ಚಿಂತನೆ ಏನಿದೆ ಅದು 'ಎಕಾನಮಿ ಆಫ್ ಪರ್ಮನೆನ್ಸ್' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಅದನ್ನವರು ಜೈಲಿನಲ್ಲಿದ್ದಾಗ ಬರೆದಿದ್ದು. ಅವರಿಂದ ಬಂದ ಸಮಗ್ರ ಚಿಂತನೆ ಏನಿದೆ ಅದು ನನಗೆ ದೊಡ್ಡದಾಗಿದೆ. ಯಾಕಂದ್ರೆ ನಾವಲ್ಲಿ ಅಂಬೇಡ್ಕರ್‌ಗೆ ವಿದೇಶದ ಜೀವನಶೈಲಿ ಬಿಟ್ಟು ಇಲ್ಲಿ ಸಾಮಾನ್ಯ ಕಾರ್ಯಕರ್ತನಂತೆ ಇರಬೇಕಾದ ಸಂದರ್ಭದಲ್ಲಿ ಯಾವ ಹೊಂದಾಣಿಕೆ



**ಜನ ಸಂಗ್ರಾಮ ಪರಿಷತ್ತಿನ ಸದಸ್ಯರೊಂದಿಗೆ ಸುದ್ದಿ ಗೋಷ್ಠಿಯಲ್ಲಿ ಹಿರೇಮಠರು**

ಆಗಬೇಕಾಗಿತ್ತೋ ಅದಕ್ಕೆ ಬೇಕಾದ ಬೀಜರೂಪದ ಚಿಂತನೆಗಳು ಅದರಲ್ಲಿತ್ತು. ಯಾಕೆಂದರೆ ಉಳಿದವರ ಪರಿವರ್ತನೆ ಮಾಡುವ ಮುನ್ನ ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳಬೇಕು. ಜಗತ್ತಿನಲ್ಲಿ ಕಾಣಬೇಕಾದ ಬದಲಾವಣೆಯನ್ನು ಮೊದಲು ನಮ್ಮಲ್ಲಿ ಮಾಡಿಕೊಳ್ಳಬೇಕು ಅಂತಾರಲ್ಲ ಅದು ಅದರಲ್ಲಿತ್ತು.

**ಕಾನೂನು ಹೋರಾಟ ಸಾಮೂಹಿಕ ಹೋರಾಟಗಳಲ್ಲ. ನೀವೆ ಅದನ್ನು ಬೆನ್ನು ಹತ್ತಿ ಹೋಗಬೇಕು. ಇದು ಎಲ್ಲೋ ನಿಮಗೆ ಒಂಟಿ ಪ್ರಯತ್ನ ಅಂತ ಅನ್ನಿಸಿತಾ?**

ಭಾರತಕ್ಕೆ ಬರಬೇಕಾದ್ರೆ ನಾನು ಪೊಲಿಟಿಕಲ್ ಫಿಲಾಸಫಿ ಜೊತೆ ಬಂದೆ. ಅದು ಏನಿತ್ತಪ್ಪಾ ಅಂದ್ರೆ ನವೆಂಬರ್ ೨೬, ೧೯೪೯ ಸಂವಿಧಾನ ರಚನೆಯ ಕೊನೆ ದಿನ ಅಂಬೇಡ್ಕರ್ ಹೇಳ್ತಾರೆ; "ನಾವು ಇಂದು ವಿರೋಧಾಭಾಸದ ಪರಿಸ್ಥಿತಿಯೊಳಗ ಇದೇವೆ. ರಾಜಕೀಯ ಕ್ಷೇತ್ರದೊಳಗ ಸಮಾನತೆ ಬಂತು, ಒಬ್ಬರಿಗೆ ಒಂದು ವೋಟು–ಒಂದು ಮೌಲ್ಯ ಅಂತ. ಆದರೆ ಆರ್ಥಿಕ ಸಾಮಾಜಿಕ ಅಸಮಾನತೆ ಬಹಳ ಇದೆ. ಇದನ್ನು ಸರಿಪಡಿಸದಿದ್ದರೆ ಒಂದು ದಿನ ನಮ್ಮ ಈ ರಾಜಕೀಯ ಸ್ವಾತಂತ್ರ್ಯ ಕೂಡ ಹೋಗ್ತದೆ. ಆರ್ಥಿಕ, ಸಾಮಾಜಿಕ ಸಮಾನತೆ ಆಗಬೇಕು ಅನ್ನೋ ಕಾರಣದಿಂದ ನಾನು ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಅನ್ನುವ ಒಂದು ಚೌಕಟ್ಟನ್ನು ಸಂವಿಧಾನದ ಒಳಗೆ ಇಡ್ತೇನೆ, ಇದನ್ನು ಕೋರ್ಟಿನಲ್ಲಿ ಪ್ರಶ್ನಿಸಲಾಗದಿದ್ದರೂ ಅವು *ಫಂಡಮೆಂಟಲ್ಸ್ ಆಫ್ ಗವರನ್ನೆನ್ಸ್ ಆಫ್ ದಿ ಕಂಟ್ರಿ* ಆಗಿ ಇರ್ತವೆ" ಎಂದರು. ಸಂವಿಧಾನದ ಈ ಅವಕಾಶವನ್ನು ಬಳಸಿಕೊಂಡೇ ನಮ್ಮ ಅಬ್ದುಲ್ ನಜೀರ್ ಸಾಬರು ಅಧಿಕಾರದ ವಿಕೇಂದ್ರೀಕರಣ ಮಾಡಿದ್ದರು. ಶಿವರಾಮ ಕಾರಂತರಿಗೂ ಕಾಯ್ದೆ ಬಗ್ಗೆ ವಿಶೇಷ ಜ್ಞಾನ ಇತ್ತು. ಅವರ ಜೊತೆ ನಾನು ಪರಿಸರ ರಕ್ಷಣೆಗಾಗಿ ಸುಪ್ರೀಂ ಕೋರ್ಟಿಗೆ ಹೋಗಿದ್ದೆ.

ಎಂದೂ ಒಂಟಿ ಹೋರಾಟದ ಪ್ರಶ್ನೆಯೇ ಇಲ್ಲ. ಎಂದೂ ನಾನು ಒಂಟಿಯಾಗಿ ಮಾಡಿಲ್ಲ. ಕೂಡೇ ಮಾಡೀವಿ ಯಾವಾಗ್ಲೂ. ಈಗ ನೀವು ಏನು ನೋಡ್ತಾ ಇದೀರಿ ಬಳ್ಳಾರೀದು, ನೂರು ಜನ ಎಂಟು ಜಿಲ್ಲೆಗಳಿಂದ ಬಂದಿದ್ರು. ಯಾಕಂದ್ರೆ ನಮಗೆ ಕಡಿಮೆ ಹಣ ಇರೋದ್ರಿಂದ ಹೆಚ್ಚು ಜನ ಬರಲಿಕ್ಕೆ ಆಗಲಿಲ್ಲ. ಮೊದಲನೇ ಸಲಾನೆ ಜನವರಿ ೨೬, ೨೦೧೧ರಂದು ಗಾಲಿ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು, ಮೂರೂ ಮಂದಿ ರಾಜೀನಾಮೆ ಕೊಡಬೇಕು, ಇವರು ರಾಜೀನಾಮೆ ಕೊಡದಿದ್ರೆ ಯಡಿಯೂರಪ್ಪ ತೆಗೀಬೇಕು. ಅವರಿಗೆ ಇವರನ್ನು ತೆಗೆಯೋ ಯೋಗ್ಯತೆ ಇಲ್ಲದಿದ್ರೆ ತಾನೇ ಹೋಗಬೇಕು. ಆಮೇಲೆ ಇವೆಲ್ಲ ಅಕ್ರಮಗಳ ಬಗ್ಗೆ ಕ್ರಮ ಕೈಗೊಳ್ಳಬೇಕು. ಗಣಿಗಾರಿಕೆ ಸಮಗ್ರ ನಿಯಂತ್ರಣಕ್ಕೆ ಬರಬೇಕು. ಅವರೆಲ್ಲ ಏನೇನು ಅಕ್ರಮ ಸಂಪಾದನೆ ಮಾಡಿದ್ದಾರೋ ಅದೆಲ್ಲ ವಾಪಸು ಬರಬೇಕು. ತಪ್ಪಿತಸ್ಥರು ಜೈಲಿಗೆ ಹೋಗಬೇಕು. ಇವೆಲ್ಲಾ ನಾವು ಮಾಡಿದೇವೆ. ಇದರೆಲ್ಲಾ ನಿರ್ಣಯಗಳನ್ನು ನಾವು ಸೇವಾ ಗ್ರಾಮದಲ್ಲಿ ಮಾಡಿದೇವೆ. ಅಲ್ಲಿಗೆ ಇಡೀ ದೇಶದಿಂದ ಪ್ರತಿನಿಧಿಗಳು ಬಂದಿದ್ರು. ನನಗೆ ಏನು ಅನ್ನಿಸ್ತದೆ ಅಂದ್ರೆ, ಬರುವ ದಿವಸಗಳಲ್ಲಿ ಇದು ಬಹಳ ಅವಶ್ಯ ಇದೆ. ಇದನ್ನು ನಿಮ್ಮಂತವರು ಮತ್ತು ತುಂಬ ಆಸಕ್ತಿ ಇರೋರು ಮಾಡಬೇಕು.

**ನಿಮಗೆ ರಾಜಕೀಯ ಪ್ರವೇಶಿಸುವ ಆಲೋಚನೆ ಏಕೆ ಬಂತು.**

ಹರಿಹರ ಫಾಲಿಫೈಬರ್ಸ್ ಕಂಪನಿ ವಿರುದ್ಧದ ಕೇಸಿನಲ್ಲಿ ೭೫೦೦೦ ಎಕರೆಗಳಷ್ಟು ಜಾಗವನ್ನು ಈ ಕಂಪನಿಗೆ ಕೊಡುವುದರ ವಿರುದ್ಧ ನಾವು ತುಂಬಾ ಮೇಧಾವಿತನದಿಂದ ಕೇಸನ್ನು ನಡೆಸಿದರೂ ವಿಫಲವಾದೆವು. ಇದೇ ಶಾಂತಿಭೂಷಣ್ (ಪ್ರಶಾಂತ್ ಭೂಷಣ್ ಅವರ ತಂದೆ) ನಮ್ಮ ಕರ್ನಾಟಕ ಸರ್ಕಾರದ ಪರವಾಗಿ ವಾದಿಸಿದರು. ಸಿಂಘ್ವಿ ಅನ್ನುವವರು ಹರಿಹರ ಫಾಲಿಫೈಬರ್ಸ್ ಪರವಾಗಿ ವಾದಿಸಿದರು. ಜಗನ್ನಾಥ ಶೆಟ್ಟಿಯವರು ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದರು. ಇವರು ನಮ್ಮ ಸ್ಟೇ ಆರ್ಡರ್‌ನ್ನು ಮಾಡಿಫೈ ಮಾಡಿ ೭೫೦೦ ಎಕರೆಯನ್ನು ಅವರಿಗೆ ಕೊಟ್ಟರು. ಆಗ ನ್ಯಾಯ ಪಡೀಬೇಕಾದ್ರೆ ರಾಜಕೀಯ ಹೋರಾಟ ಆಗಬೇಕು ಅಂತ ನಿರ್ಧಾರ ಮಾಡಿದೆವು.

ಹಾನಗಲ್ ಮತ್ತು ಹಿರೇಕೆರೂರು ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಚಳವಳಿಯನ್ನು ಬೆಂಬಲಿಸೋ ನಮ್ಮದೇ ಪ್ರತಿನಿಧಿಗಳನ್ನು ತೆಗೆದುಕೊಂಡು ಪ್ರತಿ ಗ್ರಾಮ ಸಭೆಯಲ್ಲೂ ಇದರ ವಿರುದ್ಧ ನಿರ್ಣಯ ತೆಗೆದುಕೊಳ್ಳಲಾಯಿತು. ಅದನ್ನು ಮಂಡಲ ಪಂಚಾಯತಿಯಿಂದ ಸರ್ಕಾರಕ್ಕೆ ಕಳಿಸಿಕೊಡಲಾಯಿತು. ಜಿಲ್ಲಾ ಪಂಚಾಯತೊಳಗೆ ಕೂಡ ಹೀಗೆ ಮಾಡಲಾಯಿತು. ೭೨ ಜನ ಶಾಸಕರು ಇಲ್ಲಿಂದ ಸತ್ಯಾಗ್ರಹಿಗಳ ಬೆಂಬಲ ತೆಗೆದುಕೊಂಡು ಹೋಗಿ ನಿಜಲಿಂಗಪ್ಪ, ಕುಲದೀಪ ನಯ್ಯರ್, ಡಿ.ಎಂ ಚಂದ್ರಶೇಖರ್ ಇಂತಹವರನ್ನೆಲ್ಲ ಸೇರಿಸಿ ವಿಧಾನಸಭೆಯಲ್ಲಿ ಒತ್ತಡ ತಂದ್ವಿ. ಇದೊಂದು ಅಪ್ಪಟ ಪೊಲಿಟಿಕಲ್ ಮೂವ್‌ಮೆಂಟ್. ಆ ಎರಡು ವಿಧಾನಸಭಾ ಕ್ಷೇತ್ರದ ಪ್ರತಿನಿಧಿಗಳು ನಮ್ಮ ಜೊತೆ ಉಳಿದರು ಮತ್ತು ೭೨ ಜನ ಶಾಸಕರು ಅವರಿಗೆ ಸಹಾಯ ಮಾಡಿದರು. ಅದೊಂದು ಕ್ಯಾಬಿನೆಟ್ ನಿರ್ಣಯ ಆಗಿ ಬಂದುಬಿಡ್ತು. ಎಲ್ಲಾ ೭೫೦೦೦ ಎಕರೆ ಸರ್ಕಾರಿ ಭೂಮಿ ವಾಪಸು ಬಂತು. ೭೫೦೦೦ ಎಕರೆ ಜಮೀನನ್ನು ಧಾರವಾಡ ಬೆಳಗಾಂ, ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳಲ್ಲಿ ಬಿರ್ಲಾ ಕಂಪನಿಗೆ ಕೊಡಬೇಕಂತ ಮಾಡಿದ್ರು ಅದನ್ನು ಸರ್ಕಾರ ರದ್ದು ಮಾಡಿತು. ಅದೊಂದು ಅಪೂರ್ವ ರಾಜಕೀಯ ಗೆಲುವಾಗಿತ್ತು.

ಪ್ರತಿನಿಧಿಗಳನ್ನು ಆಯ್ಕೆ ಮಾಡೋದು ಜನರಿಂದ ಆಗಬೇಕು ವಿನಹ ಪಕ್ಷಗಳಿಂದ ಆಗಬಾರದು, ಆಗ ಜನಪ್ರತಿನಿಧಿಗಳು ಜನರ ನಿಯಂತ್ರಣದಲ್ಲಿರುತ್ತಾರೆ. ಅದು ಈ ವಿಚಾರದಲ್ಲಿ ಸಾಬೀತಾಯಿತು. ಕ್ಯಾಬಿನೆಟ್ ನಿರ್ಣಯವನ್ನು ತೆಗೆದುಕೊಂಡು ಹೋಗಿ ಕಂಪನಿಯವರು ಸುಪ್ರೀಂ ಕೋರ್ಟಿನಲ್ಲಿ ಅಫಿಡವಿಟ್ ಹಾಕಿದರು. ಸಹಜವಾಗಿ ಸುಪ್ರೀಂಕೋರ್ಟ್ ಯಾವ ವಿಚಾರಕ್ಕೆ ಪೆಟಿಷನ್ ಬರೆದಿದ್ದರೋ ಅದನ್ನು ಸರ್ಕಾರ ಒಪ್ಪಿದೆ ಎಂದು ಹೇಳಿ ಕೇಸನ್ನು ವಜಾಗೊಳಿಸಿತು. ಪೊಲಿಟಿಕಲ್ ವಿಕ್ಟರಿ ಇಸ್ ನಾಟ್ ಎ ಜುಡಿಷಿಯಲ್ ವಿಕ್ಟರಿ. ಇದು ತುಂಬಾ ಜನರಿಗೆ ಗೊತ್ತೇ ಇಲ್ಲ.

ಈ ಹೊಸ ತಲೆಮಾರಿನವರಿಗೆ ಯಾವುದೇ ವಿಷಯದಲ್ಲಿ ಒಳಗೆ ಆಳವಾಗಿ ಹೋಗುವ ಪ್ರವೃತ್ತಿ ತುಂಬಾ ಕಡಿಮೆ ಇದೆ. ಯೂನಿವರ್ಸಿಟೀಲೆಲ್ಲಾ ಎಷ್ಟೊಂದು ಜನ ವಿದ್ವಾಂಸರಿದ್ದರೂ, ಇದನ್ನೆಲ್ಲ ಮಾಡೋ ಜನ ತುಂಬ ಕಡಿಮೆ. ಅವರು ಮಾಡಿದ್ರೂ ಅಷ್ಟೆ, ಮಾಡದಿದ್ರೂ ಅಷ್ಟೆ, ನಮಗಂತು ನಾವು ಜವಾಬ್ದಾರಿಯಿಂದ ನಡಕೊಂಡಿವಿ ಎನ್ನೋ ತೃಪ್ತಿ ನಮಗಿದೆ.

**ನಿಮ್ಮ ಪರಿಕಲ್ಪನೆಯಲ್ಲಿ ಸಂಘಟನೆಯ ಸ್ವರೂಪ ಹೇಗೆ ಇರಬೇಕು ಎಂದು ನೀವು ಭಾವಿಸುತ್ತೀರಾ?**

ನಮಗೆ ಹಾಗೇನೂ ನಿರ್ದಿಷ್ಟತೆ ಇಲ್ಲ. ನಮ್ಮದೇನಿತ್ತು ವಿಚಾರ, ತನ್ನ ಭೂಮಿಯೊಳಗೇ ಗಾಂಧಿ ಸತ್ತು ಹೋಗ್ಯಾನ, ಇಲ್ಲಿ ಅಹಿಂಸಾತ್ಮಕ ಪರಿಸ್ಥಿತಿ ಏನೂ ಇಲ್ಲ, ಆದರೆ ಆತ್ಮದೊಳಗಾ ಏನೊಂದು ಧೈರ್ಯ ಇದೆ, ಒಂದೇನು ಶಕ್ತಿ ಇದೆ, ಅದನ್ನು ನಾವು ಗಮನಿಸಿಯೇ ಇಲ್ಲ. ನಾವು ಸಾವಿರ ಜನ ಹರಿಹರ ಫಾಲಿಫೈಬರ್ಸ್ ಎದುರು ನಿಂತಾಗ ಕರ್ನಾಟಕ ಸರ್ಕಾರ ಅದುರಿ ಹೋಗಿಬಿಡ್ತು. ನಿಜವಾಗಿ ಇಂಪ್ಯಾಕ್ಟ್ ಆಯ್ತು. ಅದರ ಮಾರನೇ ದಿನಾನೇ ಡೆಲಿಗೇಷನ್ ಕಳಿಸಿದ್ರು. ೭ ದಿನ ಫ್ಯಾಕ್ಟರಿ ಬಂದ್ ಮಾಡಿದ್ರು, ನಾನು ಸಂಘಟನೆಯ ಒಳಗಿನಿಂದ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೆ. ಇದೆಲ್ಲ ಒಬ್ಬನ ಸಾಹಸ ಅಲ್ಲ, ಗುಂಪಿನದಾಗಿದೆ. ಮೊನ್ನೆ ೬ ಗಂಟೆ ನಾವು ರಾಜಕೀಯ ಚರ್ಚೆ ಮಾಡಿದೀವಿ. ನಮ್ಮ ನಿಲುವು ಏನಾಗಿರಬೇಕು ಅಂತ. ನಿನ್ನೆ ರಾತ್ರಿ ದೇವನೂರು ಮಹದೇವ ಜತೆ ರಾತ್ರಿ ೮ಗಂಟೆಯಿಂದ ಚರ್ಚೆ ಮಾಡಿದ್ವಿ, ನಾನು ಒಂಟಿಯಲ್ಲ. ಯಾವಾಗಲೂ ನಾವು ಟೀಮ್‌ನಲ್ಲಿ ಹೋಗ್ತೀವಿ. ರಾಮಕೃಷ್ಣ ಹೆಗಡೆ ಬಳಿ ಹೋಗುವಾಗಲೂ ನಾವು ಮೂರು ಜನ ಹೋಗಿದ್ವಿ. ನಮ್ಮ ಅನುಭವ ಏನಿತ್ತು, ಟಿಂಬರ್ ಮಾಫಿಯಾ ವಿರುದ್ಧ ಛತ್ತೀಸ್‌ಘಡದಲ್ಲಿ ಹೋರಾಟ ಮಾಡಿದ್ದು, ತುಂಗಭದ್ರಾ ಮಾಲಿನ್ಯ ವಿರುದ್ಧ ಚಳವಳಿ ಮಾಡಿದ್ದು, ಇವು ನಮಗೆ ತುಂಬ ಸಹಾಯ ಮಾಡಿದವು.

**ಈಗ ಸಿದ್ಧರಾಮಯ್ಯ ಲೋಕಾಯುಕ್ತ ಮುಚ್ಚಲು ಹೊರಟಿದ್ದಾರೆ. ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತ ನಡೆಯುತ್ತಿದೆ. ಸಾಧನೆ ಮಾಡಿದವರನ್ನು ವಿವಿಧ ಕ್ಷೇತ್ರದ ಪರಿಣಿತರನ್ನು ಮೇಲ್ಮನೆಗೆ ಕಳಿಸಬೇಕು. ಆದರೆ ಈಗ ಯಾರ್ಯಾರನ್ನೋ ಮೇಲ್ಮನೆಗೆ ಹಾಕಲಾಗುತ್ತಿದೆ. ಇವರೆಲ್ಲ ಪ್ರಜಾಪ್ರಭುತ್ವವನ್ನು ಹೈಜಾಕ್ ಮಾಡ್ತಿದ್ದಾರೆ..... ಮೋದಿ ಅಧಿಕಾರಕ್ಕೆ ಬಂದ ೬ ತಿಂಗಳಿಗೇ ವ್ಯಾಪಕ ವಿರೋಧವಿದ್ದರೂ ಭೂಸ್ವಾಧೀನ ಮಸೂದೆಯನ್ನು ಜಾರಿಗೆ ತರಲು ಹೊರಡುತ್ತಾರೆ. ತುರ್ತುಪರಿಸ್ಥಿತಿ ಹೇರಿದ ಇಂದಿರಾಗಾಂಧಿ ಜೆಪಿಯಿಂದ ಸೋತರು. ಈಗ ತುರ್ತುಪರಿಸ್ಥಿತಿಯ ಸಂದರ್ಭ ಮತ್ತೆ ಎದುರಾಗಿದೆ. ಇದು ಡಿಕ್ಲೇರ್ ಮಾಡದ ಅಘೋಷಿತ ತುರ್ತುಪರಿಸ್ಥಿತಿ. ಈ ಪರಿಸ್ಥಿತಿ ತುಂಬ ಅಪಾಯಕಾರಿ ಇದೆ.**

**ನಿಮ್ಮ ಜೀವನದಲ್ಲಿನ ಮೊತ್ತಮೊದಲ ಹೋರಾಟ ಯಾವುದು?**

ತುಂಗಭದ್ರಾ ಮಾಲಿನ್ಯದ ವಿರುದ್ಧದ ಹೋರಾಟ. 'ಇಂಡಿಯಾ ಟುಡೇ ಪತ್ರಿಕೇಲಿ ೮೨ರಲ್ಲಿ ಈ ಬಗ್ಗೆ ಪ್ರಕಟವಾದ ಲೇಖನ ಓದಿ ಸುಪ್ರೀಂ ಕೋರ್ಟ ನ್ಯಾಯಾಧೀಶರಾದ ಭಗವತಿ ಅವರು ನಮ್ಮ ಲಜ್ಜಪ್ಪ ಅಂತ ಕಾನೂನು ಕಾಲೇಜಿನ ಪ್ರಿನ್ಸಿಪಾಲರು ಅವರಿಗೆ ಕರೆ ಮಾಡಿ 'ನೋಡಿ, ಇವರೇ ನಿಜವಾದ ಫ್ರೀಡಂ ಫೈಟರ್. ಅವರು ನನ್ನನ್ನು ಭೇಟಿ ಮಾಡಲು ತಿಳಿಸಿ' ಎಂದರಂತೆ. ನಾನು ಭೇಟಿ ಮಾಡಿದಾಗ 'ನೀನು ಏನು ಮಾಡ್ತಿದೀಯಾ' ಕೇಳಿದರು. ನಾನೀಗ ಎನ್.ಜಿ.ಓ ಅನ್ನು ಬಿಟ್ಟು ಒಂದು ಹೊಸ ಸಂಸ್ಥೆಯನ್ನು ಕಟ್ತಾ ಇದೇವಿ. ಅಂತ ಹೇಳಿದೆ.

೮೪ ರಲ್ಲಿ ಅದನ್ನು ಬಿಟ್ಟು 'ಇಂಡಿಯಾ ಡೆವಲಪ್ ಮೆಂಟ್ ಸರ್ವಿಸಸ್' ಅಂತ ಬಂದೆನಲ್ಲ, ಅವಾಗಿಂದ ಈ ಹೋರಾಟ ಆರಂಭವಾಯ್ತು. ಜನರಿಂದ ವರ್ಷಕ್ಕೆ ಮುನ್ನೂರು ರೂಪಾಯಿ, ೫೦೦ ರೂಪಾಯಿ, ಇನ್ನು ಕೆಲವರು ತಿಂಗಳಿಗೆ ೫೦ ರೂಪಾಯಿ ದೇಣಿಗೆ ಪಡೆದು ಶುರು ಮಾಡಿದೆವು, ಆಫೀಸ್ ಇಲ್ಲ, ಏನೂ ಇಲ್ಲ, ಗುಡಿಯಲ್ಲಿ ಮಲಗ್ತಾ ಇದ್ದೆವು, ಶಾಲೆಗಳಲ್ಲಿ ಉಳಕೊಳ್ಳತ್ತಿದ್ದೆವು. ಎಲ್ಲಾ ಜನ ರೊಟ್ಟಿ ಕೊಡಿಸ್ತಾ ಇದ್ದರು, ಹೀಗೆ ಸಂಸ್ಥೆ ಬೆಳೀತಾ ಬಂತು.

**ಪ್ರಸ್ತುತ ರಾಜಕಾರಣದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಜನಪರ ಕಾಳಜಿ ವೇಗದಿಂದ ಮಾಯವಾಗ್ತ ಇದೆ. ಅಕ್ರಮ ಗಣಿಗಾರಿಕೆಯ ವಿಚಾರದಲ್ಲಿ ನಮ್ಮ ಅಧಿಕಾರಸ್ಥರು ನಡೆದುಕೊಂಡದ್ದನ್ನು ನೋಡಿದ್ದೇವೆ. ನ್ಯಾಯಾಂಗದಿಂದ ಇವರಿಗೆಲ್ಲ ಕಡಿವಾಣ ಬಿತ್ತು. ಯಡಿಯೂರಪ್ಪ ಅವರಿಗೆ ಆಡಳಿತದಲ್ಲಿ ತಕ್ಕ ವಿವೇಚನೆ ಇರಲಿಲ್ಲ. ಇವರ ಬದಲಿಗೆ ಸಮಾಜವಾದಿ ಚಿಂತನೆಗಳಿದ್ದಾವೆಂದು ಭಾವಿಸಿ ಸಿದ್ಧರಾಮಯ್ಯ ಅವರನ್ನು ಜನ ಆರಿಸಿದರು. ಈಗ ಸಿದ್ಧರಾಮಯ್ಯ ಲೋಕಾಯುಕ್ತ ಮುಚ್ಚಲು ಹೊರಟಿದ್ದಾರೆ. ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತ ನಡೆಯುತ್ತಿದೆ. ಸಾಧನೆ ಮಾಡಿದವರನ್ನು ವಿವಿಧ ಕ್ಷೇತ್ರದ ಪರಿಣಿತರನ್ನು ಮೇಲ್ಮನೆಗೆ ಕಳಿಸಬೇಕು. ಆದರೆ ಈಗ ಯಾರ್ಯಾರನ್ನೋ ಮೇಲ್ಮನೆಗೆ ಹಾಕಲಾಗುತ್ತಿದೆ. ಇವರೆಲ್ಲ ಪ್ರಜಾಪ್ರಭುತ್ವವನ್ನು ಹೈಜಾಕ್ ಮಾಡ್ತಿದ್ದಾರೆ. ಇದು ಇಂಗ್ಲಷರ ಆಡಳಿತಕ್ಕಿಂತ ಕೆಟ್ಟದು. ಇದನ್ನು ತಡೆಗಟ್ಟಲೇಬೇಕು.

೧೯೯೨ರಲ್ಲಿ ಅಯೋಧ್ಯೆ ವಿವಾದ ಹುಟ್ಟುಹಾಕಿ ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಲಾಯಿತು. ಇದೇ ರೀತಿ ಶೂದ್ರರಿಗೆ, ಅಸ್ಪೃಶ್ಯರಿಗೆ ಮಾಡಲಾಗುತ್ತಿದೆ. ರೋಹಿತ್ ವೇಮುಲ ಆತ್ಮಹತ್ಯೆ ಬಗ್ಗೆ ಪ್ರಧಾನ ಮಂತ್ರಿಗಳು ಮಾತನಾಡುವುದಿಲ್ಲ. ಹೈದರಾಬಾದಿನಲ್ಲಿ ದಲಿತ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ಪನ್ನು ಬಂದ್ ಮಾಡಿ ಅವರನ್ನೆಲ್ಲ ಹೊರಗೆ ಹಾಕಲಾಯಿತು. ಇಲ್ಲಿನ ಮಂತ್ರಿಗಳಿಗೆ ಕನಿಷ್ಠ ವಿವೇಚನೆ ಇಲ್ಲ. ಕನ್ನಯ್ಯನ ವಿರುದ್ಧದ ಆಪಾದನೆಗಳಿಗೆ ಯಾವುದೇ ಸಾಕ್ಷಿಯಿಲ್ಲ. ಇಂತಹ ಕನ್ನಯ್ಯನಿಗೆ ನ್ಯಾಯಾಲಯದ ಆವರಣದಲ್ಲಿಯೇ ಹೊಡೆಯುತ್ತಾರೆ. ಪತ್ರಕರ್ತರಿಗೆ ಹೊಡೆಯುತ್ತಾರೆ. ನೋಮ್ ಚೋಮ್‌ಸ್ಕಿ ಸೇರಿದಂತೆ ವಿಶ್ವದ ಪ್ರಸಿದ್ಧ ಚಿಂತಕರು ಕನ್ನಯ್ಯನ ಪರ ನಿಂತರೂ ಅವರ ಮಾತುಗಳಿಗೆ ಯಾವುದೇ ಬೆಲೆ ನೀಡದ ಸರ್ಕಾರವಿದೆ. ವಿಶ್ವವಿದ್ಯಾಲಯಗಳಿಗೆ ಅಯೋಗ್ಯ ವಿಸಿಗಳನ್ನು ನೇಮಿಸುತ್ತಾರೆ. ಅಧಿಕಾರಸ್ಥರಿಗೆ ಯಾವ ಅಕೌಂಟಬಿಲಿಟಿ ಇಲ್ಲವಾಗಿದೆ. ಮೋದಿ ಅಧಿಕಾರಕ್ಕೆ ಬಂದ ೬ ತಿಂಗಳಿಗೇ ವ್ಯಾಪಕ ವಿರೋಧವಿದ್ದರೂ ಭೂಸ್ವಾಧೀನ ಮಸೂದೆಯನ್ನು ಜಾರಿಗೆ ತರಲು ಹೊರಡುತ್ತಾರೆ. ತುರ್ತುಪರಿಸ್ಥಿತಿ ಹೇರಿದ ಇಂದಿರಾಗಾಂಧಿ ಜೆಪಿಯಿಂದ ಸೋತರು. ಈಗ ತುರ್ತುಪರಿಸ್ಥಿತಿಯ ಸಂದರ್ಭ ಮತ್ತೆ ಎದುರಾಗಿದೆ. ಇದು ಡಿಕ್ಲೇರ್ ಮಾಡದ ಅಘೋಷಿತ ತುರ್ತುಪರಿಸ್ಥಿತಿ. ಈ ಪರಿಸ್ಥಿತಿ ತುಂಬ ಅಪಾಯಕಾರಿ ಇದೆ.

**ಪ್ರಜಾಪ್ರಭುತ್ವದ ರಕ್ಷಣೆಗೆ ವ್ಯಾಪಕ ಜನಾಂದೋಲನದ ಅಗತ್ಯವಿದೆ. ಬದಲಾವಣೆ ಕೇವಲ ರಾಜಕಾರಣದಲ್ಲಿ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಆಗಬೇಕಾಗಿದೆ. ಹಣದ ಕುರಿತ ಪಾಶ್ಚಾತ್ಯರ ನೀತಿಯನ್ನು ನಾವು ಅನುಸರಿಸಬಾರದು. ಕಾರ್ಪೋರೇಟ್‌ಗಳಿಂದ ಆರ್ಥಿಕ ಸ್ವಾತಂತ್ರ್ಯ ಸಾಧ್ಯವಿಲ್ಲ.... ಹೊಸ ಆರ್ಥಿಕ ನೀತಿ ರೂಪಿಸಬೇಕು. ಪರಿಸರ ನಿರ್ವಹಣೆಯಲ್ಲಿ ಜನ ಭಾಗವಹಿಸಬೇಕು. ರೆಪ್ರೆಸೆಂಟೇಟೀವ್ ಡೆಮಾಕ್ರಸಿ ಬದಲಿಗೆ ನಮಗೆ ಬೇಕಿರುವುದು ಪಾರ್ಟಿಸಿಪೇಟರಿ ಡೆಮಾಕ್ರಸಿ. ಕಾರ್ಪೋರೇಟ್ ವಿರೋಧಿಯಾದ, ಲಿಂಗ ತಾರತಮ್ಯ ಮತ್ತು ಜಾತಿ ತಾರತಮ್ಯವಿಲ್ಲದ ನೀತಿಗಳು ರಾಜಕಾರಣದಲ್ಲಿ ಮುಖ್ಯ.**

ಪ್ರಜಾಪ್ರಭುತ್ವದ ರಕ್ಷಣೆಗೆ ವ್ಯಾಪಕ ಜನಾಂದೋಲನದ ಅಗತ್ಯವಿದೆ. ಬದಲಾವಣೆ ಕೇವಲ ರಾಜಕಾರಣದಲ್ಲಿ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಆಗಬೇಕಾಗಿದೆ. ಹಣದ ಕುರಿತ ಪಾಶ್ಚಾತ್ಯರ ನೀತಿಯನ್ನು ನಾವು ಅನುಸರಿಸಬಾರದು. ಕಾರ್ಪೋರೇಟ್‌ಗಳಿಂದ ಆರ್ಥಿಕ ಸ್ವಾತಂತ್ರ್ಯ ಸಾಧ್ಯವಿಲ್ಲ. ಇದಕ್ಕೆ ಕೋ ಆಪರೇಟಿವ್‌ಗಳಿಂದ ಮಾತ್ರ ಸಾಧ್ಯ. ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗಿದೆ.

ಬಹುರಾಷ್ಟ್ರೀಯ ಕಂಪನಿಗಳನ್ನು ಹೊಡೆದೋಡಿಸುವುದು ನಮ್ಮ ಮೊದಲ ಆದ್ಯತೆಯಾಗಬೇಕು. ಕಾರ್ಪೋರೇಟ್ ಆರ್ಥಿಕ ವಸಾಹಾತು ಸ್ವೀಕಾರಾರ್ಹವಲ್ಲ. ಹೊಸ ಆರ್ಥಿಕ ನೀತಿ ರೂಪಿಸಬೇಕು. ಪರಿಸರ ನಿರ್ವಹಣೆಯಲ್ಲಿ ಜನ ಭಾಗವಹಿಸಬೇಕು. ರೆಪ್ರೆಸೆಂಟೇಷನ್ ಡೆಮಾಕ್ರಸಿ ಬದಲಿಗೆ ನಮಗೆ ಬೇಕಿರುವುದು ಪಾರ್ಟಿಸಿಪೇಟರಿ ಡೆಮಾಕ್ರಸಿ. ಕಾರ್ಪೋರೇಟ್ ವಿರೋಧಿಯಾದ, ಲಿಂಗ ತಾರತಮ್ಯ ಮತ್ತು ಜಾತಿತಾರತಮ್ಯವಿಲ್ಲದ ನೀತಿಗಳು ರಾಜಕಾರಣದಲ್ಲಿ ಮುಖ್ಯ.

ಅದರಂತೆ ರಾಜಕಾರಣದಲ್ಲಿ ಮನಿಪವರ್ ಇರಬಾರದು. ಈ ಹೊತ್ತಿನಲ್ಲಿ ಪರ್ಯಾಯ ರಾಜಕಾರಣ ಮಾಡದಿದ್ದರೆ ಹೋರಾಟದಿಂದ ಬಂದ ಸ್ವಾತಂತ್ರ್ಯವನ್ನು ನಾಶ ಮಾಡಿದ ಹಾಗಾಗುತ್ತದೆ. ನಮ್ಮ ಜನಪ್ರತಿನಿಧಿಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ಸ್ವಜನಪಕ್ಷಪಾತ ಹೆಚ್ಚಿದೆ. ಜನ ಟೋಟಲೀ ಫೆಡಪ್ ಆಗಿದ್ದಾರೆ. ಇದನ್ನೆಲ್ಲ ಯಾರೋ ಒಬ್ಬರು ಸರಿ ಮಾಡಬೇಕು ಎನ್ನುವುದು ಸರಿಯಲ್ಲ. ಈ ಮನೋಭಾವ ಪ್ರಜಾಪ್ರಭುತ್ವಕ್ಕೆ ಮಾರಕ. ಈ ದೃಷ್ಟಿಕೋನ ಬದಲಾಗಬೇಕು. ಎಲ್ಲರೂ ಕೂಡಬೇಕು. ನಾವು ಚರಿತ್ರೆಯಿಂದ ಪಾಠ ಕಲಿಯಬೇಕು. ನಮ್ಮಲ್ಲಿ ವ್ಯಕ್ತಿಪೂಜೆ ಇದೆ. ಇದು ದೊಡ್ಡ ಅನಿಷ್ಟ. ಪ್ರಜಾಪ್ರಭುತ್ವ ನಮಗೆ ಅಪೂರ್ವ ಅವಕಾಶ ನೀಡಿದೆ. ಜನರ ಭಾಗವಹಿಸುವಿಕೆಯಿಂದ ಇಲ್ಲಿ ಅದ್ಭುತವಾದುದನ್ನು ಸಾಧಿಸಬಹುದು.

**ಪರ್ಯಾಯ ಅಥವಾ ಪ್ರಾದೇಶಿಕ ರಾಜಕಾರಣದ ಪ್ರಯತ್ನಗಳು ರಾಜ್ಯದಲ್ಲಿ ವಿಫಲವಾಗಿವೆ ಎಂಬುದು ನಿಮಗೆ ಗೊತ್ತೆ?**

ಅರಿವಿದೆ. ಈ ವಿಫಲತೆಗೆ ಕಾರಣವಾದ ಅಂಶಗಳನ್ನು ಅರಿತು ಜಾಗ್ರತೆಯಿಂದ ಹೆಜ್ಜೆಯಿಡಬೇಕು. ಅನವಶ್ಯಕವಾಗಿ ಜನರ ನಿರೀಕ್ಷೆಗಳನ್ನು ಹೆಚ್ಚಿಸಬಾರದು.

**ನಿಮ್ಮೊಂದಿಗಿರುವ ಸಂಘಟನೆ ಮತ್ತು ಪಕ್ಷಗಳು ಯಾವುವು?**

ಜನ ಸಂಗ್ರಾಮ ಪರಿಷತ್, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಜನಶಕ್ತಿ, ಸಮಾನತೆಗಾಗಿ ಜನಾಂದೋಲನ, ಕರ್ನಾಟಕ ಸರ್ವೋದಯ ಪಕ್ಷ, ಸ್ವರಾಜ್ ಅಭಿಯಾನ, ಕರ್ನಾಟಕ ಸ್ವರಾಜ್ ಪಕ್ಷ, ಗ್ರಾಮ ಸ್ವರಾಜ್ ಅಭಿಯಾನ, ಕರ್ನಾಟಕ ಪ್ರಜ್ಞಾವಂತ ನಾಗರಿಕರ ಸಂಘ ಇವಿಷ್ಟು ಈ ಹಂತದಲ್ಲಿ ನಮ್ಮೊಂದಿಗಿರುವ ಸಂಘಟನೆಗಳು ಮತ್ತು ಪಕ್ಷಗಳು.

ನಾವು ಬೇರೆ ಬೇರೆ ಸಂಘಟನೆಗಳೆಲ್ಲ ಕೂಡಿ ಜನಪರ್ಯಾಯ ಸಾಧ್ಯತೆಗಳ ಬಗ್ಗೆ ಚಿಂತನೆ ಏನು ಮಾಡ್ತಾ ಇದ್ದೀವಿ, ಇದೇನೂ ಪೂರ್ಣಪ್ರಮಾಣದ ರಾಜಕಾರಣ ಅಲ್ಲ. ಇದೊಂದು ವಿಶಾಲ ತಳಹದಿಯ ಮಹಾಮೈತ್ರಿ. ಆದರೆ ರಾಜಕಾರಣ ನಿರ್ಲಕ್ಷಿಸುವ ಹಾಗಿಲ್ಲ. ೨೦% ನಷ್ಟು ಇಲ್ಲಿ ರಾಜಕಾರಣಕ್ಕೆ ಅವಕಾಶ ಇರಬಹುದಷ್ಟೇ. ಒಟ್ಟಾರೆ ಜನಚಳುವಳಿಗಳ ಶಕ್ತಿಗಳನ್ನು ಅಧಿಕಾರಕ್ಕೆ ತರುವುದು ಈ ಮಹಾಮೈತ್ರಿಯ ಉದ್ದೇಶ.

**(ಸಂದರ್ಶಕ ಸರ್ಜಾಶಂಕರ ಹರಳಿಮಠ ಅವರು ಶಿವಮೊಗ್ಗದ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕರಾಗಿದ್ದು ದೇಶೀ ವಸ್ತ್ರ ಮತ್ತು ವಸ್ತುಗಳ ಮಳಿಗೆಯನ್ನೂ ನಡೆಸುತ್ತಾ ಸಾಮಾಜಿಕ ಹೋರಾಟಗಳಲ್ಲೂ ಸಕ್ರಿಯರಾಗಿದ್ದಾರೆ)**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಮಾನವೀಯತೆ, ವೈಚಾರಿಕತೆ, ಸದ್ವರ್ತನೆಯಲ್ಲಿ ನಂಬಿಕೆಯಿಡಿ. ವಿದ್ಯಾವಂತರಾಗಿ ಐಕ್ಯತೆ ಸಾಧಿಸಿ

**– ಡಾ. ಬಿ.ಆರ್. ಅಂಬೇಡ್ಕರ್**




# ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್

**ನಂ. ೨೫, ೬ನೇ ತಿರುವು, ೬ನೇ ವಾರ್ಡ್, ಸಂತೋಷ್ ನಗರ, ೨ನೇ ಹಂತ,**

**ಅಟ್ಟೂರು, ಯಲಹಂಕ, ಬೆಂಗಳೂರು – ೫೬೦೦೬೪**

# ಗಾಂಧಿ V/S ಅರುಂಧತಿ ರಾಯ್: ಗಾಂಧಿ ದರ್ಶನದ ಎರಡು ನೋಟಗಳು





'ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್" ಎಂಬ ಗಮನಾರ್ಹ ಕಾದಂಬರಿಗಾಗಿ ಬೂಕರ್ ಪ್ರಶಸ್ತಿ ಪಡೆದು ಹೆಸರಾದ ಅರುಂಧತಿ ರಾಯ್ ನಂತರದ ದಿನಗಳಲ್ಲಿ ಸೃಜನಶೀಲ ಬರವಣಿಗೆಯನ್ನೇ ನಿಲ್ಲಿಸಿ ಎಡಪಂಥೀಯ ಚಿಂತನೆಗಳ ಸಾಮಾಜಿಕ–ರಾಜಕೀಯ ಲೇಖನಗಳನ್ನು ಬರೆಯತೊಡಗಿದಾಗಿನಿಂದ ದೇಶದ ಪ್ರಗತಿಪರವೆನ್ನಲಾಗುವ ಜನರ ತೀವ್ರ ಗಮನ ಸೆಳೆದಿದ್ದಾರೆ. ವಿಶೇಷವಾಗಿ ಬಸ್ತರ್‌ನ ಅಮೂಲ್ಯ ಖನಿಜ ಸಂಪತ್ತನ್ನು ದೋಚುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧದ ಆಕೆಯ ಬರಹಗಳು, ಅವು ಅಲ್ಲಿನ ಆದಿವಾಸಿಗಳು ಮತ್ತು ನಕ್ಸಲೀಯ ಆಂದೋಲನ ಕುರಿತ ಜೀವಂತ ಕಥನಗಳ ಹಿನ್ನೆಲೆಯಲ್ಲಿ ಈ ಲೇಖಕಿಯನ್ನು ಅಂತಾರಾಷ್ಟ್ರೀಯ ರಾಜಕೀಯ ವ್ಯಾಖ್ಯಾನಕಾರ್ತಿಯ ಪಟ್ಟಕ್ಕೇರಿಸಿವೆ. ಈ ಪಟ್ಟದ ವಿಶ್ವಾಸದೊಂದಿಗೆ ಅರುಂಧತಿ ರಾಯ್ ಅಂಬೇಡ್ಕರ್ ಅವರ **Annihilation of caste'** ಕೃತಿಯಯನ್ನು ವ್ಯಾಖ್ಯಾನಿಸಿ **The Doctor and the Saint** ಎಂಬ ಆ ಕೃತಿಯ ಹೊಸ ಆವೃತ್ತಿಯನ್ನು ಹೊರತಂದು ಅದರಲ್ಲಿ ಗಾಂಧಿ ಕುರಿತು ಮಾಡಿರುವ ಟೀಕೆ–ಟಿಪ್ಪಣಿಗಳು ದೊಡ್ಡ ವಿವಾದದ ಧೂಳನ್ನೇ ಎಬ್ಬಿಸಿವೆ. ಈ ಸಂಬಂಧವಾಗಿ ಆಕೆ ನೀಡಿರುವ ಹಲವು ಟಿವಿ ಸಂದರ್ಶನಗಳೂ ವಿವಾದಕ್ಕೀಡಾಗಿವೆ.

ಗಾಂಧಿ ಬಗ್ಗೆ ಅರುಂಧತಿ ಮಾಡಿರುವ ಟೀಕೆ–ಟಿಪ್ಪಣಿಗಳು ಗಾಂಧಿಯನ್ನು ಸಮಗ್ರವಾಗಿ ನೋಡಲಾಗದ ಎಡಪಂಥೀಯ ಕುರುಡುಗಣ್ಣಿಗೆ ಸಾಕ್ಷಿಗಳಾಗಿವೆ ಎಂಬ ಅಭಿಪ್ರಾಯಗಳು ವ್ಯಕ್ತವಾಗತೊಡಗಿದ್ದು, ಗಾಂಧಿಯನ್ನು ನೋಡಬೇಕಾದ ಇಂದಿನ ಕ್ರಮಗಳ ಬಗ್ಗೆ ದೊಡ್ಡ ಚರ್ಚೆಯನ್ನೇ ಹುಟ್ಟು ಹಾಕಿವೆ. ಇಂತಹ ಚರ್ಚೆ ಮಾಡುವ ಎರಡು ಬರಹಗಳ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಮೊದಲನೆಯದು ಅಮೇರಿಕನ್ ಮಹಿಳೆಯಾದ ಬಿ.ಕೆ.(ಕಮಲಾ) ವಿಲೆಯವರು ಆರುಂಧತಿ ರಾಯ್‌ಗೆ ಬರೆದ ಬಹಿರಂಗ ಪತ್ರ.



ಕಮಲಾ ಆಂಟಿಯೆಂದೇ ತನ್ನ ಸಹಚರರಿಂದ ಕರೆಯಲ್ಪಡಲು ಇಚ್ಛಿಸುವ ಪಿ.ಕೆ.(ಕಮಲಾ) ವಿಲೆ ಮೂಲತಃ ಅಮೇರಿಕಾದ ಕೊನೆಕ್ಟಿಕಟ್ ರಾಜ್ಯದ ಚಾಪ್ಲಿನ್ ನಗರದವರಾಗಿದ್ದು ಭಾರತಕ್ಕೆ ಅನೇಕ ಬಾರಿ ಭೇಟಿ ನೀಡಿ ೧೨ ವರ್ಷಗಳ ಕಾಲ 'ಅಮ್ಮ'ನ ಆಶ್ರಮದಲ್ಲಿ ನೆಲೆಸಿ ಭಾರತದ ಅಂತಃಕರಣವನ್ನು ಬಲ್ಲವರಾಗಿದ್ದಾರೆ. ಭೂ ಸಂಹಿತೆ ಅವರ ಕೇಂದ್ರ ಕಳಕಳಿಯಾಗಿದ್ದು, ತಾಯಿಯಾಗಿ, ಗೃಹಿಣಿಯಾಗಿ, ಚಿತ್ರ ಕಲಾವಿದೆಯಾಗಿ, ಶಿಲ್ಪಿಯಾಗಿ ಶಿಕ್ಷಕಿಯಾಗಿ, ತೋಟಗಾರ್ತಿಯಾಗಿ, ಸಂಗೀತ ಸಂಯೋಜಕಿಯಾಗಿ, ಸ್ವಚ್ಚತಾ ಕಾರ್ಯಕರ್ತೆಯಾಗಿ, ಪ್ರಾಣಿ ಮತ್ತು ಪರಿಸರ ಕಾರ್ಯಕರ್ತೆಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಈ ಕ್ಷೇತ್ರಗಳನ್ನು ಕುರಿತ ಪುಸ್ತಕಗಳು ಮತ್ತು ಬರಹಗಳ ಮೂಲಕ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾರೆ.–ಸಂ.

**ನೋಟ-೧**

## ಅರುಂಧತಿ ರಾಯ್‌ಗೊಂದು ಬಹಿರಂಗ ಪತ್ರ

**–ಪಿ.ಕೆ.ವಿಲೆ**

ಸಂಗ್ರಹಾನುವಾದ: **ಎಂ. ರಾಜು**

ಪ್ರಿಯ ಅರುಂಧತಿ ರಾಯ್,

ವಂದನೆಗಳು,

ನಿಮ್ಮ ಬರಹಗಳು, ಸಂದರ್ಶನಗಳು ಮತ್ತು ಚಟುವಟಿಕೆಗಳ ಮೂಲಕ ೨೦೦೮ರಿಂದಲೂ ನಿಮ್ಮನ್ನು ಗಮನಿಸುತ್ತಾ ಬಂದಿದ್ದೇನೆ. ೧೯೯೮ರಲ್ಲಿ 'ಬಹುಜನರ ಹಿತಕ್ಕಾಗಿ' ಎಂಬ ಪ್ರಬಂಧದಿಂದ ನಿಮ್ಮ ಬರಹಗಳ ಪ್ರಖರತೆ, ಹಾಸ್ಯಪ್ರಜ್ಞೆ, ನಿರ್ಭೀತಿ ಮತ್ತು ಸದುದ್ದೇಶಗಳ ಪರಿಚಯವನ್ನೂ ಮಾಡಿಕೊಂಡಿದ್ದೇನೆ. ಸಾಮಾಜಿಕ ನ್ಯಾಯದ ಮತ್ತು ಭಾರತದ ಬಗೆಗಿನ ನಿಮ್ಮ ಕಾಳಜಿಯಿಂದ ನಾನು ಪ್ರಭಾವಿತಳಾಗಿದ್ದೇನೆ.

ಈ ಪ್ರಬಂಧದಲ್ಲಿ ನಿಮ್ಮ ದೃಷ್ಟಿಯು ಒಬ್ಬ ಶಾಲಾ ಬಾಲಕಿಯ ಮಟ್ಟದ ದೃಷ್ಟಿ ಎಂಬುದನ್ನು ಮತ್ತು ಗಾಂಧೀಜಿಯ ಆಲೋಚನೆ ಮತ್ತು ನಡೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಗಾಂಧೀಜಿಯವರನ್ನು ಜಗತ್ತಿನ ಎದುರು ಅನ್ಯಾಯವಾಗಿ ತಪ್ಪಾಗಿ ಅರ್ಥೈಸುತ್ತಿರುವುದನ್ನು ಕಂಡೆ. "ಸತ್ಯವು ತನ್ನ ಷರಾಯಿಯನ್ನು ಧರಿಸುವುದಕ್ಕೆ ಮೊದಲೇ ಸುಳ್ಳು ಅರ್ಧ ಪ್ರಪಂಚವನ್ನು ದಾಟಿ ಹೋಗಿರುತ್ತದೆ" ಎಂಬುದಾಗಿ ಚರ್ಚಿಲ್ ಹೇಳುತ್ತಿದ್ದರು. ಜಾತಿ ಮತ್ತು ಇತರ ಸಂಗತಿಗಳ ಬಗ್ಗೆ ನಿಮಗಿರುವ ಖಚಿತ ಐತಿಹಾಸಿಕ ಜ್ಞಾನದ ಕೊರತೆಯನ್ನು ಕುರಿತು 'ನಾನು ಒಂದು ಅಧಿಕೃತ ನೆಲೆಯಿಂದ ಬರೆಯುವುದಿಲ್ಲ. ತನಗೆ ಮತ್ತು ತಾನು ಬದುಕುವ ಸಮಾಜಕ್ಕೆ ಮುಖ್ಯವೆನಿಸುವ ವಿಚಾರಗಳಲ್ಲಿ ತೊಡಗುವ ವ್ಯಕ್ತಿಯ ನೆಲೆಯಿಂದ ಬರೆಯುತ್ತೇನೆ' ಎಂದು ನೀವೇ ಹೇಳಿಕೊಂಡಿದ್ದೀರಿ, ನೀವು ಏನನ್ನು ಬರೆಯುತ್ತೀರೋ ಅದನ್ನೇ ನುಡಿಯುತ್ತೀರಿ.

ಗಾಂಧೀಜಿಯ ಭಾಷಣಗಳ ಮತ್ತು ಬರವಣಿಗೆಯ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಅವರ ನಡೆಗಳ ವಾಸ್ತವ ಪ್ರಯೋಗಗಳಿಂದ ನಾನು ಅವರ ಬಗ್ಗೆ ಗಳಿಸಿಕೊಂಡ ದೃಷ್ಟಿಕೋನವನ್ನು ನಿಮಗೆ ವಿವರಿಸುವುದಕ್ಕಾಗಿ ನಿಮ್ಮನ್ನು ಭೇಟಿಯಾಗಬೇಕೆಂಬುದು ನನ್ನ ಬಹು ದಿನಗಳ ಆಲೋಚನೆ. ನನ್ನ ತಂದೆಯ ಮೊದಲ ಮುವ್ವತ್ತೇಳು ವರ್ಷಗಳು ಗಾಂಧೀಜಿಯವರ ಕೊನೆಯ ಮುವ್ವತ್ತೇಳು ವರ್ಷಗಳಾಗಿದ್ದವು. ಅಮೇರಿಕಾದ ಕನೆಕ್ಟಿಕಟ್‌ನಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದ ನನ್ನ ತಂದೆ ಗಾಂಧೀಜಿಯ ಮೇಲಿನ ಅಭಿಮಾನದಿಂದ ನನ್ನ ಅಣ್ಣನಿಗೆ ಮೋಹನ್‌ದಾಸ್ ಎಂಬ ಹೆಸರನ್ನಿಟ್ಟಿದ್ದರು. ನನ್ನ ತಾಯಿ ಸಾಮ್ರಾಜ್ಯಶಾಹಿಯ ಪ್ರಭಾವದಲ್ಲಿ ಬೆಳೆದಾಕೆ: ಮನುಷ್ಯನ ಮನಸ್ಸು ಮತ್ತು ದೃಷ್ಟಿಯನ್ನು ಸಾಮ್ರಾಜ್ಯಶಾಹಿಯು ಹೇಗೆ ನಿಯಂತ್ರಿಸುತ್ತದೆ ಎಂಬುದರ ನೇರ ಅನುಭವ ನನಗಿದೆ. ಹಾಗಾಗಿ ಗಾಂಧೀಜಿಯ ಪ್ರಭಾವಗಳೂ ವಿಚಾರಗಳೂ ನನ್ನ ಜೀವನ ಪರ್ಯಂತ ನನ್ನೊಡನೆ ಉಳಿದಿವೆ.

ನನ್ನ ಮತ್ತು ನಿಮ್ಮ ನಡುವೆ ಇರುವ ಈ ಭಿನ್ನತೆಗಳೇ ಗಾಂಧೀಜಿಯ ಬಗೆಗಿನ ನಮ್ಮ ಭಿನ್ನದೃಷ್ಟಿಗೆ ಹಿನ್ನೆಲೆ. ಜನರನ್ನು ಮೆಚ್ಚಿಸಬಯಸುವ ನಿಂದಾತ್ಮಕವಾದ, ತುಸು ಕಾಲ್ಪನಿಕವಾದ ಸಂದರ್ಭಗಳ ತಿಳುವಳಿಕೆಯಿಲ್ಲದ ಅಸಮಗ್ರ ದೃಷ್ಟಿ ನಿಮ್ಮದು. ತನ್ನ ಮನಸ್ಸು ಮತ್ತು ಸಂದರ್ಭಗಳ ಮೂಲಕ ಸತ್ಯಶೋಧಕನೊಬ್ಬ ಅತ್ಯಂತ ಶ್ರಮವಹಿಸಿ ಕೆಲಸ ಮಾಡುವುದನ್ನು ಒಳಗಿನಿಂದ ಕಂಡ ದೃಷ್ಟಿ ನನ್ನದು. ಆತ್ಮಶೋಧಕವಾದ ಅಪಾರ ಬರವಣಿಗೆಗಳಿಂದಾಗಿ ಗಾಂಧೀಜಿಯ ಜೀವನ ಒಂದು ತೆರೆದ ಪುಸ್ತಕವಾಗಿತ್ತು. ಗಾಜಿನ ಮನೆಯೊಳಗಿನ ಬದುಕಾಗಿತ್ತು. ಗಾಂಧೀಜಿ ತಾವೇ ಒಪ್ಪಿಕೊಂಡ ಅವರ ದೌರ್ಬಲ್ಯಗಳನ್ನು ಬಳಸಿ ಜನ ಅವರನ್ನು ಟೀಕಿಸಲು ಸಾಧ್ಯವಾಗುವ ಮಟ್ಟಿಗೆ ತೆರೆದಿಟ್ಟ ಪುಸ್ತಕ ಅವರ ಬದುಕು.

ಭಾರತದ ಆಧುನಿಕ ವಿದ್ಯಾವಂತ ಎಂದು ಕರೆಯಲ್ಪಡುವ ಜನಸಮುದಾಯವು ಕೇವಲ ಕೇಳಿಕೆಯ ಮಾತುಗಳನ್ನಾಧರಿಸಿ ಗಾಂಧೀಜಿಯನ್ನು ನಿಂದಿಸುವುದನ್ನು ಕಂಡು ಅಮೇರಿಕನ್ನಳಾದ ನನಗೆ ಆಶ್ಚರ್ಯವಾಗುತ್ತದೆ. ದೀರ್ಘಕಾಲ ಭಾರತದ ನಿವಾಸಿಯಾಗಿದ್ದು ಹಲವು ಸಲ ಇಲ್ಲಿ ಅತಿಥಿಯಾಗಿದ್ದ ನನಗೆ ತಮ್ಮನ್ನು ತಾವು ಬುದ್ಧಿವಂತರು, ಶ್ರೇಷ್ಠರು ಎಂದುಕೊಂಡಿರುವ ಎಷ್ಟೋ

ಜನ–ಕಾವಿಧಾರಿ ಸಂನ್ಯಾಸಿಗಳ ಥರದವರೂ ಕೂಡ–ಗಾಂಧೀಜಿಯ ಬಗ್ಗೆ ಅಸಮಧಾನ ಹೊಂದಿರುವುದನ್ನು ಕಂಡು ನನಗೆ ದಿಗಿಲಾಗಿದೆ. ಗಾಂಧೀಜಿಯ ಬಗ್ಗೆ ನಮಗೆ ಇರಬೇಕಾದ ಒಂದು ಸ್ಪಷ್ಟತೆ ಎಂದರೆ, ಅವರು ತಮ್ಮ ಬೆಳವಣಿಗೆಗೆ ಬೇಕಾದ ಬೌದ್ಧಿಕ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಎಂದೂ ಬಿಟ್ಟುಕೊಡಲಿಲ್ಲ ಎಂಬುದು. ತಾವೊಬ್ಬ ಸಾಧಕ, ಸತ್ಯಾನ್ವೇಷಿ ಎಂಬುದು ಅವರ ಭಾವನೆಯಾಗಿತ್ತು. ಉನ್ನತ ಸ್ಥಿತಿಯೊಂದನ್ನು ತಲುಪಿರುವ ಒಬ್ಬ ಮನುಷ್ಯ ಮುಂದಿನ ಪೀಳಿಗೆಗೆ ತಾನು ಬಿಟ್ಟುಹೋಗುವ ಕೊಡುಗೆಯು ಸಾಧನೆಯ ಹಾದಿಯಲ್ಲಿ ತಾನು ಮಾಡಿದ ತಪ್ಪುಗಳನ್ನು ಬಿಂಬಿಸಬಾರದು, ತಾನು ತಲುಪಿದ ಸ್ಥಿತಿಯನ್ನು ಮಾತ್ರ ಅದು ಬಿಂಬಿಸುವಂತಿರಬೇಕು ಎಂದು ಬಯಸುತ್ತಾನೆ. ಆದರೆ ತಮ್ಮ ೬೩ನೇ ವಯಸ್ಸಿನಲ್ಲಿ ಗಾಂಧೀಜಿ ಒಮ್ಮೆ "ನಾನು ಸುಸಂಗತವಾಗಿ ಕಾಣಿಸುವ ಬಗ್ಗೆ ನನಗೆ ಕಾಳಜಿ ಇಲ್ಲ. ನನ್ನ ಕಾಳಜಿ ಇರುವುದು ನನ್ನ ದೇವರಾದ ಸತ್ಯದ ಕರೆಯನ್ನು ಮನ್ನಿಸಲು ನಾನು ಸಿದ್ಧನಾಗಿರುವುದರ ಬಗ್ಗೆ. ವಿಭಿನ್ನ ಕಾಲಘಟ್ಟಗಳಲ್ಲಿ ನಾನು ಬರೆದ ನನ್ನ ಎರಡು ಬರಹಗಳಲ್ಲಿ ಅಸಂಗತವಾದುದು ಏನಾದರೂ ಕಂಡುಬಂದಲ್ಲಿ ನಾನು ಎರಡನೆಯ ಸಲ ಏನು ಹೇಳಿದ್ದೇನೋ ಅದನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕೆಂದು ನನ್ನ ಓದುಗರನ್ನು ವಿನಂತಿಸುತ್ತೇನೆ" ಎನ್ನುತ್ತಾರೆ. ಹಾಗಾಗಿ ಯಾವುದೇ ಒಂದು ವಿಚಾರದಲ್ಲಿ ಗಾಂಧೀಜಿಯವರ ನಿಲುವು ಏನು ಎಂಬುದನ್ನು ತಿಳಿಯಲು ಅವರು ಎಂದೋ ಬರೆದದ್ದನ್ನೇ ಅವಲಂಬಿಸದೇ ಅವರ ಬರಹಗಳಿಂದ ರಚಿಸಿಕೊಳ್ಳಬಹುದಾದ ಮಾನಸಿಕ ಚಿತ್ರಣವನ್ನು ಅವಲಂಬಿಸಬೇಕಾಗುವುದು. ಯಾವುದೋ ಒಂದು ಬರಹ ಅಥವಾ ಹೇಳಿಕೆಯೇ ಅಂತಿಮವಲ್ಲ ಎಂಬ ಎಚ್ಚರವಿಲ್ಲದೇ ಹೋದಲ್ಲಿ ಅವರು ಎಲ್ಲೋ ಎಂದೋ ನೀಡಿದ ಹೇಳಿಕೆಯನ್ನೇ ಅವರ ಸದಾಕಾಲದ ಅಭಿಪ್ರಾಯ ಎಂಬ ನಿರ್ಧಾರಕ್ಕೆ ಯಾರಾದರೂ ಬರಬಹುದಾದ ಅಪಾಯವುಂಟು. ಗಾಂಧೀಜಿಯ ನಿಜವಾದ ಅಭಿಪ್ರಾಯವನ್ನು ತಿಳಿಯಬೇಕೆಂದರೆ ಇತಿಹಾಸವನ್ನೂ ತಿಳಿಯಬೇಕು. ಅವರು ಯಾರನ್ನು ಕುರಿತು ಯಾವಾಗ, ಏಕೆ ಹೇಳಿದರು ಎಂಬುದನ್ನೂ ತಿಳಿಯಬೇಕು. ಸಮಾಜೋಸಾಂಸ್ಕೃತಿಕ ಅಂಶಗಳನ್ನೂ, ಪರಿಸರವನ್ನೂ, ಪರಿಸ್ಥಿತಿಯನ್ನೂ ಹೀಗೆ ಪ್ರಸ್ತುತವಾಗಬಲ್ಲ ಇತರ ಸಂಗತಿಗಳನ್ನೂ ನಿರ್ಲಕ್ಷಿಸಕೂಡದು.

ಟಿವಿ ಕಾರ್ಯಕ್ರಮವೊಂದರಲ್ಲಿ ನಿಮ್ಮನ್ನು ಸಂದರ್ಶಿಸಿದ ಲಾರಾ ಫ್ಲಾಂಡರ್ಸ್, ಗಾಂಧೀಜಿ ತಮ್ಮ ೭೦ನೇ ವಯಸ್ಸಿನಲ್ಲಿ ತಾವು ಸಾಧಿಸಿದ ಮನೋನಿಗ್ರಹದ ಪರೀಕ್ಷೆಗಾಗಿ ತಮ್ಮ ಸೋದರ ಸಂಬಂಧಿ ಹುಡುಗಿಯ ಜೊತೆ ನಿದ್ರಿಸುತ್ತಿದ್ದುದರ ಬಗ್ಗೆ ಒಂದು ಟೀಕೆಯೊಂದಿಗೆ ತಮ್ಮ ಸಂದರ್ಶನವನ್ನು ಮುಕ್ತಾಯಗೊಳಿಸಿದಾಗ, ನೀವು ಗಾಂಧೀಜಿಯ ಬಗ್ಗೆ ಅವರೊಬ್ಬ ಜನಾಂಗೀಯವಾದಿ, ಜಾತಿವ್ಯವಸ್ಥೆಯ ಪ್ರತಿಪಾದಕ, ಕೊಳಕು ಮುದುಕ ಎಂಬ ಅಭಿಪ್ರಾಯವನ್ನು ಮೂಡಿಸಿದ್ದೀರಿ ಎಂಬ ಭಾವನೆ ಬರುತ್ತದೆ. ಬ್ರಹ್ಮಚರ್ಯ ಎಂಬುದರ ಅರ್ಥವೇನು ಎಂಬುದು ನಿಮಗೆ ತಿಳಿದಿಲ್ಲ. ಗಾಂಧೀಜಿ ಒಬ್ಬ ಮಹಾತ್ಮ ಎಂಬ ಸಾರ್ವತ್ರಿಕ ಅಭಿಪ್ರಾಯವನ್ನು ಆಧರಿಸಿ ನೀವು ಪ್ರತಿಕ್ರಿಯಿಸುತ್ತೀರಿ. ಆತನನ್ನು ಒಬ್ಬ ಸಂತನೆಂದು (ವ್ಯಂಗ್ಯದೊಂದಿಗೆ?) ಕರೆಯುತ್ತೀರಿ. ಆದರೆ ತಪ್ಪಾಗಿ ಚಿತ್ರಿಸುತ್ತೀರಿ. ಗಾಂಧೀಜಿ 'ಮಹಾತ್ಮ' ಎಂಬ ಬಿರುದನ್ನು ಇಷ್ಟಪಡುತ್ತಿರಲಿಲ್ಲ. ಪ್ರಜಾಪ್ರಭುತ್ವವನ್ನು ಒಂದು ವಂಶಪಾರಂಪರಿಕ ವ್ಯವಸ್ಥೆಯನ್ನಾಗಿಯೂ, ಮನುಷ್ಯರನ್ನು ದೇವರುಗಳನ್ನಾಗಿಯೂ ಮಾಡಿರುವ ಮನುಷ್ಯರನ್ನು ಆರಾಧಿಸುವ ಭಾರತೀಯರ ಗುಣವನ್ನು ಅದು ಬಡಿದೆಬ್ಬಿಸುತ್ತದೆ ಎಂಬ ಕಾರಣಕ್ಕೆ ಗಾಂಧೀಜಿ ಅಂಥದೊಂದು ಪಟ್ಟ ತಮಗೆ ಉಚಿತವಲ್ಲ ಎನ್ನುತ್ತಿದ್ದರು.

ತಮಗೆ ೬೬ವರ್ಷ ವಯಸ್ಸಾಗಿದ್ದಾಗ ಒಮ್ಮೆ ಲೈಂಗಿಕ ಬಯಕೆ ಅವರ ಮನಸ್ಸಿನಲ್ಲಿ ಸುಳಿದುಹೋಗಿದ್ದನ್ನು ಅವರು ಉಲ್ಲೇಖಿಸುತ್ತಾರೆ. ಗಾಂಧೀಜಿಯ ಮಟ್ಟಿಗೆ ಲೈಂಗಿಕತೆ ಎನ್ನುವುದು ದೈಹಿಕ ಅನುಭವಕ್ಕೆ ಸೀಮಿತವಾದುದಲ್ಲ. ಕೇವಲ ದೈಹಿಕ ಪರಿಶುದ್ಧತೆ ಅವರಿಗೆ ಮುಖ್ಯವಲ್ಲ. ಅದು ಮನುಷ್ಯನ ಆಲೋಚನೆ ಮತ್ತು ಮಾತಿನ ಪರಿಧಿಗೂ ವಿಸ್ತರಿಸುವಂಥದು. ಮನದ ಮೂಲೆಯಲ್ಲೆಲ್ಲೋ ಒಮ್ಮೆ ಕ್ಷಣಮಾತ್ರ ಸುಳಿದು ಮರೆಯಾದ ಆಲೋಚನೆಗೂ ಸಹ ವಿನಾಯಿತಿ ನೀಡದಷ್ಟು ಕಟ್ಟುನಿಟ್ಟಿನ ಆತ್ಮನಿರೀಕ್ಷಣೆಗೆ ಗಾಂಧೀಜಿ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. 'ಗೀತೆಯ ಉಪದೇಶವು ನಿಚ್ಚಳವೂ ಖಚಿತವೂ ಆಗಿದೆ. ನಕ್ಷತ್ರಗಳ ನಕ್ಷತ್ರವನ್ನು ಒಮ್ಮೆ ಆಶ್ರಯಿಸಿದ ಮನಸ್ಸು ಎಂದೂ ಭ್ರಷ್ಟವಾಗದು, ದೇವರೇ, ಅಷ್ಟೆಲ್ಲಾ ಹೊಗಳಿಕೆ ತರುವ ಮಹಾತ್ಮ ಎಂಬ ಬಡಿವಾರವು ನನ್ನನ್ನು ಮೂರ್ಖನನ್ನಾಗಿಸಲಿಲ್ಲ' ಎನ್ನುತ್ತಾರೆ.

ಗಾಂಧೀಜಿಯನ್ನು ಅರ್ಥ ಮಾಡಿಕೊಳ್ಳದೇ, ಬ್ರಹ್ಮಚರ್ಯ ಎಂದರೆ



**ತಮ್ಮ ಆಪ್ತ ಪರಿವಾರದೊಂದಿಗೆ ಗಾಂಧಿಯ ವಾಯು ವಿಹಾರ**

ಏನು ಎಂಬುದನ್ನು ಅರ್ಥಮಾಡಿಕೊಳ್ಳದೇ ಅವರನ್ನು ವಿಮರ್ಶಿಸಲಾಗದು. ಗಾಂಧೀಜಿ ಯಾವುದೇ ಒಂದು ಆದರ್ಶವನ್ನು ಒಪ್ಪಿದಾಗ ಅವರ ವೈಯಕ್ತಿಕ ಜೀವನವೇ ಒಂದು ವೈಜ್ಞಾನಿಕ ಪ್ರಯೋಗದ ರೂಪವನ್ನು ಪಡೆಯುತ್ತಿತ್ತು. ಹಾಗಾಗಿಯೇ ಅವರು ತಮ್ಮ ಆತ್ಮಚರಿತ್ರೆಯನ್ನು 'ಸತ್ಯದೊಡನೆ ಪ್ರಯೋಗದ ನನ್ನ ಕಥೆ' ಎಂದು ಕರೆದಿದ್ದಾರೆ. ಅವರ ಪ್ರಯೋಗ ಆರಂಭವಾಗುವುದು ಸಸ್ಯಾಹಾರದ ಮೂಲಕ. ನಂತರ ಸಮಾಜಸೇವೆ ಇದಕ್ಕೆ ಸೇರ್ಪಡೆಯಾಗುತ್ತದೆ. ಅದು ಬ್ರಹ್ಮಚರ್ಯದ ವಿಷಯಕ್ಕೆ ಮುಂದುವರೆಯುತ್ತದೆ. ಗಾಂಧೀಜಿಯ ಪ್ರಯೋಗವನ್ನು ಈ ಹಿನ್ನೆಲೆಯಲ್ಲೇ ನೋಡಬೇಕು. ಅಲ್ಲಿ ಯಾವುದೇ ರೀತಿಯ ಲೈಂಗಿಕ ಆಕರ್ಷಣೆಯಾಗಲೀ ಸಂಪರ್ಕವಾಗಲೀ ಇರಲಿಲ್ಲ. ಈ ಪ್ರಯೋಗದಿಂದ ತಮ್ಮ ಬ್ರಹ್ಮಚರ್ಯಕ್ಕೆ ಬಲಬಂತು ಎಂಬುದಾಗಿ ನುಡಿಯುತ್ತಾರೆ.

ನಂತರ ೧೯೪೭ರಲ್ಲಿ ಇದೊಂದು ಮೂರ್ಖ ಪ್ರಯತ್ನ ಎಂಬುದನ್ನು ಅವರು ಮನಗಾಣುತ್ತಾರೆ. ಸತ್ಯಾನ್ವೇಷಣೆಯ ಪ್ರಯತ್ನವನ್ನು ವಂಚಿಸಬಲ್ಲ ಹುಸಿ ಸಮರ್ಥನೆಯನ್ನು ಹುಡುಕಿಕೊಳ್ಳಬಲ್ಲ ಮನಸ್ಸಿನ ಸಾಧ್ಯತೆಯನ್ನು ಅರಿತಾಗ ಅವರು ಆಶ್ರಮವಾಸಿಗಳಿಗೆ ಒಂದು ಪಶ್ಚಾತ್ತಾಪದ ಪತ್ರ ಬರೆಯುತ್ತಾರೆ. "ನನ್ನ ನಡೆಯು ನಿರರ್ಥಕವಾದದ್ದು ಮತ್ತು ಅಸೂಯೆಯಿಂದ ಪ್ರಚೋದಿಸಲ್ಪಟ್ಟದ್ದು. ನನ್ನ ಪ್ರಯೋಗವು ಅಪಾಯಕಾರಿಯಾಗಿದ್ದಲ್ಲಿ ನಾನದನ್ನು ಕೈಗೊಳ್ಳಬಾರದಿತ್ತು. ಅದು ನಿಜಕ್ಕೂ ಪ್ರಯತ್ನಕ್ಕೆ ಅರ್ಹವಾದುದಾಗಿದ್ದಲ್ಲಿ ನನ್ನ ಸಹವರ್ತಿಗಳು ಯಾರಾದರೂ ಅದನ್ನು ಕೈಗೊಳ್ಳುವಂತೆ ಪ್ರೇರೇಪಿಸಬೇಕಾಗಿತ್ತು. ನನ್ನ ಪ್ರಯೋಗವು ಬ್ರಹ್ಮಚರ್ಯದ ಬಗೆಗಿನ ಸ್ಥಾಪಿತ ನಿಯಮಗಳ ಉಲ್ಲಂಘನೆಯಾಗಿದೆ. ಸದಾಕಾಲವೂ ಕಾಯಾ ವಾಚಾ ಮನಸಾ ಪರಿಶುದ್ಧರಾಗಿರುವ ಸಂತ ಶಿಖದೇವಜಿ ಅಂಥವರು ಮಾತ್ರವೇ ಇಂತಹ ಪ್ರಯೋಗವನ್ನು ಕೈಗೊಳ್ಳಬಹುದು. ನನ್ನ ನಡೆ ಜವಾಬ್ದಾರಿಯುತವಾದುದಲ್ಲ."

ಇಲ್ಲಿ ಕೊರತೆ ಕಾಣಿಸುವುದು, ಆ ಪ್ರಯೋಗಗಳಲ್ಲಿ ಗಾಂಧಿಗೆ ಸಹಕರಿಸಿದ ಹೆಣ್ಣುಮಕ್ಕಳ ಬಗೆಗಿನ ಸಹಾನುಭೂತಿಯದು. ಇದಕ್ಕೆ ಕಾರಣ, ಗಾಂಧಿಯ ಪ್ರಯೋಗಗಳ ವಸ್ತು ಗಾಂಧಿಯೇ. ಅವರು ನಿಷ್ಕರುಣೆಯಿಂದ ನಿರ್ದಯದಿಂದ ತಮ್ಮನ್ನು ತಾವು ಪ್ರಯೋಗಕ್ಕೊಳಪಡಿಸಿಕೊಂಡಿದ್ದಾರೆ. ಅದು ಅತ್ಯುಚ್ಚ ಮಟ್ಟದ ಆತ್ಮನಿರೀಕ್ಷೆ, ಸ್ವಯಂಪರೀಕ್ಷೆ. ಗಾಂಧಿಯ ಹಲವು ಪ್ರಯೋಗಗಳ ಕ್ಷೇತ್ರ ಅವರ ಆಶ್ರಮಗಳೇ. ಆಶ್ರಮಗಳು ಸಾಮಾನ್ಯವಾಗಿ ಒಬ್ಬ ಪ್ರಭಾವಿ ನಾಯಕನನ್ನಾಧರಿಸಿ ನಿರ್ಮಾಣವಾಗಿರುತ್ತವೆ. ಅಲ್ಲಿ ಮಠದ ವಾತಾವರಣವಿದ್ದು ಅದೊಂದು ವಿಶಿಷ್ಟ ಸಮುದಾಯವಾಗಿರುತ್ತದೆ. ಪ್ರಜಾತಾಂತ್ರಿಕವಾಗಿರುವುದಕ್ಕಿಂತ ಹೆಚ್ಚಾಗಿ ಅವು ಧಾರ್ಮಿಕವಾಗಿರುತ್ತವೆ. ಆದರೆ, ಗಾಂಧೀಜಿಯ ಆಶ್ರಮದಲ್ಲಿ ಸತ್ಯವಂತಿಕೆಗೆ ಅವರು ನೀಡುತ್ತಿದ್ದ ಅಪಾರ ಒತ್ತಿನಿಂದಾಗಿ ಗಾಂಧೀಜಿಯ ಬ್ರಹ್ಮಚರ್ಯದ ಪ್ರಯೋಗಗಳನ್ನು ಗಟ್ಟಿಯಾಗಿ ಪ್ರಶ್ನಿಸಬಲ್ಲವರೂ ಅಲ್ಲಿದ್ದರು.

ಭಾರತದಲ್ಲಿ ಸ್ತ್ರೀ ಮತ್ತು ಪುರುಷರ ಪಾತ್ರಗಳು ಬಹಳ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದ್ದು, ಹಲವು ವಿಧಗಳಲ್ಲಿ ಗಾಂಧಿ ಈ ಮಾದರಿಗಳನ್ನು ಮೀರುತ್ತಿದ್ದರು. ಮಹಿಳೆಯರು ಸಬಲರೂ ಸ್ವತಂತ್ರರೂ ಆಗಬೇಕೆಂದು ಅವರು ಬಯಸುತ್ತಿದ್ದರು. ತಮ್ಮ ಪತ್ನಿ ಪುತ್ರರ ಬಗೆಗಿನ ನಿರೀಕ್ಷೆಗಳ ವಿಷಯದಲ್ಲಿ ಗಾಂಧಿ ಬಹಳ ಕಠಿಣವಾಗಿರುತ್ತಿದ್ದರು. ಆದರೆ ಅವರು ಸ್ವತಃ ತಮ್ಮ ಬಗ್ಗೆ



**ಜನಸ್ತೋಮದ ಮಧ್ಯೆ ಗಾಂಧಿ**

ತಾವೇ ಮತ್ತೂ ಹೆಚ್ಚು ಕಠಿಣವಾಗಿರುತ್ತಿದ್ದರು. ಮನಸ್ಸಿನ ನಿಯಂತ್ರಣವೆನ್ನುವುದು ಅತ್ಯಂತ ಕಠಿಣವಾದ ಎಚ್ಚರವನ್ನು ಬೇಡುವಂತಹದ್ದಾಗಿದ್ದು, ಅದಕ್ಕಾಗಿ ಗಾಂಧಿ ಪ್ರಾರ್ಥನೆಯನ್ನು ಅವಲಂಬಿಸಿದ್ದರು. ಅವರ ರಾಮನಾಮವು ಅವರ ಪಾಲಿನ ಸತ್ಯಾನ್ವೇಷಣೆಯೇ ಆಗಿತ್ತು. ತಮ್ಮ ಪ್ರಯೋಗ ತಮ್ಮ ಬ್ರಹ್ಮಚರ್ಯಕ್ಕೆ ಸಹಕಾರಿಯಾಗಿತ್ತೆಂದು ಅವರು ಹೇಳುವುದನ್ನು ಅದು ಅವರ ವಿಷಯಾಸಕ್ತಿಯನ್ನು ವೃದ್ಧಿಸಿತು ಎಂದು ಅರ್ಥೈಸುವುದು ಮೂಢರ ತೀರ್ಮಾನ. ಅವರ ಮನೋಬಲ ಮತ್ತು ನಿಯಂತ್ರಣಗಳು ಬಲಗೊಂಡವು ಎಂಬುದೇ ಅದರರ್ಥ.

ಲೈಂಗಿಕತೆಯ ಲೇಪವಿಲ್ಲದ ಶುದ್ಧವಾದ ಪ್ರೀತಿಯೆಂಬುದು ಒಂದು ಚೈತನ್ಯ. ಮನು ಬೆಹನ್ ಗಾಂಧಿಯ ಪ್ರೀತಿಯ ಮಗು. ಮನು ಬೆಹನ್ನಳ ಮುಗ್ಧತೆ ಮತ್ತು ತಮ್ಮ ಚೈತನ್ಯವನ್ನು ಉನ್ನತ ಅರಿವಿಗಾಗಿ ಮೀಸಲಿರಿಸಬೇಕೆಂಬ ಗಾಂಧೀಜಿಯ ದೃಢನಿಶ್ಚಯಗಳಿಂದಾಗಿ ಅಲ್ಲಿ ಯಾವ ವಿಷಯಾಸಕ್ತಿಗೂ ಅವಕಾಶವಿರಲಿಲ್ಲ. ೧೯೩೦ ರಲ್ಲಿನ ಗಾಂಧೀಜಿಯ ನಡವಳಿಕೆಯನ್ನು ಇಂದು, ಇಷ್ಟೊಂದು ಕಾಲದೂರದಲ್ಲಿ ನಿಂತು, ಇಂದಿನ ಮೌಲ್ಯಗಳನ್ನು ಬಳಸಿ ವಿಮರ್ಶಿಸುವುದು, ಅವರ ಮಾತುಗಳನ್ನು ಇಂದಿನ ಭಾಷಿಕ ಪರಿವೇಶದಲ್ಲಿರಿಸಿ ತೂಗಿ ನೋಡುವುದು ರೋಗಿಷ್ಟ ಮನಸ್ಸುಗಳ ಪ್ರಯತ್ನವಾದೀತು.

ಒಂದು ಮಹತ್ಕಾರ್ಯ ಸಾಧನೆಗಾಗಿ (ಅದನ್ನು ವಿಮರ್ಶಕರು 'A brilliant Political Theatre' ಎಂದು ಕರೆಯುತ್ತಾರೆ) ತಮ್ಮನ್ನು ಮತ್ತು ಸಮಾಜವನ್ನು ಹಂತ ಹಂತವಾಗಿ ಸಿದ್ಧಗೊಳಿಸುವುದು ಗಾಂಧೀಜಿಯ ಕಾರ್ಯವಿಧಾನ. ಸತ್ಯದ ಬಲವನ್ನು ಬಳಸಿ ಹೋರಾಡಬೇಕಾದ ಸತ್ಯಾಗ್ರಹಿಗೆ ತನ್ನ ಪ್ರತಿಕ್ರಿಯೆಗಳನ್ನು ನಿಯಂತ್ರಿಸಿಕೊಳ್ಳುವುದು ಬಹಳ ಮುಖ್ಯ. ಅದು ಸಕಲ ರೀತಿಯಲ್ಲೂ ಸ್ವಯಂ ನಿಯಂತ್ರಣದೊಡನೆ ಪ್ರತಿಯೊಬ್ಬ ವ್ಯಕ್ತಿಯ ಅಂತರ್ಯದಲ್ಲೂ ಪ್ರಾರಂಭವಾಗುತ್ತದೆ. ಇದನ್ನೂ ಸಹ ಚಿಕ್ಕ ಚಿಕ್ಕ ಹಂತಗಳಲ್ಲಿ ಸಾಧಿಸಬೇಕಾಗುತ್ತದೆ. ಗಾಂಧೀಜಿಯ ಸಪ್ತಸೂತ್ರಗಳ ಪೈಕಿ ಬಹುಮುಖ್ಯವಾದ 'ಅಪರಿಗ್ರಹ'ವನ್ನು ಅವರು ಸಾಧಿಸಿದ್ದು ಇದೇ ರೀತಿಯಲ್ಲಿ. ಪ್ರಾರಂಭದಲ್ಲಿ ಹಲವಾರು ಚಿಕ್ಕಪುಟ್ಟ ವಸ್ತುಗಳನ್ನು ತ್ಯಜಿಸಲು ಅವರು ಶ್ರಮಿಸಿದರು. ಒಂದು ಹಂತದಲ್ಲಿ ಎಲ್ಲವನ್ನೂ ತ್ಯಜಿಸುವುದು ಅವರಿಗೆ ಸಂತೋಷ ಮತ್ತು ಬಿಡುಗಡೆಯ ಭಾವವನ್ನು ತಂದುಕೊಟ್ಟವು. 'ಅಪರಿಗ್ರಹ'ವೆಂಬುದು ಬ್ರಹ್ಮಚರ್ಯದ ಫಲವೇ ಹೊರತು ಅದೊಂದು ಕೊರತೆ ಅಲ್ಲ.

ಗಾಂಧೀಜಿಯ ಜೀವನದಲ್ಲಿನ ಅವರ ಪ್ರಯೋಗಗಳಿಂದಾಗಿ ನೀಡಿದ ಮತ್ತೊಂದು ಕೊಡುಗೆ ಎಂದರೆ, ಬ್ರಹ್ಮಚರ್ಯದ ಹಿಂದಿರುವ ಆದರ್ಶಗಳ ಬಗೆಗಿನ ಸಾರ್ವಜನಿಕ ಸಂವಾದಗಳನ್ನು ಪುನರುಜ್ಜೀವನಗೊಳಿಸಿದ್ದು. ಮತ್ತು ಭಾರತದ ಪುರಾತನ ಸಾಮಾಜಿಕ ರಚನೆಗಳ ತಾತ್ವಿಕ ನೀಲನಕ್ಷೆಗಳ ಬಗೆಗೆ ಒಂದು ಧರ್ಮನಿರಪೇಕ್ಷ ಎಚ್ಚರವನ್ನು ಉಂಟುಮಾಡಿದ್ದು. ಮನಶಾಸ್ತ್ರ, ವೈದ್ಯಶಾಸ್ತ್ರ, ಎಷ್ಟೋ ಬಗೆಯ ಸಾಂಸ್ಕೃತಿಕ ನಿರೂಪಣೆಗಳು ಹೀಗೆ ಹಲವು ವಿಚಾರಗಳಲ್ಲಿ ಭಾರತದ ಸ್ವಭಾವ ವೈಜ್ಞಾನಿಕವಾದುದು. ಈ ಗುಣ ವಿಶೇಷಗಳ ಉತ್ಪನ್ನವೇ ಗಾಂಧಿ. ಈ ಎಲ್ಲ ವೈಜ್ಞಾನಿಕ ಸಂಗತಿಗಳ ಒಟ್ಟು ಉದ್ದೇಶ ಪ್ರಕೃತಿಯೊಡನೆ ಸಾಮರಸ್ಯವನ್ನು ಸಾಧಿಸುವುದು. ಈ ಸಾಮರಸ್ಯವು ಪ್ರಕೃತಿಯ ಬಗೆಗಿನ ಜ್ಞಾನದ ಕಡೆಗೆ, ಒಂದು ಅತೀಂದ್ರಿಯ ಅನುಭವದ ಕಡೆಗೆ ಮುನ್ನಡೆಸುವಂಥದ್ದು. ಪ್ರಕೃತಿಯ ಒಂದು ಭಾಗವೇ ತಾನಾಗಿರುವುದರಿಂದ ಅದು ಆತ್ಮಜ್ಞಾನದ ಕಡೆಗೆ ಮನುಷ್ಯನನ್ನು ಮುನ್ನಡೆಸುವಂಥದ್ದು.

ನಮ್ಮ ಬದುಕನ್ನು ಪ್ರಭಾವಿಸುವ ಸಾರ್ವತ್ರಿಕ ನಿಯಮಗಳಿವೆ. ಒಬ್ಬ ಸತ್ಯಾನ್ವೇಷಿಯು ಅವುಗಳನ್ನು ತಿಳಿದು ಅವಕ್ಕೆ ಬದ್ಧನಾಗಿರಬಯಸುತ್ತಾನೆ. ಈ ನಿಯಮಗಳು ಸೃಷ್ಟಿಸುವ ಆದರ್ಶಗಳು ಮತ್ತು ಅವನ್ನು ಪಾಲಿಸುವ ವ್ಯಕ್ತಿಯ ಸಾಮರ್ಥ್ಯದ ಮಿತಿಗಳಿಂದ ಅದರ ಗಹನತೆ ವ್ಯಕ್ತವಾಗುತ್ತದೆ. ಸಕಲ ಜೀವಗಳ ಸಮಾನತೆಯ ನಿಯಮದಿಂದ ನ್ಯಾಯದ ಆದರ್ಶವು ಪ್ರಪಂಚದಾದ್ಯಂತ ವಿವಿಧ ಮಟ್ಟಗಳಲ್ಲಿ ವ್ಯಕ್ತವಾಗುವುದನ್ನು ಕಾಣುತ್ತೇವೆ. ಸುಳ್ಳಾದ ಸ್ವಯಂಪರಿಚಯದಿಂದ(self identification) ಮನುಷ್ಯನ ಮನಸ್ಸನ್ನೂ ಮತ್ತು ಸಂವೇದನೆಗಳನ್ನೂ ಬಿಡುಗಡೆಗೊಳಿಸಿ ಸತ್ಯದ ಕಡೆಗೆ ತಿರುಗಿಸಲು ಆದರ್ಶಗಳು ಸಾಧನಗಳಾಗುತ್ತವೆ. ವಿಭಿನ್ನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳು ಸಾಧಿಸಿದ ಈ ಸಾರ್ವತ್ರಿಕ ನಿಯಮಗಳು ಅಡೆತಡೆಗಳಲ್ಲ. ಬ್ರಹ್ಮಚರ್ಯದ ಲಾಭಗಳ ಬಗ್ಗೆ ತಿಳಿಯಲು ನೀವು ಸ್ವಾಮಿ ಶಿವಾನಂದರನ್ನು ಓದಬೇಕೆಂದು ನಾನು ಸೂಚಿಸುತ್ತೇನೆ.

ತಮ್ಮ ಬ್ರಹ್ಮಚರ್ಯದ ಸಾಧನೆಯ ಮಟ್ಟವನ್ನು ಅರಿಯಲು ಗಾಂಧೀಜಿ ನಡೆಸಿದ ಪ್ರಯೋಗ ಸರಿ ಎಂಬುದು ಇಲ್ಲಿನ ವಿಚಾರವಲ್ಲ. ಅವರದ್ದು ತಪ್ಪಾಗಿತ್ತು. ಅವರು ನಂಬಿದ್ದಂತೆ ಈ ಪ್ರಯೋಗದಿಂದ ತಮ್ಮ ಅಂತರಂಗದ ಮಾರ್ಗವನ್ನು ಸ್ಪಷ್ಟಗೊಳಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ. ತಾವು ನಿರೀಕ್ಷಿಸಿದಂತೆ ಸಮಸ್ಯೆಗೆ ಪರಿಹಾರ ಕಾಣಲಾಗದಿದ್ದರೂ ಗಾಂಧೀಜಿ ತಮ್ಮ ತಪ್ಪನ್ನು ಒಪ್ಪಿಕೊಳ್ಳ ಬಲ್ಲವರಾಗಿದ್ದರು. ತಾವು ಒಬ್ಬ ಸಂತ ಎಂದು ಅವರೆಂದೂ ಹೇಳಿಕೊಳ್ಳಲಿಲ್ಲ. ಅತ್ಯಂತ ಪ್ರಾಮಾಣಿಕರಾಗಿದ್ದ ಇತರರಿಗೆ ನೆರವು ನೀಡುವುದಕ್ಕಾಗಿ ತನ್ನ ಸಕಲ ಸಾಮರ್ಥ್ಯವನ್ನೂ ಬಳಸಿ ಪ್ರಯತ್ನ ನಡೆಸುತ್ತಿದ್ದ, ದಮನಿತರನ್ನು ಮೇಲೆತ್ತಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದ, ತನ್ನ ಸಹಜ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಅರಿಯಲು ಭಾರತಕ್ಕೆ ನೆರವು ನೀಡಿದ ಇಂಥ ಒಬ್ಬ ಮನುಷ್ಯನಿಗಿಂತ ಹೆಚ್ಚಿನ ಪ್ರತೀಕ ಒಂದು ದೇಶಕ್ಕೆ ಯಾವುದು ತಾನೇ ಇರಲು ಸಾಧ್ಯ? ತಪ್ಪು ಮಾಡುವುದು ಮನುಷ್ಯ ಸಹಜ ಗುಣ. ಕ್ಷಮೆ ದೈವೀಕವಾದದ್ದು. ಆದರೆ ಒಂದು ತಪ್ಪನ್ನು ಒಪ್ಪಿಕೊಂಡು ತನ್ನ ಆಲೋಚನೆಯನ್ನು ಬದಲಾಯಿಸಿಕೊಳ್ಳುವುದು ಈ ಭೂಮಿಯ ಮೇಲಿನ ಅಪರೂಪದ ಶೌರ್ಯ.

ಫ್ಲಾಂಡರ್ಸ್ ಅವರಿಗೆ ಜಾತಿ ವ್ಯವಸ್ಥೆಯ ಬಗ್ಗೆ ವಿವರಿಸುತ್ತಾ ನೀವು ಅದೊಂದು ಬಳುವಳಿ ಮತ್ತು ಪೂರ್ವಜರ ವೃತ್ತಿಗೆ ಸಂಬಂಧಿಸಿದ ಸಂಗತಿ ಎಂದಿರಿ. ಆದರೆ ಗಾಂಧೀಜಿ ಆ ಕಾಲದಲ್ಲಿ ಜಾತಿ ಎಂಬ ಪದವನ್ನು ನೀವು ಹೇಳುವ ಅರ್ಥದಲ್ಲಿ ಬಳಸುತ್ತಿರಲಿಲ್ಲ. ಭಾರತೀಯ ಸಂಸ್ಕೃತಿಗೆ ತಾತ್ವಿಕ ನೆಲೆಯನ್ನು ಒದಗಿಸುವ ಮೂಲಭೂತ ತತ್ವಗಳ ಬಗೆಗಿನ ನಿಮ್ಮ ತಿಳುವಳಿಕೆಯ ಕೊರತೆಯನ್ನು ನಾನು ಕಾಣುತ್ತಿದ್ದೇನೆ. ಜೀವನವನ್ನು ಜೀವಿಸುವುದಕ್ಕೆ ಅವು ಒಂದು ಸ್ಫೂರ್ತಿದಾಯಕ ಪ್ರಮಾಣಕಗಳನ್ನು ಒದಗಿಸುತ್ತವೆ. ಸಾರ್ವತ್ರಿಕವೂ ಆಂತರಿಕವೂ ಆದ ಅವುಗಳ ಬಗ್ಗೆ ಜನರಿಗೆ ತಿಳಿದಿಲ್ಲವೆಂಬ ಕಾರಣಕ್ಕೆ ಅವನ್ನು ತಳ್ಳಿಹಾಕಲಾಗದು.

ಹಿಂದೂ ಧರ್ಮವು ಮನುಕುಲಕ್ಕೆ ನೀಡಿರುವ ಕೊಡುಗೆಗಳಲ್ಲಿ ವರ್ಣವ್ಯವಸ್ಥೆಯನ್ನು ಅಂಗೀಕರಿಸಿರುವುದೂ ಒಂದು. ನಿಮಗದನ್ನು ಜಾತಿ ಎಂಬುದಾಗಿ ಅನುವಾದಿಸಿಕೊಡಲಾಗಿದೆ. ನೀವು ಅದಕ್ಕೆ ನಿಮ್ಮ ನಿರೂಪಣೆಯಿಂದ ಬೇರೆ ಅರ್ಥ ನೀಡುತ್ತೀರಿ. ಗಾಂಧೀಜಿ ಹೇಗೆ ಸಮಾಜ ಸುಧಾರಕರೋ ಹಾಗೇ ಅವರೊಬ್ಬ ಧಾರ್ಮಿಕ ಸುಧಾರಕರೂ ಹೌದು. ಅವರು ಜಾತಿಯ ಪರಿಕಲ್ಪನೆಯನ್ನು ವರ್ಣಗಳ ಮೂಲಕ ಪರಿಭಾವಿಸುವ ಪ್ರಯತ್ನ ಮಾಡಿದರು. ಅದೊಂದು ಭಿನ್ನವಾದ ದೃಷ್ಟಿ. ಈ ದೃಷ್ಟಿಯನ್ನು ನಿಮ್ಮ ಪ್ರಪಂಚಕ್ಕೆ ಅನ್ವಯಿಸುವ ಪ್ರಯತ್ನ ಮಾಡುವಾಗ ನೀವು ಐಡಿಯಾಗಳನ್ನು ಅನುವಾದಿಸಬೇಕೇ ಹೊರತು ಅವನ್ನು ತಪ್ಪಾಗಿ ಉಲ್ಲೇಖಿಸಬಾರದು. ತಮ್ಮ ಪೂರ್ವಜರ ವೃತ್ತಿಗಳನ್ನೇ ಜನ ಮುಂದುವರಿಸಬೇಕೆಂದು ಗಾಂಧೀಜಿ ಎಂದೂ ಬಯಸಲಿಲ್ಲ.

"ನಾನಾಗಲೀ ಅಥವಾ ಯಾರೇ ಆಗಲಿ, ಯಾರ ಮೇಲೆಯೂ ಒತ್ತಾಯವನ್ನು ಹೇರಲಾಗದು. ಮನಸ್ಸಿಗೆ ಬಂದಂತೆ ಮನುಷ್ಯರ ಮೇಲೆ ಹೇರಲು ಅಥವಾ ವಿನಾಯಿತಿ ನೀಡಲು ವರ್ಣಾಶ್ರಮವೆಂಬುದು ಮಾನವ ನಿರ್ಮಿತವಲ್ಲ. ಅದು ಮನುಷ್ಯನ ಪುನರುಜ್ಜೀವಿತ(regenerate) ಸ್ಥಿತಿಯಲ್ಲಿ ಸಹಜವಾಗಿ ಬರುವಂಥದ್ದು."

ಜೀವನದ ತೃಪ್ತಿಗೆ ಸಂಬಂಧಿಸಿದಂತೆ ಒಬ್ಬ ಮನುಷ್ಯನ ವೃತ್ತಿ ಗಾಂಧೀಜಿಯ ದೃಷ್ಟಿಯಲ್ಲಿ ಅಷ್ಟೇನೂ ಮುಖ್ಯವಲ್ಲ. ಆತನ ತಾತ್ವಿಕ ಜಿಜ್ಞಾಸೆಯೇ ಮುಖ್ಯವಾದುದು. ಒಂದು ಸರಳ ಜೀವನಕ್ಕೆ ಬೇಕಾದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡ ನಂತರ ನಾವು ನಮ್ಮ ಮನಸ್ಸನ್ನು ಹೇಗೆ ತೊಡಗಿಸುತ್ತೇವೆ ಎಂಬುದರ ಮೇಲೆ ನಿಜವಾದ ತೃಪ್ತಿಯು ಅವಲಂಬಿಸುತ್ತದೆ. ಗಾಂಧೀಜಿಯ ವಾದದ ಸಾರಾಂಶವೆಂದರೆ, ಜನ ತಾವು ಯಾವ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದು ಸಾಧ್ಯವೋ



ಅದನ್ನೇ ಮಾಡುವುದೇ ಒಳಿತು. ಆ ಮೂಲಕ ಅವರು ಅತಿಹೆಚ್ಚಿನ ಲಾಭವನ್ನು ಗಳಿಸಬಹುದು. ಗಾಂಧೀಜಿ ಜಾತಿವ್ಯವಸ್ಥೆಯನ್ನು ಬಲಗೊಳಿಸಲು ಬಯಸಲಿಲ್ಲ. ಹುಟ್ಟಿನ ಆಧಾರದ ಮೇಲೆ ಮನುಷ್ಯನಿಗೆ ಯಾವುದೋ ಒಂದು ವೃತ್ತಿ ನಿರ್ಧಾರವಾಗಿ ಅದು ಶಾಶ್ವತವಾಗಿರಬೇಕೆಂಬುದನ್ನು ಅವರು ಉತ್ತೇಜಿಸಲಿಲ್ಲ. ಸಮಾಜದ ಬೇರೆ ಬೇರೆ ವರ್ಗಗಳಿಂದ ಬಂದ ಶ್ರಮದ ಬೆಲೆಯನ್ನು ನಿರ್ಧರಿಸುವಲ್ಲಿ ಅವರು ಭೇದಭಾವ ಮಾಡಲೂ ಇಲ್ಲ. ನೀವು ಭಾವಿಸುವ ರೀತಿಯ ಜಾತಿ ವ್ಯವಸ್ಥೆಗಿಂತಲೂ ಭಿನ್ನವಾದ ವರ್ಣಾಶ್ರಮವನ್ನು ಆದರ್ಶ ಮತ್ತು ಸಾಮರ್ಥ್ಯದ ದೃಷ್ಟಿಯಿಂದ ಅವರು ಒಪ್ಪಿದ್ದರು. ಅಂತರ್ಜಾತಿಯ ಮದುವೆಗಳನ್ನು ವಿವಿಧ ಸಾಮಾಜಿಕ ಸ್ತರಗಳ ನಡುವಿನ ಸರಾಗವಾದ ಚಲನೆಯನ್ನು ಅವರು ಬೆಂಬಲಿಸುತ್ತಿದ್ದರು.

ಗಾಂಧೀಜಿಯವರ 'ನನ್ನ ಆದರ್ಶ ಭಂಗಿ' ಎಂಬ ಲೇಖನದ ಬಗೆಗಿನ ನಿಮ್ಮ ಅಭಿಪ್ರಾಯ, ಜಾತಿ ಚಿಂತನೆಯನ್ನು ನಿರ್ಮೂಲನ ಮಾಡಲು ಅವರು ನಡೆಸಿದ ಪ್ರಯತ್ನದ ಅರಿವು ನಿಮಗಿಲ್ಲವೆಂಬುದನ್ನು ಸೂಚಿಸುತ್ತದೆ. ಜಾಡಮಾಲಿ ಎಂಬುದು ಒಂದು ಜಾತಿ ಎಂಬ ಅಚಲ ನಂಬಿಕೆಯ ಸಹವರ್ತಿಗಳ ನಡುವೆ ಗಾಂಧೀಜಿ ಸಿಕ್ಕುಹಾಕಿಕೊಂಡಿದ್ದರು. ಉನ್ನತವರ್ಗದ ಜನ ತಮ್ಮ ಅಧಿಕಾರ, ಸವಲತ್ತು ಮತ್ತು ಸೇವಕರನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಈ ವಿಚಾರದಲ್ಲಿ ಗಾಂಧೀಜಿ ತಮ್ಮ ಜೀವನ ಪರ್ಯಂತ ಹೊಡೆದಾಡಬೇಕಾಯಿತು. ಇತರರ ಸ್ವಾಸ್ಥ್ಯದ ಬಗ್ಗೆ ಅಪಾರ ಕಾಳಜಿಯಿರುವ ಮನುಷ್ಯ ಮಾತ್ರ ಇತರರು, ಸ್ವತ: ಶುಚಿಗೊಳಿಸಲಾರದೆ ಅಜ್ಞಾನದಿಂದ ಬಿಟ್ಟುಹೋದ ಮಲವನ್ನು ತೊಳೆಯುವ ಕೆಲಸವನ್ನು ಗಾಂಧೀಜಿ ಮಾಡಿದಂತೆ ಮಾಡಲು ಸಾಧ್ಯ.

ಗಾಂಧೀಜಿ ಜಾತಿ ವ್ಯವಸ್ಥೆಯನ್ನು ಬೆಂಬಲಿಸಿದರೆಂದು ನಂಬಿಸುವ ಪ್ರಯತ್ನದ ಜೊತೆಗೆ ದಕ್ಷಿಣ ಆಫ್ರಿಕಾದ ಪ್ರಾರಂಭದ ದಿನಗಳ ಅವರ ಮಾತುಗಳನ್ನು ಉಲ್ಲೇಖಿಸಿ ಅವರೊಬ್ಬ ಜನಾಂಗೀಯವಾದಿ ಎಂದು ಘೋಷಿಸುತ್ತ ಅವರು ಅಲ್ಲಿ ಯಾರನ್ನು ಕುರಿತು ಮಾತನಾಡುತ್ತಿದ್ದರು ಎಂಬುದನ್ನು ಬಿಟ್ಟು ಬಿಟ್ಟಿದ್ದೀರಿ, ಏಕೆ? ಅಮೆರಿಕದ ಆಫ್ರಿಕನ್ನರು ಮತ್ತು ದಕ್ಷಿಣ ಆಫ್ರಿಕನ್ನರನ್ನು ಗಾಂಧಿ ಕೀಳೆಂದು ಭಾವಿಸಿದ್ದರು ಎಂಬ ನಿಮ್ಮ ಅಭಿಪ್ರಾಯವನ್ನು ಮಂಡಿಸಿದ್ದೀರಿ..ಆದರೆ ಅಮೆರಿಕದಲ್ಲಿನ ಜನಾಂಗೀಯ ಸಮಾನತೆಯನ್ನು ಕುರಿತು ಗಾಂಧೀಜಿ ಅಧ್ಯಕ್ಷ ರೂಸ್ವೆಲ್ಟ್‌ರ ಜೊತೆ ವ್ಯವಹರಿಸುತ್ತ, ಅಮೆರಿಕದ ನೆಲದಲ್ಲಿ ಆಫ್ರಿಕನ್ನರಿಗೆ ಏನಾಗುತ್ತಿದೆ ಎಂಬುದನ್ನು ನೋಡಿದಾಗ ನಾಜಿಗಳ ವಿರುದ್ಧದ ಹೋರಾಟದಲ್ಲಿ ಅಮೆರಿಕ ಪಾಲ್ಗೊಳ್ಳುವುದು ತುಸು ಕಪಟತನವಾಗಿಯೇ ಕಾಣುತ್ತದೆ ಎಂದಿದ್ದರು. ಅಮೆರಿಕದ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಡುವ ವಿಷಯದಲ್ಲಿ ಸಲಹೆ ಕೇಳುವುದಕ್ಕಾಗಿ ಭಾರತಕ್ಕೆ ಪ್ರಯಾಣ ಮಾಡಿದ ಅಮೆರಿಕದ ಆಫ್ರಿಕನರ ಜೊತೆ ಗಾಂಧೀಜಿ ಹಲವಾರು ಸಭೆಗಳನ್ನು ನಡೆಸಿದ್ದರು. ಅವರ ಆಳವಾದ ಪಾರಮಾರ್ಥಿಕತೆಯಿಂದ ಪ್ರಭಾವಿಸಲ್ಪಟ್ಟು ಗಾಂಧೀಜಿ ಅಮೆರಿಕದ ಆಫ್ರಿಕನರ ಮೂಲಕ ಅಹಿಂಸೆಯ ಸಂದೇಶವನ್ನು ಪಶ್ಚಿಮಕ್ಕೆ ರವಾನಿಸುವ ಕನಸು ಕಂಡಿದ್ದರು. ಗಾಂಧೀಜಿಯನ್ನು ಭೇಟಿ ಮಾಡಿದ ಅಮೆರಿಕದ ಆಫ್ರಿಕನರಿಗೆ ಅವರೊಬ್ಬ ಜನಾಂಗೀಯವಾದಿಯಾಗಿ ಕಾಣಲಿಲ್ಲ. ಪ್ರಾಮಾಣಿಕ ಕಾಳಜಿಯುಳ್ಳ ಒಬ್ಬ ಸಹೋದರನಂತೆ ಕಂಡಿದ್ದರು. ಆಫ್ರಿಕದ ಮಕ್ಕಳೂ ಸಹ ತಮ್ಮ ಶಾಲೆಗೆ ಬರುವುದನ್ನು ಸಾಧ್ಯವಾಗಿಸುವುದಕ್ಕಾಗಿ ಬರೀ ಭಾರತೀಯರಿಗೆ ಮಾತ್ರ ಮೀಸಲಾಗಿದ್ದ ಶಾಲೆಗಳನ್ನು ತೆರೆಯುವುದನ್ನು ತಪ್ಪಿಸಬೇಕೆಂದು ಗಾಂಧೀಜಿ ದಕ್ಷಿಣ ಆಫ್ರಿಕದ ಭಾರತೀಯರಿಗೆ ಮನವಿ ಮಾಡಿದ್ದರು. ಗಾಂಧೀಜಿ ಮತ್ತು ರವೀಂದ್ರನಾಥ ಟ್ಯಾಗೋರ್ ಇಬ್ಬರೂ ಜೊತೆಯಾಗಿ ಬ್ರಿಟಿಷರ ಕೈಯ ದಾಳಗಳಾಗುತ್ತಿದ್ದ ಭಾರತೀಯರನ್ನು ಕುರಿತು, ಬ್ರಿಟಿಷರ ಒಡೆದು ಆಳುವ ತಂತ್ರಕ್ಕೆ ಬಲಿಯಾಗದೆ, ತಮ್ಮ ಪಾಲಿಗೆ ಬ್ರಿಟಿಷರು ಜನಾಂಗೀಯವಾದಿಗಳಾಗಿರುವಂತೆ ತಾವು ಆಫ್ರಿಕನರ ಪಾಲಿಗೆ ಜನಾಂಗೀಯವಾದಿಗಳಾಗಬಾರದೆಂದು ಎಚ್ಚರಿಸಿ ಪತ್ರ ಬರೆದಿದ್ದರು.

ಗಾಂಧೀಜಿ ಎಲ್ಲೆಲ್ಲಿದ್ದರೋ ಅಲ್ಲೆಲ್ಲ ಅವರ ಮನೆಯ ಬಾಗಿಲು ಎಲ್ಲಾ ಧರ್ಮದ, ಎಲ್ಲಾ ಜನಾಂಗದ ಜನರಿಗೆ ಮುಕ್ತವಾಗಿ ತೆರೆದಿತ್ತು. ದಕ್ಷಿಣ ಆಫ್ರಿಕಾದಲ್ಲಿನ ಅವರ ಸಮುದಾಯವು ಹಿಂದಿನ ಕರಾರುಬದ್ಧ ಕೂಲಿಗಳನ್ನು, ಆಫ್ರಿಕನರನ್ನು, ಚೀನೀಯರನ್ನು ಒಳಗೊಂಡಿತ್ತು. ಅಲ್ಲಿ ಕ್ರಿಶ್ಚಿಯನ್ನರು, ಜುಡಾಯಿಗಳು, ಮುಸ್ಲಿಮರೂ ಇದ್ದರು. ಗಾಂಧೀಜಿ ಜೊಹಾನ್ಸ್‌ಬರ್ಗ್‌ನಲ್ಲಿ ಕಟ್ಟಿದ ಮನೆ ಸಾಂಪ್ರದಾಯಿಕ ದಕ್ಷಿಣ ಆಫ್ರಿಕದ ಗುಡಿಸಲುಗಳಂತೆ ವೃತ್ತಾಕಾರದಲ್ಲಿತ್ತು. ಆ ಕಾಲಕ್ಕೆ ಅವರಷ್ಟು ಶ್ರೀಮಂತ ಸಾಮಾಜಿಕ ಸ್ಥಾನಮಾನವಿದ್ದ ವ್ಯಕ್ತಿ ತನ್ನ ಮನೆಯನ್ನು ಅಲ್ಲಿನ ಮೂಲನಿವಾಸಿಗಳ ಮನೆಯ ಆಕಾರದಲ್ಲಿ ನಿರ್ಮಿಸಿದ್ದು ಒಂದು ರಾಜಕೀಯ ಮತ್ತು ಸಾಮಾಜಿಕ ಸಂದೇಶವಾಗಿತ್ತು.

ದಕ್ಷಿಣ ಆಫ್ರಿಕದ ಹಲವಾರು ಗುತ್ತಿಗೆ ಕೂಲಿಕಾರ್ಮಿಕರಿಗೆ ಗಾಂಧಿ ವಕೀಲರಾಗಿದ್ದರು. ಬಡ ಭಾರತೀಯರನ್ನು ಪ್ರತಿನಿಧಿಸುವ ಎಲ್ಲ ಮೊಕದ್ದಮೆಗಳನ್ನೂ ಯಾವ ಶುಲ್ಕವೂ ಇಲ್ಲದೆ ಅವರು ವಹಿಸಿಕೊಳ್ಳುತ್ತಿದ್ದರು. ಅನ್ಯಾಯದ ವಿರುದ್ಧವಾಗಿ, ಮಹಿಳೆಯರ ಮಕ್ಕಳ ಪರವಾಗಿ ನಿಲ್ಲುತ್ತಿದ್ದರು. ಇಂಗ್ಲಿಷ್ ಅಥವಾ ಗುಜರಾಥೀ ಬಾರದ ಎಷ್ಟೋ ಜನರ ಪರವಾಗಿ ನ್ಯಾಯಾಲಯಗಳಲ್ಲಿ ಭಾಷಾಂತರಕಾರರ ವ್ಯವಸ್ಥೆ ಮಾಡುತ್ತಿದ್ದರು. ಭಾರತೀಯರು ವಾಸಿಸುತ್ತಿದ್ದ ಕೊಳಚೆ ಪ್ರದೇಶಗಳಲ್ಲಿ ಪ್ಲೇಗ್ ತಗುಲಿದಾಗ ತಮ್ಮ ಹಿತವನ್ನು ನಿರ್ಲಕ್ಷಿಸಿ ಜನರಲ್ಲಿ ನೈರ್ಮಲ್ಯಪ್ರಜ್ಞೆ ಮೂಡಿಸುವ ಕೆಲಸವನ್ನು ಕೈಗೊಂಡರು. ಇವೆಲ್ಲ ಜನಾಂಗೀಯ ಭಾವನೆ, ವರ್ಗಶ್ರೇಷ್ಠತೆಯ ಭಾವನೆಯಿರುವ ಮನುಷ್ಯನೊಬ್ಬನ ರೀತಿನೀತಿಗಳೇನು? ಅವರು ತಮ್ಮ ಜೀವನದುದ್ದಕ್ಕೂ ತಮಗಿದ್ದ ಶಿಕ್ಷಣ ಮತ್ತು ಸಂಪರ್ಕದ ಪ್ರಭಾವವನ್ನು ಕಷ್ಟದಲ್ಲಿರುವವರ ಸಹಾಯಕ್ಕಾಗಿ ಬಳಸಿದರು. ೧೮೯೯ರ ಆಂಗ್ಲೋ ಬೋಯರ್ ಯುದ್ಧ ಮತ್ತು ಬ್ಯಾಂಬಾಟಾ ದಂಗೆಯ ಕಾಲದಲ್ಲಿ ತಮ್ಮ ಆಂಬುಲೆನ್ಸ್ ತಂಡದ ಮೂಲಕ ಗಾಂಧೀಜಿ ಆಫ್ರಿಕನರ ಕೊಲೆಯನ್ನು ಬೆಂಬಲಿಸಿದರೆಂದು ದೋಷಾರೋಪಣೆ ಮಾಡುವಾಗ, ಮಾರಣಾಂತಿಕವಾಗಿ ಪೆಟ್ಟು ತಿಂದು ನರಳುತ್ತಿದ್ದ ಜುಲುಗಳನ್ನು ತಲುಪಿದ ಏಕೈಕ ವೈದ್ಯಕೀಯ ನೆರವೆಂದರೆ ಅದು ಗಾಂಧೀಜಿಯವರ ಆಂಬುಲೆನ್ಸ್ ತಂಡ ಮಾತ್ರ ಎಂಬುದನ್ನು ನೀವು ಗಮನಿಸುವುದಿಲ್ಲ. ಆಗ ಖಂಡಿತ ಯಾವ ಯೂರೋಪಿಯನ್ನನೂ ಜುಲುಗಳನ್ನು ಮುಟ್ಟುತ್ತಿರಲಿಲ್ಲ.

ಮನುಷ್ಯ ಕುಲದ ಬಗೆಗೆ ಗಾಂಧೀಜಿಯವರ ಪ್ರೀತಿ, ಸತ್ಯಾನ್ವೇಷಣೆಯ ಅವರ ಪ್ರಯತ್ನ, ತಮ್ಮ ಶಿಕ್ಷಣದ ಶಕ್ತಿಯನ್ನು ಅವರು ಬಡವರ ಏಳಿಗೆಗಾಗಿ ಬಳಸಿದ್ದನ್ನು ನೀವು ನಿರಾಕರಿಸಲಾರಿರಿ. ಅಲ್ಲಿಂದ ಇಲ್ಲಿಂದ ಒಂದೊಂದು ವಾಕ್ಯವನ್ನು ಹೆಕ್ಕಿ ತೆಗೆದು ಅದರಿಂದ ಗಾಂಧೀಜಿಯನ್ನು ಹಣಿಯುವುದರಿಂದ ನೀವು ನಿಮ್ಮ ವಿವೇಚನಾ ಸಾಮರ್ಥ್ಯಕ್ಕೆ ಅನ್ಯಾಯವೆಸಗುತ್ತೀರಿ. ಸದ್ಯ ನೀವೊಬ್ಬ ಅಂತರರಾಷ್ಟ್ರೀಯ ಖ್ಯಾತಿಯುಳ್ಳ ವ್ಯಕ್ತಿಯಾಗಿದ್ದು, ಭಾರತೀಯರಾದ ನೀವು ಗಾಂಧೀಜಿಯವರ ಬಗೆಗೆ ತಿಳುವಳಿಕೆಯುಳ್ಳವರಾಗಿರುತ್ತೀರಿ ಎಂದು ಜಗತ್ತಿನ ಜನ ಭಾವಿಸುತ್ತಾರೆ. ಪ್ರಪಂಚವು ಭಾರತದ ಕಡೆ ನೋಡುವುದು ಗಾಂಧೀಜಿಯ ಕಾರಣಕ್ಕಾಗಿ. ಭಾರತೀಯರಾದ ನೀವೇ ಗಾಂಧೀಜಿ ಒಬ್ಬ ಜನಾಂಗೀಯವಾದಿ, ಅವರು ಜಾತಿವ್ಯವಸ್ಥೆಯನ್ನು ಬೆಂಬಲಿಸುತ್ತಿದ್ದರು ಎನ್ನುವುದನ್ನು ಕೇಳಿದರೆ, ಜಗತ್ತಿನ ಬಹುಪಾಲು ಜನ, ವಿಚಾರಗಳ ಮೂಲಕ್ಕೆ ಹೋಗಿ ಅರಿಯುವ ಪ್ರಯತ್ನ ಮಾಡದೆ ನೀವು ಹೇಳಿದ್ದನ್ನೇ ನಂಬುವ ಸಾಧ್ಯತೆ ಹೆಚ್ಚಿದೆ. ನೀವು ಭಾರತೀಯರಾಗಿದ್ದು ಜಾಗತಿಕ ಎಡಪಂಥೀಯ ಬೌದ್ಧಿಕ ದೃಷ್ಟಿಕೋನದ ಪ್ರತಿನಿಧಿಯಾಗಿದ್ದೀರಿ. ಇಂದು ನಮ್ಮ ಸುತ್ತಲ ಪ್ರಪಂಚವು ಅಣುರಿಯಾಕ್ಟರ್‌ಗಳ ಅಪಘಾತಗಳಿಂದಾಗಿ ಸಮುದ್ರಗಳ ಮಾಲಿನ್ಯದಿಂದಾಗಿ ವಿನಾಶದತ್ತ ಸಾಗಿರುವಾಗ, ಅಳಿದುಳಿದ ಮರಗಳನ್ನು ಕಡಿದು ಅರೆಯುವ ಕೆಲಸ ಮುಂದುವರಿದಿರುವಾಗ, ವಿಕೃತ ಮಕ್ಕಳು ಹುಟ್ಟುತ್ತಿರುವಾಗ, ಬಾಂಬುಗಳಿಂದ ಭೂಮಿ ಛಿದ್ರಗೊಳ್ಳುತ್ತಿರುವಾಗ, ಕುಟುಂಬಗಳು ಒಡೆದು ಹೋಳಾಗುತ್ತಿರುವಾಗ, ಒಂದಲ್ಲ ಒಂದು ರೀತಿಯ ಯುದ್ಧವು ನಮ್ಮ ತಲೆಗಳ ಮೇಲೆ ತೂಗುತ್ತಿರುವಾಗ, ಗಾಂಧಿ ಪ್ರತಿಪಾದಿಸಿದ ಆದರ್ಶಗಳನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ಆಲೋಚನೆಗಳು ಮತ್ತೊಂದು ಬಗೆಯ ಆಹಾರವಾಗಿದ್ದು ನಮ್ಮ ದೈಹಿಕ ಮತ್ತು ಮಾನಸಿಕ ಆಹಾರಗಳು ವ್ಯಕ್ತಿಗಳಾಗಿ, ಸಮಾಜವಾಗಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತದೆ.

**(ಕೃಪೆ: Transcend Media services-Services oriented peace journalism, 5th Jan., 2015)**

ನೋಟ-೨

# ಅಂಬೇಡ್ಕರ್-ಗಾಂಧಿ ವಾಗ್ವಾದ: ಒಂದು ಗ್ರಹಿಕೆ

ಮೂಲ: ರಾಜಮೋಹನ ಗಾಂಧಿ
ಕನ್ನಡಕ್ಕೆ: ಎನ್. ಎಸ್. ಶಂಕರ್



ಇದು ಅರುಂಧತಿ ರಾಯ್ ತಮ್ಮ **The Doctor and the Saint** ಕೃತಿಯಲ್ಲಿ ಗಾಂಧೀಜಿಯ ವ್ಯಕ್ತಿತ್ವ ಮತ್ತು ವಿಚಾರಗಳನ್ನು ಮಂಡಿಸಿರುವ ರೀತಿ ನೀತಿಗಳ ಬಗ್ಗೆ ರಾಜಮೋಹನ ಗಾಂಧಿ ತಮ್ಮ ವಿರೋಧ ವ್ಯಕ್ತಪಡಿಸಿ ಬರೆದ ಪುಸ್ತಕದ ಕನ್ನಡಾನುವಾದ ಕೃತಿಯಾದ 'ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ: ಅಂಬೇಡ್ಕರ್ ಗಾಂಧಿ ವಾಗ್ವಾದ: ಒಂದು ಗ್ರಹಿಕೆ' (ಪ್ರ: ಗಾಂಧಿ ಸ್ಮಾರಕ ನಿಧಿ, ಬೆಂಗಳೂರು)ಪುಸ್ತಕದಿಂದ ಆಯ್ದ ಭಾಗಗಳು. ಇದರಲ್ಲಿ ರಾಜಮೋಹನರು ಗಾಂಧೀಜಿಯ ದ.ಆಫ್ರಿಕಾದಲ್ಲಿನ ಮತ್ತು ಆನಂತರ ಭಾರತದಲ್ಲಿನ ಜೀವನದ ಹಲವಾರು ಘಟನೆ ಮತ್ತು ನಿಲುವುಗಳ ಬಗ್ಗೆ ಅರುಂಧತಿಯವರು ಮಾಡಿರುವ ಟೀಕೆ ಮತ್ತು ವ್ಯಾಖ್ಯಾನಗಳ ಉದ್ದೇಶ ಮತ್ತು ನಿಜತ್ವಗಳನ್ನು ಪ್ರಶ್ನಿಸುತ್ತಾ ಗಾಂಧಿ ಕುರಿತ ಒಂದು ವಸ್ತುನಿಷ್ಠ ಮತ್ತು ಸಮತುಲಿತ ಚಿತ್ರ ನೀಡಲು ಪ್ರಯತ್ನಿಸಿದ್ದಾರೆ. ಅದರ ಆಯ್ದ ಭಾಗಗಳು ಇಲ್ಲಿವೆ.–ಸಂ.

## 'ಡಾಕ್ಟರ್ ಮತ್ತು ಸಂತ' ಪುಸ್ತಕದ ಧ್ಯೇಯ

ಇಲ್ಲಿ ನನ್ನನ್ನೇ ಪ್ರಶ್ನಿಸಿಕೊಳ್ಳುತ್ತಿದ್ದೇನೆ– 'ನಿಜ ಗಾಂಧಿ' ಬಗೆಗೆ ರಾಯ್‌ರ ನಿಷ್ಕಾಳಜಿಯನ್ನು ಎತ್ತಿ ತೋರಲು ನಾನೇಕೆ ತಲೆ ಕೆಡಿಸಿಕೊಳ್ಳಬೇಕು? ಹೇಗಿದ್ದರೂ ಆಕೆ 'ಡಾಕ್ಟರ್ ಮತ್ತು ಸಂತ'ದಲ್ಲಿ ತನ್ನ ಉದ್ದೇಶದ ಸುಳಿವು ನೀಡಿಯೇ ಇದ್ದಾರೆ. ಆಕೆ 'ನಮ್ಮ ಬಾಂದಳದಲ್ಲಿನ ತಾರೆಗಳ ಮರು ಸಂಯೋಜನೆ'ಯ ಬಯಕೆ ತಮ್ಮದು ಎಂದು ಹೇಳುತ್ತಾರೆಯೇ ಹೊರತು, ಗಾಂಧಿಯನ್ನು ವಿಶ್ಲೇಷಿಸುವುದೋ ಅರ್ಥ ಮಾಡಿಕೊಳ್ಳುವುದೋ ಅಲ್ಲ (೧೪೦). ಗಾಂಧಿಯನ್ನು ಆಗಸದಿಂದ ಗುಂಡಿಟ್ಟು ಹೊಡೆದು ಕೆಳಗುರುಳಿಸುವುದು ಆಕೆಯ ಉದ್ದೇಶ, ಗಾಂಧಿಯನ್ನು ಅರಿಯುವುದಲ್ಲ. ಬದಲಿಗೆ, ಸಭೆಯೊಂದರಲ್ಲಿ ಆಕೆ ಹೇಳಿದಂತೆ, ಅಂಬೇಡ್ಕರರನ್ನು ಇನ್ನೂ ಸರಿಯಾಗಿ ಅರಿಯಲು ಮತ್ತು ಗೌರವಿಸಲು 'ಗಾಂಧಿ ನೆನಪನ್ನು ಬದಿಗೆ ಸರಿಸುವುದು' ಅಗತ್ಯವೆಂದು ಭಾವಿಸುತ್ತಾರೆ (ರಾಯ್ ೨೦೧೪ ಎ).


ಈ ತರ್ಕವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ನಮ್ಮ ಮನಸ್ಸುಗಳಲ್ಲಿ ಅವರಿಬ್ಬರನ್ನೂ ಅರಿಯಬಲ್ಲಷ್ಟು ಎಡೆಯಿರಬಲ್ಲುದು, ನಮ್ಮ ಹೃದಯಗಳು ಇಬ್ಬರನ್ನೂ ಗೌರವಿಸಬಲ್ಲವು. ಆದರೆ ಗಾಂಧಿ ಸ್ಮೃತಿಯನ್ನು ನಾಶ ಮಾಡುವುದರ ಮೇಲೆ ಅಂಬೇಡ್ಕರ್ ಪರಂಪರೆಯ ಮಹತ್ವ ನಿಂತಿದೆ ಎಂದು ಹೇಳುವುದು, ಅಂಬೇಡ್ಕರ್‌ಗೆ ಮರ್ಯಾದೆಯಲ್ಲ.

ಏನಾದರೂ, ಈ ಹೊತ್ತಿಗೆ ಬರೆಯುವ ನನ್ನ ಈ ಶ್ರಮ ಖಂಡಿತ ಅತ್ಯಗತ್ಯ. ರಾಯ್ ತಮ್ಮ ಬರವಣಿಗೆಯ ಕೌಶಲ ಮತ್ತು ಜನಪ್ರಿಯೇತರ ನಿಲುವುಗಳನ್ನು ತಳೆಯುವ ದಿಟ್ಟತನದಿಂದಾಗಿ ತಮ್ಮದೇ ಅಭಿಮಾನಿ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ. ಆಕೆ ಗಾಂಧಿ ಮೇಲೆ ನಡೆಸಿದ ಆಕ್ರಮಣವನ್ನು ಪರಿಶೀಲನೆಗೊಡ್ಡುವ ಈ ನನ್ನ ಪ್ರಯತ್ನವನ್ನು, ರಾಯ್‌ರ ಅನೇಕ ಅಭಿಮಾನಿಗಳು ಕೂಡ ಸ್ವಾಗತಿಸುವರೆಂದು ನಾನು ನಂಬಿದ್ದೇನೆ.

ನಾನು ಇನ್ನೂ ಒಂದು ಪ್ರಶ್ನೆ ಕೇಳಬೇಕು: ರಾಯ್ ಅವರಲ್ಲಿ ಕಾಣುವ ಇಂಥ ಅತೀವ ಅಸಹನೆಗೆ ಏನು ಪ್ರಚೋದನೆ? ಗಾಂಧಿಯ ಜೀವನಶೈಲಿಯೇ? ಮನುಷ್ಯರಾದವರು– ಎಲ್ಲ ಜನಾಂಗಗಳು, ಜಾತಿಗಳು, ವರ್ಗಗಳು ಮತ್ತು ದೇಶಗಳು, ತಮ್ಮೆಲ್ಲ ಘರ್ಷಣೆಗಳ ಹೊರತಾಗಿಯೂ– ತಮ್ಮ ನಡುವಣ ಕಹಿ ಕರಗಿಸಲು ಅನುವು ಮಾಡುವಂಥ ಪರಿಹಾರಗಳನ್ನೇ ಹುಡುಕಬೇಕೆಂದು ಗಾಂಧಿ ಆಗಾಗ ವ್ಯಕ್ತಪಡಿಸುತ್ತಲೇ ಬಂದ ಆಶಯವೇ? ನನಗೆ ಗೊತ್ತಿಲ್ಲ. ರಾಯ್‌ರ ಜನಪ್ರಿಯ ಕಾದಂಬರಿ *ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್*ನಲ್ಲಿ ಒಂದೆರಡು ಸುಳಿವು ದೊರೆಯಬಹುದಿತ್ತೇನೋ, ಆದರೆ ನನಗೆ ಅದನ್ನು ಓದಲಾಗಿಲ್ಲ.

ಅದೇನೇ ಆಗಲಿ, ರಾಯ್ ಯಾವುದನ್ನು ಗಾಂಧಿಯ ಜೀವನಶೈಲಿ ಎಂದು ತಿಳಿದುಕೊಂಡಿದ್ದಾರೋ, ಆ ಜೀವನಶೈಲಿಯ ಬಗ್ಗೆ ಅವರ ಸಂಪೂರ್ಣ ಅಸಮ್ಮತಿಯನ್ನು 'ಡಾಕ್ಟರ್ ಮತ್ತು ಸಂತ' ಬಯಲುಗೊಳಿಸುತ್ತದೆ. ಅವರ ಪ್ರಕಾರ ಗಾಂಧಿ

> **'ತಮ್ಮ ಹಿಂಬಾಲಕರಿಗೆ ಸಂತೋಷವಿಲ್ಲದ, ತಮಾಷೆಗೆ ಆಸ್ಪದವಿಲ್ಲದ ಜಗತ್ತನ್ನು ಬಿಟ್ಟುಹೋಗಿದ್ದಾರೆ; ಅಲ್ಲಿ ಬಯಕೆಗೆ, ಕಾಮಕ್ಕೆ ಅವಕಾಶವಿಲ್ಲ... ಆಹಾರವಿಲ್ಲ, ಅಲಂಕಾರವಿಲ್ಲ, ಉತ್ತಮ ಉಡುಪಿಲ್ಲ, ನೃತ್ಯವಿಲ್ಲ, ಕಾವ್ಯವಿಲ್ಲ. ಇದ್ದರೂ ಸ್ವಲ್ಪೇ ಸ್ವಲ್ಪ ಸಂಗೀತ'** (ಪುಟ:೮೧).



**ಗಡಿನಾಡ ಗಾಂಧಿಯೊಂದಿಗೆ ಒಂದು ಮುಂಜಾನೆ ನಡಿಗೆಯಲ್ಲಿ...**

ಇದು ಎಷ್ಟರ ಮಟ್ಟಿಗೆ ಸತ್ಯನಿಷ್ಠ ಚಿತ್ರಣ? ಗಾಂಧಿ ಪರಂಪರೆಯಲ್ಲಿ ಆಕೆ ಅರೆ ಮನಸ್ಸಿನಿಂದ ಒಪ್ಪಿಕೊಳ್ಳುವ 'ಸ್ವಲ್ಪೇ ಸ್ವಲ್ಪ ಸಂಗೀತ'ವೆಂಬುದು, ನಿಜದಲ್ಲಿ ಗಾಂಧಿ ಬದುಕಿನಲ್ಲಿ, ಬೆಳಗ್ಗೆ ಸಂಜೆಯ, ನಿತ್ಯದ ವ್ಯವಹಾರ. ಅದು ಧಾರ್ಮಿಕ ಅಥವಾ ಆಧ್ಯಾತ್ಮಿಕ ಸಂಗೀತವೆಂಬುದೇನೋ ಹೌದು. ಆದರೆ ಗಾಂಧಿಗೆ ಸಂಗೀತದೆಡೆಗೆ ಒಳ್ಳೆ ಕಿವಿಯಿತ್ತು. ಅಷ್ಟೇಕೆ, ತಕ್ಕ ಮಟ್ಟಿಗೆ ಹಾಡಬಲ್ಲ ಧ್ವನಿಯೂ ಇತ್ತು. ಅವರ ಆಶ್ರಮವಾಸಿಗಳು ಮತ್ತು ಸಹ ಸೆರೆವಾಸಿಗಳೇ ಇದನ್ನು ಹೇಳುತ್ತಾರೆ.

ಲಂಡನ್ನಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪಡೆದ ನರ್ತನಶಾಲೆ (ಮತ್ತು ಪಿಟೀಲಿನ) ತರಬೇತಿಯನ್ನು ಅವರು ಮುಂದೆಂದೂ ಆಚರಣೆಗೆ ಇಳಿಸಲಿಲ್ಲವೆಂಬುದು ನಿಜವಾದರೂ, ಗಾಂಧಿಯ ಹಾಗೆ ಪದೇ ಪದೇ 'ಆನಂದದಿಂದ ಕುಣಿದಾಡುವ' ಮಾತಾಡಿದವರು, ನರ್ತನದ ವೈರಿಯಾಗಿರಲಾರರು. ರಾಯ್‌ಗೆ ಪ್ರಾಯಶಃ ಅರಿವಿಲ್ಲದಿರಬಹುದು, ಆದರೆ ಗಾಂಧಿ ತಮ್ಮ ಪತ್ರಿಕೆಗಳಲ್ಲಿ

ಆಗಾಗ ಇಂಗ್ಲಿಷ್, ಹಿಂದಿ, ಬಂಗಾಳಿ, ಉರ್ದು ಮತ್ತು ಗುಜರಾತಿ ಕಾವ್ಯವನ್ನು ಉಲ್ಲೇಖಿಸುತ್ತಲೇ ಇದ್ದರು.

ಇನ್ನು ಅವರ 'ಸಂತೋಷವಿಲ್ಲದ, ತಮಾಷೆಗೆ ಆಸ್ಪದವಿಲ್ಲದ' ಜಗತ್ತಿನ ಬಗ್ಗೆ ಬಂದರೆ, *ರೈಸ್ ಅಂಡ್ ಫಾಲ್ ಆಫ್ ಥರ್ಡ್ ರೀಚ್* ಕೃತಿಯ ಲೇಖಕ– ಅಮೆರಿಕಾದ ವಿಲಿಯಂ ಶೈರರ್ ಮತ್ತೆ ಕೆಲವರು ಗಾಂಧಿಯೊಂದಿಗೆ ಕಳೆದ ಕಾಲದ ಬಗ್ಗೆ ಹೇಳುವುದಿದು:

> **ಸ್ವಲ್ಪೇ ಕಾಲದಲ್ಲಿ ಗಾಂಧಿ ನಮ್ಮೆಲ್ಲರನ್ನೂ ನಗೆಗಡಲಲ್ಲಿ ತೇಲಿಸಿ ನಮ್ಮನ್ನು ಸಂಪೂರ್ಣ ಹಗುರವಾಗಿಸಿಬಿಟ್ಟರು... ವೈವಿಧ್ಯಮಯ ವ್ಯಕ್ತಿತ್ವಗಳು ತುಂಬಿದ ಈ ಜಗತ್ತಿನಲ್ಲಿ ಗಾಂಧಿಯ ಅರ್ಧದಷ್ಟಾದರೂ ಚಿತ್ತಾಕರ್ಷಕರಾದ ಇನ್ನೊಬ್ಬ ವ್ಯಕ್ತಿ ಇದ್ದರೆ ಆತನನ್ನು ನಾನು ಕಂಡಿಲ್ಲ** *(ಜಾಕ್ ೧೯೫೬, ೩೯ರಲ್ಲಿ ಉದ್ಧೃತ).*

ಮತ್ತು ಅಷ್ಟೇ ಮಟ್ಟಿಗೆ ಅವರು ಇತರರ ತಮಾಷೆಯನ್ನೂ ಸವಿಯುತ್ತಿದ್ದರು. ಪುಣೆ ಸೆರೆಮನೆಯಿಂದ ೧೯೩೨ರಲ್ಲಿ ಶ್ರೀನಿವಾಸ ಶಾಸ್ತ್ರಿಗೆ ಗಾಂಧಿ ಬರೆದದ್ದು– 'ನನ್ನೊಂದಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ಇದ್ದಾರೆ. ದಿನಾ ಒಮ್ಮೆಯಲ್ಲ, ಹಲವಾರು ಬಾರಿ ಅವರ ತಮಾಷೆಗಳನ್ನು ಕೇಳಿ, ನಾನು ನಕ್ಕೂ ನಕ್ಕೂ ಸಾಕಾಗುತ್ತೇನೆ' (ಪಾರೀಖ್ ೨, ೯೧–೯೨). ಗಾಂಧಿಯೊಂದಿಗೆ ಕೆಲವೇ ನಿಮಿಷಗಳನ್ನು ಕಳೆದ ಯಾರೇ ಆದರೂ ಅವರ ಈ ನಲಿವಿನ ಮುಖದ ಕಥೆಗಳೊಂದಿಗೆ ಹೊರನಡೆಯುತ್ತಿದ್ದರು.

ಚರಿತ್ರೆಯಲ್ಲಿ ಎದೆಗುಂದಿಸುವ ಗುರಿಗಳನ್ನು ಬೆನ್ನಟ್ಟಿದ ಹಲವರಂತೆ ಗಾಂಧಿ ಕೂಡ ಕಾಮದ ಬಗ್ಗೆ ಕಟ್ಟುನಿಟ್ಟು ನಿಲುವು ತಳೆದಿದ್ದರು. ಆ ನಿಲುವುಗಳ ಬಗ್ಗೆ ಅನೇಕರ ಸಹಮತ ಇಲ್ಲದಿರಬಹುದು. ಆದರೆ ರಾಯ್ ಚಿತ್ರಿಸುವ ಹಾಳು ಸುರಿವ ಗಾಂಧಿಯನ್ನು ಅವರ ಸ್ನೇಹಿತರಾಗಲೀ, ವೈರಿಗಳಾಗಲೀ ಕಂಡಿಲ್ಲ. ಅಂಥ ಗಾಂಧಿ ಇರಲೇ ಇಲ್ಲ.

## ಗಾಂಧಿ-ಅಂಬೇಡ್ಕರ್ ಸಂಬಂಧ

೧೯೩೨ರ ಸೆಪ್ಟೆಂಬರ್‌ನಲ್ಲಿ ಗಾಂಧಿ ಪುಣೆಯ ಯರವಾಡ ಜೈಲಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕೈದಿಯಾಗಿದ್ದಾಗ, ಪ್ರತ್ಯೇಕ ದಲಿತ ಮತಕ್ಷೇತ್ರಗಳ ವಿರುದ್ಧ, ಹಾಗೆಯೇ ಸವರ್ಣೀಯ ಹಿಂದೂ ಆತ್ಮಸಾಕ್ಷಿಯನ್ನು ಕಲಕಲೆಂದು, ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಘೋಷಿಸಿದರು. ಉಪವಾಸಕ್ಕೆ ಒಂದು ದಿನ ಮುಂಚೆ ಮುಂಬಯಿಯಲ್ಲಿ ಸಭೆ ಸೇರಿದ ಅತ್ಯಂತ ಪ್ರಭಾವಿ ಸವರ್ಣೀಯ ಹಿಂದೂ ನಾಯಕರು 'ಸ್ವರಾಜ್ ಸಂಸತ್ತು ಅಸ್ತಿತ್ವಕ್ಕೆ ಬಂದ ಕೂಡಲೇ ಮೊದಲಿಗೆ ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿಗಳು, ಸಾರ್ವಜನಿಕ ಶಾಲೆಗಳು, ರಸ್ತೆಗಳು ಮತ್ತೆಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ಸಮಾನ ಪ್ರವೇಶ ಕಲ್ಪಿಸಲಾಗುವುದು' ಎಂದು ನಿರ್ಣಯಿಸಿದರು (ಸಮಗ್ರ ಕೃತಿಗಳು ೫೧: ೧೫೯–೬೦). ಗಾಂಧಿ ಉಪವಾಸದಿಂದಾಗಿ ಒತ್ತಡಕ್ಕೆ ಸಿಲುಕಿದ ಅವರು– ಯಾವುದೋ ಕಾಲದಲ್ಲಿ ಅಗಬೇಕಿದ್ದ– ಈ ಚಾರಿತ್ರಿಕ ವಾಗ್ದಾನಕ್ಕೆ ಸಹಿ ಹಾಕಿದರು.

ಸ್ವತಃ ಅಂಬೇಡ್ಕರ್ ಈ ನಿರ್ಣಯವನ್ನು ಉಲ್ಲೇಖಿಸಿದರೂ (ಅಂಬೇಡ್ಕರ್ ೧೯೪೫, ೧೦೩), ರಾಯ್ ಮಾತ್ರ ತಮ್ಮ ಸಮೀಕ್ಷೆಯಿಂದ ಇದನ್ನು ಬಹಿಷ್ಕರಿಸಿಬಿಡುತ್ತಾರೆ.

ಭಾರತದ ಉದ್ದಗಲ, ಗಾಂಧಿ ಉಪವಾಸದಿಂದ ಪ್ರಚೋದಿತರಾಗಿ ಅಸ್ಪೃಶ್ಯರಿಗೆ ಶತಮಾನಗಳ ಕಾಲ ಮುಚ್ಚಿದ್ದ ದೇವಾಲಯಗಳು ತಮ್ಮ ಬಾಗಿಲು ತೆರೆದವು. ಬ್ರಾಹ್ಮಣರು ದಲಿತರನ್ನು ತಮ್ಮ ಮನೆಗಳಿಗೆ ಊಟಕ್ಕೆ ಕರೆದರು. ಅತ್ತ ಸಾಮ್ರಾಜ್ಯ, ಯರವಾಡ ಜೈಲಿನ ಬಾಗಿಲನ್ನು ತೆರೆಯಿತು, ಮತ್ತು ಅಂಬೇಡ್ಕರ್ ಗಾಂಧಿಯೊಡನೆ ಸಮಾಲೋಚಿಸಲು ಒಳಗಡಿಯಿಟ್ಟರು.

ಆಗ ಒಂದು ಇತ್ಯರ್ಥಕ್ಕೆ ಬರಲಾಯಿತು. ಶಾಸನಸಭೆಗಳಲ್ಲಿ ದಲಿತರಿಗೆ ಮೀಸಲಾತಿ ನೀಡುವ ಪ್ರಸ್ತಾಪವನ್ನು ಮುಂಚೆ ಗಾಂಧಿ ವಿರೋಧಿಸಿದ್ದರು; ಈಗ ಅದನ್ನು ಒಪ್ಪಿದ್ದಷ್ಟೇ ಅಲ್ಲ, ದಲಿತರಿಗೆ ಅವರ ಜನಸಂಖ್ಯೆಗೆ ತಕ್ಕಷ್ಟು ಸ್ಥಾನಗಳಿರಬೇಕೆಂದೂ ಹೇಳಿದರು. ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳು ಮತ್ತು ಸ್ಥಾನಗಳನ್ನು ಮೀಸಲಿಡುವ ತನ್ನ ಯೋಜನೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯ ನಿಗದಿ ಮಾಡಿದ್ದು, ಇದರ ಅರ್ಧದಷ್ಟು ಸ್ಥಾನಗಳನ್ನು ಮಾತ್ರ.

ಅಂಬೇಡ್ಕರ್, ಗಾಂಧಿಯವರ ಜೀವವನ್ನು ಉಳಿಸುವ ಸಲುವಾಗಿ, ದಲಿತ ಅಭ್ಯರ್ಥಿಗಳ ಪರ ಅಥವಾ ವಿರುದ್ಧ ದಲಿತರು ಮಾತ್ರ ಮತ ಚಲಾಯಿಸಲಿದ್ದ ಪ್ರತ್ಯೇಕ ಮತಕ್ಷೇತ್ರಗಳ ಒತ್ತಾಯವನ್ನು ಬಿಟ್ಟುಕೊಟ್ಟರು.



ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧಿ ಮತ್ತು ಅಂಬೇಡ್ಕರ್

ಹೀಗೆ ಸಮಾನ ಭೂಮಿಕೆಯನ್ನು ಕಂಡುಕೊಂಡ ಅವರಿಬ್ಬರೂ ಒಂದು ಒಪ್ಪಂದಕ್ಕೆ ಬಂದರು. ಲಂಡನ್ನಿಗೆ ಕೇಬಲ್ ಸಂದೇಶ ಹೋಯಿತು, ತನ್ನದೊಂದು ಸೆರೆಮನೆಯಿಂದ ಕಳಿಸಲಾದ ಈ ಜಂಟಿ ಪ್ರಸ್ತಾವವನ್ನು ಅರಸೊತ್ತಿಗೆ ಒಪ್ಪಿಕೊಂಡಿತು, ಗಾಂಧಿ ತಮ್ಮ ಉಪವಾಸವನ್ನು ಕೈ ಬಿಟ್ಟರು.

ಈ ಒಪ್ಪಂದದ ತಿರುಳನ್ನು ಮುಂದಕ್ಕೆ ಸ್ವತಂತ್ರ ಭಾರತದ ಸಂವಿಧಾನದಲ್ಲಿ ಅಳವಡಿಸಲಾಯಿತು. ಒಪ್ಪಂದದ ನಂತರದ ೮೨ ವರ್ಷಗಳಲ್ಲಿ– ದೇಶವ್ಯಾಪಿಯಿರಲಿ, ಅಥವಾ ರಾಜ್ಯದ್ದಾಗಿರಲಿ, ನಗರ ಪಟ್ಟಣ ಹಳ್ಳಿಯದ್ದಾಗಲಿ– ಭಾರತದ ಪ್ರತಿಯೊಂದು ಚುನಾವಣೆಯನ್ನೂ ಈ ಒಪ್ಪಂದದ ಅನುಸಾರವೇ, ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳಿಲ್ಲದೆ, ಮೀಸಲು ಸ್ಥಾನಗಳನ್ನಿಟ್ಟು ನಡೆಸಲಾಗಿದೆ. ಸ್ವಾತಂತ್ರ್ಯ ಬರುತ್ತಿದ್ದಂತೆಯೇ ಮುಸ್ಲಿಮರು ಮತ್ತು ಸಿಕ್ಖರ ಪ್ರತ್ಯೇಕ ಮತಕ್ಷೇತ್ರಗಳೂ ರದ್ದಾದವು.

ಉಪವಾಸದ ವೇಳೆ ಗಾಂಧಿ 'ನಿಮ್ಮ ವರ್ಗಗಳು ಅನುಭವಿಸುತ್ತಿರುವ ಸಾಮಾಜಿಕ, ಪೌರ ಮತ್ತು ರಾಜಕೀಯ ಹಿಂಸೆಯನ್ನು ಕೊನೆಗಾಣಿಸಲು ಸುಧಾರಕರ ದೊಡ್ಡ ಸೈನ್ಯವೇ' ಶ್ರಮಿಸುವುದೆಂದು ಆಶಿಸಿದ್ದರು. 'ಸ್ವರಾಜ್ಯಕ್ಕಿಂತಲೂ ಬಹು ಮಟ್ಟಿಗೆ ಮಿಗಿಲಾದ, ವಿಶ್ವಾತೀತ ಮೌಲ್ಯದ' ಸಂಗತಿಯಿದು ಎಂದಿದ್ದರು (ಸಮಗ್ರ ಕೃತಿಗಳು ೫೧: ೧೧೯)

ಯರವಾಡ ಜೈಲಿನಲ್ಲಿ ತಮ್ಮೊಂದಿಗೆ ಸಮಾಲೋಚಿಸಿದ್ದ 'ಡಾ. ಅಂಬೇಡ್ಕರ್, ರಾವ್ ಬಹಾದೂರ್ ಶ್ರೀನಿವಾಸನ್... ರಾವ್ ಬಹಾದೂರ್ ಎಂ.ಸಿ. ರಾಜಾ' ಅವರಿಗೆ 'ಹಿಂದೂ ಕೃತಜ್ಞತೆ' ಅರ್ಪಿಸುತ್ತ ಗಾಂಧಿ ಹೇಳಿದ್ದು:

> **ಸವರ್ಣೀಯ ಹಿಂದೂಗಳ ತಲತಲಾಂತರದ ಪಾಪಕೃತ್ಯಗಳಿಗೆ ಶಿಕ್ಷೆ ವಿಧಿಸಲೆಂದು ಅವರು ನಿರ್ದಾಕ್ಷಿಣ್ಯವಾಗಿ ವ್ಯತಿರಿಕ್ತ ಧೋರಣೆ ತಳೆಯಬಹುದಿತ್ತು.**
>
> **ಅವರು ಹಾಗೆ ಮಾಡಿದ್ದರೆ, ನಾನಂತೂ ಮುನಿಸಿಕೊಂಡು ಅವರ ಧೋರಣೆಯನ್ನು ವಿರೋಧಿಸುವ ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ. ಆಗ ನನ್ನ ಸಾವು, ಹಿಂದೂ ಧರ್ಮದ ಬಹಿಷ್ಕೃತರು ಎಷ್ಟೋ ಅಜ್ಞಾತ ತಲೆಮಾರುಗಳ ಕಾಲ ಅನುಭವಿಸುತ್ತ ಬಂದ ಚಿತ್ರಹಿಂಸೆಗೆ ಪ್ರತಿಯಾಗಿ ತೆತ್ತ ಕ್ಷುಲ್ಲಕ ಬೆಲೆಯಾಗುತ್ತಿತ್ತು. ಆದರೆ ಅವರು ಉದಾತ್ತ ಹಾದಿಯನ್ನೇ ಆರಿಸಿಕೊಂಡರು, ಮತ್ತು ಎಲ್ಲ ಧರ್ಮಗಳ ಮೂಲ ಸ್ರೋತವಾದ ಕ್ಷಮೆಯ ಹಾದಿಯನ್ನೇ ಅನುಸರಿಸಿ ತೋರಿದರು. ಈಗ ಸವರ್ಣೀಯ ಹಿಂದೂಗಳು, ಈ ಕ್ಷಮೆಗೆ ತಾವು ಅರ್ಹರೆಂದು ಸಾಬೀತುಪಡಿಸುವರೆಂದು ಆಶಿಸುತ್ತೇನೆ** *(ಸಮಗ್ರ ಕೃತಿಗಳು ೫೧: ೧೪೩– ೫).*

ಇನ್ನು ಸವರ್ಣೀಯರಿಗೆ ಗಾಂಧಿ ಒಂದು ಎಚ್ಚರಿಕೆ ನೀಡಿದರು:

> **ಹಿಂದೂಗಳ ಬಹು ದೊಡ್ಡ ಜನಸ್ತೋಮ ಅನುಭವಿಸುತ್ತಿರುವ ಸಾಮಾಜಿಕ ಹಾಗೂ ಧಾರ್ಮಿಕ ಸಂಕಟಗಳನ್ನು ಸಂಪೂರ್ಣವಾಗಿ ತೆಗೆದುಹಾಕುವ ನಿಟ್ಟಿನಲ್ಲಿ ಸವರ್ಣೀಯ ಹಿಂದೂಗಳು ಮುಂಬರುವ ದಿನಗಳಲ್ಲಿ ಕೈಗೊಳ್ಳಬೇಕಾದ ಸುಧಾರಣೆಗಳ ವಿಶಾಲ ಕ್ಷೇತ್ರದಲ್ಲಿ ಈ (ಒಪ್ಪಂದದ) ರಾಜಕೀಯ ಭಾಗ ಒಂದು ಚಿಕ್ಕ ತುಣುಕಷ್ಟೇ.**
>
> **ಈ ಸುಧಾರಣೆಯ ಕೈಂಕರ್ಯವನ್ನು ಸತತವಾಗಿ ನಿರ್ವಹಿಸಿ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸಾಧಿಸಿ ತೋರದಿದ್ದಲ್ಲಿ ನಾನು ಮತ್ತೆ ಉಪವಾಸವನ್ನು ಪುನರಾರಂಭಿಸಬೇಕಾಗುವುದು. ಮತ್ತು ನಾನು ಉಪವಾಸ ನಿಲ್ಲಿಸಿದ್ದರಲ್ಲೇ ಈ**

**ಎಚ್ಚರಿಕೆಯೂ ಅಂತರ್ಗತವಾಗಿತ್ತೆಂದು ನಾನು ನನ್ನ ಸವರ್ಣೀಯ ಬಂಧುಗಳು ಮತ್ತು ಸುಧಾರಕರಿಗೆ ನೆನಪಿಸದಿದ್ದರೆ, ಅದು ವಿಶ್ವಾಸದ್ರೋಹವಾದೀತು** *(ಸಮಗ್ರ ಕೃತಿಗಳು ೫೧: ೧೪೩– ೫).*

ಅಷ್ಟಾದರೂ, ಸವರ್ಣೀಯ ಹಿಂದೂಗಳ ಪರಿವರ್ತನೆ ಅಗತ್ಯವಿದ್ದಷ್ಟು ಆಳಕ್ಕೆ ಹೋಗುತ್ತಿಲ್ಲವೆಂದು ಅವರು ಆತಂಕಗೊಂಡಿದ್ದರು. ೧೯೩೨ರ ಸೆಪ್ಟೆಂಬರ್ ೩೦ರಂದು ಅವರು ಆಂಡ್ರ್ಯೂಸ್‌ಗೊಂದು ಪತ್ರ ಬರೆದರು:

**ಸಂಪ್ರದಾಯವಾದಿಗಳಿಂದ ನಾನು ಬಹು ದೊಡ್ಡ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದೇನೋ ಹೌದು. ಆದರೆ ಈ ಮಟ್ಟದ ಹಠಾತ್ ಪ್ರತಿಸ್ಪಂದನೆಗೆ ನಾನು ತಯಾರಾಗಿರಲಿಲ್ಲ. ಆದರೆ ಇಷ್ಟರಿಂದಲೇ ನಾನು ಮೋಸ ಹೋಗಲಾರೆ. ತೆರೆದ ದೇವಾಲಯಗಳು ತೆರೆದೇ ಇರುತ್ತವೆಯೇ, ಮಿಕ್ಕ ಸಂಗತಿಗಳೂ ಹಾಗೇ ಉಳಿದು ಬರುತ್ತವೆಯೇ ಕಾದು ನೋಡಬೇಕು** *( ಸಮಗ್ರ ಕೃತಿಗಳು ೫೧: ೧೫೪)*

ಹಾಗೆ ಸುಧಾರಣೆಗಳನ್ನು 'ಸತತವಾಗಿ ನಿರ್ವಹಿಸಿ ಗೊತ್ತಾದ ಕಾಲಾವಧಿಯಲ್ಲಿ ಸಾಧಿಸಲಾಯಿತೇ?' ಸಾಕಷ್ಟು ಆಗಿದೆ, ಆದರೆ ಮತ್ತೂ ಬಹಳಷ್ಟು ಸಾಧಿಸಲಾಗದೆ ಉಳಿದಿದೆ. ಹಾಗೆಂದು ಗಾಂಧಿ ಮತ್ತೆ ಉಪವಾಸ ಕೂತರೇ? ಇಲ್ಲ. ೧೯೩೩ರ ಮೇನಲ್ಲಿ ಅವರು ಅಸ್ಪೃಶ್ಯತೆ ವಿರುದ್ಧ ೨೧ ದಿನ ಉಪವಾಸ ಮಾಡಿದರೂ, ಈ ಉದ್ದೇಶಕ್ಕಾಗಿ ಮಾಡಲಿಲ್ಲ. ಅಂದ ಮಾತ್ರಕ್ಕೆ ಅವರು ರಾಯ್ ಆಪಾದಿಸುವಂತೆ ಒಬ್ಬ ಆಷಾಢಭೂತಿ ಮತ್ತು ದಲಿತರ ಗುಪ್ತ ಶತ್ರುವಾಗಿದ್ದರೇ? ಅಥವಾ ತಮ್ಮ ಮಿತಿಗಳು ಹಾಗೂ ತಮ್ಮ ಜನರ ಮಿತಿಗಳ ನಡುವೆಯೇ, ತಮ್ಮ ಸರ್ವಸಾಮರ್ಥ್ಯವನ್ನೂ ತೊಡಗಿಸಿ ಒಂದಕ್ಕಿಂತ ಹೆಚ್ಚು ಕಠಿಣ ಧ್ಯೇಯಸಾಧನೆಗಾಗಿ ಹೋರಾಡುತ್ತಿದ್ದ ಅಸಾಮಾನ್ಯ ಮನುಷ್ಯರಾಗಿದ್ದರೇ?

*****

ಒಪ್ಪಂದಕ್ಕೆ ಸಹಿ ಹಾಕಿದ ಆನತಿ ಕಾಲದಲ್ಲೇ ಅಂಬೇಡ್ಕರ್, ಗಾಂಧಿ ಮತ್ತು ತಮ್ಮ ನಡುವೆ 'ಅಷ್ಟೊಂದು ಸಮಾನ ಅಂಶಗಳಿದ್ದುದಕ್ಕೆ' ತಮಗೆ 'ಆಶ್ಚರ್ಯ, ಮಹದಾಶ್ಚರ್ಯ'ವಾಯಿತೆಂದು ಹೇಳಿದರು. ಅಂಬೇಡ್ಕರ್ 'ನೀವೇನಾದರೂ ಇಡಿಯಾಗಿ ನಿಮ್ಮ ವರ್ಗಗಳ ಕಲ್ಯಾಣಕ್ಕಾಗಿ ತೊಡಗಿಕೊಂಡರೆ ನೀವೇ ನಮ್ಮ ನಾಯಕರಾಗುವಿರಿ' ಎಂದು ಗಾಂಧಿಗೆ ಹೇಳಿದರು (ಪ್ಯಾರೇಲಾಲ್ ೧೯೩೨, ೫೯).

ಗಾಂಧಿಯನ್ನು 'ಮೋಹನ್' ಎಂದು ಕರೆಯುತ್ತಿದ್ದ ಮತ್ತು ಗಾಂಧಿಯಿಂದ 'ಚಾರ್ಲಿ' ಎಂದು ಕರೆಸಿಕೊಳ್ಳುತ್ತಿದ್ದ ಗಾಂಧಿಯ ಆಪ್ತ ಬ್ರಿಟಿಷ್ ಸ್ನೇಹಿತ ಚಾರ್ಲ್ಸ್ ಆಂಡ್ರ್ಯೂಸ್ ಕೂಡ ಅದೇ ಸಲಹೆ ನೀಡಿದ್ದರು. ಅಸ್ಪೃಶ್ಯತೆ ಆಚರಿಸುವ ಭಾರತೀಯರು ಸ್ವರಾಜ್ಯಕ್ಕೆ 'ಅರ್ಹರಲ್ಲ'ವೆಂದು ಗಾಂಧಿ 'ಪದೇ ಪದೇ' ಹೇಳುತ್ತಿದ್ದುದನ್ನು ನೆನೆಸಿಕೊಂಡ ಆಂಡ್ರ್ಯೂಸ್, ಗಾಂಧಿ ಅಸ್ಪೃಶ್ಯತೆಯ ವಿರುದ್ಧವೇ ತಮ್ಮ ಸಂಪೂರ್ಣ ಗಮನ ಹರಿಸಬೇಕೆಂದೂ 'ಇಬ್ಬಿಬ್ಬರು ಮಾಲೀಕರ ಸೇವೆಯಲ್ಲಿ' ತೊಡಗಬಾರದೆಂದೂ ಸೂಚಿಸಿದ್ದರು *(ಗ್ರೇಸಿ ೧೯೮೯, ೧೫೫).*

ನಾವು ಗಾಂಧಿ ಹೇಳಿದ್ದನ್ನು ಒಪ್ಪಲಿ, ಬಿಡಲಿ, ಆದರೆ ಈ ಮನಃಪೂರ್ವಕ ಸಲಹೆಯನ್ನು ಅವರು ನಿರಾಕರಿಸಿದ್ದಕ್ಕೆ ನೀಡಿದ ಕಾರಣಗಳನ್ನು ನೋಡಬಹುದು. *ಆಂಡ್ರ್ಯೂಸ್‌ಗೆ, ೧೫ ಜೂನ್ ೧೯೩೩:*

**ನನ್ನ ಪ್ರೀತಿಯ ಚಾರ್ಲಿ,**

**ಈಗ ಅಸ್ಪೃಶ್ಯತೆ ಕುರಿತ ನಿಮ್ಮ ಮಹತ್ವದ ವಾದದ ಬಗ್ಗೆ... ನನ್ನ ಜೀವನವೊಂದು ಅವಿಭಾಜ್ಯ ಅಖಂಡ ಚೇತನ. ಅದು ವಿವಿಧ ವಿಭಾಗಗಳಾಗಿ ಸಂಯೋಜನೆಗೊಂಡಿಲ್ಲ. ಸತ್ಯಾಗ್ರಹ, ಅಸಹಕಾರ, ಅಸ್ಪೃಶ್ಯತೆ, (ಮತ್ತು) ಹಿಂದೂ ಮುಸ್ಲಿಂ ಏಕತೆ... ಇವೆಲ್ಲವೂ ಒಂದರಿಂದೊಂದು ಬೇರ್ಪಡಿಸಲಾಗದ– ಒಂದೇ ಇಡಿತನದ ಭಾಗಗಳು...**

**ನನ್ನ ಜೀವನದ ಒಂದು ಕಾಲದಲ್ಲಿ ಯಾವುದೋ ಒಂದು ಅಂಶಕ್ಕೆ ಒತ್ತು ಕಾಣಬಹುದು, ಮತ್ತೊಂದು ಕಾಲಘಟ್ಟದಲ್ಲಿ ಬೇರೊಂದು. ಅದು ಪಿಯಾನೊ ವಾದಕನೊಬ್ಬ ಒಮ್ಮೆ ಒಂದು ಸ್ವರ ಮತ್ತೊಮ್ಮೆ ಮತ್ತೊಂದು ಸ್ವರ ನುಡಿಸಿದಂತೆ. ಆದರೆ ಅವೆಲ್ಲವೂ ಒಂದಕ್ಕೊಂದು ಸಂಬಂಧಪಟ್ಟವೇ...**

**'ಈಗ ನಾಗರಿಕ ಅಸಹಕಾರಕ್ಕೂ ಅಥವಾ ಸ್ವರಾಜ್ಯಕ್ಕೂ ನನಗೂ ಯಾವ ಸಂಬಂಧವೂ ಇಲ್ಲ!' ಎಂದು ಹೇಳುವುದು ನನ್ನಿಂದ ಸಾಧ್ಯವೇ ಇಲ್ಲ.** ***ಅಷ್ಟೇ ಅಲ್ಲ,... ಸ್ವರಾಜ್ಯವಿಲ್ಲದೆ... ಅಸ್ಪೃಶ್ಯತೆಯ ಸಂಪೂರ್ಣ ಮತ್ತು ಅಂತಿಮ ಮೂಲೋತ್ಪಾಟನೆ ಸಾಧ್ಯವೂ ಇಲ್ಲ.....***

**ಪ್ರೀತಿಯಿಂದ**

**ಮೋಹನ್**

*(ಸಮಗ್ರ ಕೃತಿಗಳು ೫೫: ೧೯೬– ೮)*

*****

ಗಾಂಧಿ ಸೆರೆವಾಸಿಯಾಗಿದ್ದರೂ, ಜೈಲಿನಿಂದಲೇ ತಮ್ಮ *ಹರಿಜನ್* ಪತ್ರಿಕೆಯನ್ನು ಹೊರತರಲು ಅವರಿಗೆ ಸಾಮ್ರಾಜ್ಯ ಅವಕಾಶ ಕೊಟ್ಟಿತ್ತು. ಪತ್ರಿಕೆಯ ಮೂಲಕವೇ ತಮ್ಮ ಆಂದೋಲನ ಮುಂದುವರೆಸಬಹುದೆಂಬುದು ಗಾಂಧಿ ಆಶಯವಾಗಿತ್ತು. ಅದರ ೧೯೩೩ರ ಫೆಬ್ರವರಿ ೧೧ರ ಸಂಚಿಕೆಯಲ್ಲಿ ಅವರು 'ಹರಿಜನ' ಎಂಬ ಶಬ್ದದ ಆಯ್ಕೆಯನ್ನು ವಿವರಿಸಿದರು. *ನವಜೀವನ*ದ (ಈ ಪತ್ರಿಕೆಯನ್ನು ಸಾಮ್ರಾಜ್ಯವು ೧೯೩೨ರಲ್ಲಿ ನಿಷೇಧಿಸಿತ್ತು) ಅಸ್ಪೃಶ್ಯ ಎನಿಸಿಕೊಂಡವರನ್ನು 'ಹರಿಜನ'– ಅಂದರೆ ದೇವರ ಮಕ್ಕಳು– ಎಂಬ ಹೆಸರಿನಿಂದ ಸಂಬೋಧಿಸಬಹುದೆಂದು ಒಬ್ಬ ಅಸ್ಪೃಶ್ಯ ಓದುಗ ಸೂಚಿಸಿದ್ದರು.

ದೇವರು ಎಲ್ಲರಿಗೂ ಮೇಲಿನವನಾಗಿ ಎಲ್ಲ ದೀನದಲಿತರ ರಕ್ಷಕನಾದ್ದರಿಂದ, ಮತ್ತು ಹರಿಜನರಿಗಿಂತ ದೀನರು ಇನ್ನಾರೂ ಇಲ್ಲವಾದ್ದರಿಂದ, 'ಹರಿಜನ' ಎಂಬ ಪದ ಅತ್ಯಂತ ಸಮಂಜಸವಾಗಿದೆ ಎಂಬುದು ಗಾಂಧಿ ನಿಲುವಾಗಿತ್ತು. ಸವರ್ಣೀಯ ಹಿಂದೂಗಳು ತಮ್ಮ ತಪ್ಪನ್ನು ಅರಿತುಕೊಂಡು ಬದಲಾದಾಗ ಅವರೂ ಹರಿಜನರೆಂದು ಕರೆಸಿಕೊಳ್ಳಲು ಯೋಗ್ಯರಾಗುತ್ತಾರೆ ಎಂದರು ಗಾಂಧಿ (ಸಮಗ್ರ ಕೃತಿಗಳು ೫೩: ೨೬೬–೭).

ಬಾಯಲ್ಲಿ ಏನೇ ಹೇಳಿಕೊಂಡರೂ, ಸವರ್ಣೀಯರಲ್ಲಿ ಅನೇಕರು ದಲಿತರನ್ನು ತುಚ್ಛೀಕರಿಸುತ್ತಿದ್ದಾರೆ ಎಂಬುದನ್ನು ಅರಿಯಬೇಕು ಎಂದು ಗಾಂಧಿ ಹೇಳಿದರು. ತಮ್ಮ ಹೊಸ ಪತ್ರಿಕೆಯಲ್ಲಿ ಅವರು ೧೯೩೩ರ ಫೆಬ್ರವರಿ ೨೫ರಂದು ಬರೆದರು:

**ಒಂದು ದೊಡ್ಡ ಸಮೂಹವನ್ನು ದೂರದ ಜಾಗಗಳಿಗೆ ಗಡೀಪಾರು ಮಾಡುವುದು, ಅವರ ಸ್ಪರ್ಶ, ಸಾಮೀಪ್ಯ ಮತ್ತು ನೋಟವನ್ನು ಮೈಲಿಗೆ ಅಂದುಕೊಳ್ಳುವುದು, ಉಳಿಕೆ ಆಹಾರವನ್ನು ಅವರ ಕಡೆ ಎಸೆಯುವುದು, ಸಾರ್ವಜನಿಕ ರಸ್ತೆಗಳು ಮತ್ತಿತರ ಸಂಸ್ಥೆಗಳಲ್ಲಿ, ದೇವಸ್ಥಾನಗಳಲ್ಲೂ ಅವರಿಗೆ ಪ್ರವೇಶ ನಿರಾಕರಿಸುವುದು– ಇದೆಲ್ಲ ತುಚ್ಛೀಕರಣ ಅಲ್ಲವಾದರೆ, ಆ ಪದದ ಅರ್ಥವೇ ನನಗೆ ಗೊತ್ತಿಲ್ಲ** ***(ಸಮಗ್ರ ಕೃತಿಗಳು ೫೩: ೪೦೫).***

.*****

ಪುಣೆ ಒಪ್ಪಂದದ ಸಮಯದಲ್ಲಿ ಗಾಂಧಿ ಬಗ್ಗೆ ಅಂಬೇಡ್ಕರ್‌ರಲ್ಲಿ ಚಿಗುರಿದ ಹೃತ್ಪೂರ್ವಕತೆಯನ್ನು ರಾಯ್ ಗುರುತಿಸುತ್ತಾರಾದರೂ, ಕೂಡಲೇ ಅವರು ಹೇಳುವುದು:

**ಆಮೇಲೆ ತಮ್ಮ ಮೈ ಮರೆವಿನಿಂದ ಎಚ್ಚೆತ್ತ ಅಂಬೇಡ್ಕರ್ ಬರೆದಿದ್ದು: 'ಆ ಉಪವಾಸದಲ್ಲಿ ಉದಾತ್ತವಾದುದು ಏನೂ ಇರಲಿಲ್ಲ. ಅದೊಂದು ಅಸಹ್ಯಕರ ಗಲೀಜು ಕೃತ್ಯ' (೧೨೬).**

ಅಂಬೇಡ್ಕರ್ ಈ ಕಠೋರ ನುಡಿಗಳನ್ನು ಬಳಸಿದ್ದು ನಿಜ. ಆದರೆ ಯಾವಾಗ? ಅವರು ಗಾಂಧಿ ಉಪವಾಸದ ಮೈ ಮರೆವಿನಿಂದ ಎಚ್ಚೆತ್ತುಕೊಂಡಾಗ ಎಂದು ರಾಯ್ ಹೇಳುತ್ತಾರೆ. ಹಾಗಾದರೆ, ಗಾಂಧಿ ಬಗ್ಗೆ ಯಾವ ಪೂಜ್ಯ ಭಾವವೂ ಇರದಿದ್ದ ಎದುರಾಳಿ ಅಂಬೇಡ್ಕರ್‌ಗೆ, ಗಾಂಧಿಯ 'ಒತ್ತಡ'ದಿಂದ ಪಾರಾಗಲು ಎಷ್ಟು ದಿನ ಬೇಕಾಗಿದ್ದೀತು? ಏಳು ದಿನ? ಏಳು ತಿಂಗಳು? ರಾಯ್ ದಿನಾಂಕವನ್ನು ಮುಚ್ಚಿಟ್ಟು ಉಲ್ಲೇಖಿಸಿರುವ ಈ ಮಾತುಗಳನ್ನು ಅಂಬೇಡ್ಕರ್ ಬರೆದಿದ್ದು ೧೯೪೫ರ ಬೇಸಿಗೆಯಲ್ಲಿ– ಉಪವಾಸ ಮತ್ತು ಒಪ್ಪಂದದ *ಪೂರ್ಣ ಹದಿಮೂರು ವರ್ಷಗಳ* ನಂತರ– 'ಗಾಂಧಿ ಮತ್ತು ಕಾಂಗ್ರೆಸ್ ಅಸ್ಪೃಶ್ಯರಿಗೆ ಮಾಡಿದ್ದೇನು?' ಎಂಬ ತಲೆಬರಹದಲ್ಲಿ ಅವರು ಬರೆದ ಭಾವಾವಿಷ್ಟ ಹೊತ್ತಗೆಯಲ್ಲಿ.

ತಮ್ಮ ಈ ಉಗ್ರ ಪಠ್ಯದಲ್ಲಿ ಅಂಬೇಡ್ಕರ್ ಗಾಂಧಿಯ ಉಪವಾಸ ಮತ್ತು ಪುಣೆ ಒಪ್ಪಂದವನ್ನು ಸಾಧಿಸಿದ ವಿಧಾನದ ಮೇಲೇನೋ ವಾಗ್ದಾಳಿ ನಡೆಸುತ್ತಾರೆ; ಆದರೆ ನಮಗೆ ಸ್ಪಷ್ಟವಿರಬೇಕು, ಈ ದಾಳಿ– *ಆ ಒಪ್ಪಂದದ ಕರಾರುಗಳ ವಿರುದ್ಧ ಅಲ್ಲ.*

ಹಾಗೆ ನೋಡಿದರೆ ತಮ್ಮ ೧೯೪೫ರ ಪಠ್ಯದಲ್ಲಿ, ಅಂಬೇಡ್ಕರ್, ಪುಣೆ ಒಪ್ಪಂದ ತಮಗೆ ಸಂದ ವಿಜಯವೆಂದೇ ಅಲ್ಲಲ್ಲಿ ಹೇಳಿಕೊಳ್ಳುತ್ತಾರೆ. ಅದಕ್ಕೇ ಅವರು ಬರೆಯುವುದು, 'ಉಪವಾಸ ವಿಫಲವಾಗಿ, ಗಾಂಧಿ ಅಸ್ಪೃಶ್ಯರ ರಾಜಕೀಯ



**ಹರಿಜನ ನಿಧಿಗಾಗಿ ಗಾಂಧಿ ಹಣಕಾಸು ಸಂಗ್ರಹ**

ಹಕ್ಕೊತ್ತಾಯಗಳನ್ನು ಮನ್ನಿಸಿದ– ಪುಣೆ ಒಪ್ಪಂದ ಎಂದು ಕರೆಯಲಾಗುವ– ಈ ಒಪ್ಪಂದಕ್ಕೆ ಸಹಿ ಹಾಕಲೇಬೇಕಾದ ಸಂದರ್ಭ ಬಂದಾಗ, ಅಸ್ಪೃಶ್ಯರ ಹಕ್ಕುಗಳು ಚುನಾವಣೆಗಳಲ್ಲಿ ಅಕ್ರಮಗಳನ್ನು ಎಸಗಲು ಕಾಂಗ್ರೆಸ್ಸನ್ನು ಉತ್ತೇಜಿಸುವ ಮೂಲಕ, ಗಾಂಧಿ ತಮ್ಮ ಸೇಡು ತೀರಿಸಿಕೊಂಡರು. (ಅಂಬೇಡ್ಕರ್ ೧೯೪೫, ೨೫೯).

ಉಪವಾಸನಿರತ ಗಾಂಧಿಯ ಎದುರು ದೃಢವಾಗಿ ನಿಲ್ಲುವ ಯಾವ ಅವಕಾಶವೂ ಅಂಬೇಡ್ಕರ್‌ಗಿರಲಿಲ್ಲ ಎನ್ನುತ್ತಾರೆ ರಾಯ್. ಕೆಲವೇ ಪುಟಗಳ ನಂತರ ಆಕೆ 'ಪುಣೆ ಒಪ್ಪಂದದ ಪತನ' ಎಂಬ ಮಾತಾಡುತ್ತಾರೆ (೧೩೭). ಆದರೂ, ಅಂಬೇಡ್ಕರ್ ತಮ್ಮ ೧೯೪೫ರ ಈ ಪ್ರಕ್ಷುಬ್ಧ ಪಠ್ಯದಲ್ಲಿ ಎಲ್ಲಿಯೂ ಒಪ್ಪಂದದ ಕರಾರುಗಳನ್ನು ಟೀಕಿಸುವುದಿಲ್ಲ. ಅಷ್ಟೇ ಅಲ್ಲ, ಆ ಸಂದರ್ಭದಲ್ಲಿ ಅಥವಾ ನಂತರ ಯಾವಾಗಲಾದರೂ– ನನಗೆ ತಿಳಿದ ಮಟ್ಟಿಗೆ– ಆ ಒಪ್ಪಂದವನ್ನು ರದ್ದುಗೊಳಿಸಲು ಅಥವಾ ಬದಲಾಯಿಸಲು ಯತ್ನಿಸಲೂ ಇಲ್ಲ. ಈ ಒಪ್ಪಂದವನ್ನು 'ಪತನ' ಎಂದುಕೊಳ್ಳುವ ಬದಲು ಅವರು ಅದನ್ನು, ದಲಿತರೂ ಸೇರಿದಂತೆ ಎಲ್ಲರಿಗೂ ಲಾಭದಾಯಕವಾದ ಹೊಂದಾಣಿಕೆಯಾಗಿಯೇ ಕಂಡರು ಎನಿಸುತ್ತದೆ.

೧೯೪೫ರ ಈ ಪಠ್ಯವನ್ನು ಬರೆದ ಎರಡೇ ವರ್ಷಗಳ ನಂತರ, ಅವರು ಇದೇ ಒಪ್ಪಂದವನ್ನು ಅಳವಡಿಸಿಕೊಂಡ ಸಂವಿಧಾನಕ್ಕೆ ಕಾನೂನು ರೂಪ ಕೊಡುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಇಂದು ನೋಡಿದರೆ ಆ ಒಪ್ಪಂದ ಮಹಾ ಮುತ್ಸದ್ದಿತನದ ತೀರ್ಮಾನವಾಗಿಯೇ ಎದ್ದು ಕಾಣುತ್ತದೆ.

ಇನ್ನು ಸಂಪ್ರದಾಯವಾದಿ ಹಿಂದೂಗಳು ಸಹ ಗಾಂಧಿಯವರ ೧೯೩೨ರ ಉಪವಾಸವನ್ನು ತಮ್ಮ ಮೇಲೆ ಹೇರಿದ ಒತ್ತಡವಾಗಿ ಭಾವಿಸಿ, ತತ್ಫಲವಾದ ಒಪ್ಪಂದಕ್ಕೆ ಪ್ರತಿರೋಧ ಒಡ್ಡಿದ್ದನ್ನು– ರಾಯ್ ಒಪ್ಪಿಕೊಳ್ಳುವುದಿಲ್ಲವಾದರೂ– ಅಂಬೇಡ್ಕರ್ ಮಾತ್ರ (ತಮ್ಮ ೧೯೪೫ರ ಪಠ್ಯದಲ್ಲಿ) ದಾಖಲಿಸುತ್ತಾರೆ. ತಾವು ತೋರಿದ ರಿಯಾಯಿತಿಗಳಿಂದಾಗಿ 'ಅಸ್ಪೃಶ್ಯರು ದುಃಖಿತರಾದರು' ಎಂದು ಅಂಬೇಡ್ಕರ್ ಬರೆದರೂ ಅವರು ಹೇಳುವುದು:

> **ಸವರ್ಣೀಯ ಹಿಂದೂಗಳಿಗೆ (ಒಪ್ಪಂದವನ್ನು) ವಿರೋಧಿಸುವ ಧೈರ್ಯ ಇರಲಿಲ್ಲವಾದರೂ, ಅದನ್ನು ಅವರು ಖಡಾಖಂಡಿತವಾಗಿ ದ್ವೇಷಿಸಿದ್ದಂತೂ ನಿಜ** *(ಅಂಬೇಡ್ಕರ್ ೧೯೪೫, ೯೦– ೯೧).*

ಈ ಒಪ್ಪಂದ ಹಾಗೂ ಉಪವಾಸಕ್ಕೆ ಕಂದಾಚಾರಿಗಳ ಪ್ರತಿರೋಧದ ಫಲವಾಗಿ ೧೯೩೪ರಲ್ಲಿ ಗಾಂಧಿ ಹತ್ಯೆಯ ಎರಡು ಪ್ರಯತ್ನಗಳು ನಡೆದವು– ಒಂದು ಬಿಹಾರದ ಜಸಿಧಿಯಲ್ಲಿ, ಮತ್ತೊಂದು ಪುಣೆಯಲ್ಲಿ. ಅಷ್ಟಾದರೂ ಸಂಪ್ರದಾಯವಾದಿಗಳು ತಮ್ಮ ನೆಲೆ ಕಳೆದುಕೊಳ್ಳುತ್ತಿದ್ದಾರೆಂದೇ ಗಾಂಧಿ ಭಾವಿಸಿದರು. ಅವರು ನೆಹರೂಗೆ (೧೫ ಫೆಬ್ರವರಿ ೧೯೩೩) ಬರೆದದ್ದು,

> **ಸನಾತನಿಗಳ ವಿರುದ್ಧ ಹೋರಾಟ ಬರಬರುತ್ತಾ ಹೆಚ್ಚು ಹೆಚ್ಚು ಕ್ಲಿಷ್ಟಕರವಾಗುತ್ತಿದ್ದರೂ, ಆಸಕ್ತಿದಾಯಕ ರೂಪವನ್ನೂ ಪಡೆಯುತ್ತಿದೆ... ಅವರು ನನ್ನತ್ತ ತೂರಿಬಿಡುತ್ತಿರುವ ಬೈಗುಳಗಳು ಅದ್ಭುತವಾಗಿ ಉಲ್ಲಾಸದಾಯಕವಾಗಿವೆ. ನಾನು ಈ ಜಗತ್ತಿನಲ್ಲಿ ಅತ್ಯಂತ ಕೆಟ್ಟದು ಹಾಗೂ ಭ್ರಷ್ಟವಾದದ್ದೆಲ್ಲದರ ಮೊತ್ತವಾಗಿಬಿಟ್ಟಿದ್ದೇನೆ. ಆದರೆ ಈ ಬಿರುಗಾಳಿ ಕ್ಷೀಣಿಸುವುದು ಖಂಡಿತ... ಇದು ಬೆಂಕಿಯ ಸುತ್ತ ಪತಂಗದ ಮೃತ್ಯನರ್ತನ** *(ಸಮಗ್ರ ಕೃತಿಗಳು ೫೩: ೩೦೯ –೧೦).*

ಕೆಲವು ಸನಾತನಿಗಳು ('ಡಾಕ್ಟರ್ ಮತ್ತು ಸಂತ' ಗುರುತಿಸಿ ಹೇಳದಿದ್ದರೂ) ೧೯೩೪ರಲ್ಲಿ ಗಾಂಧೀಜಿನ್ನು ಕೊಲ್ಲಲು ಯತ್ನಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

*****

೧೯೩೬ರಲ್ಲಿ ಅಂಬೇಡ್ಕರ್‌ರ *ಜಾತಿವಿನಾಶ* ಭಾಷಣವೇ ನಿಮಿತ್ತವಾಗಿ ಜಾತಿ, ವರ್ಣ ಮತ್ತು ಕುಲಕಸುಬುಗಳಿಗೆ ಸಂಬಂಧಿಸಿದಂತೆ ಗಾಂಧಿ ಮತ್ತು ಅಂಬೇಡ್ಕರ್ ನಡುವೆ ನಡೆದ ವಾಗ್ವಾದದಲ್ಲಿ, ನಿಚ್ಚಳ ಜಯಶಾಲಿಯಾಗಿದ್ದವರು ಅಂಬೇಡ್ಕರ್.

೧೯೩೬ರ ಈ ವಾಗ್ವಾದಕ್ಕೆ ಕೆಲವು ತಿಂಗಳ ಮುಂಚೆಯಷ್ಟೇ ಗಾಂಧಿ 'ಜಾತಿ'ಯ ಸಮರ್ಥನೆಯನ್ನು ನಿಲ್ಲಿಸಿದ್ದರು. 'ಜಾತಿ ತೊಲಗಲೇಬೇಕು'– ಅವರು ೧೯೩೫ರ ನವೆಂಬರ್ ೧೬ರಂದು ತಮ್ಮ *ಹರಿಜನ್* ಪತ್ರಿಕೆಯಲ್ಲಿ ಬರೆದ ಲೇಖನದ ಶೀರ್ಷಿಕೆ. ಅದರಲ್ಲೇ ಅವರು 'ಜನಾಭಿಪ್ರಾಯ, (ಜಾತಿಯನ್ನು) ಎಷ್ಟು ಬೇಗ ತೊಲಗಿಸಿದರೆ ಅಷ್ಟೂ ಒಳ್ಳೆಯದು' ಎಂದು ಬರೆದಿದ್ದರು *(ಸಮಗ್ರ ಕೃತಿಗಳು ೬೨: ೧೨೧– ೨).*

೧೯೩೫ಕ್ಕೆ ಮುಂಚೆ ಗಾಂಧಿ, ಜಾತಿ ತನ್ನ 'ಆದರ್ಶ' ರೂಪದಲ್ಲಿ ಸಮರ್ಥನೆಗೆ ಅರ್ಹವೆಂದು ಆಗಾಗ ಹೇಳಿದ್ದುಂಟು. ಜೊತೆಗೇ ಅವರು ಆ 'ಆದರ್ಶ'– ಆಚರಣೆಯಲ್ಲಿ ಎಂದೂ ಇರಲಿಲ್ಲವೆಂದೂ, ಮೇಲು ಕೀಳಿನ ಕಲ್ಪನೆಯೇ ಸಂಪೂರ್ಣ ತಪ್ಪು ಎಂದೂ ಹೇಳುತ್ತಿದ್ದರು. ಜಾತಿಪದ್ಧತಿಯ ಈ ಮೇಲ್ನೋಟದ ಸಮರ್ಥನೆ, ಸವರ್ಣೀಯ ಹಿಂದೂಗಳಿಗೆ ನುಂಗಲು ಗಾಂಧಿ ನೀಡುತ್ತಿದ್ದ ಕಹಿ ಗುಳಿಗೆಗಳಿಗೆ ಸವರಿದ ಸಕ್ಕರೆ ಲೇಪನವಾಗಿತ್ತು.

ಅಂಬೇಡ್ಕರರೊಂದಿಗಿನ ೧೯೩೬ರ ವಾಗ್ವಾದದಲ್ಲಿ ಗಾಂಧಿ ಜಾತಿಯನ್ನು ತಿರಸ್ಕರಿಸುವ ತಮ್ಮ ನಿಲುವನ್ನು ಪುನರುಚ್ಚರಿಸಿದರು. 'ಆಧ್ಯಾತ್ಮಿಕ ಮತ್ತು ರಾಷ್ಟ್ರೀಯ ಬೆಳವಣಿಗೆಗಳೆರಡಕ್ಕೂ ಅದು ಹಾನಿಕರ' ಎಂದಿದ್ದಷ್ಟೇ ಅಲ್ಲ, ಇದುವರೆಗೆ ತಾವು ಮಾಡಲು ಹಿಂಜರಿದಿದ್ದನ್ನು ಈಗ ಮಾಡಿಯೂಬಿಟ್ಟರು. ಅಂದರೆ ಅಂತರ್ ಭೋಜನ ಮತ್ತು ಅಂತರ್ ವಿವಾಹಕ್ಕೆ ತಮ್ಮ ಸಮ್ಮತಿಯನ್ನು ಈಗ ಬಹಿರಂಗವಾಗಿ ಘೋಷಿಸಿದರು *(ಅಂಬೇಡ್ಕರ್ ೨೦೧೪, ೩೨೬).*

ಅಷ್ಟಾದರೂ, 'ವರ್ಣ'ವು ಜಾತಿಗಿಂತ ಭಿನ್ನವೆಂದು ಹೇಳಿ, ವರ್ಣ ಸೂಚಿಸುವ ಕುಲಕಸುಬುಗಳು ಸಾಮರಸ್ಯ ಮತ್ತು ಸುವ್ಯವಸ್ಥೆಯನ್ನು ಸಾಧಿಸಬಲ್ಲವು ಎಂದು ವಾದಿಸಿದರು. ಆದರೆ ಶುದ್ಧ ವರ್ಣವ್ಯವಸ್ಥೆಯನ್ನು ಸ್ಥಾಪಿಸುವುದು 'ಸಕ್ಕರೆ ಚೀಲವನ್ನು ಇರುವೆ ಎತ್ತಲು ಯತ್ನಿಸಿದಂತೆ' ಅಥವಾ 'ಡೇಮ್ ಪಾರ್ಕಿಂಗ್‌ಟನ್, ಅಟ್ಲಾಂಟಿಕ್ ಸಾಗರವನ್ನು ಪೊರಕೆಯಿಂದ ಹಿಂದೆ ತಳ್ಳಿದಂತೆ' ಎಂದೂ ಹೇಳಿದರು. ಅಂದರೆ ವರ್ಣವ್ಯವಸ್ಥೆಯೇ ಅಸಾಧ್ಯ ಎಂಬುದು ಅವರ ಇಂಗಿತವಾಗಿತ್ತು.

ವರ್ಣದ ಈ ಮೇಲ್ನೋಟದ ಸಮರ್ಥನೆಯನ್ನು ಗ್ರಹಿಸುವುದು ಸುಲಭವೂ ಅಲ್ಲ, ಒಪ್ಪುವಂಥದೂ ಅಲ್ಲ. ಅದಕ್ಕೇ ಅಂಬೇಡ್ಕರ್ ಸುಲಭವಾಗಿ ಅದರ ಹುಳುಕುಗಳನ್ನು ಎತ್ತಿ ತೋರಿದರು.

ಇದು ಈ ವಾಗ್ವಾದವನ್ನು ನಾವು ಇಂದು ಅರ್ಥೈಸುವ ಪರಿ. ಆದರೆ ೧೯೩೬ರಲ್ಲಿ ಅಂಬೇಡ್ಕರರ *ಜಾತಿವಿನಾಶ*ದಿಂದ ಅನೇಕರು ಎತ್ತಿಕೊಂಡಿದ್ದು– ಸಮಸ್ತ ಹಿಂದೂಗಳಿಗೆ ಅವರು ನೀಡಿದ ಈ ನಿಸ್ಸಂದಿಗ್ಧ ಹೇಳಿಕೆ: 'ಕ್ಷಮಿಸಿ, ನಾನು ನಿಮ್ಮೊಡನಿರಲಾರೆ... ನಾನು ನಿಮ್ಮ ಕಕ್ಷೆಯನ್ನು ತೊರೆದು ಹೋಗುತ್ತಿದ್ದೇನೆ' (ಅಂಬೇಡ್ಕರ್ ೨೦೧೪, ೩೧೭).

೧೯೩೬ರ ಇದೇ ವಾಗ್ವಾದದಿಂದ ಜನ ಗ್ರಹಿಸಿದ ಮತ್ತೂ ಒಂದು ಸಂಗತಿ– ಗಾಂಧಿ ಮಾಡಿದ ಹಿಂದೂಧರ್ಮದ ಸಮರ್ಥನೆ; ಮತ್ತು ಹಿಂದೂ ಧರ್ಮದ 'ಕೆಲವು ಪ್ರತಿಪಾದಕರ' ವಿರುದ್ಧ ನ್ಯಾಯವಾಗಿಯೇ ತೋರಬೇಕಾದ 'ಜುಗುಪ್ಸೆ'ಯನ್ನು ಅಂಬೇಡ್ಕರ್ ಇಡಿಯಾಗಿ ಹಿಂದೂಧರ್ಮದೆಡೆಗೆ 'ವರ್ಗಾಯಿಸಿದರೆಂದು' ಗಾಂಧಿ ವ್ಯಕ್ತಪಡಿಸಿದ ವಿಷಾದ (ಅಂಬೇಡ್ಕರ್ ೨೦೧೪, ೩೨೨).

ಗಾಂಧಿ ನಿಧನದ ಎಂಟು ವರ್ಷಗಳ ತರುವಾಯ ನೆಹರೂ ಐರೋಪ್ಯ ಪತ್ರಕರ್ತ ಟೈಬೊರ್ ಮೆಂಡೆಯವರಿಗೆ ಹೇಳಿದ್ದು:

> **ನಾನು (ಗಾಂಧಿಯವರನ್ನು) ಮತ್ತೆ ಮತ್ತೆ ಕೇಳಿದೆ: ನೀವು ಜಾತಿ ವ್ಯವಸ್ಥೆಯ ಮೇಲೇಕೆ ನೇರ ದಾಳಿ ನಡೆಸುವುದಿಲ್ಲ? ಅದಕ್ಕೆ ಅವರು ಹೇಳಿದರು, 'ನಾನು ಅಸ್ಪೃಶ್ಯತೆಯ ವಿರುದ್ಧ ಹೋರಾಡುವ ಮೂಲಕವೇ ಅದನ್ನು (ಜಾತಿಯನ್ನು) ಶಿಥಿಲಗೊಳಿಸುತ್ತಿದ್ದೇನೆ'... (ಗಾಂಧಿಯವರ) ಪ್ರತಿಭೆ ಶತ್ರುವಿನ ಅತ್ಯಂತ ದುರ್ಬಲ ಅಂಶವನ್ನು ಪತ್ತೆ ಮಾಡಿ, ಅವನ ಮುಖ ಮೋರೆ ಭಗ್ನಗೊಳಿಸುವುದಾಗಿತ್ತು** *(ಮೆಂಡೆ ೧೯೫೮ರಲ್ಲಿ ಉದ್ಧೃತ).*

ಜಾತಿವ್ಯವಸ್ಥೆಯ ವಿರುದ್ಧ ದಾಳಿ ಮಾಡುವ ಮೂಲಕವೇ ತಮ್ಮ ಹೋರಾಟವನ್ನೇನಾದರೂ ಆರಂಭಿಸಿದ್ದಿದ್ದರೆ, ಆಗ ಒಮ್ಮಿಂದೊಮ್ಮೆಲೇ ಎಲ್ಲ ಸಂಪ್ರದಾಯಶರಣರೂ ಒಗ್ಗಟ್ಟಾಗಿಬಿಡುತ್ತಿದ್ದರು ಎಂಬುದನ್ನು ಗ್ರಹಿಸಿದ ಗಾಂಧಿ, ಯಾರೊಬ್ಬರೂ ಸಮರ್ಥಿಸಿಕೊಳ್ಳಲಾಗದ ಕೇಡನ್ನು (ಅಸ್ಪೃಶ್ಯತೆ) ಹೆಕ್ಕಿ ತೆಗೆದು ಅದರ ವಿರುದ್ಧ ಯುದ್ಧ ಸಾರಿದರು.

೧೯೩೭ರ ಚುನಾವಣೆಗಳಲ್ಲಿ, ಬಹುಪಾಲು ದಲಿತರೂ ಸೇರಿದಂತೆ ಭಾರತದ ಹೆಚ್ಚಿನ ಹಿಂದೂಗಳು (ಗಾಂಧಿಯವರಿಂದ ಹಾಗೂ ದಲಿತರೂ ಸೇರಿದಂತೆ ಅನೇಕ ಭಾರತೀಯರಿಂದ ಹರಿಜನರೆಂದು ಕರೆಸಿಕೊಂಡವರೂ ಸೇರಿದಂತೆ) ಗಾಂಧಿಯವರ ಕಾಂಗ್ರೆಸ್ಸಿಗೆ ಮತ ಚಲಾಯಿಸಿದರೇ ಹೊರತು ಅಂಬೇಡ್ಕರರ ಪಕ್ಷಕ್ಕಲ್ಲ.

ರಾಯ್ ಖಂಡಿತ ಹೇಳುವುದಿಲ್ಲ, ನಿಜ, ಆದರೆ ಕಾಂಗ್ರೆಸ್ ೧೯೩೭ರಲ್ಲಿ ರಚಿಸಿದ ಪ್ರತಿಯೊಂದು ಪ್ರಾಂತೀಯ ಸಂಪುಟದಲ್ಲೂ ಒಬ್ಬ ದಲಿತ ಮಂತ್ರಿ ಇರುತ್ತಿದ್ದರು. ೧೯೩೯ರ ಡಿಸೆಂಬರ್ ಹೊತ್ತಿಗೆ ಕಾಂಗ್ರೆಸ್ ಅಧಿಕಾರ ತ್ಯಜಿಸಿದಾಗ (ಯಾಕೆಂದರೆ ೧೯೩೯ರ ಸೆಪ್ಟೆಂಬರ್ ಹೊತ್ತಿಗೆ ಯೂರೋಪಿನಲ್ಲಿ ಆರಂಭವಾಗಿದ್ದ ಯುದ್ಧ, ಬ್ರಿಟಿಷ್ ಸಾಮ್ರಾಜ್ಯ ಮತ್ತು ಕಾಂಗ್ರೆಸ್ ನಡುವಣ ಕಂದಕವನ್ನು ಆಳವಾಗಿಸಿತ್ತು), ಆ ವೇಳೆಗಾಗಲೇ ಈ ಮಂತ್ರಿಗಳು ದಲಿತ ಹಕ್ಕುಗಳ ವಿಷಯದಲ್ಲಿ ಕೆಲವು ಸಾಧನೆಗಳನ್ನು ಮಾಡಿದ್ದರು. ೧೯೩೮ರಲ್ಲಿ ಜಾರಿಗೆ ತರಲಾದ ಕಾನೂನಿನ ಪ್ರಕಾರ, ನೌಕರಿ, ಬಾವಿಗಳು, ಸಾರ್ವಜನಿಕ ಉಪಯೋಗದ ಸ್ಥಳಗಳು, ರಸ್ತೆಗಳು ಮತ್ತು ಶಾಲಾ ಕಾಲೇಜುಗಳಲ್ಲಿ ದಲಿತರ ವಿರುದ್ಧ ತಾರತಮ್ಯ ಮಾಡುವುದು ಅಪರಾಧವಾಗಿತ್ತು. ತಮ್ಮ ದೇವಸ್ಥಾನದ ಬಾಗಿಲು ತೆರೆಯಲು ಸಿದ್ಧರಿದ್ದ ಅಧಿಕಾರಿಗಳಿಗೆ ರಕ್ಷಣೆ ಕಲ್ಪಿಸುವ ಮತ್ತೊಂದು ಕಾನೂನಿನಿಂದಾಗಿ, ದಲಿತರು ದಕ್ಷಿಣದ ಹಲವಾರು ಭಾರೀ ದೇವಾಲಯಗಳನ್ನು ಮೊಟ್ಟ ಮೊದಲ ಬಾರಿಗೆ ಪ್ರವೇಶಿಸಿದರು.

ಅಂಬೇಡ್ಕರ್, ದೆಹಲಿ ಪೃಥ್ವಿರಾಜ್ ರಸ್ತೆಯ ತಮ್ಮ ಅಧಿಕೃತ ನಿವಾಸದಲ್ಲಿ ಬರೆದ ೧೯೪೫ರ ಪತ್ಯದ ಉಗ್ರ ಭಾಷೆಗೆ ಹಿನ್ನೆಲೆ ಏನಿತ್ತು? ಈ ಸಮಯದಲ್ಲಿ ಅವರು ವೈಸರಾಯ್‌ರ ನಿರ್ವಾಹಕ ಮಂಡಳಿಯ ಸದಸ್ಯರಾಗಿದ್ದರು. ಯುದ್ಧ ಇನ್ನೇನು ಮುಕ್ತಾಯದ ಹಂತಕ್ಕೆ ಬಂದಿತ್ತು. ಭಾರತವನ್ನು ಸಾಕಷ್ಟು ಅಲ್ಲಾಡಿಸಿದ್ದ ಚಲೇಜಾವ್ ಚಳವಳಿಯ ಅಂಗವಾಗಿ ಮೂರು ವರ್ಷ ಕಾಲ ಸೆರೆಯಲ್ಲಿದ್ದ ಕಾಂಗ್ರೆಸ್ ನಾಯಕರು ಇನ್ನೇನು ಬಿಡುಗಡೆ ಹೊಂದಲಿದ್ದರು. ಬ್ರಿಟಿಷರು ಭಾರತಕ್ಕೆ ಹೊಸದೊಂದು ರಾಜಕೀಯ ಕಾರ್ಯಕ್ರಮದ ಪ್ರಸ್ತಾವ ಮುಂದಿಡಲು ಸಜ್ಜಾಗಿದ್ದರು ಮತ್ತು ದೇಶದ ಉದ್ದಗಲ ಹೊಸ ಚುನಾವಣೆಗಳು ನಡೆಯಲಿದ್ದವು.

೧೯೪೫ರ ಈ ಪತ್ಯ ಬರೆಯುತ್ತಿದ್ದ ಉಜ್ವಲ ಚಿಂತಕ ಮತ್ತು ಸದಸ್ಯನಿಗೆ (ಅಂದರೆ ಮಂತ್ರಿ), ಬ್ರಿಟಿಷರ ಯಾವುದೇ ಹೊಸ ಯೋಜನೆಯ ಮೇಲೂ ಪ್ರಭಾವ ಬೀರುವ ಆಶಯವಿತ್ತು. ಇದರ ಜೊತೆಗೆ ಈ ರಾಜಕೀಯ ಮುಖಂಡನಿಗೆ ೧೯೩೭ರ ಚುನಾವಣಾ ಫಲಿತಾಂಶವನ್ನು ಮರೆಯಲಾಗಿರಲಿಲ್ಲ. ಯುದ್ಧದ ಕಾರಣದಿಂದಾಗಿ ಅದೇ ಕಡೆಯ ಚುನಾವಣೆಯಾಗಿತ್ತು ಬೇರೆ. ಈಗ ೧೯೪೫– ೪೬ರಲ್ಲಿ ತಮ್ಮ ಸಾಧನೆಯನ್ನು ಸುಧಾರಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು. ೧೯೩೭ರ ಫಲಿತಾಂಶಗಳಿಂದಾಗಿ ರೇಗಿಹೋಗಿದ್ದ ಅಂಬೇಡ್ಕರ್, ೧೯೪೫ರ ಈ ಪ್ರಬಂಧದ ಮುಖಾಂತರ ಬ್ರಿಟಿಷ್ ನಾಯಕರು ಹಾಗೂ ಭಾರತೀಯ ಮತದಾರರಿಬ್ಬರ ಮುಂದೆಯೂ ಒಟ್ಟಿಗೇ ತಮ್ಮ ವಾದವನ್ನು ಮಂಡಿಸಿದರು.

ಆದರೂ, ೧೯೪೫– ೪೬ರ ಚುನಾವಣೆ ಸಹ, ದಲಿತರೂ ಸೇರಿದಂತೆ ಬಹುತೇಕ ಭಾರತೀಯ ಮತದಾರರ ಒಲವು ಕಾಂಗ್ರೆಸ್ಸಿನ ಕಡೆಗೇ ಇದೆ ಎಂಬುದನ್ನು ದೃಢಪಡಿಸಿತು. ಕಾಂಗ್ರೆಸ್, ೧೯೩೭ರ ಚುನಾವಣೆಗಳಿಗಿಂತಲೂ ಹೆಚ್ಚು ಹಿಂದೂ ಹಾಗೂ ದಲಿತರ ಮತಗಳನ್ನು ಪಡೆದು ಈ ಬಾರಿ ಇನ್ನಷ್ಟು ದಲಿತ ಸ್ಥಾನಗಳನ್ನು ಗೆದ್ದುಕೊಂಡಿತು.

ದಲಿತೇತರರ ಮತದಾರರು ತಮ್ಮ ಸೋಲಿಗೆ ಕಾರಣರಾಗಬಲ್ಲರೆಂಬ ಸಂಗತಿಯಿಂದ ಅನೇಕ ದಲಿತ ಅಭ್ಯರ್ಥಿಗಳು ಸಹಜವಾಗಿಯೇ



ಅಸಮಾಧಾನಗೊಂಡರು. ದುರದೃಷ್ಟವಶಾತ್, ಹಿಂದೂ ಸಂಹಿತೆ ಕಾಯ್ದೆಯ ಜಾರಿಯಲ್ಲಿ ಕಾಂಗ್ರೆಸ್ಸಿನ ನಿಧಾನ ಗತಿಯಿಂದಾಗಿ ಭ್ರಮನಿರಸನಗೊಂಡು ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡಿದ ಅಂಬೇಡ್ಕರರಿಗೂ, ೧೯೫೨ರ ಚುನಾವಣೆಯಲ್ಲಿ, ಹಾಗೂ ೧೯೫೪ರ ಉಪಚುನಾವಣೆಗಳಲ್ಲಿ ಸ್ವತಃ ಇದೇ ಅನುಭವವಾಯಿತು.

ಜಂಟಿ ಚುನಾವಣೆಯಲ್ಲಿ, ದಲಿತರೂ ಸೇರಿದಂತೆ ಎಲ್ಲ ಜಾತಿಗಳ ಒಳ್ಳೆಯವರೂ ಕೆಲವು ಬಾರಿ ತಮ್ಮ ಜಾತಿ ಹೊರಗಿನ ಮತದಾರರಿಂದ ಸೋಲು ಅನುಭವಿಸುವುದು ಅಥವಾ ಇನ್ನು ಕೆಲವು ಬಾರಿ 'ಹೊರಗಿನ' ಮತಗಳಿಂದ ಗೆಲ್ಲುವುದು ಸಂಭವಿಸುತ್ತದೆ.

ಅಂಬೇಡ್ಕರ್ ಪರಂಪರೆಯ ಬುನಾದಿ ಮೇಲೆ ಕಾನ್ಶಿರಾಂ ಸ್ಥಾಪಿಸಿದ ಬಹುಜನ ಸಮಾಜ ಪಕ್ಷ ನಮ್ಮ ಅತಿ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಸರ್ಕಾರ ರಚಿಸಿದ್ದರೆ, ಅದಕ್ಕೆ ಪುಣೆ ಒಪ್ಪಂದ ಮತ್ತು ಜಂಟಿ ಮತಕ್ಷೇತ್ರಗಳೇ ಕಾರಣವೆಂದು ಹೇಳಬಹುದು.

ರಾಯ್ ಚಿತ್ರಿಸುವಂತೆ, ಆ ಒಪ್ಪಂದ ಒಂದು ಪ್ರಮಾದ ಎಂಬುದನ್ನು ಒಪ್ಪುವುದು ಅಥವಾ ಪ್ರತ್ಯೇಕ ದಲಿತ–ಆದಿವಾಸಿ ಮತಕ್ಷೇತ್ರಗಳಿಂದ ೨೦೧೪ರ ಭಾರತಕ್ಕೆ, ಅಥವಾ ದಲಿತ ಆದಿವಾಸಿಗಳಿಗೆ ಹೆಚ್ಚಿನ ಉಪಯೋಗವಾಗುತ್ತಿತ್ತು ಎಂದು ವಾದಿಸುವುದು ಕಷ್ಟ

****

೧೯೨೦ ಮತ್ತು ೩೦ರಲ್ಲಿ, ಬ್ರಿಟಿಷ್ ಆಡಳಿತದ ಪ್ರತಿ ಹಳ್ಳಿ ನಗರಗಳಲ್ಲಿ ದಲಿತರು ಮತ್ತು ಸವರ್ಣೀಯ ಹಿಂದೂಗಳೇನಾದರೂ ಪರಸ್ಪರ ಭೀಕರ ಸಂಘರ್ಷದಲ್ಲಿ ತೊಡಗಿದ್ದೇ ಆದರೆ, ಅದು ಸ್ವಾತಂತ್ರ್ಯದ ಹಾದಿಯಲ್ಲಿ ದಾಟಲಾಗದ ತಡೆಗೋಡೆಯಾಗಿಬಿಡುತ್ತಿತ್ತು; ಹಿಂದೂ ಮುಸ್ಲಿಂ ವೈಮನಸ್ಸಿನಿಂದ ಸೃಷ್ಟಿಯಾದ ಅಡ್ಡಿ ಆತಂಕಗಳಿಗಿಂತಲೂ ದೊಡ್ಡದಾದ ಅಡಚಣೆಯಾಗುತ್ತಿತ್ತು ಎಂಬುದನ್ನು ಗಾಂಧಿ ಮನಗಂಡಿದ್ದರು. ಜೊತೆಗೆ ಭಾರತಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಲು ಸಾಮ್ರಾಜ್ಯಕ್ಕೆ ಅದೇ ಪ್ರಬಲ ನೆಪವಾಗಿ ಒದಗಿಬರುತ್ತಿತ್ತು; ಮತ್ತು ಇಡೀ ಜಗತ್ತು ಸಾಮ್ರಾಜ್ಯದ ಸಮಜಾಯಿಷಿಯನ್ನೇ ಒಪ್ಪಿಕೊಳ್ಳುತ್ತಿತ್ತು.

ಅಷ್ಟೇ ಅಲ್ಲದೆ, ಹಣ ಹಾಗೂ ಶಸ್ತ್ರಾಸ್ತ್ರಗಳ ದೃಷ್ಟಿಯಿಂದ ಸವರ್ಣೀಯ ಹಿಂದೂಗಳು ಇಂದಿಗಿಂತಲೂ ಹೆಚ್ಚು ಬಲಶಾಲಿಗಳಾಗಿದ್ದ ಆ ಸಂದರ್ಭದಲ್ಲಿ, ಅಂಥದೊಂದು ಸಂಘರ್ಷ ದಲಿತರನ್ನು ಸರ್ವನಾಶ ಮಾಡಿಬಿಡುತ್ತಿತ್ತೆಂದು ಗಾಂಧಿ ಭಾವಿಸಿದ್ದರು. ಹಾಗಾಗಿ ಪ್ರತ್ಯೇಕ ಮತಕ್ಷೇತ್ರಕ್ಕೆ ತಮ್ಮ ವಿರೋಧ, ದಲಿತರ ಸುರಕ್ಷತೆಯ ಕಾಳಜಿಯಿಂದ ಹುಟ್ಟಿದ್ದೆಂದು ಅವರು ಹೇಳಿಕೊಂಡರು.

ಗಾಂಧಿ ತಮ್ಮ ಸುತ್ತಣ ವಾಸ್ತವ ಜಗತ್ತನ್ನು ಅಭ್ಯಸಿಸಿ ಕಂಡುಕೊಂಡ ಪ್ರಕಾರ ಸವರ್ಣೀಯ ಹಿಂದೂಗಳನ್ನು ಸ್ವಾತಂತ್ರ್ಯದೆಡೆಗೆ ಕರೆದೊಯ್ಯುತ್ತ, ಅದೇ ಸಮಯದಲ್ಲಿ ಅವರ ಮನದಲ್ಲಿ ಅಸ್ಪೃಶ್ಯತೆ ಆಚರಣೆ ವಿಚಾರವಾಗಿ ಲಜ್ಜೆ ಹುಟ್ಟಿಸುವುದೇ, ದಲಿತರು ಮತ್ತು ಹಿಂದೂಗಳು– ಎಲ್ಲರ ಪಾಲಿಗೂ ಸೂಕ್ತವಾದ ಉಪಾಯ ಎಂಬುದು ಅವರ ನಿಲುವಾಗಿತ್ತು. ಅವರ ಮಟ್ಟಿಗೆ ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದರೆ ಮಾತ್ರವೇ– ಅಸ್ಪೃಶ್ಯತೆ ಹಾಗೂ ಜಾತಿ ಮೇಲರಿಮೆಗಳೆಂಬ ಇನ್ನೂ ಗುರುತರವಾದ ಅನ್ಯಾಯಗಳ ವಿರುದ್ಧ ಯಶಸ್ವಿ ಹೋರಾಟ ನಡೆಸಲು ಸಾಧ್ಯವಾಗುತ್ತಿತ್ತು.

ಸ್ವಾತಂತ್ರ್ಯ ಗಳಿಸಿ ಕಳೆದ ಈ ೬೭ ವರ್ಷಗಳಲ್ಲಿ, ಆ ಹೋರಾಟ ವಿಧಾನ ತಪ್ಪಾಗಿತ್ತು ಎನ್ನಲು ಯಾವ ಸಮರ್ಥನೆಯೂ ಸಿಕ್ಕಿಲ್ಲ.

೧೦

ಸ್ವಾತಂತ್ರ್ಯ ಸಾಧನೆ ಸನಿಹವಾದಂತೆ ಭಾಸವಾದಾಗ, ಗಾಂಧಿ ಭಾರತೀಯ ಸಮಾಜವನ್ನು ತಿದ್ದುವ ನಿಟ್ಟಿನಲ್ಲಿ ತಮ್ಮ ಪುರೋಗಾಮಿ ಮುಖವನ್ನು ಮುನ್ನೆಲೆಗೆ ತಂದಂತೆ ತೋರುತ್ತದೆ. ಸ್ವಾತಂತ್ರ್ಯಕ್ಕೆ ಸುಮಾರು ಒಂದು ವರ್ಷ ಮುಂಚೆ ೧೯೪೬ರ ಆಗಸ್ಟ್ ೧೮ರಂದು ಅವರು ವಲ್ಲಭಭಾಯಿ ಪಟೇಲರಿಗೆ ಬರೆದರು:

**ಹರಿಜನರನ್ನು ಥಳಿಸುವವರು, ಕೊಲ್ಲುವವರು, ಬಾವಿಗಳನ್ನು ಬಳಸದಂತೆ ಅವರನ್ನು ತಡೆದವರು, ಶಾಲೆಗಳಿಂದ ಹೊರಗಟ್ಟಿದವರು ಮತ್ತು ತಮ್ಮ ಮನೆಗಳಲ್ಲಿ ಅವರಿಗೆ ಪ್ರವೇಶ ನಿರಾಕರಿಸಿದವರು ಯಾರು? ಕಾಂಗ್ರೆಸ್ಸಿಗರೇ. ಅಲ್ಲವೇ? ಈ ಬಗ್ಗೆ ಒಂದು ಸುಸ್ಪಷ್ಟ ಚಿತ್ರಣ ಇಟ್ಟುಕೊಳ್ಳುವುದು ತೀರಾ ಅಗತ್ಯ** (ಸಮಗ್ರ ಕೃತಿಗಳು ೮೫: ೧೦೨).

ಈ ಪತ್ರ ಬರೆದ ಮೂರು ತಿಂಗಳ ನಂತರ ಗಾಂಧಿ, ಕೋಮು ಗಲಭೆ ಭುಗಿಲೆದ್ದಿದ್ದ ಪೂರ್ವ ಬಂಗಾಳದ ನೌಖಾಲಿಗೆ ಹೋಗಬೇಕಾಯಿತು. ೧೯೪೭ರ ಜನವರಿ ಮತ್ತು ಫೆಬ್ರವರಿಗಳಲ್ಲಿ ಅವರು ತಮ್ಮ ಬೆರಳೆಣಿಕೆ ಸಂಗಾತಿಗಳೊಂದಿಗೆ ಹಳ್ಳಿಯಿಂದ ಹಳ್ಳಿಗೆ ನಡೆಯುತ್ತ ೪೬ ಪೂರ್ವ ಬಂಗಾಳಿ ಮನೆಗಳಲ್ಲಿ ತಂಗಿದರು. ಅವರ ಆತಿಥೇಯರಲ್ಲಿ ಅನೇಕರು ದಲಿತರು, ಬೆಸ್ತರು, ಮೀನುಗಾರರು, ಮೋಚಿಗಳು ಮತ್ತು ನೇಕಾರರಾಗಿದ್ದರು.

ನೌಖಾಲಿಯಲ್ಲಿ ಗಾಂಧಿ, ಅಸ್ಪೃಶ್ಯರನ್ನು ನಿರಾಕರಿಸುತ್ತಲೇ ಹೋದರೆ ಸವರ್ಣೀಯ ಹಿಂದೂ ಹೆಂಗಸರಿಗೆ ಇನ್ನಷ್ಟು ಮತ್ತಷ್ಟು ದುಃಖ ಕಾದಿದೆ ಎಂದು ಎಚ್ಚರಿಸಿದರು. ಚಾಂದಿಪುರ್ ಹಳ್ಳಿಯ ಹೆಂಗಸರಿಗೆ ಅವರು ಈ ಕ್ರಾಂತಿಕಾರಿ ಸಲಹೆ ನೀಡಿದರು:

**ಪ್ರತಿ ದಿನ ನಿಮ್ಮೊಂದಿಗೆ ಊಟ ಮಾಡಲು ಒಬ್ಬ ಹರಿಜನನನ್ನು ಆಹ್ವಾನಿಸಿ, ಇಲ್ಲವೇ ಕೊನೇ ಪಕ್ಷ ನೀವು ಆಹಾರ ಅಥವಾ ನೀರು ಸೇವಿಸುವ ಮೊದಲು ಅದನ್ನು ಸ್ಪರ್ಶಿಸುವಂತೆ ಹರಿಜನನನ್ನು ಕೇಳಿಕೊಳ್ಳಿ. ನಿಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಿ.** (ತೆಂಡುಲ್ಕರ್ ೧೯೫೧, ೭:೩೫೦; ಸಮಗ್ರ ಕೃತಿಗಳು ೯೩:೨೨೯).

**೧೯೪೭ರ ಏಪ್ರಿಲ್ ೨೪ರಂದು ಅವರು ಪಾಟ್ನಾದಲ್ಲಿ'ಗಂಡು ಅಥವಾ ಹೆಣ್ಣು ಇಬ್ಬರಲ್ಲಿ ಒಬ್ಬರು ಹರಿಜನರಲ್ಲದಿದ್ದರೆ, ಅಂಥ ಯಾವುದೇ ಮದುವೆಯಲ್ಲಿ ಪಾಲ್ಗೊಳ್ಳದಿರುವುದನ್ನು ಅಥವಾ ಆಶೀರ್ವಾದ ನೀಡದಿರುವುದನ್ನು' ಕೆಲ ಸಮಯದಿಂದ ಒಂದು ನಿಯಮವಾಗಿ ಮಾಡಿಕೊಂಡಿರುವುದಾಗಿ ಹೇಳಿದರು** (ಸಮಗ್ರ ಕೃತಿಗಳು ೮೭: ೩೫೦).

ಮತ್ತೆ ಜೂನ್ ೧೯೪೭ರಲ್ಲಿ–ಸ್ವಾತಂತ್ರ್ಯ ಪಡೆಯುವ ಎರಡು ತಿಂಗಳ ಮುಂಚೆ– 'ಚಕ್ರಯ್ಯನವರಂಥ¹ ಒಬ್ಬ ಹರಿಜನ ಅಥವಾ ಒಬ್ಬ ಹರಿಜನ ಹುಡುಗಿಯನ್ನು ಭಾರತದ ಮೊದಲ ರಾಷ್ಟ್ರಪತಿಯಾಗಿ ಮಾಡಬೇಕು ಮತ್ತು ಜವಾಹರಲಾಲ್ ಪ್ರಧಾನಿಯಾಗಬೇಕು... ಪ್ರಾಂತ್ಯಗಳಲ್ಲೂ ಇದೇ ಬಗೆಯ ವ್ಯವಸ್ಥೆ ಮಾಡಿಕೊಳ್ಳಬಹುದು...' ಎಂಬ ಪ್ರಸ್ತಾಪ ಮುಂದಿಟ್ಟರು (ಸಮಗ್ರ ಕೃತಿಗಳು ೯೫: ೨೧೭).

ಇದೊಂದು ಕೇವಲ ಸಾಂಕೇತಿಕವಾದ ಸಲಹೆಯೇ? ಇರಬಹುದು. ಆದರೆ ಅದು ಬಲಿಷ್ಠ ಸಂಕೇತವಾಗಿರಬಹುದಿತ್ತು. ತಮ್ಮ ನಾಯಕನ ಅಂತಿಮ ವರ್ಷದಲ್ಲಿ ನೆಹರೂ, ಪಟೇಲ್, ಪ್ರಸಾದ್, ರಾಜಗೋಪಾಲಾಚಾರಿ ಮತ್ತು ಕಾಂಗ್ರೆಸ್ಸಿನ ಇತರ ನಾಯಕರು ಯಶಸ್ವಿಯಾಗಿ ವಿರೋಧಿಸಿದ ಹಲವಾರು ಸಲಹೆಗಳಲ್ಲಿ ಇದೂ ಒಂದು.

**೧. ಸೇವಾಗ್ರಾಮ ಆಶ್ರಮದಲ್ಲಿ ಗಾಂಧಿ ಮೇಲೆ ಅಪಾರ ಪ್ರಭಾವ ಬೀರಿದ ಆಂಧ್ರದ ಓರ್ವ ದಲಿತ ವ್ಯಕ್ತಿ**

ದೇಶ ವಿಭಜನೆಯನ್ನು ಆಗಲೇ ಒಪ್ಪಿಕೊಂಡು, ಸ್ವಾತಂತ್ರ್ಯ ಇನ್ನು ಎರಡೇ ತಿಂಗಳಿದ್ದಾಗ ೧೯೪೭ರ ಜೂನ್ ೧೪ರಂದು ಗಾಂಧಿ, ಅಸ್ಪೃಶ್ಯತೆ ಮತ್ತು ಜಾತಿ ಅನ್ಯಾಯಗಳ ಜೊತೆಗೆ ಆದಿವಾಸಿಗಳ ಪ್ರಶ್ನೆಯನ್ನೂ ನೇರಾನೇರ ಎದುರಿಸುವಂತೆ ಕಾಂಗ್ರೆಸ್ಸನ್ನು ಆಗ್ರಹಪಡಿಸಿದರು:

**ಅಸ್ಪೃಶ್ಯರ' ಪ್ರಶ್ನೆಯೇನು?... ಅಸ್ಪೃಶ್ಯರೆಂದರೆ ಏನೇನೂ ಅಲ್ಲ, ಆದಿವಾಸಿಗಳೆಂದರೆ ಏನೂ ಅಲ್ಲ ಎಂದು ನೀವು ಭಾವಿಸುತ್ತ ಹೋದರೆ ಮುಂದೆ ನೀವೇ ಉಳಿಯಲಾರಿರಿ. ಆದರೆ ನೀವು ಸವರ್ಣ ಅವರ್ಣಗಳ ತಾರತಮ್ಯವನ್ನು ನೀಗಿದರೆ, ಶೂದ್ರರು, 'ಅಸ್ಪೃಶ್ಯರು' ಮತ್ತು ಆದಿವಾಸಿಗಳನ್ನು ಸರಿಸಮಾನವಾಗಿ ನಡೆಸಿಕೊಂಡರೆ, ಕೊನೆಗೆ (ವಿಭಜನೆಯಂಥ) ಕೆಡುಕಿನಿಂದಲೂ ಏನೋ ಒಳ್ಳೆಯದು ಪ್ರಾಪ್ತಿಯಾದಂತಾಗುವುದು...** (ಸಮಗ್ರ ಕೃತಿಗಳು ೯೫: ೨೮೬– ೭)

ಸ್ವರಾಜ್ಯಕ್ಕಾಗಿ ನಡೆದ ಕದನದಲ್ಲಿ ಜಯ ಗಳಿಸಿಯಾದ ಮೇಲೆ, ಸಾಮಾಜಿಕ ನ್ಯಾಯಕ್ಕಾಗಿ ನಡೆಯಬೇಕಾದ ಹೋರಾಟವನ್ನು ಮುಂದೂಡಲು ಈಗ ಯಾವ ನೆಪವೂ ಉಳಿದಿಲ್ಲವೆಂದು ಗಾಂಧಿ ಹೇಳುತ್ತಿದ್ದರು.

ರಾಯ್ ಅವರಿಗೆ ಇದ್ಯಾವುದೂ ಮಹತ್ವದ್ದಲ್ಲ. ಅವರ ಪ್ರಕಾರ 'ಜಾತಿ ಕುರಿತಂತೆ ಗಾಂಧಿಯವರ ದೃಷ್ಟಿಗೂ ಹಿಂದೂ ಬಲಪಂಥಕ್ಕೂ ನಡುವೆ ಯಾವಾಗಲೂ ಅಂಥ ವ್ಯತ್ಯಾಸವೇನೂ ಇರಲಿಲ್ಲ'. 'ದಲಿತ ದೃಷ್ಟಿಕೋನದಿಂದ ನೋಡಿದರೆ, ಗಾಂಧಿ ಹತ್ಯೆ ಸೈದ್ಧಾಂತಿಕ ವಿರೋಧಿಯೊಬ್ಬನ ಕೃತ್ಯ ಎಂಬುದಕ್ಕಿಂತಲೂ ಹೆಚ್ಚಾಗಿ, ಪಿತೃಹತ್ಯೆಗೆ ಸಮಾನವಾಗಿ ಕಾಣುತ್ತದೆ' ಎಂಬುದು ಅವರ ವಾದ (೧೨೮).

೧೧

೧೯೪೭ರಲ್ಲಿ ಗಾಂಧಿ ಒಂದು ಪ್ರಸ್ತಾಪವನ್ನು ಮುಂದಿಟ್ಟರು, ನೆಹರೂ ಹಾಗೂ ಪಟೇಲರು ಅದಕ್ಕೆ ಸಮ್ಮತಿ ಸೂಚಿಸಿದರು (ನೋಡಿ: ಗೋರೆ ೧೯೯೩, ೧೮೦– ೮೧; ರಾಮಚಂದ್ರನ್ ೧೯೬೪, ೧೭೯).೧ ಸ್ವತಂತ್ರ ಭಾರತದ ಸಚಿವ ಸಂಪುಟವನ್ನು ಸೇರುವಂತೆ ಅಂಬೇಡ್ಕರರಿಗೆ ನೆಹರೂ ಮತ್ತು ಪಟೇಲ್ ನೀಡಿದ ಅಸಾಧಾರಣ ಆಹ್ವಾನದ ಹಿಂದೆ ಗಾಂಧಿ ವಹಿಸಿದ ನಿರ್ಣಾಯಕ ಪಾತ್ರವನ್ನು ದಲಿತ ಸಾಹಿತ್ಯವಂತೂ ದಾಖಲಿಸಿದೆ (ನೋಡಿ: ಗೋರೆ ೧೯೯೩, ೧೮೦– ೮೧; ಶಾಸ್ತ್ರಿ ೧೯೭೫, ೩೨– ೩೩); ಆದರೆ ರಾಯ್ ಮಾತ್ರ ಸಾರಾಸಗಟಾಗಿ ಅದರ ಮೇಲೆ ಮುಸುಕೆಳೆದುಬಿಡುತ್ತಾರೆ. ಗಾಂಧಿ ಮತ್ತು ಕಾಂಗ್ರೆಸ್ ವಿರುದ್ಧ ೧೯೩೩ರಿಂದ ೪೭ರವರೆಗೆ ಅಂಬೇಡ್ಕರ್ ಮಾಡಿದ ಹರಿತವಾದ ಟೀಕೆ 'ಟಿಪ್ಪಣಿಗಳನ್ನು ಪುಟಗಟ್ಟಳೆ ಉಲ್ಲೇಖಿಸಿದ ಮೇಲೆ, ಆಕೆ ಸರಳವಾಗಿ ಹೇಳುವುದಿಷ್ಟೇ:

**ಒಂದು ಸ್ನೇಹಮಯ ಸೂಚನೆಯಾಗಿ ಮತ್ತು ಪ್ರಾಯಶಃ ಆ ಜವಾಬ್ದಾರಿ ಹೊರಲು ಅವರಿಗಿಂತ ಸಮರ್ಥರು ಇನ್ನಾರೂ ಇರಲಿಲ್ಲವೆಂಬ ಕಾರಣಕ್ಕೆ, ಕಾಂಗ್ರೆಸ್ಸು ಅಂಬೇಡ್ಕರರನ್ನು ಸಂವಿಧಾನ ಕರಡು ರಚನಾ ಸಮಿತಿಗೆ ನೇಮಿಸಿತು. ೧೯೪೭ರ ಆಗಸ್ಟ್‌ನಲ್ಲಿ ಅಂಬೇಡ್ಕರರನ್ನು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ಮತ್ತು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ನೇಮಿಸಲಾಯಿತು** (೧೩೮).

ಅಷ್ಟೇ. ಆ ಆಹ್ವಾನದ ಅಥವಾ ಅದರ ಸ್ವೀಕೃತಿಯ ಹಿಂದಿನ ಮುತ್ಸದ್ದಿತನದ ಬಗ್ಗೆ ಯಾವ ಮಾತೂ ಆಡದೆ, ಗಾಂಧಿ ಜೀವನದ ಅಂತಿಮ ಹಂತದಲ್ಲಿ ಅಂಬೇಡ್ಕರರೊಂದಿಗೆ ಸಾಧ್ಯವಾದ ಪಾಲುದಾರಿಕೆಯನ್ನು; ಆ ಇಬ್ಬರು ತೀಕ್ಷ್ಣ ಎದುರಾಳಿಗಳ ಅಸಾಧಾರಣ ಮಿಲನವನ್ನು, ಆಕೆ ಪರಿಣಾಮಕಾರಿಯಾಗಿ ಅದುಮಿಟ್ಟುಬಿಡುತ್ತಾರೆ.

ಸಂವಿಧಾನ ರಚನೆಯಲ್ಲಿ ಅಂಬೇಡ್ಕರರ ಸೇರ್ಪಡೆಯಿಂದಾಗಿ ಎಂಥ ವಿಸ್ಮಯಕಾರಿ ಫಲಿತಾಂಶ ಸಿಕ್ಕಿತೆಂಬುದು ಎಲ್ಲರಿಗೂ ಗೊತ್ತು: ಭಾರತೀಯನೂ ದಲಿತನೂ ಆದ ಉಜ್ವಲ ಮೇಧಾಶಕ್ತಿಯ, ಭಾವಸಂಪನ್ನ ಮನುಷ್ಯನೊಬ್ಬ, ಶತಮಾನಗಳ ಕಾಲ ತನ್ನಂಥವರನ್ನು ಕೀಳೆಂದು, ಅಸ್ಪೃಶ್ಯನೆಂದು ಕಂಡು ಕಠೋರವಾಗಿ ನಡೆಸಿಕೊಂಡ ಸಮಾಜದಲ್ಲಿ, ಎಲ್ಲರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸುವ ಸಂವಿಧಾನ ರಚನೆಯ ನೇತೃತ್ವ ವಹಿಸಿದರು; ಮತ್ತು ಬಹುಪಾಲು ಸವರ್ಣೀಯ ಹಿಂದೂಗಳೇ ಇದ್ದ ಚುನಾಯಿತ ಸಂವಿಧಾನ ಸಮಿತಿ ಅಂಥ ಸಂವಿಧಾನವನ್ನು ಒಪ್ಪಿ ಸ್ವೀಕರಿಸಿತು.

**(ಕೃಪೆ: ಗಾಂಧಿ ಸ್ಮಾರಕ ನಿಧಿ, ಬೆಂಗಳೂರು)**

# ಲೋಹಿಯಾ ಅವರ ಸ್ತ್ರೀವಾದಿ ಚಿಂತನೆ

ಇಂಗ್ಲಿಷ್ ಮೂಲ: **ಜಯಾ ಶ್ರೀವಾಸ್ತವ**
ಕನ್ನಡಕ್ಕೆ: **ಟಿ.ಎಲ್. ರೇಖಾಂಬ**

**ಲೋಹಿಯಾರ ಸ್ತ್ರೀವಾದಿ ಚಿಂತನೆಗಳನ್ನು ಇನ್ನಾವುದೇ ನಿರ್ದಿಷ್ಟ ಸ್ತ್ರೀವಾದಿ ಧಾರೆ ಮತ್ತು ತತ್ವದೊಂದಿಗೆ ಸಮೀಕರಿಸುವುದು ಅಷ್ಟು ಸುಲಭವಲ್ಲ. ಜಾನ್ ವಿ. ಬಾಂಡ್ಯುರಾಂಟ್ ಅವರು ಲೋಹಿಯಾರನ್ನು 'ಅದಮ್ಯ ಭಾರತೀಯ ಸಮಾಜವಾದಿ' ಎಂದು ವರ್ಣಿಸುತ್ತಾರೆ. ಲೋಹಿಯಾರ ವಿಶಾಲ ದೃಷ್ಟಿಕೋನವು, ಸಂಪೂರ್ಣ ಲಿಂಗ ನ್ಯಾಯ(gender justice) ಮತ್ತು ಲಿಂಗಾಂಧತೆಯ(gender blindness) ನಿರ್ಮೂಲನೆಯನ್ನು ಖಾತ್ರಿಪಡಿಸುವ ಸರ್ವಸಮಾನತೆಯ ಸಮಾಜವಾದಿ ಸಮಾಜ ಸ್ಥಾಪನೆಯ ಗುರಿಯನ್ನು ಹೊಂದಿರುವಂತಹದ್ದು. ಲೋಹಿಯಾರ ಚಿಂತನೆಗಳಲ್ಲಿ ಮಹಿಳೆಯರ ಅಸ್ತಿತ್ವ, ಘನತೆ ಮತ್ತು ಸ್ವಾಯತ್ತತೆಗಳು ಸ್ಪಷ್ಟವಾಗಿ ಗುರುತಿಸಲ್ಪಟ್ಟಿವೆ. ಹಾಗೆಯೇ ಸಾಮಾಜಿಕ, ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಅಗತ್ಯಗಳು ಮತ್ತು ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಬೇಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ಮಹಿಳಾ ವಿಮೋಚನೆಯ ಅಗತ್ಯವನ್ನು ತಮ್ಮ ಚಿಂತನೆಗಳಲ್ಲಿ ಲೋಹಿಯಾ ದೃಢಪಡಿಸಿದ್ದಾರೆ.**



**ತಮ್ಮ ಸಮಾಜವಾದಿ ಮಿತ್ರರಾದ ರಾಮಧಾರಿ ಸಿಂಗ್, ಮಧು ಲಿಮಯೆ, ಮಣಿರಾಂ ಬಾಗಡಿ, ಬಿ.ಪಿ. ಮೌರ್ಯ ಹಾಗೂ ಎಸ್. ಎಂ. ಜೋಷಿಯವರೊಂದಿಗೆ ಲೋಹಿಯಾ**

ಭಾರತದ ರಾಜಕೀಯ ಇತಿಹಾಸದಲ್ಲಿ, ರಾಮ ಮನೋಹರ ಲೋಹಿಯಾ ಬಹಳ ದೊಡ್ಡ ಹೆಸರು. ಅವರ ಅಪೂರ್ವ ಚಿಂತನೆಗಳು ಮತ್ತು ಪರಿಕಲ್ಪನೆಗಳು ಇಂದಿಗೂ ಭಾರತದ ಸಮಾಜೋರಾಜಕೀಯ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಲೇ ಇವೆ. ಸಮಾಜವಾದದ ನೆಲೆಗಟ್ಟಿನ ಮೇಲೆ ಭಾರತವನ್ನು ಪುನರ್‌ನಿರ್ಮಾಣ ಮಾಡುವ ಲೋಹಿಯಾರ ಕನಸನ್ನು ಧ್ಯೇಯವಾಗಿಟ್ಟುಕೊಂಡಿರುವ ಸಮಾಜೋರಾಜಕೀಯ ಸಂಸ್ಥೆಗಳು, ಕೆಲವು ಪ್ರದೇಶಗಳಲ್ಲಾದರೂ ಇಂದಿಗೂ ಅಸ್ತಿತ್ವದಲ್ಲಿರುವುದು ಲೋಹಿಯಾರ ಚಿಂತನೆಗಳ ಪ್ರಾಮುಖ್ಯತೆಯನ್ನು ಎತ್ತಿ ತೋರುತ್ತವೆ. ಭಾರತೀಯ ಮಹಿಳೆಯರ ಸ್ಥಾನಮಾನ ಕುರಿತು ಲೋಹಿಯಾರ ತೀಕ್ಷ್ಣವಾದ ಹಾಗೂ ಆಳವಾದ ಒಳನೋಟಗಳುಳ್ಳ ಚಿಂತನೆಗಳು ಮತ್ತು ಅವರು ರೂಪಿಸಿದ್ದ ವಿಮೋಚನೆಯ ಮಾರ್ಗಗಳು, ನಮ್ಮ ದೇಶದ ಸಮಾಜೋರಾಜಕೀಯ ಕ್ಷೇತ್ರದಲ್ಲಿ ಅಷ್ಟಾಗಿ ಗುರುತಿಸಲ್ಪಟ್ಟಿಲ್ಲ. ಭಾರತದ ಶೈಕ್ಷಣಿಕ ಕ್ಷೇತ್ರ ಕೂಡ ಲೋಹಿಯಾರ ಚಿಂತನೆಗಳ ಕಡೆಗೆ ತಕ್ಕಮಟ್ಟಿಗಿನ ಗಮನ ಹರಿಸಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ ಭಾರತೀಯ ಮಹಿಳೆಯರ ಕುರಿತ ಲೋಹಿಯಾರ ಚಿಂತನೆಗಳನ್ನು ಗಮನಿಸಿಲ್ಲ. ವರ್ಗವಿಭಾಗೀಕರಣವೂ ಸೇರಿ ಸಮಸ್ಯಾತ್ಮಕವಾಗಿ ಪರಿಣಮಿಸಿರುವ, ವಿನಾಶಕಾರಿ ಜಾತಿ ವ್ಯವಸ್ಥೆಯೊಂದಿಗೆ ತಳುಕುಹಾಕಿಕೊಂಡಿರುವ, ಪಿತೃಸಂಸ್ಕೃತಿಯ ಪ್ರಭುತ್ವದ ಹಿನ್ನೆಲೆಯಲ್ಲಿ ಅವರ ಸ್ತ್ರೀಪರ ಚಿಂತನೆಗಳು ಹೆಚ್ಚು ಮಹತ್ವಪೂರ್ಣವಾದವುಗಳು. ಲೋಹಿಯಾ ತತ್ವಗಳಿಗೆ ನಿಷ್ಠವಾದ ರಾಜಕೀಯ ಬಣಗಳೂ ಕೂಡ ಅವರ ತೀಕ್ಷ್ಣವಾದ ಹಾಗೂ ಮುಕ್ತ ಆಲೋಚನೆಗಳನ್ನು ತಮ್ಮ ಆಚರಣೆಗಳಲ್ಲಿ ಪ್ರತಿಬಿಂಬಿಸಿದಂತೆ ಕಾಣುತ್ತಿಲ್ಲ. ಒಟ್ಟಿನಲ್ಲಿ ಜಾತಿಪದ್ಧತಿಯ ಬಲೆಯಲ್ಲಿ ಸಿಲುಕಿಕೊಂಡಿರುವ, ಭಾರತೀಯ ಮಹಿಳೆಯರ ಮೇಲಿನ ಪಿತೃಸಂಸ್ಕೃತಿಯ ಯಜಮಾನಿಕೆಯ ಕುರಿತ ಲೋಹಿಯಾರ ಅಮೂಲ್ಯವಾದ ಚಿಂತನೆಗಳು ಸ್ತ್ರೀವಾದಿ ಧಾರೆಗಳಿಂದ ದೂರವೇ ಉಳಿದುಬಿಟ್ಟಿವೆ.

ಈ ಹಿನ್ನೆಲೆಯಲ್ಲಿ, ಭಾರತೀಯ ಮಹಿಳೆಯರ ಪರಿಸ್ಥಿತಿ ಮತ್ತು ವಿಮೋಚನೆಯ ದಾರಿಗಳ ಕುರಿತ ಲೋಹಿಯಾರ ಚಿಂತನೆಗಳನ್ನು ಸಂಗ್ರಹರೂಪದಲ್ಲಿ ಕೊಡುವುದರ ಜೊತೆಗೆ, ಸ್ತ್ರೀವಾದದ ವಿಶಾಲ ಭಿತ್ತಿಯಲ್ಲಿ ಲೋಹಿಯಾರನ್ನು ಗುರುತಿಸುವ ಪ್ರಯತ್ನವನ್ನೂ ಈ ಲೇಖನದಲ್ಲಿ ಮಾಡಲಾಗಿದೆ. ಹಾಗಾಗಿ ಮೊದಲಿಗೆ ಸ್ತ್ರೀವಾದದ ಪ್ರಮುಖ ಎಳೆಗಳನ್ನು ಅವಲೋಕಿಸಿ, ನಂತರ, ಭಾರತೀಯ ಮಹಿಳೆಯರಿಗೆ ಎಲ್ಲ ರೀತಿಯ ಪುರುಷಾಳ್ವಿಕೆಯಿಂದ ಸಂಪೂರ್ಣ ಬಿಡುಗಡೆಯ ದಾರಿಗಳನ್ನು ಕಾಣಿಸುವ ಲೋಹಿಯಾರ ಚಿಂತನೆಗಳನ್ನು ಚರ್ಚಿಸಲಾಗಿದೆ. ಈ ಸಂಬಂಧವಾಗಿ, ಉದಾರ ಆಧುನಿಕ ನೆಹರೂವಾದಿ ವಿಧಾನ ಮತ್ತು ಮಾರ್ಕ್ಸ್‌ವಾದಿ ವಿಧಾನಗಳೆರಡನ್ನೂ ಲೋಹಿಯಾ ಏಕೆ ತಿರಸ್ಕರಿಸಿದರು ಮತ್ತು ಭಾರತೀಯ ಮಹಿಳೆಯರ ವಿಮೋಚನೆಗಾಗಿ ಹೇಗೆ, ತಮ್ಮದೇ ಆದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಬೇರುಗಳುಳ್ಳ ಸಮಾಜವಾದಿ ಮಾರ್ಗವನ್ನು ಪ್ರತಿಪಾದಿಸಿದರು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ನಿರೂಪಿಸಲಾಗಿದ್ದು, ಕೆಲವು ನಿರ್ಣಾಯಕ ಅಭಿಪ್ರಾಯಗಳೊಂದಿಗೆ ಕೊನೆಗೊಳ್ಳುತ್ತದೆ.

### ಸ್ತ್ರೀವಾದಿ ಸಿದ್ಧಾಂತದ ಎಳೆಗಳು

ಸ್ತ್ರೀ–ಪುರುಷರ ಬಗೆಗಿನ ಕಲ್ಪನೆಗಳು, ಪುರುಷ ದಬ್ಬಾಳಿಕೆಯ ಪರಿಣಾಮಗಳು ಮತ್ತು ಮಹಿಳಾ ವಿಮೋಚನಾ ಯೋಜನೆಗಳು ಮತ್ತು ಕ್ರಮಗಳ ಬಗೆಗೆ ಬೇರೆ ಬೇರೆ ದೃಷ್ಟಿಕೋನಗಳುಳ್ಳ ವಿವಿಧ ಸ್ತ್ರೀವಾದಿ ಸಿದ್ಧಾಂತಗಳಿವೆ. ಸ್ತ್ರೀ ಪುರುಷರ ನಡುವೆ ಇರುವ ಅಸಮಾನ ಅವಕಾಶಗಳೇ ಲಿಂಗ ಅಸಮಾನತೆಗೆ ಕಾರಣ ಎಂಬ ದೃಷ್ಟಿಕೋನ ಉದಾರ ಸ್ತ್ರೀವಾದಿಗಳದ್ದು. ವಿವಿಧ ರಂಗಗಳಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸಲು, ಶಿಕ್ಷಣ, ಉದ್ಯೋಗ, ಮತದಾನದ ಹಕ್ಕು ಇತ್ಯಾದಿ ಸಮಾಜಕಲ್ಯಾಣದ ಆದ್ಯತಾ ನೀತಿಗಳನ್ನೂ ಒಳಗೊಂಡಂತೆ ಇನ್ನೂ ಅನೇಕ ಪರಿಹಾರ ಕ್ರಮಗಳನ್ನು ನಿಧಾನಗತಿಯಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ಅವರು ಪ್ರತಿಪಾದಿಸುತ್ತಾರೆ.

ಅದಕ್ಕೆ ವಿರುದ್ಧವಾಗಿ, ತೀವ್ರವಾದಿ ಸ್ತ್ರೀವಾದಿಗಳು, ಪುರುಷರು ಮತ್ತು ಮಹಿಳೆಯರ ನಡುವಿನ ಜೈವಿಕ ಮತ್ತು ಭಾವನಾತ್ಮಕ ವ್ಯತ್ಯಾಸಗಳನ್ನೇ ಪ್ರಮುಖವಾಗಿ ಪರಿಗಣಿಸಿ ವೈಭವೀಕರಿಸುತ್ತಾರೆ. ಮಹಿಳೆಯರು ಮತ್ತು ಪುರುಷರಿಗೆ ಬೇರೆ ಬೇರೆ ರೀತಿಯ ಮೌಲ್ಯಗಳನ್ನು ಹೊಂದಿರುವ ಪಿತೃಸಂಸ್ಕೃತಿ ಮತ್ತು ಸಾಮಾಜಿಕ ಶ್ರೇಣೀಕರಣವೇ ಪುರುಷ ಯಜಮಾನ್ಯಕ್ಕೆ ಕಾರಣವೆಂದು ಅವರು ಅಭಿಪ್ರಾಯ ಪಡುತ್ತಾರೆ. ಲಿಂಗ ಸಮಾನತೆಗಿಂತ ಹೆಚ್ಚಾಗಿ ಮಹಿಳಾ ಹಕ್ಕುಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಾರೆ. ಸ್ತ್ರೀ ಪುರುಷ ಸಮಾನತೆಯೆಡೆಗಿನ ಉದಾರವಾದಿಗಳ ಬದ್ಧತೆಯನ್ನೂ, ಉದಾರವಾದಿ ಚಿಂತನೆಯ ಚೌಕಟ್ಟನ್ನೂ ಅವರು ಒಪ್ಪುವುದಿಲ್ಲ. ಪುರುಷಾಳ್ವಿಕೆಯನ್ನು ಕೊನೆಗಾಣಿಸಬೇಕೆಂದರೆ, ಪಿತೃಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಸ್ಥೆಗಳನ್ನು ನಿರ್ಮೂಲನೆ ಮಾಡುವುದೂ, ಮಹಿಳೆಯರು ಸಂಪೂರ್ಣ ಸ್ವಾಯತ್ತತೆ ಗಳಿಸುವುದೂ ಅತ್ಯಂತ ಅಗತ್ಯ ಎನ್ನುವುದು ಅವರ ಅಭಿಮತ.



**ಜೆಪಿ, ಯೂಸುಫ್ ಮೆಹರಲಿ(ಕೂತಿರುವವರು) ಮತ್ತು ಜೆಪಿ ಪತ್ನಿ ಪ್ರಭಾವತಿಯವರೊಂದಿಗೆ ರಾಮಮನೋಹರಲೋಹಿಯಾ**

ಸಮಾಜವಾದಿ ಸ್ತ್ರೀವಾದಿ ಸಿದ್ಧಾಂತವು (ಉಭಯ ವ್ಯವಸ್ಥೆಯ ಸಿದ್ಧಾಂತ ಎಂದೂ ಕರೆಯಲಾಗುತ್ತದೆ) ಮಹಿಳೆಯರ ಅಧೀನ ಪರಿಸ್ಥಿತಿಗೆ, ಬಂಡವಾಳಶಾಹಿ ವ್ಯವಸ್ಥೆ ಮತ್ತು ಪಿತೃಸಂಸ್ಕೃತಿ ವ್ಯವಸ್ಥೆಗಳೆರಡೂ ಕಾರಣ ಎಂದು ಗುರುತಿಸುತ್ತದೆ. ಹಾಗೆಯೇ ಮಹಿಳಾ ವಿಮೋಚನೆಯನ್ನು ಸಾಧಿಸಲು ಆ ಎರಡೂ ವ್ಯವಸ್ಥೆಗಳನ್ನು ಶಾಂತಿಯುತವಾದ ಮಾರ್ಗಗಳಿಂದ ಕಿತ್ತೊಗೆಯಬೇಕೆಂಬುದನ್ನೂ ಪ್ರತಿಪಾದಿಸುತ್ತದೆ. ಆದರೆ, ಮಾರ್ಕ್ಸ್‌ವಾದಿ ಸ್ತ್ರೀವಾದಿಗಳದ್ದು ಸ್ವಲ್ಪ ಭಿನ್ನವಾದ ವಾದ; ಮಹಿಳೆಯರ ಮೇಲಿನ ಅಲಕ್ಷ್ಯ, ಅವರ ಅಧೀನತೆ ಮತ್ತು ಪುರುಷಾಳ್ವಿಕೆಗಳಿಗೆ ಖಾಸಗೀ ಆಸ್ತಿ ಆಧಾರಿತ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರ ಲಾಭ ಗರಿಷ್ಠೀಕರಣ(profit maximization) ತಂತ್ರಗಳೇ ಪ್ರಮುಖ ಕಾರಣ ಎಂಬುದು. ಬಂಡವಾಳಶಾಹಿಯು ಪಿತೃಸಂಸ್ಕೃತಿಯ ರಚನೆಯನ್ನು ಶೋಷಿಸುವ ಮತ್ತು ಅಗ್ಗದ ದುಡಿಮೆಯ ಮೂಲವಾಗಿ ಮಹಿಳೆಯರನ್ನು ಬಳಸಿಕೊಳ್ಳುವ ಮೂಲಕ ತನ್ನ ಬುಡವನ್ನು ಭದ್ರಪಡಿಸಿಕೊಳ್ಳುತ್ತದೆ. ಮಹಿಳೆಯರ ಮೇಲಿನ ದಬ್ಬಾಳಿಕೆಯು ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ತಳುಕುಹಾಕಿಕೊಂಡಿರುವುದಕ್ಕೆ, ಮಹಿಳೆಯರನ್ನು ಸಾರ್ವಜನಿಕ ರಂಗದಿಂದ ದೂರವಿಟ್ಟಿರುವುದು ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಪುಕ್ಕಟೆಯಾಗಿ ದುಡಿಸಿಕೊಳ್ಳುವುದೂ ಕಾರಣ ಎಂದು ವಾದಿಸುತ್ತಾರೆ. ವರ್ಗ–ವಿಭಜಿತ ಬಂಡವಾಳಶಾಹಿ ಸಮಾಜವು, ಲಿಂಗ ತಾರತಮ್ಯ ಮತ್ತು ಅಸಮಾನತೆಯನ್ನು ಶಾಶ್ವತಗೊಳಿಸಿಬಿಡುತ್ತದೆ. ಹಾಗಾಗಿ, ಹಿಂಸಾತ್ಮಕವಾದರೂ ಸರಿಯೆ, ವರ್ಗ ಹೋರಾಟದಿಂದ ಮಾತ್ರ ಮಹಿಳಾ ವಿಮೋಚನೆ ಸಾಧ್ಯ ಎಂಬುದನ್ನು ಒತ್ತಿ ಹೇಳುತ್ತಾರೆ. ಈ ಹೋರಾಟದ ಪರಿಣಾಮವಾಗಿ, ಪಿತೃಸಂಸ್ಕೃತಿಯ ರಚನೆಗಳೊಂದಿಗೆ ಖಾಸಗಿ ವ್ಯವಸ್ಥೆಯ ಮೇಲೆ ನಿಂತಿರುವ ವರ್ಗಾಧಾರಿತ ಸಮಾಜವೂ ನಾಶಗೊಳ್ಳುತ್ತದೆ; ಆದ್ದರಿಂದ, ಮಹಿಳೆಯರು ಪುರುಷರಂತೆಯೇ ಮುಕ್ತವಾಗಿ ಬದುಕಲು ಸಾಧ್ಯವಾಗುವಂತಹ ಸಮಾಜವಾದಿ/ಸಮತಾ ಸಮಾಜವನ್ನು ಸ್ಥಾಪಿಸಲು, ಈಗ ಅಸ್ತಿತ್ವದಲ್ಲಿರುವ, ಅಸಮಾನತೆಯನ್ನು ಪ್ರತಿಪಾದಿಸುವ, ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದು ಅತ್ಯಂತ ಅಗತ್ಯವೆಂದು ಪರಿಗಣಿಸುತ್ತಾರೆ.

ವಿವಿಧ ಸ್ತ್ರೀವಾದಿ ಚಿಂತನೆಯ ಚೌಕಟ್ಟುಗಳ ವಿಶಾಲವಾದ ತಾತ್ವಿಕ ಹಿನ್ನೆಲೆಯಲ್ಲಿ, ಭಾರತೀಯ ಮಹಿಳೆಯರ ಸ್ಥಿತಿಗತಿ, ಸಮಾಜದಲ್ಲಿ ಪುರುಷ ಪ್ರಭುತ್ವಕ್ಕೆ ಕಾರಣವಾಗುವ ಅಂಶಗಳು ಮತ್ತು ಅದರಿಂದ ಮಹಿಳೆಯರು ಬಿಡುಗಡೆ ಹೊಂದುವ ಮಾರ್ಗಗಳ ಕುರಿತ ಲೋಹಿಯಾರ ಚಿಂತನೆಗಳೇನೆಂಬುದನ್ನು ಈಗ ಪರಿಶೀಲಿಸೋಣ.

**ಭಾರತೀಯ ಮಹಿಳೆಯರ ಸ್ಥಾನಮಾನ:**

ಲೋಹಿಯಾ ತಮ್ಮ ಬರಹಗಳಲ್ಲಿ, ಭಾರತದ ಸಮಾಜೋಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಪಿತೃಸಂಸ್ಕೃತಿಯ ರಚನಾತ್ಮಕ, ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳ ಆಳಕ್ಕೆ ಇಳಿದು ಶೋಧಿಸುತ್ತಾರೆ. ಶತಮಾನಗಳ ಹಿಂದಿನ ಪಿತೃಸಂಸ್ಕೃತಿಯು ಇನ್ನೂ ಚಾಲ್ತಿಯಲ್ಲಿರುವುದನ್ನು ಗುರುತಿಸುತ್ತಾರೆ. ಆದಾಗ್ಯೂ ಅವರದ್ದು ಮೂಲಭೂತವಾದಿಯ ದೃಷ್ಟಿಕೋನವೇನಲ್ಲ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾರತೀಯ ಮಹಿಳೆಯರನ್ನು ಹಲವು ಭಿನ್ನತೆಗಳ ವೈವಿಧ್ಯಮಯ ವರ್ಗ ಎಂದು ಅವರು ಪರಿಗಣಿಸುತ್ತಾರೆ. ಭಾರತದ ಸಂದರ್ಭದಲ್ಲಿ, ಜಾತಿ, ವರ್ಗ ಮತ್ತು ಇನ್ನಿತರ ಸಾಮಾಜಿಕ ಅಂಶಗಳ ವಿವಿಧ ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳದೇ, ಲಿಂಗತಾರತಮ್ಯ ಮತ್ತು ಪುರುಷಪ್ರಭುತ್ವವನ್ನು ಪ್ರತ್ಯೇಕವಾಗಿ ಅರ್ಥೈಸಲು ಸಾಧ್ಯವಿಲ್ಲ. ಏಕೆಂದರೆ, ಈ ಎಲ್ಲವೂ ಒಂದಕ್ಕೊಂದು ಸಂಬಂಧಿಸಿದ್ದಾಗಿವೆ ಎಂಬುದು ಲೋಹಿಯಾರ ಅಭಿಪ್ರಾಯ. ಆದ್ದರಿಂದ ಅವರು ಈ 'ಅಂತರ್‌ಸಂಬಂಧ'ವನ್ನು ಗಮನದಲ್ಲಿಟ್ಟುಕೊಂಡೇ ಆಲೋಚಿಸುತ್ತಾರೆ.

ಮೊದಲಿಗೆ, ಭಾರತೀಯ ಮಹಿಳೆಯರು ಯಾವಾಗಲೂ ಹಿಂದುಳಿದಿರಲಿಲ್ಲ ಎನ್ನುವುದಕ್ಕೆ ಜ್ಞಾನ, ಆಧ್ಯಾತ್ಮಿಕ ಸಾಧನೆ, ನಾಯಕತ್ವ, ಶೌರ್ಯ ಮತ್ತು ಸೃಜನಶೀಲತೆಯ ರಂಗಗಳಲ್ಲಿ ಉತ್ಕೃಷ್ಟತೆಯನ್ನು ಬಹಳ ಹಿಂದೆಯೇ ಸಾಧಿಸಿದ ಗಾರ್ಗಿ, ಮೈತ್ರೇಯಿ, ರಜಿಯಾ ಸುಲ್ತಾನ, ಅಕ್ಕಮಹಾದೇವಿ, ಮೀರಾ, ರಾಣಿ ಲಕ್ಷ್ಮೀಬಾಯಿ ಇವರುಗಳ ನಿದರ್ಶನಗಳನ್ನು ಕೊಡುತ್ತಾರೆ ಲೋಹಿಯಾ. ಆದರೂ ಮಹಿಳೆಯ ಸ್ಥಾನಮಾನ ಕಾಲಕ್ರಮೇಣ ಅವನತಿ ಹೊಂದುತ್ತಾ ಹೋಯಿತು ಎಂಬುದನ್ನು ಗಮನಿಸುತ್ತಾರೆ.

ಎಲ್ಲ ಭಾರತೀಯ ಮಹಿಳೆಯರೂ ಸಾಮಾನ್ಯವಾಗಿ ಒಂದು ರೀತಿ ಅವಕಾಶ ನಿರಾಕರಣೆಯಿಂದ ಮತ್ತು ಬಹಿಷ್ಕಾರದಿಂದ ಅವಮಾನಿತರು ಎನ್ನುವುದನ್ನು ಕಂಡುಕೊಳ್ಳುತ್ತಾರೆ ಲೋಹಿಯಾ. ರಚನಾತ್ಮಕವಾಗಿ ನೋಡಿದಾಗ ಮಹಿಳೆಯರು, ಆಸ್ತಿ ಹಕ್ಕು, ಕೌಟುಂಬಿಕ–ಸಾಮಾಜಿಕ ನಿರ್ಣಯಗಳಲ್ಲಿ ಪಾಲ್ಗೊಳ್ಳದಿರುವುದು ಇತ್ಯಾದಿ ಹಲವಾರು ವಿಷಯಗಳಲ್ಲಿ ಅವಕಾಶ ನಿರಾಕೃತರು. **"ಮದುವೆ ಮತ್ತು ಆಸ್ತಿಯ ವಿಷಯದಲ್ಲಿ ಮಹಿಳೆಯರ ಪುರುಷ ಸಮಾನ ಹಕ್ಕು ಪ್ರತಿಪಾದನೆಯ ಮೇಲೆ ಹರಿಹಾಯುತ್ತಿರುವುದು ಇನ್ನೂ ಮುಂದುವರೆದಿದೆ"** ಎನ್ನುತ್ತಾರೆ ಲೋಹಿಯಾ. ಸ್ತ್ರೀ–ಪುರುಷರ ಸಾಮಾಜಿಕ ಮತ್ತು ಮಾನಸಿಕ ವ್ಯತ್ಯಾಸಗಳನ್ನು ಗುರುತಿಸುವುದು ಮತ್ತು ಆ ಬಗ್ಗೆ ಸಾಮಾನ್ಯೀಕೃತ ಅಭಿಪ್ರಾಯಗಳನ್ನು ಮೂಡಿಸುವುದು ಕೂಡ ಈ ಸಮಾಜವೇ. ಮಹಿಳೆಯರನ್ನು ಸಾಮಾನ್ಯವಾಗಿ ಪುರುಷರಿಗಿಂತ ಕೀಳಾಗಿ ಕಾಣಲಾಗುತ್ತದೆ. ಮಹಿಳೆಯರ ಮೇಲಿನ ಎಲ್ಲ ತಾರತಮ್ಯಗಳಿಗೂ ಲಿಂಗ ಅಸಮಾನತೆಯೇ ಕಾರಣವಾಗಿದೆ. ಹಲವಾರು ಸಾಮಾಜಿಕ ಪದ್ಧತಿಗಳು, ನಿಷೇಧ ಸಂಪ್ರದಾಯಗಳಲ್ಲಿಯೂ ಕೂಡ ಮಹಿಳೆಯರು ಪಕ್ಷಪಾತಕ್ಕೊಳಗಾಗುವುದಲ್ಲದೇ ಸಾಂಸ್ಥಿಕ ರಚನೆಗಳ ಮೂಲಕ ಮಹಿಳೆಯ ಮೇಲೆ ಸಾಂಸ್ಕೃತಿಕ ನಿರ್ಬಂಧ ಹೇರಲಾಗುತ್ತದೆ. ಶತಮಾನಗಳ ಹಿಂದಿನ ಇಂತಹ ಹಳೆಯ ಪದ್ಧತಿಗಳು ಭಾರತೀಯ ಮಹಿಳೆಯರನ್ನು ಪುರುಷಾಳ್ವಿಕೆಯ ಕೂಪಕ್ಕೆ ತಳ್ಳಿವೆ.

ಲಿಂಗ ತಾರತಮ್ಯ ಮತ್ತು ಜಾತಿ ವ್ಯವಸ್ಥೆಗಳನ್ನು ಬೇರ್ಪಡಿಸಲಸಾಧ್ಯವೆಂಬ ಲೋಹಿಯಾರ ವಿಚಾರವು, ಮಹಿಳೆಯರ ಕುರಿತ ಚರ್ಚೆಯ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದು. ಭಾರತದ ಚೈತನ್ಯವೇ ಉಡುಗಿಹೋಗಿರುವುದಕ್ಕೆ ಅವೆರಡರ ನಡುವಿನ ಭೇದಭಾವವೇ ಮೂಲಕಾರಣ ಎಂಬುದು ಅವರ ವಾದ. ಭಾರತೀಯ ಮಹಿಳೆಯರು ಹೆಚ್ಚಿನಂಶ, ಪಿತೃಸಂಸ್ಕೃತಿ/ಪುರುಷಾಳ್ವಿಕೆ ಮತ್ತು ಜಾತಿ ವ್ಯವಸ್ಥೆಗಳೆಂಬ ಎರಡು ರಚನಾತ್ಮಕ ವ್ಯವಸ್ಥೆಗಳಲ್ಲಿ ನಲುಗುವುದಲ್ಲದೇ ಅವೆರಡರ ನಿಕಟ ಸಂಬಂಧದಿಂದಾಗಿ ದುಪ್ಪಟ್ಟು ಅವಕಾಶ ವಂಚಿತರಾಗಿದ್ದಾರೆ ಮತ್ತು ಅಂಚಿಗೆ ತಳ್ಳಲ್ಪಟ್ಟಿದ್ದಾರೆ ಎಂದು ಅವರು ಒತ್ತಿ ಹೇಳುತ್ತಾರೆ. ಶುದ್ಧತೆ ಮತ್ತು ಮಲಿನತೆಗಳ ಮಾನದಂಡಗಳು, ಹುಟ್ಟಿನ ಮೇಲೆ ನಿರ್ಧಾರವಾಗುವ ಜಾತಿ ಗುಂಪುಗಳ ಭೇದಾತ್ಮಕ ಮೌಲ್ಯನಿರ್ಣಯಕ್ಕೆ ಮತ್ತು ಶ್ರೇಣೀಕರಣಕ್ಕೆ ಸಾಂಸ್ಕೃತಿಕ ತಳಹದಿಯನ್ನು ರೂಪಿಸುತ್ತವೆ. ಅದು ಕೆಲವು ಜಾತಿಗಳನ್ನು ಅಸ್ಪೃಶ್ಯ ವರ್ಗಕ್ಕೆ ತಳ್ಳಿದೆ. ಅದೇ



**ಬರ್ಮಾದ ಸಮಾಜವಾದಿ ಮಿತ್ರರೊಂದಿಗೆ ಲೋಹಿಯಾ**

ರೀತಿ ಹುಟ್ಟಿನಿಂದಲೇ ಲಿಂಗ ತಾರತಮ್ಯಕ್ಕೊಳಗಾಗುವ ಮಹಿಳೆಯರನ್ನು ಅವರ ಜೀವಿತದ ಕೆಲವು ಅವಧಿಗಳಲ್ಲಿ ಅಂದರೆ, ಮುಟ್ಟಿನ ಮತ್ತು ಪ್ರಸವದ ನಂತರದ ಅವಧಿಗಳಲ್ಲಿ ಅಸ್ಪೃಶ್ಯರೆಂದು ಕಾಣಲಾಗುತ್ತದೆ. ಅವರನ್ನು ಅಡುಗೆ ಮನೆಗೆ ಸೀಮಿತಗೊಳಿಸಲಾಗಿದ್ದು, ತಮ್ಮ ದೇಹದ ಮೇಲಿನ ಹಕ್ಕಾಗಲೀ ಸಂತಾನಕ್ಕೆ ಸಂಬಂಧಿಸಿದ ಹಕ್ಕಾಗಲೀ ಅವರಿಗಿಲ್ಲ.

ಹೆಣ್ಣನ್ನು ಗಂಡಿಗಿಂತ ಕೀಳು ಎಂದು ಭಾವಿಸಿರುವುದರಿಂದಲೇ ಭಾರತೀಯ ಸ್ತ್ರೀಯರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ರಂಗಗಳಲ್ಲಿ ಹಿಂದುಳಿದಿದ್ದಾರೆ ಎಂಬುದು ಲೋಹಿಯಾರ ಗ್ರಹಿಕೆ. ಆದರೆ ಅವರು ಭಾರತೀಯ ಮಹಿಳೆಯರನ್ನು ಏಕರೂಪಾತ್ಮಕವಾದ ಒಂದು ವರ್ಗ ಎಂದು ಪರಿಗಣಿಸುವುದಿಲ್ಲ. ಅವರು 'ವರ್ಗ' ಅಂಶಕ್ಕೆ ಹೆಚ್ಚು ಒತ್ತು ಕೊಡುವುದೇಕೆಂದರೆ, ದೇಶದ ಬಹುಭಾಗವನ್ನು ರೂಪಿಸುವ ಬಡ/ಕೆಳಜಾತಿ/ವರ್ಗದ ಮಹಿಳೆಯರ ಸ್ಥಿತಿಯು, ಮೂಲಭೂತ ಸೌಲಭ್ಯಗಳ ಅಲಭ್ಯತೆ ಮತ್ತು ಕನಿಷ್ಠ ಅನುಕೂಲಗಳ ಕೊರತೆಯಿಂದಾಗಿ ಅತ್ಯಂತ ಕೆಳಮಟ್ಟದಲ್ಲಿ ಇರುವುದರಿಂದ. ಅದರಲ್ಲೂ ನಿರ್ದಿಷ್ಟವಾಗಿ ಗ್ರಾಮೀಣ ಮಹಿಳೆಯರ ಪಾಡಿನ ಬಗೆಗೆ ಹೆಚ್ಚು ಆತಂಕ ವ್ಯಕ್ತಪಡಿಸುತ್ತಾರೆ. ಅವರ 'ಜಾತಿ ಮತ್ತು ಲಿಂಗ ಕುರಿತ ಭೇದಭಾವ' ಎಂಬ ಬಹುಮುಖ್ಯವಾದ ಲೇಖನದಲ್ಲಿ ಹೇಳುತ್ತಾರೆ; "ಹೆಚ್ಚಿನಂಶ ಭಾರತೀಯ ಮಹಿಳೆಯರ ಸಮಸ್ಯೆಗಳೆಂದರೆ, ನೀರಿನ ನಲ್ಲಿಗಳು ಮತ್ತು ಶೌಚಾಲಯಗಳಿಲ್ಲದಿರುವುದು. ದೂರ ದೂರದ ಬಾವಿಗಳಿಂದ ಅಥವಾ ಕೆರೆಗಳಿಂದ ದಿನನಿತ್ಯ ಬೆಳಗ್ಗೆ ಮತ್ತು ಸಂಜೆ ನೀರನ್ನು, ಸಾಮಾನ್ಯವಾಗಿ ರಾಡಿ ನೀರನ್ನು, ಹೊತ್ತು ತರುವ ಕತ್ತೆಚಾಕರಿಗೆ ಅವರು ದೂಡಲ್ಪಟ್ಟಿದ್ದಾರೆ. ಮಾನವನ್ನು ಕಾಪಾಡಿಕೊಳ್ಳಲು, ಸೂರ್ಯೋದಯಕ್ಕೆ ಮುನ್ನ ಅಥವಾ ಸೂರ್ಯಾಸ್ತದ ನಂತರವೇ ಅವರು ತಮ್ಮ ಮಲಬಾಧೆಯನ್ನು ತೀರಿಸಿಕೊಳ್ಳಬೇಕಾಗಿದೆ".

ಮುಂದುವರೆದು, ನಿಶ್ಚಿತ ಮದುವೆಗಳ ಸಂಪ್ರದಾಯವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ನಿಶ್ಚಿತ ಮದುವೆಗಳನ್ನು ಜಾನುವಾರು ವ್ಯಾಪಾರಕ್ಕೆ ಸಮೀಕರಿಸುತ್ತಾ ಸಮಾಜದಲ್ಲಿ ವೃದ್ಧಿಸುತ್ತಿರುವ 'ಮದುವೆ ಮಾರುಕಟ್ಟೆ'ಯ ಮೇಲೆ ಬೆಳಕು ಚೆಲ್ಲುತ್ತಾರೆ. "ಒಂದು ಭಾವಚಿತ್ರವನ್ನು ನೋಡುವ ಮೂಲಕ ಅಥವಾ ಮುಸುಕು ಎಳೆದುಕೊಂಡು ತಲೆಬಗ್ಗಿಸಿಕೊಂಡು ಹುಡುಗಿಯು ಚಹಾ ತರುವಂತಹ ಭಯದ ವಾತಾವರಣದಲ್ಲಿ ನಿರ್ಧಾರವಾಗುವ ಮದುವೆಗಳು, ಹಿಂದೆ ಕ್ಷೌರಿಕ ಅಥವಾ ಬ್ರಾಹ್ಮಣನ ಮೂಲಕ ನಡೆಯುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದವಾದುದು. ಹೇಗೆಂದರೆ, ಕುದುರೆ ಖರೀದಿದಾರನೊಬ್ಬ, ಕೊಳ್ಳುವ ಕುದುರೆ ಎದುರಿಗಿದ್ದರೂ ಅದರ ಗೊರಸುಗಳನ್ನು ಸ್ಪರ್ಶಿಸಿ ನೋಡದೇ, ಅದರ ಹಲ್ಲುಗಳನ್ನು ಹತ್ತಿರದಿಂದ ಪರೀಕ್ಷಿಸದೇ ಕೊಂಡುಕೊಂಡಂತೆ!"

'ಪಾತಕ' ಅಂತ ಯಾವುದನ್ನಾದರೂ ಒಂದು ವೇಳೆ ಕರೆಯುವುದಾದರೆ, ಅದು ಮತ್ತಾವುದೂ ಅಲ್ಲ, ರೂಢಿಯಲ್ಲಿರುವ, ಹಿರಿಯರು ನಿಶ್ಚಯಿಸುವ ಮದುವೆಗಳಿಗೆ ಸಂಬಂಧಿಸಿದ ಕರಾರುಗಳು ಎನ್ನುವುದು ಲೋಹಿಯಾರ ಖಚಿತ ಅಭಿಪ್ರಾಯ. ನಿಶ್ಚಿತ ಮದುವೆಗಳಲ್ಲಿ ಇರುವ ವರದಕ್ಷಿಣೆಯ ಆಚರಣೆಯನ್ನು ತೀವ್ರವಾಗಿ ಖಂಡಿಸುತ್ತಾರೆ. ಮಧ್ಯಮ ವರ್ಗದ ಪೋಷಕರಿಗೂ ಇದು ಒಂದು ಯಾತನೆಯೇ. ಒಟ್ಟಾರೆಯಾಗಿ ಇದು ಮಹಿಳೆಯ ಘನತೆಯನ್ನು ಕುಗ್ಗಿಸುತ್ತದೆ. ವರದಕ್ಷಿಣೆ ಕೊಡುವ ಆಚರಣೆಯ ಬಗ್ಗೆ ಲೋಹಿಯಾರ ಬಹಳ ಪರಿಣಾಮಕಾರಿಯಾದ ಮಾತೊಂದಿದೆ: "ವರದಕ್ಷಿಣೆ ಇಲ್ಲದ ಹುಡುಗಿ ಕಸಕ್ಕಿಂತ ಕಡೆ, ಕರುವಿಲ್ಲದ ಆಕಳಿನಂತೆ". "ಕರಾರಿನಂತೆ ವರದಕ್ಷಿಣೆಯನ್ನು ಪೂರ್ಣವಾಗಿ ಕೊಡಲಾಗದಿದ್ದ ಸಂದರ್ಭದಲ್ಲಿ, ತಮ್ಮ ಹೆಣ್ಣುಮಕ್ಕಳನ್ನು ಎಷ್ಟು ಹೀನಾಯವಾಗಿ ನಡೆಸಿಕೊಳ್ಳುತ್ತಾರೆ ಮತ್ತು ಕೆಲವೊಮ್ಮೆ ಹೇಗೆ ಸಾವಿಗೂ ತಳ್ಳುತ್ತಾರೆ ಎಂದು ಎಷ್ಟೋ ಹೆಣ್ಣುಮಕ್ಕಳ ಪೋಷಕರು ಕಣ್ಣಲ್ಲಿ ನೀರು ತಂದುಕೊಂಡು ಹೇಳಿದ್ದುಂಟು" ಎಂದು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ ಲೋಹಿಯಾ.

ತಮ್ಮ ಹೆಣ್ಣುಮಕ್ಕಳನ್ನು ಹೆಚ್ಚು ಓದಿಸಿದರೆ ಸಮಸ್ಯೆಯು ಇನ್ನೂ ಹೆಚ್ಚು ಸಂಕೀರ್ಣವಾಗುತ್ತದೆ. ಹೆಚ್ಚಿನ ಶಿಕ್ಷಣ ದೊರೆತ ಹೆಣ್ಣು ಮಗಳಿಗೆ ಸಾಮಾನ್ಯವಾಗಿ ಇನ್ನೂ ಹೆಚ್ಚಿನ ಶಿಕ್ಷಣವನ್ನು ಪಡೆದ ಗಂಡನನ್ನು ಹುಡುಕುವುದರಿಂದ, ವರದಕ್ಷಿಣೆ ಮಾರುಕಟ್ಟೆಯಲ್ಲಿ ಹೆಚ್ಚು ಓದಿದ ಗಂಡಿನ ವರದಕ್ಷಿಣೆ ತಾನೇತಾನಾಗಿ ಹೆಚ್ಚುತ್ತದೆ. ಆದ್ದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕೊಡಿಸದಿರುವುದು ಅಥವಾ ಕಡಿಮೆ ಶಿಕ್ಷಣ ಕೊಡಿಸುವುದು ಅಥವಾ ಎಲ್ಲ ರೀತಿಯಲ್ಲೂ ಹಿಂದುಳಿಯುವಂತೆ ಮಾಡುವುದು ಪೋಷಕರಿಗೆ ಹೆಚ್ಚು ಲಾಭದಾಯಕವಾಗಿ ಪರಿಣಮಿಸಿದೆ. ಲೋಹಿಯಾರ ಮಾತನ್ನೇ ಗಮನಿಸಿ: "ಕೃಷಿ ಕ್ಷೇತ್ರದಲ್ಲಿ, ತಾನು ಸ್ವತಃ ಕಷ್ಟಪಡುವುದಕ್ಕಿಂತ ಭೋಗ್ಯಕ್ಕೆ ಕೊಡುವುದರಿಂದ ಹೇಗೆ ಹೆಚ್ಚು ಗಳಿಸುವಂತಾಗಿದೆಯೋ ಹಾಗೆ ಕಡಿಮೆ ಶಿಕ್ಷಣವನ್ನು ಪಡೆದ ಹುಡುಗಿಯು ವಿದ್ಯಾವಂತ ಹುಡುಗಿಗಿಂತ ಉತ್ತಮಳು, ಏಕೆಂದರೆ ಅವಳ ವರದಕ್ಷಿಣೆ ಕಡಿಮೆ." ಹಾಗೆಯೇ ಮದುವೆ ಸಮಾರಂಭಗಳಲ್ಲಿನ ದುಂದುಗಾರಿಕೆಯನ್ನೂ ಅವರು ವಿರೋಧಿಸುತ್ತಾರೆ.

ಹಿರಿಯರು ನಿಶ್ಚಯಿಸುವ ಮದುವೆಗಳಿಗೆ ಸಂಬಂಧಿಸಿದ ಇನ್ನೊಂದು ಕರಾರು ಏನೆಂದರೆ, ಮದುವೆಯ ಸಂದರ್ಭದಲ್ಲಿ ಹುಡುಗಿಯು 'ಕನ್ಯೆ'ಯಾಗಿರಬೇಕೆಂಬುದು. ಎಷ್ಟೇ ವಯಸ್ಸಾದರೂ ಮದುವೆಯನ್ನು ನಿಶ್ಚಯಿಸುವ ತನಕ 'ಕನ್ಯತ್ವ'ವನ್ನು ಕಾಪಾಡಿಕೊಂಡಿರಬೇಕು. ಇಲ್ಲವೆಂದರೆ ಅವಳ ಮದುವೆ ಮಾಡುವುದು ಅಸಂಭವ. ಗಂಡಿಗಿಲ್ಲದ, ಆದರೆ ಹೆಣ್ಣಿಗೆ ಮಾತ್ರ ಅನ್ವಯಿಸುವ ಈ ಮಾನದಂಡ ಅತ್ಯಂತ ಕ್ರೂರ ಮಾತ್ರವಲ್ಲದೇ ಪಕ್ಷಪಾತದ ಪಿತೃಸಂಸ್ಕೃತಿಯ ದ್ವಿಮುಖನೀತಿಯನ್ನು ಸ್ಪಷ್ಟವಾಗಿಯೇ ಪ್ರತಿಬಿಂಬಿಸುತ್ತದೆ. ಒಂದು ರೀತಿಯಲ್ಲಿ ಇದು ನೈಸರ್ಗಿಕ ನ್ಯಾಯದ ನಿಯಮಗಳನ್ನು ಉಲ್ಲಂಘಿಸುತ್ತದೆ. ಲೋಹಿಯಾ ಅವರು ಗಮನಿಸುವಂತೆ: "ಬ್ರಹ್ಮಚರ್ಯವೆಂಬುದೊಂದು ಸೆರೆಮನೆಯಿದ್ದಂತೆ. ಪಾವಿತ್ರ್ಯದ ಸಂಕೋಲೆಗಳಿಂದ ಬಿಡುಗಡೆಗೊಳಿಸುವವರಿಗಾಗಿ ಕಾತರದಿಂದ ಕಾಯುವ ಬಂಧಿತ ಆತ್ಮಗಳನ್ನು ಯಾರು ತಾನೆ ನೋಡಿಲ್ಲ?"

ಪುರುಷಾಳ್ವಿಕೆಯ ಸಮಸ್ಯೆ ಹೆಚ್ಚು ಸಂಕೀರ್ಣವಾಗಿರುವುದನ್ನು ಲೋಹಿಯಾ ಗುರುತಿಸುತ್ತಾರೆ. 'ಪುರುಷರ ಮೇಲೇ ಎಲ್ಲವನ್ನೂ ಆರೋಪಿಸುವ ಯಥಾಪ್ರಕಾರದ ಸ್ತ್ರೀವಾದೀ ಆವೇಶ'ಗಳ ಗೊಡವೆಗೆ ಅವರು ಹೋಗುವುದಿಲ್ಲ. ಶಕುಂತಲಾ ಶ್ರೀವಾಸ್ತವ ಅವರ ಭಾರತೀಯ ಮಹಿಳೆಯರ ಸ್ಥಿತಿಗತಿ ಕುರಿತ ಲೇಖನ ಸರಣಿಯಲ್ಲಿ 'ಪುರುಷ ಮತ್ತು ಮಹಿಳೆಯರಿಬ್ಬರೂ ಬೇರೆ ಬೇರೆ ರೀತಿಯಲ್ಲಿ ತಪ್ಪಿತಸ್ಥರು' ಎನ್ನುವ ಅವರ ಸಂಯಮವನ್ನು ಮೆಚ್ಚಿಕೊಳ್ಳುತ್ತಾರೆ. ಭಾರತದಲ್ಲಿ ಲಿಂಗ ಪಕ್ಷಪಾತಿ ಆಚರಣೆಗಳು ಸುಸ್ಥಿರವಾಗಲು ಮಹಿಳೆಯರೂ ಹೇಗೆ ಕಾರಣಕರ್ತರು ಎಂಬುದನ್ನು ಲೋಹಿಯಾ ಗಮನಿಸುತ್ತಾರೆ. ಪಿತೃಸಂಸ್ಕೃತಿಯ ನಿಶ್ಚಿತ ಮದುವೆ ಮತ್ತು ವರದಕ್ಷಿಣೆಗಳಂತಹ ಮೌಲ್ಯಗಳನ್ನು, ಮಾನದಂಡಗಳನ್ನು ಮತ್ತು ಆಚರಣೆಗಳನ್ನು ಭಾರತೀಯ ಮಹಿಳೆಯರು ಪಾಲಿಸುತ್ತಾರೆ ಅಥವಾ ಪಾಲಿಸಿಕೊಂಡು ಬರುವಂತೆ ಮಾಡಲಾಗುತ್ತದೆ ಎನ್ನುವುದು ಸುಸ್ಪಷ್ಟ. ಇದು ಹೀಗೇಕೆಂದರೆ, ಅವರನ್ನು ಬಾಲ್ಯದಿಂದಲೇ ಆ ರೀತಿ ಬೆಳೆಸುವ ಮೂಲಕ ಸಾಮಾಜಿಕ ರಚನೆಯಲ್ಲಿ ಅಂತಹ ಮೌಲ್ಯಗಳನ್ನು ಸ್ಥಾಪಿಸಲಾಗಿರುತ್ತದೆ. ಲೋಹಿಯಾ ಪ್ರಕಾರ ಮೂಲತಃ ಭಾರತದ ಸಮಾಜವು ಮಹಿಳೆಯರ ವಿಷಯದಲ್ಲಿ ಕ್ರೂರವಾಗಿದೆ. ಇದು ಕೆಲವು ಮಹಿಳೆಯರನ್ನು ಮಿತಿಮೀರಿ ಕ್ರೂರವಾಗಿ ವರ್ತಿಸುವಂತೆ ಮಾಡುತ್ತದೆ: "ವಿವಾಹಿತ ಮಹಿಳೆಯರು ವರ್ತಿಸುವ ರೀತಿ ಮತ್ತು ಅವರು ಇತರ ಸ್ತ್ರೀಯರ ಬಗೆಗೆ ಅದರಲ್ಲೂ ಬೇರೆ ಬೇರೆ ಪುರುಷರೊಂದಿಗೆ ಓಡಾಡುವ ಅವಿವಾಹಿತ ಸ್ತ್ರೀಯರ ಬಗೆಗೆ ಆಡಿಕೊಳ್ಳುವುದನ್ನು ನೋಡಿ ಜಿಗುಪ್ಸೆಯಾಗುತ್ತದೆ. ಇಂಥ ಕ್ರೂರ ಮನಸ್ಸುಗಳು ಇರುವವರೆಗೂ ಪುರುಷ ಮತ್ತು ಮಹಿಳೆ ಎಂಬ ಭೇದಭಾವ ಕೊನೆಗೊಳ್ಳುವುದಿಲ್ಲ" ಎನ್ನುತ್ತಾರೆ.

ಇನ್ನು 'ಸಪ್ತಕ್ರಾಂತಿ' ಎಂಬ ಸಮಾಜವಾದಿ ಸಿದ್ಧಾಂತದ ಪ್ರಮುಖ

ಅಂಶಗಳನ್ನೊಳಗೊಂಡ ಲೇಖನದಲ್ಲಿ ಹೇಳುತ್ತಾರೆ: "ಲಿಂಗ ಅಸಮಾನತೆಯು ಎಷ್ಟರಮಟ್ಟಿಗೆ ಭಾರತೀಯ ಮಹಿಳೆಯರ ಪ್ರಜ್ಞೆಯನ್ನು ವಸಾಹತೀಕರಣಗೊಳಿಸಿದೆಯೆಂದರೆ, ಹೆಚ್ಚಿನ ಮಹಿಳೆಯರು ಸಮಾನತೆಯನ್ನೇ ಬಯಸುವುದಿಲ್ಲ. ಅವರು ತಮ್ಮ ಆಭರಣಗಳಿಂದ, ಮತ್ತಿತರ ಸೌಂದರ್ಯ ಸಾಧನಗಳಿಂದ ಸಂತುಷ್ಟರು. ಹೇಗೆಂದರೆ, ಬಹುಪಾಲು ಬಡವರು ಆರ್ಥಿಕ ಸಮಾನತೆಯನ್ನು ಬಯಸದೇ ಬರಿಯ ಇನಾಮು(ಬಕ್ಷೀಸು)ಗಳಿಂದ ಸಂತುಷ್ಟರಾದಂತೆ". ಲಿಂಗ ಸಂಬಂಧೀ ಪ್ರಶ್ನೆಗಳ ಸಂಕೀರ್ಣತೆ ಮತ್ತು ಮಹತ್ವವನ್ನು ಅರಿತ ಲೋಹಿಯಾ, ಸ್ತ್ರೀ–ಪುರುಷ ಸಮಾನತೆಯನ್ನೂ ತಮ್ಮ 'ಸಪ್ತಕ್ರಾಂತಿ'ಯ ಒಂದು ಮುಖ್ಯ ಅಂಶವನ್ನಾಗಿ ಪರಿಗಣಿಸಿದ್ದಾರೆ.

ಮತ್ತೊಂದು ಮುಖ್ಯವಾದ ಸಂಕೀರ್ಣ ಸಮಸ್ಯೆಯತ್ತ ತಮ್ಮ ದೃಷ್ಟಿ ಹಾಯಿಸುತ್ತಾರೆ ಲೋಹಿಯಾ. ಅದೇನೆಂದರೆ, ಮಹಿಳೆಯರ ಅಧೀನತೆಯನ್ನು ಶಾಶ್ವತಗೊಳಿಸುವಲ್ಲಿ ಮುಂದುವರೆದ, ಸಂಸ್ಕೃತೀಕರಣಗೊಂಡ ಶೂದ್ರರ ವರ್ತನೆ ಮತ್ತು ಮನೋಧರ್ಮಗಳ ಪಾತ್ರ. 'ಶೂದ್ರನಿಗೊಂದು ಪತ್ರ' ದಲ್ಲಿ ಹೀಗೆ ಬರೆಯುತ್ತಾರೆ: "ಆರ್ಥಿಕವಾಗಿ ಸ್ವಲ್ಪ ಚೇತರಿಸಿಕೊಂಡರೂ ಸಾಕು, ಶೂದ್ರರು ಬಹಳ ಬೇಗ ದ್ವಿಜರ ಕೆಟ್ಟ ಅಭ್ಯಾಸಗಳನ್ನು ಕಲಿತುಬಿಡುತ್ತಾರೆ. ತಮ್ಮ ತಮ್ಮ ಸ್ತ್ರೀಯರನ್ನು ಬಲವಂತವಾಗಿ ಪರದೆಯ ಹಿಂದಕ್ಕೆ ಸರಿಸಿಬಿಡುತ್ತಾರೆ. ಮನೆಯ ಆವರಣಕ್ಕೇ ಸೀಮಿತಗೊಳ್ಳುವ ಮೇಲ್ಜಾತಿ ಮಹಿಳೆಯರಿಗಿಂತ ಬೀದಿಗಳಲ್ಲಿ ಮತ್ತು ಹೊಲಗಳಲ್ಲಿ ಮುಖವನ್ನು ಮುಚ್ಚಿಕೊಳ್ಳದೇ ಮುಕ್ತವಾಗಿ ಕೆಲಸ ಮಾಡುವ ಶೂದ್ರ ಮಹಿಳೆಯರು ಎಷ್ಟೋ ಪಾಲು ಉತ್ತಮ ಎಂದು ನಾನು ಯಾವಾಗಲೂ ವಾದಿಸುತ್ತಾ ಬಂದಿದ್ದೇನೆ. ಶೂದ್ರರು ಈ ವಿಷಯದ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಹರಿಜನರ ವಿಷಯ ಅಷ್ಟೇನೂ ಕೆಟ್ಟದಿಲ್ಲ. ಆದರೆ ಅಸ್ಪೃಶ್ಯರಲ್ಲದ ಇತರ ಹಿಂದುಳಿದ ಜಾತಿಗಳವರು ಇಂಥ ಭ್ರಮೆಗಳ ಹಿಡಿತದಲ್ಲಿದ್ದಾರೆ. ಸುಶಿಕ್ಷಿತ ಮತ್ತು ಅನುಕೂಲಸ್ಥ ಶೂದ್ರರು ಸಾಮಾನ್ಯವಾಗಿ ಅಸೂಯೆಯಿಂದ ಮತ್ತು ಸುತ್ತಲಿನ ಸಾಮಾಜಿಕ ಪರಿಸರದಿಂದ ಹೆಚ್ಚು ಪ್ರಚೋದನೆಗೊಳಗಾಗುತ್ತಾರೆ."

**ಉದಾರ ಆಧುನಿಕತಾವಾದೀ ಮತ್ತು ಮಾರ್ಕ್ಸ್‌ವಾದೀ ಮಾರ್ಗಗಳ ನಿರಾಕರಣೆ**

ಭಾರತೀಯ ಮಹಿಳೆಯರ ವಿಮೋಚನೆಗಾಗಿ ಲೋಹಿಯಾ ತುಳಿಯುವ ಹಾದಿ, ಉದಾರ ಆಧುನಿಕತಾವಾದಿ ಮತ್ತು ಮಾರ್ಕ್ಸ್‌ವಾದೀ ಮಾರ್ಗಗಳಿಗಿಂತ ಭಿನ್ನವಾದದ್ದು. 'ಬಂಡವಾಳವಾದ ಮತ್ತು ಮಾರ್ಕ್ಸ್‌ವಾದದ 'ಸಮಾನ ಅಪ್ರಸ್ತುತತೆ' – ಹೊಸ ಮನುಕುಲದ ನಾಗರೀಕತೆಯ ಸೃಷ್ಟಿಗೆ ಸಂಬಂಧಿಸಿದಂತೆ' ಎಂಬ ಮಹಾಪ್ರಬಂಧವನ್ನರು ರಚಿಸಿದ್ದಾರೆ. ಅದರಲ್ಲಿ, ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂರವರು ತೆಗೆದುಕೊಂಡ ಕ್ರಮಗಳು ಮತ್ತು ಅನುಸರಿಸಿದ ಮಾರ್ಗಗಳ ಕುರಿತ ತಮ್ಮ ಟೀಕೆ ಟಿಪ್ಪಣಿಗಳಲ್ಲಿ ಉದಾರವಾದಿ ಆಧುನಿಕತಾವಾದಿ ದೃಷ್ಟಿಕೋನವನ್ನು ತಿರಸ್ಕರಿಸಿರುವುದು ಸ್ಪಷ್ಟವಾಗಿದೆ. ಕೆಳಜಾತಿ ಮಹಿಳೆಯರ ಸ್ವಾಸ್ಥ್ಯದ ಬಗ್ಗೆ ತಲೆಕೆಡಿಸಿಕೊಳ್ಳದ ಮತ್ತು ಎಂದೂ ಅರ್ಥಮಾಡಿಕೊಳ್ಳದ, ಮೇಲ್ಜಾತಿ ಮಹಿಳೆಯರ ಬಗ್ಗೆ ಮಾತ್ರ ಹೆಚ್ಚು ಕಾಳಜಿ ತೋರುವ ನೆಹರೂರವರನ್ನು 'ಆಧುನಿಕ ವಸಿಷ್ಠ' ಎಂಬುದಾಗಿ ಕರೆಯುತ್ತಾರೆ ಲೋಹಿಯಾ. ತಮ್ಮ 'ವಸಿಷ್ಠರು ಮತ್ತು ವಾಲ್ಮೀಕಿಯರು' ಎಂಬ ಬರಹದಲ್ಲಿ ವಿವರಿಸುತ್ತಾರೆ:– "ನೆಹರೂರವರ ಕಾಳಜಿಗಳು ಸೀತೆ ಮತ್ತು ಊರ್ಮಿಳೆಯರಿಗೆ(ಮೇಲ್ಜಾತಿ ಮಹಿಳೆಯರು) ಸೀಮಿತಗೊಳ್ಳುತ್ತದೆ. ಐದು ಸಾವಿರ ವರ್ಷಗಳ ಕಾಲಾವಧಿಯು ಕೇವಲ ಒಂದು ವ್ಯತ್ಯಾಸವನ್ನಷ್ಟೇ ಮಾಡಿದೆ. ಐದುಸಾವಿರ ವರ್ಷಗಳ ಹಿಂದೆ ವಸಿಷ್ಠರು ಸೀತೆಯ ಮೇಲೆ ಎಲ್ಲ ರೀತಿಯ ನಿರ್ಬಂಧಗಳನ್ನು ವಿಧಿಸಿದ್ದರೂ ಪ್ರತೀಬಾರಿ ಅವಳು ತನ್ನ ಮುಗ್ಧತೆಯನ್ನು ಸಾಬೀತುಪಡಿಸಲು ಅಗ್ನಿಪರೀಕ್ಷೆಗೊಳಪಡುವುದನ್ನು ಬಯಸಿದ್ದರು. ಆಧುನಿಕ ವಸಿಷ್ಠರಾದರೋ, ಸೀತೆಯ ಎಲ್ಲ ಸಂಕೋಲೆಗಳನ್ನೂ ಕಿತ್ತುಹಾಕಬಯಸುವವರು. ಆದರೆ, ವಾಸಂತಿಯರು ಮತ್ತು ಕುಶಿಕೆಯರ(ಕೆಳಜಾತಿ ಮಹಿಳೆಯರು) ಸ್ಥಾನ ಮಾತ್ರ ಮೊದಲಿದ್ದಲ್ಲಿಯೇ. ಯಾವ ವ್ಯತ್ಯಾಸವೂ ಇಲ್ಲ. ಅಂದರೆ, ವಸಿಷ್ಠರ ಅಡಿಯಾಳಾಗಿ ಅವರನ್ನು ಸಂಪ್ರೀತಗೊಳಿಸುವುದು. ಸಮಾನತೆಯ ತತ್ವಗಳು ಅವರ ತನಕ ಬರುವುದೇ ಇಲ್ಲ."

**ಸ್ತ್ರೀ ವಿಮೋಚನೆಯ ಮಾರ್ಗಗಳು**

ಈಗ ಅಸ್ತಿತ್ವದಲ್ಲಿರುವ ಲಿಂಗಾಧಾರಿತ ಅಸಮಾನತೆಯನ್ನು ಕೊನೆಗಾಣಿಸಲು ಲೋಹಿಯಾ, ವಿಶಿಷ್ಟವಾದ, ಅಲ್ಪಾವಧಿಯ ಮತ್ತು ದೀರ್ಘಾವಧಿಯ ಪರಿಣಾಮಗಳನ್ನು ಹೊಂದಿರುವ ಒಂದು ಮಾರ್ಗವನ್ನು ಸೂಚಿಸುತ್ತಾರೆ. ದೀರ್ಘಾವಧಿಯಲ್ಲಿ ಭಾರತದ ಸಮಾಜವನ್ನು ಜಾತಿರಹಿತ, ವರ್ಗರಹಿತ ಮತ್ತು ಲಿಂಗ ತಾರತಮ್ಯರಹಿತ ಸಮಾಜವನ್ನಾಗಿ ಪರಿವರ್ತಿಸುವ ಹಂಬಲ ಅವರದ್ದು. ತಮ್ಮ ಸಪ್ತ ಕ್ರಾಂತಿಗಳಲ್ಲಿ ಸ್ತ್ರೀ ಪುರುಷ ಸಮಾನತೆಗೆ ಮೊಟ್ಟಮೊದಲ ಸ್ಥಾನವನ್ನು ಕೊಡುತ್ತಾರೆ. ಲೋಹಿಯಾ ಅವರ ಹಿಂದೂ ಧರ್ಮದ ಬಗೆಗಿನ ಒಂದು ಲೇಖನದಲ್ಲಿ "ಹಿಂದೂ ಮನಸ್ಸಿನಲ್ಲಿರುವ ಜಾತಿಭಾವವು ಸಂಪೂರ್ಣ ಅಳಿಸಿಹೋಗಬೇಕು ಮತ್ತು ಸ್ತ್ರೀಯರನ್ನು ಪುರುಷರಿಗೆ ಸಮಾನವಾಗಿ ನಡೆಸಿಕೊಳ್ಳಬೇಕು." ಎನ್ನುತ್ತಾರೆ.

ಲಿಂಗ ಸಮಾನತೆಯನ್ನು ಉತ್ತೇಜಿಸಲು, ಸದ್ಯಕ್ಕೆ ಸರಿಕಾಣುವ, ಸಮಾನ ಅವಕಾಶಗಳನ್ನು ಕೊಟ್ಟರೆ ಸಾಲದು ಎನ್ನುವ ಲೋಹಿಯಾ, ಉದಾರತೆಯ ಚೌಕಟ್ಟನ್ನು ಮೀರಿ, ಸ್ತ್ರೀಯರ ಸ್ಥಾನಮಾನವನ್ನು ಉತ್ತಮಪಡಿಸಲು ಮತ್ತು ಪುರುಷಸ್ಥಾನದೊಂದಿಗೆ ಸಮೀಕರಿಸಲು ಭಾರತದ ಸಮಾಜವನ್ನು ಸಾಂಸ್ಕೃತಿಕವಾಗಿ ಮತ್ತು ರಚನಾತ್ಮಕವಾಗಿ ಬೇರುಮಟ್ಟದಲ್ಲಿ ಪರಿವರ್ತಿಸಬೇಕೆಂದು ಆಶಿಸುತ್ತಾರೆ. ಅದಕ್ಕಾಗಿ ವಿಶೇಷವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸೂಚಿಸುತ್ತಾರೆ. 'ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ' ಎಂಬ ತಮ್ಮ ಲೇಖನದಲ್ಲಿ "ನೂರಾರು ವರ್ಷಗಳಿಂದ ಆಳವಾಗಿ ಬೇರೂರಿರುವ ಲಿಂಗ ಅಸಮಾನತೆಯ ಸಮಸ್ಯೆಯು ಸಮಾನ ಅವಕಾಶಗಳನ್ನು ಕೊಟ್ಟಾಕ್ಷಣ ಪರಿಹಾರವಾಗಿಬಿಡುವುದಿಲ್ಲ. ಒಂದೇ ದಾರಿಯೆಂದರೆ, ವಿಶೇಷ ಆದ್ಯತೆಯ ಅವಕಾಶಗಳನ್ನು ಕೊಡುವುದು. ಇನ್ನೂ ಸರಿಯಾಗಿ ಹೇಳಬೇಕೆಂದರೆ, ಪುರುಷರಿಗಿಂತ ಹೆಚ್ಚಿನ ಹಕ್ಕುಗಳನ್ನು ಅವರಿಗೆ ಕೊಡುವುದು. ಆಗ ಸಮಾನತೆಯು ಸಾಧಿತವಾಗುತ್ತದೆ."

ಭಾರತದ ಸಂದರ್ಭದಲ್ಲಿ, ಲೋಹಿಯಾ ಗುರುತಿಸುವಂತೆ, ಜಾತಿ ಪದ್ಧತಿಯಲ್ಲಿ ಸಾಮರ್ಥ್ಯಗಳನ್ನು ಅಳೆಯುತ್ತಿರುವುದಕ್ಕೆ ೫೦೦೦ ವರ್ಷಗಳ ಇತಿಹಾಸವಿದೆ. ಅದರ ಫಲವಾಗಿ, ಕೆಲವು ನಿರ್ದಿಷ್ಟ ಜಾತಿಗಳು ವಿಶೇಷವಾಗಿ ಗುರುತಿಸಲ್ಪಟ್ಟಿವೆ. ಉದಾಹರಣೆಗೆ ಬೌದ್ಧಿಕ ಕ್ಷೇತ್ರದಲ್ಲಿ ಸಾರಸ್ವತ ಬ್ರಾಹ್ಮಣರು, ಉದ್ದಿಮೆಗಳಲ್ಲಿ ಮತ್ತು ಹಣಕಾಸು ವ್ಯವಹಾರಗಳಲ್ಲಿ ಮಾರವಾಡಿ ಬನಿಯಾಗಳು ಇತ್ಯಾದಿ. ಆದ್ದರಿಂದ ಆದ್ಯತೆಯ ಅವಕಾಶಗಳನ್ನು ಮತ್ತು ವಿಶೇಷ ಸವಲತ್ತುಗಳನ್ನು ಕೊಡದೇ ಇಂಥ ಜಾತಿಗಳೊಡನೆ ಸ್ಪರ್ಧಿಸುವ ಮಾತುಗಳನ್ನಾಡುವುದು ಅರ್ಥಹೀನ ಎಂದು ಭಾವಿಸುತ್ತಾರೆ. "ಸಾಮರ್ಥ್ಯಗಳ ಸಂಕುಚಿತ ಆಯ್ಕೆಗಳನ್ನು ಈಗ ವಿಸ್ತಾರಗೊಳಿಸಬೇಕಿದೆ. ಹಾಗೆಯೇ ಸಮಾನತೆಯನ್ನು ಸಾಧಿಸಬೇಕೆಂದರೆ, ಇಪ್ಪತ್ತು ಮುವ್ವತ್ತು ವರ್ಷಗಳ ಕಾಲ ಹಿಂದುಳಿದ ಜಾತಿಗಳು ಮತ್ತು ಗುಂಪುಗಳಿಗೆ ವಿಶೇಷ ಆದ್ಯತೆಯ ಅವಕಾಶಗಳನ್ನು ಕೊಡಬೇಕು. ಮಹಿಳೆಯರನ್ನೂ ಒಳಗೊಂಡಂತೆ ಅಂಚಿಗೆ ತಳ್ಳಲ್ಪಟ್ಟ ಎಲ್ಲರಿಗೂ ಇದು ಅನ್ವಯಿಸುತ್ತದೆ" ಎನ್ನುತ್ತಾರೆ. "ಶೂದ್ರರು, ಹರಿಜನರು, ಮುಸ್ಲಿಮರು ಮತ್ತು ಮಹಿಳೆಯರನ್ನು ಉನ್ನತ ಸ್ಥಾನದಲ್ಲಿ ಕುಳ್ಳಿರಿಸಬೇಕು. ಪೂರ್ತಿ ಅರ್ಹತೆಯಿಲ್ಲದಿದ್ದರೂ ಸಹ." ಎಂಬ ಸಲಹೆ ಕೊಡುತ್ತಾರೆ.

ಪ್ರೊ. ಆನಂದ ಕುಮಾರ್ ಅವರ ಪ್ರಕಾರ(೨೦೧೦) ಜಾತಿ ಮತ್ತು ಲಿಂಗ ಭೇದಭಾವವನ್ನು ಬಗ್ಗುಬಡಿಯಲು, ಭಾರತೀಯ ಮಹಿಳೆಯರ ಬದುಕಿಗೆ ಸಂಬಂಧಪಟ್ಟಂತೆ, ತಕ್ಷಣ ಗಮನಹರಿಸಬೇಕಾದ ನಾಲ್ಕು ಕ್ಷೇತ್ರಗಳಿವೆ ಎಂಬುದನ್ನು ಲೋಹಿಯಾ ಗುರುತಿಸಿದ್ದಾರೆ. ಅವುಗಳೆಂದರೆ, (ಅ) ಅಡುಗೆಮನೆಯ ಗುಲಾಮಗಿರಿ, ಶುದ್ಧ ನೀರು ಮತ್ತು ಶೌಚಾಲಯಗಳ ಅಭಾವ (ಆ) ವರದಕ್ಷಿಣೆ, ಜನನ ನಿಯಂತ್ರಣ ಮತ್ತು ತಾಯ್ತನ ಸೇರಿದಂತೆ ಮದುವೆ ಮತ್ತು ಲೈಂಗಿಕತೆಗಳ ಬಗೆಗಿನ ಆಷಾಢಭೂತಿತನ (ಇ) ಶಿಕ್ಷಣ ಮತ್ತು ಆಸ್ತಿ ಹಕ್ಕು ವಿಷಯಗಳಲ್ಲಿ ಗಂಡು ಹೆಣ್ಣಿನ ನಡುವೆ ಇನ್ನೂ ಹೆಚ್ಚಿನ ಸಮಾನತೆಯ ಅಗತ್ಯ (ಈ) ನಾಯಕತ್ವ, ರಾಜಕೀಯ, ಸೈನ್ಯ ಮತ್ತು ಸರ್ಕಾರೀ ನೌಕರಿಗಳಲ್ಲಿ ಆದ್ಯತೆಯ ಅವಕಾಶಗಳು.

ಬೇರು ಮಟ್ಟದ ಸಾಂಸ್ಕೃತಿಕ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಲೋಹಿಯಾ ಅವರು, ನಿಶ್ಚಿತ ಮದುವೆಗಳು ಮತ್ತು ವರದಕ್ಷಿಣೆ ಪದ್ಧತಿಯನ್ನು ನಿರಾಕರಿಸಬೇಕು ಎಂದು ಪ್ರತಿಪಾದಿಸುತ್ತಾರೆ. "ವರದಕ್ಷಿಣೆಯನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ಶಿಕ್ಷಾರ್ಹವಾಗಬೇಕು. ಬದಲಾವಣೆಗಳು ಮನಸ್ಸಿನಲ್ಲಿ ಮತ್ತದರ ಮೌಲ್ಯಗಳಲ್ಲಿ ಆಗಬೇಕು. ಮಕ್ಕಳಿಗೆ ಒಳ್ಳೆಯ ಆರೋಗ್ಯ ಮತ್ತು ವಿದ್ಯಾಭ್ಯಾಸ ಕೊಡುವುದಷ್ಟೇ ಪೋಷಕರ ಜವಾಬ್ದಾರಿ, ಮದುವೆ ಮಾಡುವುದಲ್ಲ" ಎನ್ನುತ್ತಾರೆ. ಮದುವೆ ಸಮಾರಂಭಗಳಲ್ಲಿನ ಅತಿರೇಕದ ಪ್ರದರ್ಶನ ನಿಲ್ಲಬೇಕು ಮತ್ತು ಮಕ್ಕಳಿಗೆ ತಮ್ಮ ತಮ್ಮ ಸಂಗಾತಿಗಳನ್ನು ಹುಡುಕಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು ಎನ್ನುವ, ಸ್ಥಾಪಿತ ಮಾನದಂಡಗಳನ್ನು ಪಲ್ಲಟಗೊಳಿಸುವ ಸಲಹೆ ನೀಡುತ್ತಾರೆ. "ಒಂದು ವೇಳೆ ಹುಡುಗಿ ಓಡಿಹೋದರೆ,

ಅನೈತಿಕ ಸಂಬಂಧಗಳಲ್ಲಿ ಜಾರಿದರೆ, ಅದು ಗಂಡುಹೆಣ್ಣಿನ ನಡುವಣ ಸಹಜ ಸಂಬಂಧಗಳನ್ನು ಅರಸುವಾಗ ಆಗುವಂಥದ್ದೇ ಹೊರತು ಕಳಂಕವಲ್ಲ." ಅಲ್ಲದೇ, ಹೆಣ್ಣು ಮದುವೆಯಾಗುವವರೆಗೂ ತನ್ನ ಕನ್ಯತ್ವವನ್ನು ಕಾಪಾಡಿಕೊಳ್ಳಬೇಕೆನ್ನುವ ಸಾಂಸ್ಕೃತಿಕ ಮಾನದಂಡವನ್ನು ತಿರಸ್ಕರಿಸಬೇಕು. "ಇಂತಹ ಬಾಲಿಶ ಆಚರಣೆಗಳ ವಿರುದ್ಧ ಯುವಕ ಯುವತಿಯರು ದಂಗೆ ಏಳಬೇಕು. ಲೈಂಗಿಕ ನಡವಳಿಕೆಗಳಲ್ಲಿ ಕೇವಲ ಎರಡು ಅಕ್ಷಮ್ಯ ಅಪರಾಧಗಳಿವೆ. ಅವುಗಳೆಂದರೆ, ಅತ್ಯಾಚಾರ ಮತ್ತು ಮಾತಿಗೆ ತಪ್ಪುವುದು ಅಥವಾ ಸುಳ್ಳು ಹೇಳುವುದು ಎಂಬುದನ್ನು ಅವರು ಯಾವಾಗಲೂ ನೆನಪಿಡಬೇಕು. ಇನ್ನೊಬ್ಬರಿಗೆ ನೋವುಂಟುಮಾಡುವ, ಘಾಸಿಯನ್ನುಂಟುಮಾಡುವ ಮೂರನೇ ಅಪರಾಧವೂ ಒಂದಿದೆ. ಅದನ್ನವರು ಆದಷ್ಟೂ ತಪ್ಪಿಸಬೇಕು." ಎಂದು ಅಭಿಪ್ರಾಯ ಪಡುತ್ತಾರೆ. ಅತ್ಯಾಚಾರವೆಸಗಿದ ಸಂದರ್ಭದಲ್ಲಿ ಬಲಿಪಶುವಾದವರನ್ನೇ ಬೈಯ್ಯುವುದನ್ನು ನೇರವಾಗಿ ವಿರೋಧಿಸುವ ಲೋಹಿಯಾ, ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಹೆಣ್ಣಿನ ಅಂತರಂಗ ಪರಿಶುದ್ಧತೆಯನ್ನು ಎತ್ತಿಹಿಡಿದಿರುವ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. "ಬಲಾತ್ಕಾರದ ಅತ್ಯಾಚಾರದ ಸಂದರ್ಭದಲ್ಲಿ ಮಹಿಳೆಯು ಮಾಡುವ ಹೋರಾಟ ಯಶಸ್ವಿಯಾಗದಿದ್ದರೂ, ಅದು ಅವಳಿಗೆ ಹಾನಿಯಾಗಲೀ, ಕೊಳಕಾಗಲೀ ಅಲ್ಲ. ಏಕೆಂದರೆ, ಅವಳು ಪ್ರತಿತಿಂಗಳೂ ತನ್ನನ್ನು ಪುನಶ್ಚೇತನಗೊಳಿಸಿಕೊಳ್ಳುತ್ತಾಳೆ."

ಜಾತಿ ಮತ್ತು ಲಿಂಗಾಧಾರಿತ ತಾರತಮ್ಯವನ್ನು ಮೀರಲು ಅಂತರ್ಜಾತಿ ವಿವಾಹಗಳಾಗಬೇಕು ಮತ್ತು ಅದನ್ನು ಪ್ರೋತ್ಸಾಹಿಸಲು ಅಂತಹ ಜೋಡಿಗಳಿಗೆ ಸರ್ಕಾರೀ ಕೆಲಸವನ್ನು ಕೊಡಬೇಕೆಂಬ ಸಲಹೆ ನೀಡುತ್ತಾರೆ. ವಿವಾಹ ವಿಚ್ಛೇದನ ಮತ್ತು ಮರುಮದುವೆಯಾಗುವ ಮತ್ತು ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಮಹಿಳೆಯರ ಹಕ್ಕುಗಳನ್ನು ಬೆಂಬಲಿಸುತ್ತಾರೆ. ಮದುವೆಯ ಸಾಂಸ್ಥಿಕ ಚೌಕಟ್ಟನ್ನೂ ಮೀರಿ ಅವರು ವಿವಾಹರಹಿತ ತಾಯ್ತನವನ್ನೂ, ಜನನ ನಿಯಂತ್ರಣದ ಸೌಲಭ್ಯಗಳನ್ನು ವಿವಾಹಿತರು ಅವಿವಾಹಿತರೆನ್ನದೆ ಎಲ್ಲರಿಗೂ ದೊರಕುವಂತೆ ಮಾಡಬೇಕು ಎನ್ನುವುದನ್ನೂ ಬೆಂಬಲಿಸುತ್ತಾರೆ. ಸ್ತ್ರೀ ಲೈಂಗಿಕತೆಯ ಮುಕ್ತ ಅಭಿವ್ಯಕ್ತಿಯನ್ನು ಪ್ರತಿಪಾದಿಸುವುದರೊಂದಿಗೆ ಏಕಪಕ್ಷೀಯವಾದ ಲೈಂಗಿಕ ನೈರ್ಮಲ್ಯದ ಕಲ್ಪನೆಯನ್ನು ತಿರಸ್ಕರಿಸುತ್ತಾರೆ. ಅದೊಂದು ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ದ್ವಂದ್ವ ನೀತಿ.

ಜಾತಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಸಗೋತ್ರ ವಿವಾಹವನ್ನು ಕೊನೆಗಾಣಿಸುವುದಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ. ಏಕೆಂದರೆ ಅದು, ಗಂಡು ಮತ್ತು ಹೆಣ್ಣು, ಜಾತಿಗಡಿಗಳನ್ನು ಮೀರಿ ಮುಕ್ತವಾಗಿ ಪರಸ್ಪರ ಅನ್ಯೋನ್ಯವಾಗಿ ಬೆರೆಯಲು ತಡೆಯೊಡ್ಡುತ್ತದೆ. ವಿವಿಧ ಜಾತಿಗಳಿಗೆ ಸೇರಿದ ಪುರುಷರು ಮತ್ತು ಮಹಿಳೆಯರು ವೈಯಕ್ತಿಕ ಸಂಬಂಧಗಳ ಮೂಲಕ ಜಾತಿ ಗಡಿಗಳನ್ನು ಕಿತ್ತುಹಾಕುವುದು ಅಗತ್ಯವಾಗಿದೆ ಎನ್ನುವುದು ಲೋಹಿಯಾ ಅವರ ನಿಲುವು. 'ಶೂದ್ರನಿಗೊಂದು ಪತ್ರ'ದಲ್ಲಿ : "ದ್ವಿಜ ಮಹಿಳೆಯರಿಗಿಂತ ಶೂದ್ರ ಮಹಿಳೆಯರಿಗೆ ಹೆಚ್ಚಿನ ಕೌಶಲ್ಯವಿದೆ. ಶೂದ್ರ ಮಹಿಳೆಯರು ಮುಕ್ತ ವಾತಾವರಣ ಮತ್ತು ಮುಗ್ಧ ಆನಂದಕ್ಕಾಗಿ ಹಂಬಲಿಸುತ್ತಾರೆ ಎಂದು ನನಗೆ ಯಾವಾಗಲೂ ಅನ್ನಿಸಿದೆ. ಜಾತಿ ಗಡಿಗಳನ್ನೇನಾದರೂ ಕಿತ್ತುಹಾಕಿದರೆ ಅಥವಾ ಸಡಿಲಗೊಳಿಸಿದರೆ, ಬಹಳಷ್ಟು ದ್ವಿಜ ಗಂಡಸರು ಶೂದ್ರ ಮಹಿಳೆಯರತ್ತ ಆಕರ್ಷಿತರಾಗುತ್ತಾರೆ. ಹಾಗೆಯೇ ತಮಗೂ ಮತ್ತು ದೇಶಕ್ಕೂ ಸುಖ ಸಂತೋಷವನ್ನು ತರುತ್ತಾರೆ. ಅದೇ ರೀತಿ ಶೂದ್ರ ಹುಡುಗರು ಕೂಡ ದ್ವಿಜ ಮಹಿಳೆಯರ ಲೋಕವನ್ನು ಪ್ರವೇಶಿಸಲು ಶಕ್ತರಾಗುತ್ತಾರೆ. ದ್ವಿಜರು ಮತ್ತು ಶೂದ್ರರು ಪರಸ್ಪರರಲ್ಲಿ ಮಕ್ಕಳನ್ನು ಪಡೆಯಲು ಸಾಧ್ಯವಾಗುವ ಹಾಗೆ ಜಾತಿಯನ್ನು ಮರುವ್ಯಾಖ್ಯಾನಿಸುವುದಷ್ಟೇ ಅಲ್ಲದೇ ಅದು ಸಹಜವೆನ್ನುವಂತೆ ಗ್ರಹಿಸಿಕೊಳ್ಳಬೇಕಾದ ಅಗತ್ಯವಿದೆ" ಎನ್ನುತ್ತಾರೆ.

ಆದರೆ, ದ್ವಿಜರು(ಮೇಲ್ಜಾತಿಗಳು) ಜಾತಿ ವಿನಾಶ ಕಾರ್ಯಕ್ರಮವನ್ನು ಬೆಂಬಸುತ್ತಾರೆಂದೇನೂ ನಿರೀಕ್ಷಿಸಿರಲಿಲ್ಲ ಲೋಹಿಯಾ. ಮೇಲ್ಜಾತಿ ಗಂಡಸರು ಕೆಳಜಾತಿ ಮಹಿಳೆಯರ ವಿಮೋಚನೆಗಾಗಿ ಪ್ರಾಮಾಣಿಕವಾಗಿ ಕೆಲಸಮಾಡುತ್ತಾರೆಂಬ ನಂಬಿಕೆ ಇರಲಿಲ್ಲ ಲೋಹಿಯಾ ಅವರಿಗೆ. ಬಹುಸಂಖ್ಯಾತ ಮಹಿಳೆಯರಿಗೆ ಮೂಲಸೌಕರ್ಯಗಳೂ ಕೂಡ ಇಲ್ಲ. ಲೋಹಿಯಾ ಗಮನಿಸುವಂತೆ : "ಆಧುನಿಕ ವಸಿಷ್ಠರಿಗೆ ಬಹುಶಃ ನೀರು ಮತ್ತು ಶೌಚಾಯಲಗಳ ನರಕದ ಬಗ್ಗೆ ಗೊತ್ತಿಲ್ಲವೆಂದು ಕಾಣುತ್ತದೆ. ಗೊತ್ತಾದರೂ ಅದರ ಬಗ್ಗೆ ಚಿಂತಿಸುವುದಿಲ್ಲ. ಚಿಂತಿಸಿದರೂ ಅದು ತಂಬಾಕಿನ ಹೊಗೆಯ ಉಂಗುರಗಳೊಂದಿಗೆ ಮಾತ್ರ". ಮೇಲ್ಜಾತಿ ಗಂಡಸರು ಮೇಲ್ಜಾತಿ ಹೆಂಗಸರ ಸ್ಥಾನಮಾನವನ್ನು ಉತ್ತಮಗೊಳಿಸುವುದರ ಬಗೆಗೆ ಮಾತ್ರ ಕಾಳಜಿ ತೋರುತ್ತಾರೆ. ಆದ್ದರಿಂದ ಸಮಾನ ಅವಕಾಶವೆಂಬ ಉದಾರ ಸಿದ್ಧಾಂತವು ಕೆಳಜಾತಿ ಮಹಿಳೆಯರಿಗೇನೂ ಉಪಯೋಗಕ್ಕೆ ಬರುವುದಿಲ್ಲ. ಕೆಳಜಾತಿ ಜನರೇ ಕೆಳಜಾತಿ ಮಹಿಳೆಯರನ್ನು ಮೇಲೆತ್ತಲು ಸಾಧ್ಯ ಎನ್ನುವುದು ಲೋಹಿಯಾರ ಅಭಿಪ್ರಾಯ. "ಒಬ್ಬ ವಾಲ್ಮೀಕಿ, ಇತರ ೮೦% ಮಹಿಳೆಯರ ಬಗ್ಗೆ ಯೋಚಿಸಬಹುದಿತ್ತು. ಕತ್ತೆಚಾಕರಿ ಮತ್ತು ದಾರಿದ್ರ್ಯಗಳ ಕೂಪದಿಂದ ಅವರನ್ನು ಮೇಲೆತ್ತುವ ದಾರಿಯನ್ನವನು ಕಂಡುಹಿಡಿಯಬಹುದಿತ್ತು." ಹೀಗೆ ಲೋಹಿಯಾ ಮಹಿಳೆಯರು ಸ್ವಯಂ ಸಬಲೀಕರಣಗೊಳ್ಳುವ ವಿಚಾರದಲ್ಲಿ ನಂಬಿಕೆ ಇರಿಸಿದ್ದಾರೆಯೇ ಹೊರತು ಕೆಳಜಾತಿ ಮಹಿಳೆಯರನ್ನು ಮೇಲೆತ್ತಲು ಮೇಲ್ಜಾತಿಗಳ ಮೇಲೆ ಅವಲಂಬಿಸುವ ಪ್ರಾಯೋಜಿತ ಸಬಲೀಕರಣದ ವಿಚಾರದಲ್ಲಿ ಅಲ್ಲ.

**ಅಂತಿಮ ನಿರ್ಣಯಗಳು**

ಭಾರತೀಯ ಮಹಿಳೆಯರ ಸ್ಥಾನಮಾನವನ್ನು ವಿಶ್ಲೇಷಿಸುವ ಎಲ್ಲ ಸ್ತ್ರೀವಾದಿ ಚಿಂತನ ಧಾರೆಗಳಿಂದ ಲೋಹಿಯಾ ಬೇರೆಯಾಗಿ ನಿಲ್ಲುತ್ತಾರೆ. ಸ್ತ್ರೀ ಪುರುಷರಿಗೆ ಸಮಾನ ಅವಕಾಶಗಳನ್ನು ಕೊಡುವ ಗುರಿಯನ್ನು ಹೊಂದಿರುವ ಮತ್ತು ಮಹಿಳೆಯರ ಮೇಲಿನ ನಿರ್ಬಂಧಗಳು ಮತ್ತು ತಾರತಮ್ಯಗಳನ್ನು ಕ್ರಮೇಣ ಕಡಿಮೆ ಮಾಡುವ ಕಾನೂನಾತ್ಮಕ, ಶೈಕ್ಷಣಿಕ ಮತ್ತು ಇನ್ನಿತರ ಸುಧಾರಣೆಗಳನ್ನು ಪ್ರತಿಪಾದಿಸುವ ಉದಾರ ಆಧುನಿಕತಾವಾದಿ ಸಿದ್ಧಾಂತವನ್ನು ಲೋಹಿಯಾ ತಿರಸ್ಕರಿಸುತ್ತಾರೆ. ಭಾರತದಲ್ಲಿ ಉದಾರವಾದಿ ಕ್ರಮಗಳಿಂದ ನಿಧಾನವಾಗಿ ಮಹಿಳೆಯರ ಸ್ಥಾನಮಾನ ಉತ್ತಮವಾಗಬಹುದಾದರೂ ಮಹಿಳಾ ವಿಮೋಚನೆ ಮತ್ತು ಲಿಂಗ ಸಮಾನತೆ ಸಾಧಿಸಲು ಅಷ್ಟೇ ಸಾಲದು ಎಂಬುದು ಅವರ ದೃಢವಾದ ನಿಲುವು.

ಲೋಹಿಯಾರ ಸ್ತ್ರೀವಾದಿ ಚಿಂತನೆಗಳನ್ನು ಇನ್ನಾವುದೇ ನಿರ್ದಿಷ್ಟ ಸ್ತ್ರೀವಾದಿ ಧಾರೆ ಮತ್ತು ತತ್ವದೊಂದಿಗೆ ಸಮೀಕರಿಸುವುದು ಅಷ್ಟು ಸುಲಭವಲ್ಲ. ಜಾನ್ ವಿ. ಬಾಂಡ್ಯುರಾಂಟ್ ಅವರು ಲೋಹಿಯಾರನ್ನು 'ಅದಮ್ಯ ಭಾರತೀಯ ಸಮಾಜವಾದಿ' ಎಂದು ವರ್ಣಿಸುತ್ತಾರೆ. ಲೋಹಿಯಾರ ವಿಶಾಲ ದೃಷ್ಟಿಕೋನವು, ಸಂಪೂರ್ಣ ಲಿಂಗ ನ್ಯಾಯ(gender justice) ಮತ್ತು ಲಿಂಗಾಂಧತೆಯ(gender blindness) ನಿರ್ಮೂಲನೆಯನ್ನು ಖಾತ್ರಿಪಡಿಸುವ ಸರ್ವಸಮಾನತೆಯ ಸಮಾಜವಾದಿ ಸಮಾಜ ಸ್ಥಾಪನೆಯ ಗುರಿಯನ್ನು ಹೊಂದಿರುವಂತಹದ್ದು. ಲೋಹಿಯಾರ ಚಿಂತನೆಗಳಲ್ಲಿ ಮಹಿಳೆಯರ ಅಸ್ತಿತ್ವ, ಘನತೆ ಮತ್ತು ಸ್ವಾಯತ್ತತೆಗಳು ಸ್ಪಷ್ಟವಾಗಿ ಗುರುತಿಸಲ್ಪಟ್ಟಿವೆ. ಹಾಗೆಯೇ ಸಾಮಾಜಿಕ, ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಅಗತ್ಯಗಳು ಮತ್ತು ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಬೇಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ಮಹಿಳಾ ವಿಮೋಚನೆಯ ಅಗತ್ಯವನ್ನು ತಮ್ಮ ಚಿಂತನೆಗಳಲ್ಲಿ ಲೋಹಿಯಾ ದೃಢಪಡಿಸಿದ್ದಾರೆ. ಈ ಅರ್ಥದಲ್ಲಿ, ಲೋಹಿಯಾರ ಅಲೋಚನೆಗಳು ಊಳಿಗಮಾನ್ಯ ವಿರೋಧಿ, ಬಂಡವಾಳಶಾಹಿ ವಿರೋಧಿ ಮತ್ತು ಪಿತೃಸಂಸ್ಕೃತಿ ವಿರೋಧಿ. ಭಾರತೀಯ ಮಹಿಳೆಯರ ಕುರಿತ ಅವರ ಆಲೋಚನೆಗಳು ಸರ್ವಾಂಗೀಣವೂ ತೀಕ್ಷ್ಣವೂ ಆಗಿದ್ದು, ವಿಶೇಷವಾಗಿ ಜಾತಿವ್ಯವಸ್ಥೆ ಮತ್ತು ಪಿತೃಸಂಸ್ಕೃತಿಯೊಂದಿಗಿನ ಅದರ ನಂಟು ಮತ್ತು ವರ್ಗಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು ಲೋಹಿಯಾ. ಅವರ ಚಿಂತನೆಗಳು ಎಲ್ಲ ಸ್ಥಾಪಿತ ಸ್ತ್ರೀವಾದಿ ಸಿದ್ಧಾಂತಗಳನ್ನು ಮೀರಿದ ಅತ್ಯುತ್ಕೃಷ್ಟ ಪರಿಕಲ್ಪನೆಗಳಾಗಿದ್ದು, ನಿಸ್ಸಂದೇಹವಾಗಿ ಭಾರತದ ಸ್ತ್ರೀವಾದಿ ದೃಷ್ಟಿಕೋನವನ್ನು ಸಮೃದ್ಧಗೊಳಿಸುತ್ತದೆ.

ಲೋಹಿಯಾ ಅವರನ್ನು 'ಭಾರತೀಯ ಸಮಾಜವಾದಿ ಸ್ತ್ರೀವಾದಿ' ಎಂದು ನಾವು ಕರೆಯಬಹುದು. ಸಮಾಜವಾದವೆಂದರೆ ಸರ್ವಸಮಾನತೆಯ ನೆಲೆಗಟ್ಟಿನ ಮೇಲೆ ಸಮಾಜವನ್ನು ಮರುನಿರ್ಮಾಣ ಮಾಡುವುದೇ ಆಗಿದೆ. ಅದರಂತೆಯೇ, ಲೋಹಿಯಾ ಅವರ ಪರಿಕಲ್ಪನೆಯೂ ಕೂಡ. ಅವರು ಭಾರತೀಯ ಸಮಾಜದ ಬೇರುಮಟ್ಟದ ರಚನಾತ್ಮಕ ಮತ್ತು ಸಾಂಸ್ಕೃತಿಕ ಕಾಯಕಲ್ಪಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ.

(ಲೇಖನ ಕೃಪೆ: ***ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಫೆಬ್ರುವರಿ, ೧, ೨೦೧೪***)



**(ಲಕ್ನೋದ ಬಾಬಾ ಸಾಹೇಬ ಅಂಬೇಡ್ಕರ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಅಧ್ಯಾಪಕರಾಗಿರುವ ಲೇಖಕಿ ಜಯಾ ಶ್ರೀವಾಸ್ತವ ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳ ಬಗ್ಗೆ ಸಂಶೋಧನೆ ಕೈಗೊಂಡಿದ್ದಾರೆ.)**

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು




Dr. Jyothi's Health Care Pvt. Ltd.
21st Century Women Hospital

**ಡಾ. ಜ್ಯೋತೀಸ್ ಹೆಲ್ತ್ ಕೇರ್ ಪ್ರ. ಲಿ.**


# 22, 8ನೇ ಬ್ಲಾಕ್, ಡಾ. ರಾಜ್‌ಕುಮಾರ್ ರಸ್ತೆ, ಜೆಎಸ್‌ಎಸ್ ಲೇಔಟ್

ಶಕ್ತಿನಗರ ಅಂಚೆ, ಮೈಸೂರು-570 029

ದೂ: 0821-2475869/2475890

# ಕಾವ್ಯೋದ್ಯಾನ

## ಇಲ್ಲಿ



ಇಲ್ಲಿ ಸತ್ಯವನ್ನು ಬಲಿಗೊಡಬೇಕು
ತಾಂತ್ರಿಕ ವಾಸ್ತವತೆಗಾಗಿ
ಸತೀತ್ವವನ್ನು ರಕ್ಷಿಸಿಕೊಳ್ಳಲು
ಸೂಳೆಗಾರಿಕೆಗಿಳಿಯಬೇಕು

ಜಿಂಕೆಯಂಥಹ ಹೃದಯ ಕಾಪಾಡಲು
ನರಿಯಂಥ ಮನಸ್ಸನ್ನು
ಕಾವಲುಗಾರನಾಗಿ ನೇಮಿಸಬೇಕು


ಶಾಂತಿಗಾಗಿ
ಪ್ರಕ್ಷುಬ್ಧತೆಯನ್ನು ತಾಳಿಕೊಳ್ಳಬೇಕು

ಮುಗುಳು ನಗೆಗಾಗಿ
ಕಂಬನಿಗಳನ್ನು ಹರಿಸಬೇಕು
ಭಾವನಾತ್ಮಕತೆ ಉಳಿಸಿಕೊಳ್ಳಲು
ಕಲ್ಲಾಗಿ ಮಾರ್ಪಡಬೇಕು

ಹೆರಿಗೆ ಸುಲಭವಾಗಿದ್ದರೂ
ಸಿಝೇರಿಯನ್ ಮಾಡಿಸಿಕೊಳ್ಳಬೇಕು
ಗೌರವ ಸಂಭಾವನೆಗೂ
ಸೆರಗೊಡ್ಡಿ ಬೇಡಿಕೊಳ್ಳಬೇಕು

ಸ್ವಷ್ಟತೆಗಾಗಿ
ನೂರೆಂಟು ಗೊಂದಲಕ್ಕೀಡಾಗಬೇಕು
ಕಾವ್ಯಕ್ಕಾಗಿ ಕೋಗಿಲೆಯನ್ನು ಬಂಧಿಸಿ
'ಕಾ' 'ಕಾ' ಎನ್ನಬೇಕು.

**–ಚೆನ್ನವೀರ ಕಣವಿ**



ಚಿತ್ರ: ಸಿ. ರವೀಂದ್ರನಾಥ್

## ಕತ್ತಲ ಕನ್ನಡಿ

ಹೊತ್ತು ನಡೆವರು ಮುಳ್ಳಿನ ಹೊರೆ
ಹೆಜ್ಜೆ ಹೆಜ್ಜೆಗೂ ಮೈ ಚುಚ್ಚಿ, ಮನ ಚುಚ್ಚಿ
ಉರಿಯ ಆರದೇ ಕೂಡಿಟ್ಟು, ಕುದಿಸಬೇಕು
ಹಳೆಯ ಹಿಟ್ಟು ಭಿಕ್ಷದ ಅನ್ನ

ಕಾತರವಿಲ್ಲ ಬೇಸರವಿಲ್ಲ
ಎಣ್ಣೆಯಿಲ್ಲ ದೀಪವಿಲ್ಲ ಚಂದಿರನೂ
ಇಲ್ಲ, ಹಿಟ್ಟಿನ ಗುಟ್ಟು ತಿಳಿಯಲು
ಮುಟ್ಟಿದೆ, ಭಿಕ್ಷದ ಅನ್ನ ಚೆಲ್ಲಿತ್ತು



ವಾಸ್ತವಗಳ ಕೊಂದು ತಿಂದವರಾರು ?
ತಿಳಿದೂ ತಿಳಿಯದ ಕಬ್ಬಿಗರ ನಾಡಿನಲಿ
ದೇವರು, ದೊರೆಗಳು, ಕಳ್ಳರು–ಸುಳ್ಳರು
ಕುಲಗಳು–ಬಲಗಳು ಎಲ್ಲ ಖ್ಯಾತಿಯ ನೆಲೆಗಳು
ನಾನೂ ಕೇಡಿ ಇದರೊಳಗೆ
ಕೈಯಲಿ ಮೆಟ್ಟು ಕೆಲ ಘಳಿಗೆ !!

**–ರಮೇಶ್ ಹೆಚ್.ಕೆ.**

......

## ಕ್ಷಣ ರುಚಿಯ ಮಲರಂಬು



ಏನಾಗಿತ್ತು ಆ ಗಳಿಗೆ
ಎಲ್ಲಿತ್ತು ಅದು ಇಟ್ಟುಕೊಂಡಿತ್ತು ಹೇಗೆ
ಕ್ಷಣರುಚಿಯ ಮಲರಂಬು.

ಅವಳ ಹುಬ್ಬುಕುಣಿಕೆಯಲ್ಲಿ ಅವನ ಕಣ್ಣುಗಳ ಕಟ್ಟಿಹಾಕಿ
ತೋರಿಸಿತ್ತು ಅದು ಬಿಚ್ಚುತ್ತ ಅಂಗಾಂಗಗಳ,
ದಳದಳ ಬಿಡಿಸಿಕೊಂಡು ರೆಪ್ಪೆಕಟ್ಟು
ಜಾರಿಸಿತ್ತು ಅವನ ಕಣ್ಣುಗಳನ್ನು
ಅವಳ ಮೂಗಿನ ಜಾರುಬಂಡಿಯಿಂದ,
ಒಕ್ಕುಡಿತೆ ಮಕರಂದವನೊಪ್ಪಿಸಿಕೋ ಎಂಬಂತೆ
ಚಾಚಿತ್ತು ತುಟಿಯೆಸಳು:
ಏನಾಗಿತ್ತು ಆ ಹೊತ್ತು
ಎಲ್ಲಿತ್ತು ಅದು ಈಗ ಹೇಗಿತ್ತು.

ಒಲ್ಲಣಿಗೆಯ ಹಾಗೆ ಅಪ್ಪಿತ್ತು ಮೈಯನ್ನು ಆ ಕೈ
ಗಲ್ಲೆಗಟ್ಟುತ್ತ ಗಲ್ಲಗಲ್ಲ ಮೆಲ್ಲಮೆಲ್ಲನೆ
ನೀಳಕುತ್ತಿಗೆಯ ಬಳಸಿ
ಬಿಚ್ಚುಮೊಗ್ಗೆಯಂತೆ ಹೆಣ್ಣು ಅದುರುತ್ತಿತ್ತು ತೆರೆದು ಕಣ್ಣು,

ಸೃಷ್ಟಿಯು ಸೃಷ್ಟಿಯನ್ನೇ ಮುಟ್ಟುವ
ಆ ಗಳಿಗೆ ಏನಾಗಿತ್ತು
ಎಲ್ಲಿತ್ತು ಅದು ಇಟ್ಟುಕೊಂಡಿದೆ ಹೇಗೆ
ಕ್ಷಣರುಚಿಯ ಮಲರಂಬು.

**–ತೇಜಶ್ರೀ**

## ಕ್ಷಮಿಸಿಬಿಡು ವೇಮುಲ



ಸಹಿಸುವುದನ್ನು ಕಲಿಯುತ್ತ ಕಲಿಯುತ್ತ
ನಾನು ಅಸಹನೆಯನ್ನು ಅಡವಿಟ್ಟಿದ್ದೇನೆ
ರೋಷದಿಂದ ಬೀದಿಗಿಳಿಯಲಾರೆ

ಕಾರಣಗಳನ್ನು ಹುಡುಕುತ್ತಾ ಪರಿಣಾಮಗಳನ್ನು ಚಿಂತಿಸುತ್ತಾ
ಸಂವೇದನೆಯನ್ನು ಅಡವಿಟ್ಟಿದ್ದೇನೆ
ಕರಗಿ ಕಣ್ಣೀರಾಗಲಾರೆ

ಬದುಕನ್ನು ಗೆಲುವಾಗಿಸುತ್ತಾ
ಪ್ರಾಮಾಣಿಕತೆಯನ್ನು ಅಡವಿಟ್ಟಿದ್ದೇನೆ
ಆತ್ಮಸಾಕ್ಷಿಯನ್ನು ಮಾರಿಕೊಂಡಿದ್ದೇನೆ
ನಿನಗಿಂತ ಮೊದಲೇ ಸಮಾಧಿಯಾಗಿದ್ದೇನೆ
ನಿನ್ನಂತೆ ಹೊಳೆವ ನಕ್ಷತ್ರವಾಗಲಾರೆ
ಉರಿಯಾಗಿ ಸುಡಲಾರೆ
ಕ್ಷಮಿಸಿಬಿಡು ವೇಮುಲ !

ಚಿತೆಯ ಜ್ವಾಲೆಯ ಬಣ್ಣವ ವರ್ಣಿಸುತ್ತಾ
ಬೂದಿಯ ಮರೆಯಲ್ಲಿ ಕೆಂಡವ ಅರಸುತ್ತಾ
ಜನ ಮಾನವೀಯತೆಯನ್ನೇ ಅಡವಿಟ್ಟಿದ್ದಾರೆ...

**–ಕಾವ್ಯಶ್ರೀ ಎಚ್.**


# ಜೀವಯಾನದ ಎಸ್. ಮಂಜುನಾಥ್‌ರ ನಾಲ್ಕು ಕವಿತೆಗಳು



## ಕವಿತೆ ಕುರಿತು...

### ೧ ಅಪೂರ್ವ ಚೆಲುವೆ

ಯಾರೋ ಬರುತಿರುವಳು ಅಪೂರ್ವ ಚೆಲುವೆ
ಕಣ್ಣು ತುಟಿ ಕಟಿಯೆಲ್ಲ
ಪೂರ್ವ ಕವಿಗಳು ಬಣ್ಣಿಸಿದ ಹಾಗೇ
ಬರುಬರುತ್ತ ಇದೇನು
ಕೈಯಲ್ಲಿ ವಿಸ್ಕಿ ಗ್ಲಾಸು ಸಿಗರೇಟು
ಬಳಿ ಬಂದವಳು ಬಡ ಮುದಿಯೆ
ಗಾಳಿಗದುರುತ್ತಿರುವ ಹಣ್ಣೆಲೆ!



ಚಿತ್ರ: ಸಿ. ರವೀಂದ್ರನಾಥ್

ನಗು ಅವಳ ಕಣ್ಣಲ್ಲಿ–ಕೇಳುವಳು
ಮಗಾ ಏನು ಬೇಕು ಮಣ್ಣಿ ಬೇಕಾ
ಸಡಿಲಿಸುವಳು ರವಿಕೆ
ಆಸೆಭರಿತ ಕಣ್ಣಿಗೆ ಜೋತು ಬಿದ್ದ ಮೊಲೆ
ನಿಸರ್ಗ ತನ್ನದನೆಲ್ಲ ಸೆಳೆದ ಮೇಲೂ
ಆಕೆ ಅಪೂರ್ವ ಸುಂದರಿಯೇ


ಹೇಳುವಳು–ಭೂಮಿ ಹುಟ್ಟಿಂದಿಂದುವರೆಗಿನ
ಎಲ್ಲ ಕತೆ: ಸೀತೆ ದ್ರೌಪದಿ ಹೆಲೆನಳಾಗಿ
ತಳೆದೆಲ್ಲ ಅವತಾರ; ಎಷ್ಟೆಲ್ಲ ದಾಳಿಗೀಡಾಗಿಯೂ
ಪ್ರಾಣ ಕೊಂಕದಿರುವುದ

ಅವಳ ತೊಗಲಿನ ನಿರಿಗೆ ಮಡಿಕೆಗಳಲ್ಲಿ
ಹುದುಗಿರುವ ದಾಳಿಕೋರ ಕೂಸುಗಳನೆಲ್ಲ ತಕ್ಕೋ
ಕೊಡವುವಳು
ಭಯದಿಂದ ಮರಗಟ್ಟಿ ಏನೂ ಕೇಳದಾದೆ ಅವಳಿಂದ
ಎಲ್ಲ ಮಾಸಿದ ಮೇಲೂ ಅವಳ ಮಾಸದಿಹ ನಗೆಯೊಂದ

### ೨. ಕವಿತೆಯೊಂದಿಗೆ ಮನಸ್ತಾಪ

ಸಣ್ಣ ಹಣ ಸಣ್ಣ ಮನೆ ಸಾಲದೆಂದು
ತುಟಿ ಮುಖಕೆ ಬಣ್ಣ ಬಳಕೊಂಡು
ಬೀದಿಗಿಳಿವೆ

ಬರಿ ಮಾತು
ನಾಲಗೆ–ಕರುಳು ನಂಟಿರದ
ಗಾಳಿ ಸದ್ದು;
ನಗು ವೈಯಾರ
ಬಲೆ ಬೀಸುವ ಚಾಲಾಕು



ಚಿತ್ರ: ರೂಪ ಹಾಸನ

ಊರಿಗೇ ದೊಡ್ಡಾಕೆ ಪುಡಾರಿಗಳ ನಾಯಿ
ವೇದಿಕೆಯ ಭಾಷಣ
ಮೌನದ ಬಗ್ಗೆ!
ಮಠದ ಸ್ವಾಮಿಯೊಂದಿಗೂ ಸರಸ
ವಾರೆ ನೋಟ
ನನ್ನ ತೊರೆವೆ
ನಿನ್ನನ್ನೆ ತೊರೆವೆ
ನಿನ್ನಿರವಿಗೇ ಹೇವರಿಸಿ
ಜಗದ ಹೆಸರಿಗೆ ಹಾತೊರೆವೆ
ನಿನ್ನ ಬಿಟ್ಟು ನೀನು ಹೋಗೋದಾದರೂ ಎಲ್ಲಿಗೆ?

### ೩ ಕವಿತೆ-ಸಮಾಜ

ಕವಿತೆ ಬರೆಯುವುದ ನಿಲ್ಲಿಸಿಬಿಟ್ಟೆ
ಮತ್ತೊಮ್ಮೆ ಈ ಮಾತ ಕೇಳಿದೆ
ಕವಿತೆಯಿಂದ ಜನರ ಬದಲಾವಣೆ ಅಸಾಧ್ಯ
ಅದು ಬುಲ್ಡೋಜರ್‌ನಿಂದಾದರೂ ಆಗುವುದೇ?

ದೆವ್ವಕ್ಕೆ ಉಪದೇಶ ಮಾಡಹೊರಟವರು
ಗೋಣು ಮುರಿಸಿಕೊಂಡರೋ ಹೊರತು
ಸರಪಳಿ ಕಟ್ಟಿ ತಂದವರಿಲ್ಲ
ಜನರ ಮುಂದೆ ಹೋದ ನಿಮ್ಮ ಕವಿತೆಗೇ ಏನಾಗಿದೆ
ನೋಡಿ!

ಜನರ ಮುಂದೆ ಹೋಗುವವ ಭಿಕಾರಿ
ಜನರಿಗಾಗಿ ಕಾದವಳು ವೇಶ್ಯೆ;
ಈ ಅಕ್ಷತ ಚೆಲುವೆಯ ಮಹಲಿನ ಹೊರಗೆ ಹಗಲಿರುಳು
ಕಾಯುವುದು ಜನತೆ
ಕೋಲ್ಮಿಂಚಿನೊಂದು ಕಣ್ನೋಟಕ್ಕೆ, ಸಣ್ಣ ಮುಗುಳ್ನಗೆಗೆ

### ೪ ಕಾವ್ಯಪ್ರಾಣ

ಅವನ ಹಾಸಿಗೆ ಮೇಲೆ ಹದ್ದು
ಹಾರಾಡುವಾಗಲೂ
ಕವಿತೆಯ ಸಾಲೊಂದ ಧ್ಯಾನಿಸುವುದು
ಆಶ್ಚರ್ಯವೆನಿಸಿದರು ಸಹಜ
ತಳದಲ್ಲಿ ಕೊನೆಗುಟುಕು ಗಂಜಿ ಇರುವರೆಗೆ
ಕವಿತೆಯಭಿವ್ಯಕ್ತಿ ಅಂಥವರಿಗೆ–
ಜೀವನಪ್ರೀತಿಗೆ ವ್ಯಂಗ್ಯಕ್ಕೆ
ವಿಷಾದಕ್ಕೆ ಮರುಕಕ್ಕೆ ಎಲ್ಲಾ

ಹಾಗಲ್ಲದಿನ್ನೇಗೆ?
ಕವಿತೆಯೆಂಥಾ ಕವಿತೆ–ಅದು
ಒಂದುಸಿರ ಹೆಚ್ಚಿಸದಿದ್ದರೆ?

(ಶಾಂತವೇರಿ ಗೋಪಾಲಗೌಡರು ಹಾಸಿಗೆ ಹಿಡಿದಿದ್ದಾಗ ಅವರನ್ನು ನೋಡಲು ಬಂದ ಅವರದೇ ಹೆಸರಿನ ಕವಿ ಗೋಪಾಲಕೃಷ್ಣ ಅಡಿಗರು 'ಹೇಗಿದೀಯಾ ಗೋಪಾಲ್?' ಎಂದಿದ್ದಕ್ಕೆ, ಗೌಡರು ಅಡಿಗರ ಕವಿತೆಯ ಸಾಲನ್ನೇ ಹಿಡಿದು 'ಕುಟುಕು ಕುಟುಕಿನ ಸಫಲ ನಾಟ್ಯ' ಎಂದರಂತೆ!)

# ಚುಕ್ಕಿ ಗೆರೆ

ಕಥೆ

–ಬಿ.ಟಿ. ಜಾಹ್ನವಿ

**ಯಾ**ವತ್ತಿನ ಹಂಗೆ ಇವತ್ತೂ ಅವ್ವು ಅದೇ ಜಾಗದಲ್ಲಿ, ಅದೇ ಬಟ್ಟೆಗಂಟು ಮುಂದೆ ಇಟ್ಗಂಡು, ಮಾಮೂಲಿನಂಗೆ ತನ್ನ ಹೆಗಲ್ಮೇಲೆ ಯಾವಾಗ್ಲೂ ಜೋತಕ್ಕಳೊ ಜೋಳಿಗೆಯಲ್ಲಿ ಇಟ್ಗಂತಿದ್ದ ನೂರು ಪೇಜಿನ ನೋಟ್ ಪುಸ್ತಕ ಮತ್ತು ಬಣ್ಣ ಬಣ್ಣದ ಸ್ಕೆಚ್ ಪೆನ್ನುಗಳ ಕವರ್‍ನ್ನ ಗಂಟಿನ ಮೇಲಿಟ್ಟುಕೊಂಡು ಕುಂತಿದ್ಲು. ನಂದಾ ಮಾತ್ರ ಯಾವತ್ತಿನಂಗಲ್ಲದೆ ಇವತ್ತು ಆಟೋ ಅವಳಿಂದ ನೂರಡಿ ದೂರನೇ ನಿಲ್ಲಿಸಿ, ಪುಟ್ಪಾತ್ ಮೇಲೆ, ಜನಗಳ ನಡುವೆ ನುಸುಳಿ ನುಸುಳಿ ಅವ್ವು ಕುಂತಿದ್ದ ಜಾಗ ಸಮೀಪಿಸಿದ್ಲು ಮೆಲ್ಲಗೆ. ಅವ್ವು ಮಾತ್ರ ತನ್ನ ಮುಂದಿದ್ದ ಪುಸ್ತಕದಗೆ ಪೂರ ಮಗ್ನೆ. ಕೆಂಪು ಬಣ್ಣದ ಸ್ಕೆಚ್‌ಪೆನ್ ಕೈಯಾಗಿಡ್ಡು, ಅದನ್ನ ಗಲ್ಲಕ್ಕೊತ್ತಿ ಕುಂತು ಏನೋ ಗಹನವಾದ್ದು ಯೋಚಿಸ್ತಿರಂಗೆ ಕಾಣ್ತಿತ್ತು ಅವ್ವು ಕುಂತ ಸ್ಟೈಲು. ನಂದಾನೂ ಅಷ್ಟೇ ಸೂಕ್ಷ್ಮದಲ್ಲಿ ಮಂದ ಹೆಜ್ಜೆ ಇಟ್ಗಂಡ್ಬಂದು ಅವ್ವ ಹಿಂದಿನಿಂದ ಹತ್ರಕ್ಕೋಗಿ ಇನ್ನೇನು ನಿಂತ್ಕಬೇಕು

"ಯಾಕೆ ಇವತ್ತು ಲೇಟೂ ?" ಅನ್ನೋ ಪ್ರಶ್ನೆ ಬಂತು ಅವ್ವಿಂದ ಈ ಕಡೆ ತಿರುಗ್ದೆ, ತಲೆಯೆತ್ತಿ ಮುಖನೂ ನೋಡ್ದೆ .

'ಅಲೇ ಇವ್ಳಾ, ಎಷ್ಟ್ ನಿಧಾನಕ್ಕೆ ನೆಡ್ಕಂಡ್ಬಂದ್ರೂ ಅದು ನಾನೇ ಅಂತ ಹೆಂಗ್ ಕಂಡಿಡಿದ್ಲು ಈಕೀ..!'

ಇದು ನಂದಾಗೆ ಭಾಳ ಸೋಜಿಗದ ವಿಷ್ಯ. ಇವಳ ಪರಿಚಯ ಆಗಿ, ಇವಳನ್ನ ನೋಡಕೆ ಬರಾಕತ್ತಿದ್ದಾಗಿಂದ ಈ ಪ್ರಶ್ನೆ ಆಕೀನ ಕಾಡ್ತಾನೇ ಇತ್ತು. ಇದೇನು ಮೊದಲ ಸಲ ಅಲ್ಲ. ಅದೆಷ್ಟ್ ಸರ್ತಿ 'ನಿಂಗೆಂಗ್ ಗೊತ್ತಾಗ್ತೇತಿ ನಾನೇ ಬಂದೀನಂತ?' ಅಂತ ಕೇಳಿದ್ರೂ ಅವ್ವು ಉತ್ತರ ಮಾತ್ರ ಮೌನ.

ಮೊದ್ಮೊದ್ಲಿಗೆ ನಂದಾ ಇವ್ವು ಕುಂದ್ರುತಿದ್ದ ಜಾಗದತ್ರನೇ ಆಟೋ ನಿಲ್ಲಿಸ್ತಿದ್ಲು. ಆಗ್ಲೂ ಅವ್ವು ತಲೆಯತ್ತದಂಗೇ ಬಂದದ್ದು ನಂದಾನೇ ಅಂತ ಕಂಡಿಡಿಯದು ನೋಡಿ ಪರೀಕ್ಷೆ ಮಾಡ್ಬೇಕಂತ್ಲೇ ಇತ್ತಿತ್ತಲಾಗೆ ಟೈಮ್ ತಪ್ಪಿಸಿ, ಹಿಂಗೆ ಆಟೋ ಎಲ್ಲೋ ದೂರ ನಿಲ್ಸಿ ಅವ್ವಗೆ ಗೊತ್ತಾಗದಂಗೆ ಬಂದ್ರೂ, ಪಕ್ಕಕ್ಕೋಗುತ್ಲು ಅದು ನಂದಾನೇ ಅಂತ ಗುರ್ತು ಹಿಡ್ದು ತಲೆಯತ್ತದಂಗೇ, ಚೂರೂ ಮಿಸುಗದಂಗೇ

'ಬಂದ್ಯಾ?' ಅಂತನೋ 'ನಿನ್ನೆ ಬರ್ಲೇ ಇಲ್ಲಾ...' ಅಂತನೋ ಒಟ್ಟಲ್ಲಿ ನಂದಾನ ಗುರ್ತು ಹಿಡಿದು ಏನಾದ್ರು ಒಂದು ಪ್ರಶ್ನೆ ಎಸ್ದೇ ಎಸಿತಿದ್ಲು. ಇದೇನು ಭಾಳ ಹಚ್ಗಂಡಿರೋ ಪ್ರೀತಿನೋ, ನಂದಾ ಬಗ್ಗಿನ ಗುಮಾನಿಯೋ ಅಥವಾ ತಾನು ತನ್ನ ಬಗ್ಗೇನೆ ವಹಿಸ್ತಿರೋ ಎಚ್ಚರಿಕೆನೋ ನಂದಾಗೆ ತಿಳೀದಂಗಾಗಿತ್ತು.

'ಇಲ್ಲಾ.., ಇವತ್ತು ಇವಳನ್ನು ಹೇಳೋವರ್ಗೂ ಬಿಡಲ್ಲ' ಅಂತ ಮನಸಲ್ಲೇ ಅಂದ್ಕಂಡು ಹೋಗಿ ಸೀದಾ ಅವ್ವ ಮುಂದೆ ಕುಂತು

'ಶಾರ್‍ದಾ...' ಅಂತ ಕರದ್ಲು. ಅವ್ವು ತಲೆ ಎತ್ತಿ ಕುತ್ತಿಗೆ ಆ ಕಡೀಗ್ ಈ ಕಡೀಗ್ ತಿರುಗ್ಸಿ ಯಾರನ್ನೋ ಹುಡುಕೋಳಂಗೆ ಮಾಡಿದ್ಲು.

"ಸಾಕ್ಸಾಕು ಭಾಳ ನಾಟ್ಕ ಮಾಡ್ಬೇಡ ನಾನು ನಿನ್ನೇ ಕರ್ದಿದ್ದು" ಅಂದ್ಲು ನಂದಾ. 'ಸ್ಸರೀ ಹೇಳು' ಅನ್ನೋ ಹಂಗೆ ಮುಖ ಮಾಡಿ, ಕಣ್ಣಗಲ್ಸಿ, ತುಟಿ ಹಿಗ್ಸಿ, ಗದ್ದಕ್ಕೆ ಕೈಯೂರಿ, ಮುಖ ಮುಂದಕ್ಕೆ ಮಾಡಿ ಕುಂತ್ಲು ಶಾರದ. "ಆಹಾಹಹಹ.. ಇದಿಕ್ಕೇನೂ ಕಮ್ಮಿಯಿಲ್ಲಾ..." ನಕ್ಕಂತ ಅಂದು ನಂದ " ಶಾರ್‍ದಾ .." ಅಂತ ಏನೋ ಹೇಳಕೋದ್ಲು. ತಕ್ಷಣ ಇವ್ವ ಮಾತು ಕತ್ತರ್ಸಿ "ನಂಗೊತ್ತು ನಿಂಗೆ ಶಾರದ ಅಂದ್ರೆ ಬಹಳ ಇಷ್ಟ ಅಂತ..." ಅಂದ್ಲು ಶಾರದ ಕುಂತ ಸ್ಟೈಲೂ ಬದಲಾಯಿಸ್ದಂಗೆ.

"ಹೂನವ್ವ ಇಷ್ಟನೇ.. ಅದನ್ನ ತಿಳ್ಕಳಕೆಷ್ಟು ತಲೆ ಕೆಡಿಸ್ಕಂಡೀನಂತ ನಂಗೇ ಗೊತ್ತು.." ಅಂತ ತುಸ ನಗುಗೆ ಹುಸಿ ಕೋಪ ಬೆರಸಿ ಹೇಳಿದ್ಲು ನಂದಾ.

ಅದು ನಿಜವೇ. ಅವಳ ಹೆಸರನ್ನ ತಿಳ್ಕಳಕೆ ನಂದಾ ಪಟ್ಟ ಪಾಡು ಅಷ್ಟಿಷ್ಟಲ್ಲ. ಅವಳ ಗಂಡ ಜಗದೀಶನ ಸ್ನೇಹಿತ ಬಸವರಾಜು ಅಂತ. ಅವರದು ದಿನಸಿ ಅಂಗಡಿ ಹರಳೆಣ್ಣೆ ಬಸಣ್ಣ ರಸ್ತೆಯಲ್ಲಿ. ಆ ದಿನಸಿ ಅಂಗಡಿಯ ಮುಂದಿನ ಫುಟ್ಪಾತೇ ಶಾರದ ದಿನಾಲು ಬಂದು ಕುಂದ್ರುತ್ತಿದ್ದ ಜಾಗ. ಒಂದಿನ ಅವರಂಗ್ಡಿಗೆ ಹೋದಾಗ ಬಸವರಾಜು ತಮ್ಮ ಮುಂದಿದ್ದ ಮೇಜಿನ್ಮೇಲೆ ಒಂದಷ್ಟು ಚಾಕಲೇಟ್



ಚಿತ್ರ: ಸಂಘಮಿತ್ರೆ

ಇಟ್ಗಂಡು ಯಾರ್ಗೋ ಕಾಯ್ತಾ ಇರೋ ಹಂಗಿತ್ತು. ಅದನ್ನ ಗಮನಿಸಿದ ಜಗದೀಶ್ ಮಾತಿನ ಮಧ್ಯದಲ್ಲಿ ಕೇಳ್ದ "ಯಾರೀಗ್ ಕಾಯಾಕತ್ತೀಲೆ ಇಷ್ಟೊಂದ್ ಚಾಕಲೇಟ್ಸ್ ಇಟ್ಗಂಡು ..." ಅಂತ.

ಗಂಡನ ಮಾತು ಕೇಳಿ ನಂದಾಗೂ ಕುತೂಹಲ. ಅವ್ಳೂ ಗಂಡನ ಮಾತಿಗೆ ದನಿ ಜೋಡಿಸಿದ್ಲು, "ಹೌದು ನಾನೂ ಆಗಿಂದಾ ನೋಡಕತ್ತೀನಿ.." ಅಂತ.

"ಹೇ! ಅಂಥದ್ದೇನಿಲ್ಲಪ. ಇಲ್ಲಿ ಒಬ್ಳು ಹುಚ್ಚಿ ಬರ್ತಾಳೆ ಆಕೀಗೆಂತ ಇಟ್ಗಂಡೀನಿ.." ಅಂದು "ಇಲ್ಲೇ ನಮ್ ಅಂಗ್ಡಿ ಮುಂದೇನೇ ಕುಂತಿರ್ತಾಳೆ.. ದಿನಾ ಬಂದು ಒಯ್ತಳೆ.. ಆಕಿನ ಭಾಳ ಹೊತ್ತು ಇಲ್ಲಿ ನಿಲ್ಲಿಸ್ಕಂಡ್ರೆ ನಮ್ ಗಿರಾಕಿ ಬರಲ್ಲಾ. ಅದುಕ್ಕೆ ತಗ್ದು ಇಟ್ಗಂಡು ಬಂದ್ ತಕ್ಷಣಕ್ಕೆ ಕೊಟ್ಬಿಟ್ರೆ ತಗಂಡ್ ಸುಮ್ನೆ ಹೋಗ್ತಾಳೆ...." ಅಂದ್ರು ಬಸವರಾಜು.

ನಂದಾ ಕುತೂಹಲ ಆಗ ನಿಜಕ್ಕೂ ಕೆರ್‍ಳಿತ್ತು. ಹುಚ್ಚಿ ಅಂತಾರೆ, ದಿನಾ ಚಾಕಲೇಟ್ ತಗಳಕ್ಕೆ ಬರ್ತಾಳೆ ಅಂತಾರೆ.. ಅಂತ ಮನಸಲ್ಲೇ ಯೋಚಿಸಿ "ಯಾರವ್ಳು? ದಿನಾ ಚಾಕಲೇಟ್ ಕೊಡ್ಲೇಬೇಕಾ?"ಅಂತ ಕೇಳಿದ್ಲು.

"ಪಕ್ಕಾ ಯಾರಂತ ಗೊತ್ತಿಲ್ಲ ನಂದಾವ್ರೇ. ಆದ್ರೆ ಇದೇ ಊರ್ನೋಳು ಅಂತಾರೆ ಕೆಲವ್ರು. ಬೆಳ್ಗೆ ಹತ್ತು ಗಂಟೆಗೆ ಬಂದು ಒಂದು ಗಂಟೆ ಮಟ ಕುಂದ್ರುತಾಳೆ. ಮತ್ತೆ ಮೂರ್ಗಂಟೆಗೆ ಬಂದು ಆರೇಳ್ಗಂಟೆತನ ಇರ್ತಾಳೆ. ಮಧ್ಯ ಎಲ್ಲೋಕಳೆ, ಏನ್ ಮಾಡ್ತಾಳೆ ನಮ್ಗೊತ್ತಿಲ್ಲ. ಆಕಿ ಹತ್ರ ಯಾವಾಗ್ಲೂ ಒಂದು ದೊಡ್ಡ ಬಟ್ಟೆಗಂಟು, ಬಗಲಗೆ ಒಂದು ಜೋಳಿಗೆ ಇರ್ತೇತೆ. ಆ ಜೋಳಿಗ್ಯಗೆ ನೂರು ಪೇಜಿನ ಒಂದು ನೋಟ್ಬುಕ್ಕು ಮತ್ತೆ ಬಣ್ಬಣ್ಣದ ಸ್ಕೆಚ್‌ಪೆನ್ನುಗಳಿರೋ ಒಂದು ಕವರ್‍ರು. ನೀವ್ವ್ಯಾವಗನ ನೋಡ್ರಿ ತನ್ಮುಂದೆ ಗಂಟು ಇಟ್ಗಂಡು, ಅದರ ಮ್ಯಾಲೆ ಆ ಬುಕ್ಕು, ಸ್ಕೆಚ್‌ಪೆನ್ನು ಇಟ್ಗಂಡು ಏನೋ ಬರ್ಕಂತಿರ್ತಾಳೆ ತನ್ನ ಪಾಡಿಗೆ ತಾನು. ರಂಗೋಲಿ ಬಿಡಿಸ್ತಾಳೆ ಅಂತ ನಮ್ ಅಂಗಡಿ ಹುಡ್ಗಿ ಗೌರಿ ಹೇಳ್ತಿದ್ಲು. ಹೌದು, ದಿನಾ ಚಾಕಲೇಟ್ ತಗಂತಾಳೆ."

"ತಗಳ್ತಳೆ ಅಂದ್ರೇ...?" ಅಚ್ಚರಿಯಿಂದ ಕೇಳಿದ್ಲು ನಂದ.

"ಯಾವತ್ತೂ ಆಕಿ ಪುಕ್ಕಟೆ ಚಾಕಲೇಟ್ ತಗಂಡಿಲ್ಲ ನೋಡ್ರಿ. ಒಂದು ರುಪೈ ಕೊಡ್ತಾಳೆ" ಅಂದ್ರು ಬಸವರಾಜು.

"ಹೌದಾ ನೋಡಕೆಂಗಿದಾಳೆ?" ನಂದಾದು ಅದೇ ಕುತೂಹಲ.

"ಭಾಳ ಚನಾಗದಾಳೆ ಬೆಳ್ಳಗೆ ತೆಳ್ಳಗೆ. ಒಂದು ನಲವತ್ತು ಇರ್ಬೋದು ವಯಸ್ಸು. ಮೂರ್ತಿಂಗ್ಳು ಆಗೇತಿ ಬರಾಕತ್ತಿ. ಆದ್ರೆ ಇದುವರ್ಗೂ ಯಾರಿಗೂ ತೊಂದರೆ ಕೊಟ್ಟಿಲ್ಲ ಪಾಪ. ತನ್ ಪಾಡಿಗೆ ತಾನು ಏನೇನೋ ಗೀಚ್ತಾಳೆ, ಮಾತಾಡ್ಕಂತಾಳೆ ಎದ್ದದೇ ಹೋಗ್ತಾಳೆ.." ಬಸವರಾಜು ಹೇಳಿದ್ಕೇಳಿ ಜಗದೀಶ್ಗೂ ಕೆರಳಿತ್ತು ಕುತೂಹಲ.

"ಮತ್ತಕೀದ್ ಊಟ ಉಪಚಾರ...?" ಅಂತ ಕೇಳ್ದ. "ಇಲ್ಲೇ ಎದುರ್ಗಡೆ ಇರೊ ಹೋಟಲ್ನೋರು ದಿನಾ ಒಬರೊಬ್ರು ತಂದು ಕೊಡ್ತಾರೆ.. ಇಲ್ಲಾ ಇವಳೇ ಅಲ್ಲಿಗೋಗ್ತಳೆ. ಅಲ್ಲೂ ಅಷ್ಟೆ ಒಂದು ರುಪ್ಯೆ ಕೊಟ್ಟೇ ಮುಂದಿನ್ಕೆಲ್ಸ.."

"ಅಂದ್ರೇ ಒಂದೇ ರುಪಾಯಿಗೆ ಎಲ್ಲಾ ಕೊಡ್ತಾರಾ?" ಮತ್ತೆ ಜಗದೀಶನ ಕುತೂಹಲದ ಪ್ರಶ್ನೆ ಬಸವರಾಜು ಉತ್ತರಕ್ಕೆ.

"ಮೊದ್ಮೊದ್ಲು ಯಾರೂ ಏನೂ ಕೊಡ್ತಿರ್ಲಿಲ್ಲಾ. ನಮ್ಮಂಗಡಿಗೆ ಬಂದು ಎರಡು ರುಪ್ಯೆ ಕೊಟ್ಟು ಚಾಕಲೇಟ್ ಕೇಳಿದ್ಲು. ಒಂದು ಕೊಟ್ಟೆ ಫಸ್ಟ್ ಡೇ. ಎರಡ್ಮೂರು ದಿನ ಆದ್ಮೇಲೆ ಪಾಪ ಅನ್ಸಿ ಎರಡು ಕೊಟ್ಟೆ. ಉಹೂಂ ಇಸ್ಕಳ್ಲಿಲ್ಲಾ... ಒಂದೇ ಒಯ್ದುದ್ದು. ನೋಡನಂತ ಗೌರಿ ಹತ್ರ ದುಡ್ಡು ವಾಪಸ್ ಕಳಿಸ್ದೆ. ಗೌರಿ ಅವ್ಳು ಗಂಟಿನ್ಮೆಲೆ ಇಟ್ಬಂದ್ಲು. ಹಿಂದ್ಗಡಿಗೇ ಬಂದು ಆ ದುಡ್ಡನ್ನು ಈ ಟೇಬಲ್ ಮ್ಯಾಲಿಟ್ಟು ಹೋದ್ಲು. ಹಿಂಗೆ ಎಲ್ಲರೂ ಆಕೀ ಸ್ವಭಾವ ನೋಡಿ ಏನಾರ ಕೊಟ್ಟೇ ಕೊಡ್ತಾರೆ. ಎಲ್ಲಗ್ರೂ ಎಲ್ಲದಕ್ಕೂ ಆಕಿ ಮಾತ್ರ ಕೊಡದು ಒಂದೇ ರುಪ್ಯೆ. ಒಟ್ನಗ್ನೋಡಪ ಇಲ್ಲಿತನ ಯಾರತ್ರನೂ ಏನೂ ಪುಕ್ಸಟ್ಟೆ ಇಸ್ಕಂಡಿಲ್ಲಾ ಆಕಿ.."

ಬಸವರಾಜ್ ಹೇಳಿದ್ದೆಲ್ಲಾ ಕೇಳಿದ ಮೇಲೆ "ಹೌದು ಆಕಿ ಯಾರು? ಆಕೀನ ಹುಡುಕ್ಕಂಡು ಯಾರೂ ಬಂದಿಲ್ವಾ?" ನಂದಾ, ಜಗದೀಶ್ ಇಬ್ರೂ ಒಟ್ಟಿಗೇ ಕೇಳಿದ್ರು.

"ಉಹೂಂ ಇದುವರ್ಗೂ ಯಾರೂ ಬಂದಿಲ್ಲಾ. ಇಲ್ಲಿಗ್ಬರಕೂ ಮುಂಚೆ ರಾಯರ ಮಠದತ್ರ ಎಲ್ಲೋ ಇದ್ಲಂತೆ. ಅಲ್ಲಿ ಕೆಲವ್ರು ಹೇಳೋ ಪ್ರಕಾರ ಈಕಿಗೆ ಮದ್ವಿ ಆಗೇತಿ.. ಗಂಡ ಮಕ್ಳೂ ಇದಾರೆ.. ಒಬ್ಬ ಅಣ್ಣ, ಅತ್ತಿಗೇನೂ ಇದಾರೇ.. ಆದ್ರೆ ಯಾರೂ ಈಕಿನ ಸೇರಲ್ಲಂತೆ. ಗಂಡ ಬ್ಯಾರೆ ಮದ್ವಿ ಆಗೇನೇ ಅಂತಾರೆ. ಇನ್ನು ಅಣ್ಣ ಅತ್ಗಿ ಯಾರು, ಎಲ್ಲಿದರೇ ಗೊತ್ತಿಲ್ಲಾ ಅಂತಾರಂತೆ..."

"ಅಯ್ಯೋ ಪಾಪ.." ನಂದಾ ಮನಸ್ಸು ಸಣ್ಣಗಾಗಿತ್ತು. "ಮತ್ತೆ ರಾತ್ರಿ ಹೊತ್ತು ಎಲ್ಲಿರ್ತಾಳೆ? ಎಲ್ಲಿ ಮಲ್ಗತಾಳೇ?" ಅಂತ ಕೇಳಿದ್ಲು.

ಜಗದೀಶ ತಕ್ಷಣ "ಜತಿಗೇ ಕರ್ಕಂಡ್ಬಂದು ಇಟ್ಗಳ ಪ್ಲಾನ್ ಇಲ್ಲಾ ತಾನೇ" ಅಂದಿದ್ದ ನಕ್ಕಂಡು.

ಬಸವರಾಜೂ ನಕ್ಕಿದ್ರು. "ಅಯ್ಯೋ ಕುತೂಹಲ ಕಣ್ರೀ.." ಅಂದಿದ್ಲು ನಂದಾ. ಅದು ಗೊತ್ತಾಗೇ ಬಸವರಾಜು ಡಿಟೇಲ್ಸ್ ಹೇಳ್ತಿದ್ರು.

"ರಾಯರ ಮಠದ ರಸ್ತೆಗೆ ಒಂದು ಅಪಾರ್ಟ್ಮೆಂಟ್ಯೆತೆ ಅಲ್ಲೇ ಮಲ್ಗತಾಳಂತೆ. ಆ ಅಪಾರ್ಟಮೆಂಟಿನ ಓನರ್ರು ಬರ್ತಿರ್ತಾರೆ ಇಲ್ಲಿಗೆ. ಅಲ್ಲೇ ಪಾರ್ಕಿಂಗ್ನಗೆ ಮಲ್ಗಿ ಬೆಳ್ಗೆದ್ದು ಬರ್ತಾಳಂತೆ. ಅಲ್ಲೂ ಏನೂ ತೊಂದ್ರಿಲ್ಲ, ಇನ್ನೂ ಉಪಕಾರನೇ.. ಯಾಕಂದ್ರೆ ಈಕಿನಲ್ಲಿ ನೋಡಿ ಯಾರೂ ಬಿಲ್ಡಿಂಗ್ ಹತ್ರ ಸುಳಿಯಲ್ಲಂತೆ.. "

ಬಸವರಾಜು ಮಾತ್ಕೇಳಿ ಜಗದೀಶ ಜೋರಾಗಿ ನಕ್ಕು "ಸೆಕ್ಯುರಿಟಿ ಪ್ರಾಬ್ಲಮ್ಮೇ ಇಲ್ಲಲಾ ಮಸ್ತಾತು.." ಅಂದು "ನಡಿ ಹೊಂಡನ.." ಅಂತ ಎದ್ದು ಹೊರಟ ಸಾಕಾಗಿ. ಆದ್ರೆ ನಂದಾಗೆ ಹಂಗಲ್ಲ. ಅವ್ಳ ಮುಖದಲ್ಲಿದ್ದ ಭಾವನೆಗಳ್ನ ಓದಿದೋರಂಗೆ ಬಸವರಾಜು "ನೀವು ಅವ್ಳು ಇರೋ ಟೈಮಲ್ಲಿ ಬಂದ್ರೆ ಇಲ್ಲೇ ಇರ್ತಾಳೆ ನೋಡ್ಬಹುದು...." ಅಂದ್ರು.

"ಹೇ ತಗಿಯೋ ಮಾರಾಯ ನೋಡಿ ಮಾಡದೇನ್ಯೆತೆ.." ಅಂದು, ನಂದಾ ಕಡೀಗ್ ತಿರ್ಗಿ "ನಡೀ ನಡೀ ನೀನೆನ್ ಸಮಾಜಸೇವಕಿ ಅಲ್ಲಾ, ನಿನಿಗ್ಯಾರು ಮೆಡಲ್ಲೂ ಕೊಡಲ್ಲ.." ಅಂತ ಲೇವಡಿ ಮಾಡ್ಕಂಡು ಹೊರ್ಟ ಜಗದೀಶ್. ಆದ್ರೆ ನಂದಾ ಮನಸ್ನಲ್ಲಿ ಬೇರೇನೇ ಇತ್ತು.

ಮಾರನೇ ದಿನ ಜಗದೀಶ ಕೆಲಸಕ್ಕೆ ಹೋಗದನ್ನೇ ಕಾದು, ಬೇಗ್ಬೇಗ ಕೆಲ್ಸ ಮುಗ್ಸಿ ಎರಡೂವರೆಗೆಲ್ಲಾ ಮನೆ ಬಿಟ್ಟಿದ್ಲು ನಂದ. ಮೂರಕ್ಕೆ ಇನ್ನೂ ಐದ್ನಿಮ್ಷ ಇದೇ ಅನ್ನೋ ಹಂಗೇ ಬಸವರಾಜು ಅಂಗಡಿ ತಲುಪಿ ಕಾಯ್ಕಂಡು ಕುಂತ್ಲು. ಅವರ ಅಂಗ್ಡಿ ಎದುರೇ ಇರೋ 'ರಸವಂತಿ ಕೂಲ್ ಡ್ರಿಂಕ್ಸ್'ನಿಂದ ಬಸವರಾಜು ಗಸಗಸೆ ಹಾಲು ತರಿಸಿದ್ರು. ಅವ್ರು ಅದನ್ನ ಕುಡ್ದು ಮುಗ್ಸೋ ಹೊತ್ಗೆ ಸರಿಯಾಗಿ ಬಂದ್ಲು ಶಾರದ.

ಸೊಂಟದ್ಮೇಲೆ ದೊಡ್ಡ ಬಟ್ಟೆಗಂಟು, ಬಗಲ್ನಗೆ ಜೋಳ್ಗೆ. ಬಂದೋಳೆ ಅಂಗಡಿ ಎದುರೇ ಫುಟ್ಪಾತಿನ ಮೇಲೇ ಆದರೆ ಜನ ಓಡಾಡೋಕೆ ತೊಂದ್ರೆ ಆಗದಂತೆ ತುದಿಗೆ ಸರ್ದು, ತನ್ನ ಎಡಕ್ಕೆ ತಿರುಗಿ ಕುಂತು, ಎದುರ್ಗೆ ಗಂಟು ಇಟ್ಟು, ಜೋಳ್ಗೆಯಿಂದ ಪುಸ್ತಕ, ಸ್ಕೆಚ್ಪೆನ್ನು ತಗ್ದು ಅವನ್ನ ಗಂಟಿನ್ಮೇಲಿಟ್ಟು ಅದನ್ನೇ ಒತ್ತಿಗೆ ಮಾಡ್ಕಂಡು, ಪುಸ್ತಕ ತಗ್ದು ಬರೆಯಕೆ ಕುಂತ್ಲು. ಅವ್ಳ ದೃಷ್ಟಿ ಅದರಲ್ಲೇ ನೆಟ್ಟು ಹೋತು. ಬೇರಾವುದರ ಗೊಡವೆ ತನಗಿಲ್ಲಾ ಅನ್ನಂಗೆ ಕುಂತಿದ್ಲು.

ಅವ್ಳ ಮಹಾಧ್ಯಾನಕ್ಕೆ ಭಂಗ ಬಿತ್ತೋ ಎಂಬಂತೆ ಮೂರ್ವರ್ಷದ ಮಗುವೊಂದು ಓಡೋಡುತ್ತ ಬಂದು ಶಾರದ ಎದುರಿಗೇ ನಿಂತು ಅವ್ಳು ಪುಸ್ತಕದತ್ತ ಕೈನೀಡಿ "ಐ ವಾಂತ್ ... ಐ ವಾಂತ್ ..." ಅಂತು.

ಅಷ್ಟರಲ್ಲಿ ಹಿಂದಿನಿಂದ ಓಡಿ ಬಂದ ಹೆಣ್ಣುಮಗ್ಳೊಬ್ಳು "ಬೇಬಿ ಯು ಶುಡ್ ನಾಟ್ ಆಸ್ಕ್ ಲೈಕ್ ದಿಸ್ .. ಕಮಾನ್ ಐ ವಿಲ್ ಗೆಟ್ ಯು ನ್ಯು ಒನ್" ಅಂತ ಮಗೂನ ಕರ್ಕಂಡೋಗಕೆ ಪ್ರಯತ್ನಿಸಿದ್ಲು. ಬಹುಶಃ ಮಗುವಿನ ತಾಯಿ ಇರ್ಬೇಕು.

ಆದ್ರೆ ಮಗು ಜಗ್ಗಿ ಬಿತ್ತು "ನೋ ಐ ವಾಂತ್ ... ಐ ವಾಂತ್.." ಅಂತ ಶಾರದ ಕಡೀಗೇ ಕೈ ಮಾಡಿ.

ತಾಯಿ ಇರಿಟೇಟ್ ಆದಂಗಿತ್ತು. "ನೋ ಯು ಶುಡಂಟ್ ಆಸ್ಕ್ ಹರ್. ಶೀ ಇಸ್ ಎ ಬೆಗ್ಗರ್" ಅಂದು ಮಗುವನ್ನು ಬಲವಂತವಾಗಿ ಕರ್ಕಂಡೋಗಕೆ ಪ್ರಯತ್ನಿಸಿದ್ಲು. ಆದ್ರೆ ಮಗು ಅಳೋಕೇ ಶುರು ಮಾಡ್ತು "ಆಂತೀ ಗಿವ್ ಬುಕ್.. ಮೈ ಬುಕ್.." ಅಂತ.

ಇದಿಷ್ಟೂ ಶಾರದಳ ಎದುರೇ ನಡೀತಿದ್ರು ಅವ್ಳು ಮಾತ್ರ ಅದಕ್ಕೂ ತನ್ಗೂ ಸಂಬಂಧ ಇಲ್ಲಾ ಅನ್ನಂಗೇ ಕುಂತಿದ್ದೋಳು ಮಗುವಿನ ಹಟ ಅಳು ಜೋರಾದಾಗ ತಾನೂ ಜೋರಾಗಿ "ಕನ್ನಡವೇ ಸತ್ಯ ಕನ್ನಡವೇ ನಿತ್ಯ! ಓ ಮುದ್ದಿನ ಮಗು ಮಾತಾಡು ಕನ್ನಡ... ಈಗಲೇ ಇಂಗ್ಲಿಷು ತೊದಲಬೇಡ.." ಅಂತ ಜೋರಾಗಿ ಹೇಳಿದ್ಲು ತಲೆಯತ್ತದೇನೇ. ನಂದಾ, ಬಸವರಾಜು ಇಬ್ರಿಗು ಆಶ್ಚರ್ಯ ಜತೆಗೆ ನಗೂನು ಉಕ್ಕಿ ಬಂದಿತ್ತು. ಆದರೆ ಮಗುವಿನ ತಾಯಿ ಸಿಟ್ಟು ತಡೀಲಾರ್ದೆ ಮಗೂಗ್ ಒಂದೇಟು ಹಾಕೇ ಬಿಟ್ಲು. ಮಗು ಕಿಟಾರನೆ ಕಿರುಚ್ತು. ತಕ್ಷಣ ಶಾರದ ಎದ್ದು ಬಸವರಾಜು ಅಂಗಡಿ ಒಳಕ್ಬಂದು, ಒಂದು ಚಾಕ್ಲೇಟ್ ತಗಂಡು ಓಡೋಗಿ ಆ ಮಗೂಗೆ ಕೊಡಕೋದ್ಲು. ಆದ್ರೆ ಅದರಮ್ಮ ಅದನ್ನ ಕಿತ್ತು ಬಿಸಾಕಿಬಿಟ್ಲು. ಶಾರದ ಓಡೋಗಿ ಅದನ್ನ ಎತ್ಗಂಡು, ಕಣ್ಣಿಗೊತ್ಗಂಡು "ಇದು ಅನ್ನ, ತಿನ್ನುವ ವಸ್ತು. ಇದನ್ನು ಎಸೆಯಬಾರದು.." ಅಂದು ಕವರ್ ಬಿಚ್ಚಿ ಚಾಕ್ಲೆಟ್ ಬಾಯಿಗಕ್ಕಂಡು, ಜೋಳಿಗೆಯಲ್ಲಿ ಕೈಯಾಡ್ಸಿ ಏನೋ ತಗಂಡು ಮತ್ತೆ ಅಂಗಡಿಗೆ ಬಂದಿದ್ಲು. ನೋಡಿದ್ರೆ ಒಂದು ರುಪ್ಯೆ ಚಾಕ್ಲೇಟಿನ ದುಡ್ಡು !

"ಇವ್ಳು ಹುಚ್ಚಿನಾ.. !" ನಂದಾಳ ಆಶ್ಚರ್ಯದ ಉದ್ಗಾರ.

"ಎಲ್ಲಾ ಬಿಟ್ಟೋರನ್ನ ಹುಚ್ರು ಅಂತ ತಾನೇ ಕರೆಯೋದು.." ಬಸವರಾಜು ಶಾರದಳನ್ನೇ ನೋಡ್ತಾ ಹೇಳ್ದಾಗ ನಂದ ಸುಮ್ಮನೆ ತಲೆಯಾಡಿಸಿ "ಆಕೀನ ಮಾತಾಡ್ಸಬೇಕು ನಾನು" ಅಂತ ಎದ್ದು ನಿಂತ್ಲು.

" ಹೋಗ್ಬರ್ರಿ. ಹೆಂಗನ ಆಗ್ಲಿ ಈ ಚಾಕ್ಲೆಟ್ ಇಟ್ಗಂಡೋಗ್ರಿ.. ಹುಷಾರು ಬಲವಂತ ಮಾಡ್ಬೇಡ್ರಿ ಎಲ್ಲೇ ಸಾವಾಸ..." ಬಸವರಾಜು ಎಚ್ಚರಿಕೆ ಹೇಳಿ ಕಳಿಸಿದ್ರು.

ನಂದಾ ಚಾಕ್ಲೇಟ್ ಹಿಡ್ದು ಮೆಲ್ಲಗೆ ಆಕೀನ ಹಿಂದಿನಿಂದ ಸಮೀಪಿಸಿದ್ಲು. ಪಕ್ಕಕ್ಕೇ ನಿಂತು ಅವ್ಳ ಪುಸ್ತಕದೊಳ್ಗೆ ಬಗ್ಗಿ ನೋಡ್ತಿದ್ಲು "ಚುಕ್ಕಿ ರಂಗೋಲಿ" ಅಂದ್ಲು ಶಾರದ. ಬೆಚ್ಚಿಬಿದ್ಲು ನಂದ. ತಲೆಯತ್ತಿಲ್ಲಾ, ಇವ್ಳ ಕಡೆ ನೋಡ್ಲಿಲ್ಲಾ ಆದ್ರೇ ಇವ್ಳನ್ನ ಉದ್ದೇಶಿಸೇ ಮಾತಾಡಿದ್ಲು ಶಾರದ ಅಂತ ನಂದಾ ಭಾವನೆ.

ಇನ್ನೂ ಪಕ್ಕಕ್ಕೆ ಸರುದ್ಲು. ತನ್ನ ಪಾಡಿಗೆ ತಾನು ಮತ್ತೆ ಮಾತಾಡಿದ್ಲು "ಚುಕ್ಕಿ ಹೀಗೆ ದೂರ ದೂರ ಇರುತ್ತವೆ ಒಂದರಿಂದ ಇನ್ನೊಂದು. ಈ ಗೆರೆಗಳು ಅಡ್ಡ ಅಡ್ಡ ಇರುತ್ತವೆ. ಆದರೆ ಒಮ್ಮೆ ಈ ಚುಕ್ಕಿಗಳನ್ನ ಈ ಗೆರೆಗಳಿಂದ ಹೀಗೆ ಸೇರಿಸಿದ್ರೆ ಒಳ್ಳೆ ರಂಗೋಲಿ ಆಗುತ್ತೆ. ಇದು ಹೂವ. ಬಂದಿದೆ ಈಗ ಜೀವ. ಬಿಡಿಬಿಡಿಯಾದರೆ ಗೋಜಲು, ಸೇರಿಕೊಂಡರೆ ಗೊಂಚಲು.." ಶಾರದಾ ಮಾತಾಡ್ತನೇ ಇದ್ಲು.

ನಂದ ಸ್ಟನ್ನಾಗಿ ಹೋಗಿದ್ಲು. ಇವ್ಳು ಒಬ್ಬ ಹುಚ್ಚಿ ಅಂತ ಆಕ್ಸೆಪ್ಟ್ ಮಾಡಕೇ ಆಗಿರ್ಲಿಲ್ಲಾ ಅವ್ಳಿಗೆ. ಈ ಅವಕಾಶ ಬಿಡ್ಬಾರ್ದು ಅನ್ಕಂಡು "ನಿಜ ನೀವು ಹೇಳಿದ್ದು. ನಿಮ್ಮ ಚಿತ್ರದಷ್ಟೇ ನಿಮ್ಮ ಮಾತೂ ಸುಂದರ ಅಷ್ಟೇ ಅರ್ಥಗರ್ಭಿತ .." ಅಂತ ಅವಳ ಧಾಟಿಯಲ್ಲೇ ಮಾತಾಡಿದ್ಲು.

ಭಾಳ ಸ್ಪಷ್ಟ ಮತ್ತೆ ಸುಧಾರಿತ ಭಾಷೆ ಶಾರದಂದು. ನಂದಳಂಗೆ ಆಡುಭಾಷೆ

ಅಲ್ಲಾ. "ನಿಮ್ಗೆ ಇದೆಲ್ಲಾ ಯಾರು ಹೇಳಿಕೊಟ್ರು?" ಕೇಳ್ತಾ ಪಕ್ಕಕ್ಕೇ ಕುಂತ್ಲು. ಆಗ್ಲೂ ಅವ್ಳು ನಂದ ಕಡೆ ತಿರುಗ್ಲಿಲ್ಲಾ ಆದ್ರೆ ಬಾಯ್ಬಿಟ್ಲು. "ಹ್ಹಹ್ಹಹ್ಹಹ್ಹ.. ಹೇಳಿ ಕೊಟ್ಟರೆ ಬರುವುದು ಅಲ್ಲ. ತನಗೆ ತಾನೇ ಬರುವಂಥವು. ಚುಕ್ಕಿ, ಗೆರೆ ಇರುವಂಥವೇ. ಅವುಗಳನ್ನ ಹೇಗೆ ಯಾವಾಗ ಎಲ್ಲಿ ಸೇರಿಸಬೇಕು ಅನ್ನುವ ತಿಳಿವು ಇರ್ಬೇಕು. ಆ ತಿಳಿವೇ ಈ ರಂಗೋಲಿ .."

ನಂದ ಅವ್ಳ ಮಾತಿಗೆ ತಲೆದೂಗಿ "ನೀವು ಹೇಳೋದು ಎಷ್ಟು ಸತ್ಯ.." ಅಂದು ಒಂದು ಚಾಕ್ಲೇಟ್ ಅವ್ಳ ಮುಂದೆ ಹಿಡ್ದು "ನಿಮ್ ಹೆಸರೇನು?" ಅಂತ ಕೇಳಿದ್ಲು.

"ರಂಗೋಲಿ.." ಅಂದ್ಲು ಶಾರದ ಜೋರಾಗಿ ನಕ್ಕು.

ನಂದನೂ ನಕ್ಕು "ತಗಳಿ.." ಅಂದ್ಲು ಚಾಕ್ಲೇಟ್ ಮುಂದೆ ಚಾಚಿ.

"ಬೇಡ ದುಡ್ಡಿಲ್ಲ" ಅಂದ್ಲು ಶಾರದ.

"ಬೇಡ ದುಡ್ಡು. ನಾವು ಸ್ನೇಹಿತ್ರು ಈಗ.." ಅಂದ್ಲು ನಂದ.

"ಹ್ಹಹ್ಹಹ್ಹ.. ದುಡ್ಡಿನ್ಮುಂದೆ ಏನೂ ಇಲ್ಲಾ..." ಕೈ ತಿರುವಿದ್ಲು ಶಾರದ.

"ಇರಬಹುದು. ಆದರೆ ಎಲ್ಲರೂ ಒಂದೇ ಥರ ಇರಲ್ಲ.."

"ನಿಜ.." ಅಂದು ಶಾರದ "ಮತ್ತೇ ನಾಳೇನೂ ಬೇಕಂದ್ರೇ..?" ಅಂತ ಪ್ರಶ್ನೆ ಮಾಡಿದ್ಲು.

"ಕೊಡಿಸ್ತೀನಿ.." ಅಂದ್ಲು ನಕ್ಕು ನಂದ.

"ನಾಡಿದ್ದು.." ಮತ್ತೆ ಶಾರದಳ ಪ್ರಶ್ನೆ.

"ಆಗಲೂ.." ಅಂದ್ಲು ನಂದ ಹಂಗೇ ನಗ್ತಾ.

"ಆಚೆ ನಾಡಿದ್ದು.." ಮತ್ತದೇ ಧಾಟಿಯ ಪ್ರಶ್ನೆ.

ಸಾಕಾಯ್ತು ನಂದಾಗೆ. ಅದು ಮಾತಲ್ಲೂ ವ್ಯಕ್ತವಾಯ್ತು "ಅಯ್ಯೋ ನೀನ್ ಯಾವಾಗ್ಕೇಳ್ತಿಯೋ ಆವಾಗ ಆಯ್ತಾ..."

ಈ ಮಾತನ್ನ ಕೇಳಿದ್ದೇ ಶಾರದ ಜೋರಾಗಿ ನಕ್ಕು "ನೋಡು ಸಾಕಾಗೋಯ್ತು.." ಅಂದು "ಒಂದಿನ ಹೀಗೆ ಕೊಟ್ಟು ಕೊಟ್ಟು ಸಾಕಾಗ್ಬಿಡುತ್ತೆ. ಕೇಳೋರಿಗೆ ಹಾಗಾಗೊಲ್ಲ. ಕೊಡೋರಿಗೆ ತಗೋಳೋರಿಗೆ ಇಬ್ರೂಗೂ ಮನಸ್ಸು ಇರ್ಬೇಕು. ಒಬ್ಬರಿಗೆ ಸಾಕಾದ್ರೂ ತೀರಿಹೋಯ್ತು.."

ಶಾರದ ನಗ್ತಾನೆ ಇದ್ಲು. ನಂದಾಗೆ 'ಅಲೆ ಇವ್ಳ ಹುಚ್ಚೀಗೇ ಇಷ್ಟು ಜಾಣ್ತವೇ..' ಅನ್ನಿಸಿ "ಮುಂದಿನದು ಯಾಕೆ ಈಗ್ಲೇ? ಈಗ ಇದನ್ನ ತಿಂದ್ಬಿಡಿ. ತಗೊಳ್ಳಿ ನನಗರ್ಧ ನಿಮಗರ್ಧ.." ಅಂತ ಚಾಕ್ಲೇಟ್ ಮುರ್ದು ಅರ್ಧ ಬಾಯಿಗಕ್ಕಂಡು ಇನ್ನರ್ಧ ಶಾರದ ಮುಂದಿಡಿದ್ಲು.

"ಒಂದು ಪೇಪರಲ್ಲಿ ಮುದುರಿ ಕೊಡು.." ಅಂದ್ಲು ಶಾರದ.

"ಯಾಕೇ ತಿಂದ್ಬಿಡು ಅದೆಷ್ಟಿದೆ.." ಅಂದ್ಲು ನಂದ.

"ಉಹೂಂ ಬೇಡ. ಈಗ್ತಾನೇ ಒಂದು ಇಡೀ ಚಾಕ್ಲೇಟ್ ತಿಂದೆ. ಈಗ ಸಾಕು ಬೇಕನಿಸಿದಾಗ ಮತ್ತೆ ತಿಂತೀನಿ .."

ಶಾರದ ಮಾತು ಕೇಳಿ ನಗುವ ಸರದಿ ನಂದಾದು.

"ಹೆಚ್ಚಾಗಿದ್ದು ಒಂದು ತುಣುಕೇ ಆದ್ರೂ ಸರಿ ಅದು ವಿಷ ಇದ್ದಂಗೆ. ಸ್ವಲ್ಪ ಇದೆ ಅಂತ ವಿಷ ತಿನ್ನೋಕೆ ಆಗುತ್ತಾ..?"

ನಂದ ನಗು ಹಂಗೇ ಇಂಗಿ ಹೋತು ಶಾರದಳ ಈ ಮಾತು ಕೇಳಿ. ಆದ್ರೂ ಬಿಡ್ಲಿಲ್ಲಾ. "ಅಯ್ಯೋ ಇಷ್ಟು ಸಣ್ಣ ವಿಷಯಕ್ಕೆ ಅಷ್ಟು ದೊಡ್ಡ ಮಾತು ಯಾಕೆ ಬಿಡು ತಿಂದು ಮುಗ್ಸು.." ಅಂದ್ಲು.

"ವಿಷಯ ಸಣ್ಣದೋ ದೊಡ್ಡದೋ ಮುಖ್ಯ ಅಲ್ಲಾ... ಆಸೆ ಕೆಟ್ಟದು.." ಅಂತಂದು ಪುಸ್ತಕ, ಪೆನ್ನು ಜೋಳಿಗೆಯೋಕ್ಕಿಟ್ಟು ಬಗಲಿಗೇರಿಸಿ, ಗಂಟು ಎತ್ಗಂಡು ಹೊಂಟ್ಲು.

"ಹೊರಟ್ಯಾ... ಎಲ್ಲಿಗೇ..?" ಕೇಳಿದ್ಲು ನಂದ.

"ಮನೀಗೆ..." ಅಂದು ಮುಂದಡಿ ಇಟ್ಲು ಶಾರದ.

ನಂದಾ ಅವ್ಳನ್ನ ತಡೆಯೋ ಪ್ರಯತ್ನ ಮಾಡ್ತಾ "ನಿನ್ನ ಹೆಸರೇ ಹೇಳ್ಲಿಲ್ಲಾ..?" ಅಂತ ಕೇಳಿದ್ಲು. "ಕೇಳು ಹೇಳ್ತೀನಿ... ಹೆಸರೂ ಅಂತ..." ಅಂದು ಜೋರಾಗಿ ನಕ್ಕು ಮುಂದೆ ನಡೆದಿದ್ಲು ಶಾರದ.

'ವೆರಿ ಇಂಟ್ರೆಸ್ಟಿಂಗ್..' ಅಂದುಕೊಳ್ತಾ ತಾನೂ ನಗ್ತಾ ನಂದ ಅಂಗಡಿಯೊಳಕ್ಕೆ ಹೋಗಿದ್ಲು ಮತ್ತೆ.

ಅಂಗಡಿಗೆ ಹಿಂದಿರುಗಿದ ನಂದಾನ್ನ ನೋಡಿದ್ದೆ ಬಸವರಾಜು "ಏನಚ್ಚರಿರೀ ಆಕಿ ಯಾರತ್ರನೂ ಇಷ್ಟೊತ್ತು ಮಾತಾಡಿದ್ದು ನೋಡೆ ಇಲ್ಬಿಡ್ರಿ.. ಅಲ್ಲಾ ಯಾರನ್ನೂ ತಲೆಯೆತ್ತಿ ನೋಡಾಕಿನೆ ಅಲ್ಲ.." ಅಂದ್ರು.

"ನನ್ನೂ ಎಲ್ಲಿ ನೋಡಿದ್ಲೂ ಅವ್ಳು ತಲೆಯೆತ್ತಿ..? ಹಂಗೇ ಎಲ್ಲಾ ಹೇಳಿ ಹೋದ್ಲು. ಬಹುಶ: ಅವಳು ಬರಿತಿದ್ದನ್ನ ನಾನು ಹೋಗಿ ನೋಡಿದ್ದು ಆಕೀನ ಇಂಪ್ರೆಸ್ ಮಾಡಿರ್ಬೇಕು. ನಾನು ಅಕಿ ಬರೆಯೋದನ್ನ ಗಮನಿಸುತ್ತಿದ್ದಿನಿ ಅಂತ ಗೊತ್ತಾದ್ಕೂಡ್ಲೆ ನನ್ನ ಜತೆ ಮಾತಿಗೆ ಶುರು ಮಾಡಿದ್ಲು.." ನಂದ ಉದ್ವೇಗಗೊಂಡಿದ್ಲು.

"ಇರ್ಬೇಕ್ಬಿಡ್ರಿ.." ಅಂದ್ರು ಬಸವರಾಜ್ ಅವ್ರೂ ಸೋಜಿಗದಲ್ಲೆ.

"ಆಕಿ ಖಂಡಿತಾ ಹುಚ್ಚಿಯಲ್ಲಾ.. ಆಕಿ ಆಡೋ ಪ್ರತಿ ಮಾತು ತುಂಬಾ ಅರ್ಥಪೂರ್ಣ. ಒಂದಾದ್ರು ಸುಮ್ಕೆ ಹಂಗೆ ಅಂತ ಮಾತು ಬಂದಿಲ್ಲ ಅವ್ಳ ಬಾಯಲ್ಲಿ.." ಅಂತ ನಂದಾ ಅಂದಾಗ "ಏನೋ ಕಣ್ರೀ ನಾನಂತೂ ಅಕಿನ ಎಂದೂ ಮಾತಾಡ್ಸಿಲ್ಲ. ಆದ್ರೆ ಎದ್ರುಗಡೆ ಹೋಟಲಿಗೆ ಹೋಗ್ತಾಳೆ ಅವಗವಾಗ. ಯಾವತ್ತೂ ದುಡ್ಡ ಕೊಡ್ದಂಗೆ ಪುಕ್ಸಟೆ ಏನೂ ಇಸ್ಕಂಡಿಲ್ಲ ಅನ್ನದು ಮಾತ್ರ ಇಲ್ಲಿ ಎಲ್ಲರಿಗೂ ಗೊತ್ತೈತೆ.." ಅಂದ್ರು ಬಸವರಾಜು.

"ಹೂಂ ಹಂಗ್ಮಾಡಿದ್ರೆ ಸಂಬಂಧ, ಸ್ನೇಹ ಉಳಿಯಲ್ಲ ಭಾಳ ದಿನ ಅನ್ನೋದು ಅವಳ ನಂಬಿಕೆ.." ನಂದಾ ಶಾರದಾಳ ಮಾತು ನೆನೆದು ತಕ್ಷಣ ಹೇಳಿ "ನಾಳೆ ಬೆಳಿಗ್ಗೆನೆ ಬರ್ತಿನಿ ಬಸವರಾಜ್.." ಅಂತ ಮನೆಗೆ ಹೊರಟ್ಲು.

ನಂದಾ ಮನಸ್ಸು ಮಾತ್ರ ಶಾರದಾಳನ್ನ, ಅವಳ ಮಾತುಗಳನ್ನೇ ಮತ್ತೆ ಮತ್ತೆ ನೆನಪಿಸಿಕೊಳ್ತಿತ್ತು. ಬೆಳಿಗ್ಗೆದ್ದವಳೆ ಬೇಗ ಬೇಗ ಕೆಲಸ ಮುಗಿಸಿ ಒಂಬತ್ತಕ್ಕೆ ಮನೆ ಬಿಟ್ಲು. ಆ ದಿನ ಜಗದೀಶ ಬೆಳಿಗ್ಗೆ ೬ ಗಂಟೆಗೆ ಬೆಂಗಳೂರಿಗೆ ಹೋಗಿದ್ದು ಅವಳಿಗಿನ್ನೂ ಅನುಕೂಲವಾಗಿತ್ತು.

ನಂದಾ, ಜಗದೀಶ ಮದ್ವೆಯಾಗಿ ಬರೀ ಒಂಬತ್ತು ತಿಂಗಳು ಮಾತ್ರ. ನಂದಾಳ ತವರೂರು ಚಿತ್ರದುರ್ಗ. ಗಂಡನ ಮನೆ ದಾವಣಗೆರೆ. ಆದ್ರೆ ಹೊಸ ಸಂಬಂಧ. ಜಗದೀಶ ಲೆಕ್ಚರರು. ನಂದಾದೂ ಬಿಎಸ್ಸಿ ಬಿಎಡ್ ಅಗಿತ್ತು. ಯಾವುದಾದರೂ ಶಾಲೇಲಿ ಟೀಚರ್ ಕೆಲಸಕ್ಕೆ ಸೇರುವ ಪ್ರಯತ್ನದಲ್ಲಿದ್ಲು. ಒಂದೆರಡು ಕಡೆಗೆ ಸಿಗೋ ಚಾನ್ಸು ಇತ್ತು. ಜಗದೀಶನಂತೂ 'ಇಲ್ಲಿ ನಾನು ಯಾರನ್ನೂ ಕೇಳಲ್ಲ. ನಿಂಗೆ ಬೇಕಾದ್ರೆ ಹುಡುಕ್ಕೊ..' ಅಂದಿದ್ದ. ಜತೆಗೆ 'ನೀನು ಕೆಲಸಕ್ಕೆ ಹೋಗದಿದ್ರು ಚಿಂತಿಲ್ಲ' ಅಂತನೂ ಹೇಳಿದ್ದ. ಒಟ್ನಲ್ಲಿ ಅವ್ನಿಗೆ ಟೈಮ್ ಟೈಮ್‌ಗೆ ಸರಿಯಾಗಿ ಊಟ ತಿಂಡಿ ಕಾಫಿ ಟೀ ಅದ್ರೆ ಆತು. ಒಲೆ ಹಚ್ಚದು ಇತ್ತೀಚೆಗೆ ಕಲಿತಿದ್ದ. ಒಂದು ಕಾಫಿ ಟೀ ಮಾಡ್ಕೊಳಕೂ ಬರದ ಅಸಾಮಿ. ಕುಂತ ಕಡೆಗೇ ಎಲ್ಲಾ ಆಗಬೇಕು. ಒಂದು ಲೋಟ ನೀರು ತುಂಬ್ಕಂಡು ಕುಡಿಯೋದಕ್ಕೂ ಗೊತ್ತಿಲ್ಲ. ಎಲ್ಲದ್ಕೂ ಹೆಂಡ್ತಿನ ಕೂಗೋದು. ನಂದಾಗೇನು ಇದೆಲ್ಲ ಹೊಸದಲ್ಲ. ಯಾಕಂದ್ರೆ ತವರ್ಮನೆಗೂ ಅಪ್ಪಂದು ಇದೇ ಕತೆ. ಈ ವಯಸ್ನಲ್ಲೂ ಅಮ್ಮಾ ಸಣ್ಣ ಹುಡುಗಿಯಂಗೆ ಅವನಿಂದಿಂದೆ ಓಡಾಡ್ಕಂಡು ಅವನೇಳಿದೆಲ್ಲಾ ಮಾಡ್ತಿದ್ಲು. ಒಂದು ನಿಮಿಷ ಹೆಚ್ಚು ಕಮ್ಮಿ ಅದ್ರೆ ಅವನ ರೌದ್ರಾವತಾರದ ಝಳ ಬೇರೇನೆ. ಕೆಟ್ಟ ಕೋಪಿಸ್ಟ. ತಾಳ್ಮೆ, ಸಮಾಧಾನ ಎಲ್ಲಾ ಅವನಿಂದ ಮೈಲುಗಟ್ಲೆ ದೂರ. ಎಲ್ಲ ಅಭ್ಯಾಸ ಆಗಿ, ಅವನ್ನೆಲ್ಲಾ ಸಹಿಸ್ಕಳದು ತಮ್ಮ ಬದುಕಿನ ಒಂದು ಭಾಗ ಅಂದ್ಕಂಡು ತಾಯಿ ಮಗಳು ತುಟಿಪಿಟುಕ್ಕನ್ದೆ ಒಗ್ಗಂಡು ಹೋಗ್ತಿದ್ರು.

ನಂದಾಗೆ ಮಾತ್ರ ಗಂಡನ ಮನೆಗೆ ಬಂದ್ಮೇಲೆ ಚೂರು ರಿಯಾಯ್ತಿ ಸಿಕ್ಕಿತ್ತು. ಕಾರಣ ಜಗದೀಶ ಮುಂಗೋಪಿ ಅಲ್ಲ. ಶಾಂತ ಸ್ವಭಾವದವನೇ. ಆದ್ರೆ ಎಲ್ಲವೂ ಅವನಿದ್ದಲ್ಲಿಯೇ ಅಗ್ಬೇಕಿತ್ತು. ತನ್ನೆದುರಿನ ನೀರಿನ ಲೋಟ ತಗಳಕೂ ನಂದಾನೇ ಕೂಗ್ತಿದ್ದ ಭಾಳ ಪ್ರೀತಿಯಿಂದ. ಹೆಂಗಂದ್ರೆ ನಂದಾಗೆ 'ಎದರುಗೇ ಐತೆ ತಗಂಡು ಕುಡೀರಿ..' ಅನ್ನಕೂ ಬಾಯಿ ಬರದಂಗೆ. ಒಮ್ಮೊಮ್ಮೆ ಗಂಡ ಎಲ್ಲಕ್ಕೂ ತನ್ನನ್ನೇ ಆಶ್ರಯಿಸ್ತಾನೆ ಅನ್ನೋ ಎಂಥದ್ದೋ ಖುಷಿ.. ಒಂಥರಾ ಹೆಮ್ಮೆ ತನ್ಬಗ್ಗೆ ಸುಳಿದಾಡ್ತಿತ್ತು. ಮತ್ತದು ಇಷ್ಟಪಟ್ಟೇ ಎಲ್ಲವನ್ನೂ ಮಾಡುವಂತೆ ಪ್ರೇರೇಪಿಸ್ತಾ ಇತ್ತು. ಎಲ್ಲಿ ಇಂಥ ಈ ಗಂಡ 'ಇವತ್ತೂ ಅಲ್ಲಿಗೆ ಹೋಗ್ಬೇಕಾ ನಂದಾ..' ಅಂತ ಕೇಳಿಬಿಟ್ರೆ 'ಹೂಂ' ಅನ್ನೋಕು ಫಜೀತಿ ಪಡೋ ಪಾಡು ತಪ್ಪಿತಲ್ಲ ಅಂತ ಸಮಾಧಾನ ಅವ್ಳಿಗೆ.

ಆಟೋ ಹತ್ತಿ ಸೀದಾ ಅಂಗಡಿ ಮುಂದೆ ಇಳಿದ್ಲು. ಪೀಕ್ ಹವರ್ ಆದ್ದರಿಂದ ಜನಜಂಗುಳಿ. ಅದ್ರಲ್ಲೆ ನುಸುಳಾಡಿ ಹತ್ರ ಬಂದು ನೋಡಿದ್ರೆ ಶಾರದಾ ಅದೇ ಜಾಗದಲ್ಲಿ ತನ್ನ ಮುಂದೆ ಗಂಟು ಇಟ್ಕೊಂಡು ಕುಂತಿದ್ಲು. ಆಶ್ಚರ್ಯ ಅಂದ್ರೆ ಇವತ್ತು ಪುಸ್ತಕ ಸ್ಕೆಚ್ ಪೆನ್ನಿರದೆ ಮೂರು ಗೊಂಬೆಗಳಿದ್ವು ಅವ್ಳ್ಮುಂದೆ. ತೀರಾ ಹತ್ರಕ್ಕೆ ಹೋದಾಗ ನಂದಂಗೆ ಗೊತ್ತಾಗಿದ್ದು ಅದು ಒಂದು ಹೆಣ್ಣು ಗೊಂಬೆ, ಒಂದು ಗಂಡು ಗೊಂಬೆ ಮತ್ತು ಒಂದು ಮಗುವಿಂದು ಅಂತ.



ನಂದಾ ಹತ್ರ ಹೋಗಿ ಏನೋ ಕೇಳೋಕಂತ "ನೀನು.." ಅಂತಿಂದ್ಲು ತಕ್ಷಣ ಶಾರದಾ "ಶ್.. ಮಾತಾಡಬೇಡ ನಾನು ಕನಸು ಕಾಣ್ತಾ ಇದ್ದಿನಿ... ನೀನೂ ಇಲ್ಲಿ ಸುಮ್ನೆ ಕೂತು ಕನಸು ಕಾಣು.." ಅಂದ್ಲು. ನಂದಾ ತಕ್ಷಣ "ಕನಸು ಕಾಣೋಕೆ ಮಲಗಬೇಕು. ಅದು ರಾತ್ರಿ ಕಾಣೋದು. ನಂಗೆ ಹಗಲು ಕನ್ಸು ಬೇಡ.." ಅಂದ್ಲು.

"ಹ್ಹ ಹ್ಹ ಕನಸು ಕಾಣೋಕೆ ರಾತ್ರಿ ಹಗಲು ಅಂತಿಲ್ಲ. ನಿದ್ದೆ ಎಚ್ಚರ ಅಂತನೂ ಇಲ್ಲ.. ಮನ್ಸು ಇರ್ಬೇಕು, ಗುರಿ ಇರ್ಬೇಕು."

ನಂದಂಗೆ ತಕ್ಷಣಕ್ಕೇ ಏನು ಹೇಳ್ಬೇಕಂತ ತಿಳಿಲಿಲ್ಲ. "ಅಲ್ಲಾ.. ಅದು ಕನ್ಸು ಹೆಂಗಿರ್ಬೇಕು ಅಂತಾ.." ಅಂತ ಸುಮ್ಮನೇ ತೊದಲಿದ್ಲು.

"ಯಾಕೆ ಎಲ್ರೂ ಎಲ್ಲದನ್ನೂ ಅದು ಹಾಗೇ ಇರಬೇಕು ಇದು ಹೀಗೇ ಇರ್ಬೇಕು ಅಂತ ಗೆರೆ ಕೊರ್ಕೊಂಡು ಕುತ್ಕೋತಾರೇ..."

ಶಾರದ ಮಾತು ಮುಗಿದದ್ದೇ "ಹೌದು ಅದು ನಿಯಮ. ನಮ್ಮ ಸಮಾಜದ್ದು, ನಮ್ಮ ಮನೆತನಗಳದ್ದು, ಬಾಳಿ ಬದುಕಿ ಹೋದ ನಮ್ಮ ಹಿರಿಯರದ್ದು. ನಾವೆಲ್ಲಾ ಈ ಸಮಾಜದಲ್ಲಿ ಬದುಕ್ತಾ ಇರೋದ್ರಿಂದ ಅದು ಹಾಕೋ ಕಟ್ಟುಪಾಡಿಗೆ, ಚೌಕಟ್ಟಿಗೆ ಸೀಮಿತರಾಗಿ ಬದುಕ್ಬೇಕು. ಅದಕ್ಕೆ ಬದ್ದರಾಗಿಯೇ ಜೀವನ ಸಾಗಿಸ್ಬೇಕು. ಅದೇ ನಮ್ಮ ಧರ್ಮ. ಅದೇ ನಾವು ನಮ್ಮ ಹಿರಿಯರಿಗೆ, ನಮ್ಮ ಸಮಾಜಕ್ಕೆ ಕೋಡೋ ಗೌರವ.." ನಂದಾ ಒಂದೇ ಉಸಿರಿಗೆ ಹೇಳಿದ್ಲು.

ಶಾರದ ಗಹಗಹಿಸಿ ನಕ್ಕು "ನಿನ್ನ ಮನೆತನ, ನಿನ್ನ ಹಿರಿಯರೂ ಸ್ವತಂತ್ರರಲ್ಲ. ನೀನೇಳೋ ಸಮಾಜದ ಕೈಗೊಂಬೆಗಳು. ಈ ಸಮಾಜಾನೂ ಖುದ್ದು ಒಂದು ಚೌಕಟ್ಟಿನಲ್ಲಿ ಸಿಕ್ಕಿಕೊಂಡು, ಎಲ್ಲರ್ನೂ ಒಂದು ಚೌಕಟ್ಟನ್ನ ತಲತಲಾಂತರದಿಂದ ಹಾಕಿ ಕೂರಿಸಿದೆ. ನೋಡು ಈ ಬೊಂಬೆ ಇದು ಹೆಣ್ಣು, ಇದು ಗಂಡು. ಈ ಸಮಾಜ ಈ ಗೊಂಬೆಗಳನ್ನು ಒಂದನ್ನ ಹೆಣ್ಣು ಅನ್ನೋ ಚೌಕಟ್ಟಿಗೆ, ಇನ್ನೊಂದನ್ನ ಗಂಡು ಅನ್ನೋ ಚೌಕಟ್ಟಿಗೆ ಕಟ್ಟಿ ಹಾಕಿಬಿಟ್ಟಿದೆ. ಹೆಣ್ಣಂದ್ರೆ ಹೀಗೆ ಇರ್ಬೇಕು, ಗಂಡಂದ್ರೆ ಹೀಗೆ ಇರ್ಬೇಕು. ಈ ಕೆಲಸ ಹೆಣ್ಣು ಮಾಡೋದು, ಈ ಕೆಲಸ ಗಂಡು ಮಾಡೋದು. ಹೆಣ್ಣು ತಗ್ಗಿ ಬಗ್ಗಿ ನಡಿಬೇಕು, ಮೈತುಂಬಾ ಬಟ್ಟೆ ಹಾಕ್ಕೊಂಡು ಸೆರಗು ಹೊದ್ಕೊಂಡು ಇರ್ಬೇಕು, ದೀಪ ಹಚ್ಚೋದರ ಒಳಗೇ ಮನೆ ಸೇರ್ಬೇಕು, ಗಂಡಸ್ರೆಲ್ಲಾ ಉಂಡು ಬಿಟ್ಟಿದ್ದು ಉಳಿದ್ರೆ ತಿನ್ಬೇಕು ಇಲ್ಲಂದ್ರೆ ಮುಚ್ಕಂಡಿರ್ಬೇಕು. ಗಂಡಂದ್ರೆ ದಬ್ಬಾಳಿಕೆ ಮಾಡಿಕಂಡು, ಹೆಂಗ್ಬೇಕಂಗೆ ಎಷ್ಟೊತ್ತಿಗಂದ್ರೆ ಅಷ್ಟೊತ್ತಿಗೆ, ಎಲ್ಲಿ ಬೇಕಂದ್ರೆ ಅಲ್ಲಿ ಸುತ್ತಾಡ್ಬೋದು.. ಅವರು ಕುಂತಲ್ಲಿ ನಿಂತಲ್ಲಿ ಎಲ್ಲಾ ಅಗ್ಬೇಕು.. ಯಾವುದಕ್ಕೂ ಮೈ ಬಗ್ಸಂಗಿಲ್ಲ ಅವ್ರೂ.. ಗಂಡ ಅವನು ಎಂತವ್ನೆ ಆಗ್ಲಿ ಅವನಿಗೆ ಮರ್ಯಾದೆ ಸಲ್ಲಬೇಕು. ಅದು ಬರೀ ಅವನೊಬ್ಬ ಗಂಡಸು ಅನ್ನೋ ಕಾರಣಕ್ಕೆನೇ. ಇಲ್ಲಿ ಮನುಷ್ಯ ಅನ್ನದಕ್ಕೆ ಬೆಲೆ ಇಲ್ಲಾ. ಇದೇ ಗೌರವ ಇದೇ ಧರ್ಮ ಅನ್ನೋ ಹಾಗಿದ್ರೆ ಇದಕ್ಕೆ ನನ್ನ ಧಿಕ್ಕಾರ.."

ನಂದಾ ಮಾತೇ ಆಡ್ಲಿಲ್ಲಾ. ಶಾರದಾ ತಾನೆ ಮುಂದುವರಿಸಿದ್ಲು, "ಎಲ್ಲಿವರೆಗೂ ನಾನು ಹೆಣ್ಣು ನಾನು ಗಂಡು ಅನ್ನೋ ಭಾವನೆ ನಮ್ಮ ಮನಸ್ಸಿನಾಗಿರುತ್ತೋ ಅಲ್ಲಿವರ್ಗೂ ನಾವು ಮನಷ್ಯರು ಅನ್ನೋ ಭಾವನೆ ಹುಟ್ಟಲ್ಲ. ನಾವೆಲ್ಲರೂ ಮನುಷ್ಯರು ಅಂತ ಭಾವಿಸೋವರ್ಗೂ ಈ ಅನಾಚಾರ, ಅತ್ಯಾಚಾರ ನಿಲ್ಲಲ್ಲ.."

"ಆದ್ರೆ ಇದೆಲ್ಲಾ ಆಗುವಂಥದ್ದಾ.. ? ಇದನ್ನೆಲ್ಲಾ ಮಾಡೋರ್ಯಾರು..? ಎಲ್ಲರೂ ಮಾತಾಡ್ತಾರೆ ಹೊರ್ತು ಯಾರೂ ಮಾಡಲ್ಲಾ.." ನಂದಾ ಮಧ್ಯಕ್ಕೇ ಮಾತಾಡಿದ್ಲು. ಇವೆಲ್ಲಾ ಅವಳ ಮನಸ್ಸಿನಲ್ಲಿ ಎಂದೋ ಅಷ್ಟಿಷ್ಟು ಸುಳಿದು ಹಂಗೆ ಇಣುಕಿ ಹೋದ ವಿಚಾರಗಳೇ. ಆದ್ರೇ ಅವುಗಳಿಗೆ ಯಾವ ಕಿಮ್ಮತ್ತೇ ಇಲ್ಲಾ ಅನ್ನೋ ಅಂತಿಮ ನಿರ್ಧಾರಕ್ಕೆ ಬಂದಾಕೆ ಅವ್ಳು.

ಶಾರದಾ ಮತ್ತೆ ಜೋರಾಗಿ ನಕ್ಲು. "ನಿನಗೆ ಏನು ಬೇಕೂ, ಏನು ಬೇಡಾ ಅಂತ ಬೇರೆ ಯಾರೋ ಬಂದು ಹೇಗೆ ಹೇಳೋಕಾಗತ್ತೆ..ಏನು ಮಾಡಕಾಗುತ್ತೆ.." ಅಂದು ಬೊಂಬೆನ ಜೋಳ್ಗೆಗೆ ಹಾಕಿ, ತನ್ನ ನೋಟ್ ಪುಸ್ತಕ, ಸ್ಕೆಚ್‌ಪೆನ್ ತೆರ್ದು ಒಂದೊಂದೆ ಚುಕ್ಕಿ ಇಡಕತ್ತಿದ್ಲು. ಮಾತು ನಿಂತ್ವು.

ಅವ್ಳ ಮಾತುಗಳನ್ನೇ ಮೆಲುಕು ಹಾಕುತ್ತ ನಂದಾನೂ ಮೌನವಾದ್ಲು. ಅವ್ಳ ಮಾತಿನ ಮರ್ಮ ತಿಳ್ದಿತ್ತು. ನಿಜ, ಯಾವುದಕ್ಕೂ ಪ್ರತಿರೋಧ ಒಡ್ಡದೆ ಇದು ಹಿಂಗೇ, ವಿಧಿ ನಿಯಮ, ಇದೇ ರೀತಿ ಇದೇ ನೀತಿ ಅನ್ಕಂಡು ಎಲ್ಲಾ ಒಪ್ಗಂಡು ಬಿಟ್ಟಿದ್ಲು ತಾನು. ಆಗಾಗ ಮನದಾಳದಗೆ ಇದೆಲ್ಲಾ ಬದಲಾವಣೆ ಆಗ್ಬಾರ್ದಾ ಅಂತ ಅನಿಸಿದ್ದೂ ಹೌದು. ಆದ್ರೆ ಬದಲಾವಣೆ ಮಾಡವ್ರು ಯಾರು..? ಹೆಂಗೆ.. ? ಅಂತನೇ ಅಂದ್ಕಳ್ತಿದ್ಲೇ ಹೊರ್ತು ಬದಲಾವಣೆ ನನ್ನಿಂದ್ಲೆ ಆಗ್ಬೇಕು ಅಂತಾ ಯೋಚಿಸಿಯೇ ಇರ್ಲಿಲ್ಲ. ಮುದುರ್ಕೆಂಡು ತಮ್ಮಾಡಿಗೆ ತಾವಿದ್ದ ಯೋಚನೆಗಳ ಹುಟ್ಟಿಗೇ ನೇರ ಕಲ್ಲು ಒಗದಿದ್ಲು ಶಾರದ. ಎಚ್ಚೆತ್ತ ಜೇನ್ನೊಣಗಳಂತೆ ಕದಡಿ ದಾಳಿಯಿಡಕತ್ತಿದ ಅವುಗಳಿಂದ ತಪ್ಪಿಸಿಕೊಳ್ಳಲು ತಲೆಕೊಡವಿ ಅಲ್ಲಿಂದ ಎದ್ದು ಬಸವರಾಜು ಅಂಗಡಿಯೊಳಗೆ ಹೋದ್ಲು ನಂದಾ. ಶಾರದಾ ಮಾತ್ರ ನೆಮ್ಮದಿಯಿಂದ ರಂಗೋಲಿ ಹಾಕ್ತಿದ್ಲು.

ನಂದಾ ಮುಖ ನೋಡಿದ್ದೆ ಬಸವರಾಜು, "ಯಾಕ್ರಿ ಅವಳು ಏನಾದ್ರು ಅಂದ್ಲಾ..? ಮುಖ ಒಣಿಕ್ಕೆಂಡೋಗೇತೇ.." ಅಂತ ಕಿಚಾಯಿಸಿ ನಕ್ರು.

"ಹೂನಪ್ಪ ಸ್ವಲ್ಪ ಬಿಟ್ರೆ ಪೂರಾ ಮೆದುಳಿಗೇ ಕೈ ಹಾಕ್ಬಿಡ್ತಾಳೆ.." ಅಂದು ನಿಲ್ಲದೆ ಹೊರಬಂದ್ಲು. ಅವ್ಳ ನೆಮ್ಮದಿ ಶಾಂತಿ ಎಲ್ಲಾ ಕದಡಿ ತಲೆ ಬಿಸಿಯಾಗಿತ್ತು. ಮರೆಯಕೆ ಪ್ರಯತ್ನಿಸ್ದಷ್ಟೂ ಶಾರದಳ ಮಾತುಗಳು ಮತ್ತೆ ಮತ್ತೇ ನೆನಪಾಗಕತ್ತಿದ್ವು. ಇದೇ ಬದುಕು, ಇಷ್ಟೇ ಭಾಗ್ಯ ಅಂತ ತಣ್ಣಗಿದ್ದು, ಅದರಗೇ ನೆಮ್ಮದಿ ಕಂಡಿದ್ದ ತಿಳಿ ಮನಸ್ಸು ಈಗ ಪೂರ ಕದಡಿತ್ತು. ಎಲ್ಲೋ ಏನೋ ಸರಿಯಿಲ್ಲಾ ಅಂತ ಮೊದಲ ಸಲಕ್ಕೆ ತನ್ನ ಬದುಕಿನ ಬಗ್ಗೆ ಯೋಚಿಸಕತ್ತಿದ್ಲು. ಮನೆಗೆ ಹೋಗಲು ಆಟೋ ಕಾಯ್ತ ನಿಂತ್ಲು. ಶಾರದಾ ಅದೇ ಹಂಗೇ ಕುಂತಿದ್ಲು. ಯಾಕೋ ಹೇಳ್ದಂಗೇ ಹೋಗ ಮನಸಾಗಲಿಲ್ಲ. ಮೆಲ್ಲಗೆ ಹತ್ರ ಹೋದ್ಲು "ತಲೆನೋವಾ?" ಅಂತ ತಟ್ಟನೆ ಕೇಳಿದ್ಲು ಶಾರದ. ನಂದಾ ಏನಾದ್ರು ಹೇಳೋ ಮುಂಚೆಗೇ. ಪೂರಾ ಸುಸ್ತಾಗಿ ಹೋದ್ಲು ನಂದಾ. ಮತ್ತೆ ಅವಳ ಮಾತಿನ ಸುಳಿಯಗೆ ಸಿಕ್ಕೆಣಕೆ ಮನಸ್ಸಿಲ್ದೇ "ನಿನ್ನ ಹೆಸರೇನು..?" ಅಂತಾ ಕೇಳಿ ಮಾತು ಬದಲ್ಸಕೆ ಪ್ರಯತ್ನಿಸಿದ್ಲು.

"ನಿಂಗೆ ಗೊತ್ತಿಲ್ವಾ?" ಶಾರದಾ ನಕ್ಲು.

ನಂದಾ ಸ್ವಲ್ಪ ರೇಗಿಯೇ ಹೇಳಿದ್ಲು "ಯಾವಾಗೇಳ್ದೆ ನೀನು?"

"ಹೇಳೋದೇನಿದೆ? ನಿಂಗೆ ಗೊತ್ತಿರುತ್ತೆ ಅನ್ಕಂಡೆ.." ಅಷ್ಟೆ ತಣ್ಣನ ಮಾತು ಶಾರದಾಳದು.

"ಇಲ್ಲ ನನಗೆ ಗೊತ್ತಾಗ್ಲಿಲ್ಲ. ನೀನೇ ಹೇಳು.." ನಂದಾಳದ್ದು ಅದೇ ಉದ್ವೇಗ.

"ಹೆಣ್ಣು ಅಂತ ನನ್ನೆಸ್ರು.." ಶಾರದ ಹೇಳ್ದಾಗ ನಂದಾಳ ತಲೆಯೊಮ್ಮೆ ಗಿರ್ ಅಂದು ನಿಲ್ತು. ಮಾಡಕೆ ಮನೆಯಗೆ ಬೇಕಾದಷ್ಟು ಕೆಲಸ ಇಟ್ಗಂಡು ಇಲ್ಲಿ ಏನ್ ಮಾಡಕ್ಬಂದೀನಿ ನಾನು ಅಂದ್ಕಂತಾ ಘುಟ್ಫಾಟ್ ಬಿಟ್ಟು ಕೆಳಗಿಳಿದು ಆಟೋಗೆ ಕಾದು ನಿಂತ್ಲು. ಅಷ್ಟರಲ್ಲಿ ಅಲ್ಲೇ

ಎದುರ್ಗಡೆ ಇದ್ದ ರಸವಂತಿ ಕೂಲ್ ಡ್ರಿಂಕ್ಸ್ ಅಂಗಡಿ ಹುಡುಗ ಕೈಯಲ್ಲಿ ಎರಡು ಪೇಪರ್ ಪ್ಯಾಕ್ ಹಿಡ್ಕಂಡ್ಬಂದು ಬಂದು ಸೀದಾ ಶಾರದಾ ಬಳಿ ಹೋದ. "ತಗಳಮ್ಮ.." ಅಂದು ಎರಡನ್ನೂ ಅವಳ್ಮುಂದೆ ಹಿಡ್ದ. ಶಾರದಾ ಎರಡ್ನೂ ಇಸ್ಗಂಡು ತಿರ್ರೀರ್ವಿ ನೋಡಿದ್ಲು. "ಒಂದು ಮಧ್ಯಾಹ್ನಕ್ಕೆ ಇನ್ನೊಂದು ರಾತ್ರಿಗೆ. ನಿಂಗಿಷ್ಟ ಅಲಾ ಬ್ರೆಡ್ ಬಟರ್ ಜಾಮ್! ಅದೇ ಐತೆ ಎರಡೂ ಪ್ಯಾಕೆಟ್‌ನಾಗೂ.." ಅಂದ. ಅವ್ಳು ತಕ್ಷಣ ಒಂದು ಪ್ಯಾಕ್ ವಾಪಸ್ಸು ಕೊಟ್ಲು ಅವನಿಗೆ. "ಮಧ್ಯಾಹ್ನಕೆ ಸಾಕು. ರಾತ್ರಿದು ಯಾರ್ ಕಂಡಿದಾರೆ. ಯಾರಿಗಾದ್ರೂ ಬೇಕಾದವರಿಗೆ ಕೊಡು ನನಗೆ ಒಂದೇ ಸಾಕು.." ಅಂದ್ಲು. "ಇರ್ಲಿ ಇಟ್ಗಳಮ್ಮ.." ಅಂತ ಅವನು ಎಷ್ಟೋ ಬಲವಂತ ಮಾಡಿದ್ರು ಶಾರದಾ ಆ ಇನ್ನೊಂದು ಪ್ಯಾಕ್ ತಗಳ್ಳಿಲ್ಲ. ಕಣ್ಣರಳಿಸಿ ನೋಡ್ತಾ ನಿಂತ ನಂದಾ ಎದುರ್ಗೆ ಅದೆಷ್ಟು ಖಾಲಿ ಆಟೋ ಹಾದು ಹೋದವೋ ಗಮನಕ್ಕೆ ಬರ್ಲಿಲ್ಲ.

ಮನೆಗೆ ಬಂದ್ಮೇಲೂ ಶಾರದಾ ಗುಂಗಿನಿಂದ ಹೊರ್ಗೆ ಬರಕಾಗ್ಲಿಲ್ಲ ನಂದಾಗೆ. ಅವ್ಳ ಮಾತೇ ಮತ್ತೆ ಮತ್ತೆ ಮನದಗೆ ಹಾದು ಹೋಗಕತ್ತಿದ್ವು. ಸ್ವಲ್ಪ ಹೊತ್ತು ಅವಳ್ನ ನೆನಿಸ್ಕಳ್ಳೇಬಾರ್ದು ಅಂತ ಬೇರೆ ಏನೇನೋ ಕೆಲಸ ಮಾಡ್ಕಂಡು ಓಡಾಡ್ತಿದ್ಲು. ಕೆಲಸದ ಮಲ್ಲಿಕಾ ಬಂದ್ಲು ನಾಲ್ಕು ಗಂಟೆಗೆ. ಬಂದೋಳು "ನಾಳೆ ಮಾಯಮ್ಮಂಗೆ ಹೊಂಟೆವಿ. ಹಣ್ಣು ಕಾಯಿ ಏನಾದ್ರು ಕೊಡ್ತಿಯೇನಮ್ಮಾ.." ಅಂತ ಕೇಳಿದ್ಲು. 'ಮಾಯಮ್ಮಾ ಈ ಮಾಯೆಯಿಂದ ನನ್ನ ಬಿಡ್ಸು..' ಅಂತ ಮನಸ್ಸಲ್ಲೇ ಅಂದ್ಕಂಡು "ಚೀಲದಾಗೆ ನಾಕು ಕಾಯಿ ತಗಂಡು ಹೋಗು" ಅಂತ ಹೇಳಿ ಕೈಗೆ ೧೦೦ ರೂ ಕೊಟ್ಲು. "ಅಲ್ಲಮ್ಮ ಎಷ್ಟೊಂದು ಕಾಯಿ ಅದಾವೆ.

ನನಿಗೂ ಒಂದ್ನಾಕು ಕೊಡಮ್ಮಾ.." ಅಂತ ಕೇಳಿದ್ಲು ಮಲ್ಲಿಕಾ. "ಎರಡು ತಗ ಅಂದ್ನಲ್ಲಾ..." ಅಂದ್ಲು ನಂದಾ. "ಅಲ್ಲಮ್ಮ, ಹಣ್ಣುಕಾಯಿ ಮಾಡ್ಸದಾತು.. ಇನ್ನೊಂದ್ನಾಕು ಕೊಡಮ್ಮ ಎಷ್ಟೊಂದದಾವೇ" ಅಂದ್ಲು. ನಂದಾಗೆ ಪಕ್ಕನೆ ಬೆಳಿಗ್ಗಿನ ಘಟನೆ ಕಣ್ಮುಂದೆ ಬಂತು. ಶಾರದಾ, 'ರಸವಂತಿ'ಯ ಹುಡುಗ ಎಷ್ಟು ಬಲವಂತ ಮಾಡಿದ್ರೂ ಎರಡನೇ ಪ್ಯಾಕ್ ತಗಳ್ಲೆ ಇಲ್ಲ. ಪ್ರಾರಂಭದಲ್ಲಿ ಅರ್ಧ ಚಾಕಲೇಟ್‌ನ್ನೂ ಅವಳು ತಕ್ಷಣವೆ ತಿಂದಿರಲಿಲ್ಲ. ನನಗೆ ಈಗ ಅವಶ್ಯಕತೆ ಇಲ್ಲ ಅಂತ. ಎಷ್ಟಿದ್ರೂ ಬೇಕು, ತಮಗೆ ಸಿಕ್ಕರೆ ಸಾಕು ಹೆಂಗಾನ' ಅಂತಲೇ ಎಲ್ಲರೂ ಬದುಕೋವಾಗ ಈಕೆ ಸಿಕ್ಕಿದ್ದನ್ನ ಅವಶ್ಯಕತೆ ಇಲ್ಲ ಅಂತ ಬೇಡ ಅಂತಾಳೆ.. ! ಇದುಕ್ಕೆಯ ಹುಚ್ಚು ಅನ್ನದು ಅವ್ಳಿಗೆ...? ಮತ್ತೆ ಯೋಚನೆಗಳ ಮಡುವಲ್ಲಿ ಮುಳುಗಿಹೋದ್ಲು.

ಒಂದು ವಾರ ಅತ್ತ ಹೋಗಲಿಲ್ಲ ನಂದಾ. ಈ ಮಧ್ಯೆ ಮೊದಲ ಬಾರಿಗೆ ಗಂಡನ ಜತೆ ಜಗಳನೂ ಅಯ್ತು. ದನಿಯೇರಿಸಿ ಕೂಗಾಡಿದ್ಲು ಸಹ. ಅವತ್ತು ಬೆಳಿಗ್ಗಿಂದ ತಲೆನೋವು. ಅದರಲ್ಲೂ ಅಡುಗೆ ಎಲ್ಲಾ ಮುಗಿಸಿ, ಡೈನಿಂಗ್ ಟೇಬಲ್ ಮೇಲಿಟ್ಟು, ಹಾಸಿಗೆಯಲ್ಲಿ ಒರಗಿದವ್ಳಿಗೆ ಯಾವಾಗ ಕಣ್ಣತ್ತಿತ್ತೋ ಗೊತ್ತೆ ಆಗಿರಲಿಲ್ಲ. ಕಣ್ಬಿಟ್ಟಾಗ ಸಂಜೆ ಐದ್ಗಂಟೆ. ಮುಖ ತೊಳೆದು ಬಂದು ನೋಡಿದ್ರೆ ಗಂಡ ಹೊರಗೆ ಸುಮ್ನೆ ಕೂತಿದ್ದ. ಮುಖ ಸಪ್ಪಗಿತ್ತು. ಟೇಬಲ್ ಮೇಲೆ ತಾನು ಮಧ್ಯಾಹ್ನ ಇಟ್ಟಿದ್ದು ಹೇಗಿತ್ತೋ ಎಲ್ಲವೂ ಹಂಗೆ ಇತ್ತು. ಗಾಬರಿಗೊಂಡು ಗಂಡನ ಕಡೆಗೆ ಧಾವಿಸಿ "ಎಷ್ಟೊತ್ತಾಯ್ತು ಬಂದು..? ಊಟ ಮಾಡ್ಲಿಲ್ವಾ..? ನನ್ನ ಎಬ್ಬಿಸ್ಬಾರ್ದಿತ್ತಾ..?" ಒಂದೇಟಿಗೇ ಕೇಳಿದ್ಲು.

"ಮೂರ್ಗಂಟೆಗೇ ಬಂದೆ. ಊಟ ಮಾಡೋಕೆ ನೀನೆಲ್ಲಿದ್ದೆ? ಎಷ್ಟು ಸರ್ತಿ ಎಬ್ಬಿಸಿದ್ರೂ ಏಳ್ಲೆ ಇಲ್ಲ..." ಅಂತ ಸಪ್ಪಗಿನ ದನಿಯಲ್ಲಿ ಹೇಳಿದ. ನಂದಾ ಕುದ್ದುಹೋದ್ಲು ಆ ಮಾತಿಗೆ. ಒಮ್ಮೆಗೆ ರೇಗಿ "ಒಳ್ಳೆ ಕತೆಯಾಯ್ತಲ್ಲ ನಿಮ್ದು! ತಲೆನೋವು ಕಣ್ರೆ ಮಲಗಿದ್ದೆ ನಾನು.. ಎದ್ದೇಳ್ಲಿಲ್ಲಾ ಅಂದ್ರೆ ಏನಾತು. ಅಡಿಗೆಯೆಲ್ಲಾ ಮಾಡಿಟ್ಟಿದ್ನಲ್ಲಾ ಬಡಿಸ್ಕಂಡು ತಿಂದಿದ್ರೆ ಆಗಿತ್ತು.."

ಹಿಂಗಿದ್ದ ನಂದಾ ಪರಿಚಯವೇ ಇಲ್ಲದ ಜಗದೀಶಗೆ ಬಾಯಿ ಬಿದ್ದಂಗಾಯ್ತು. ಕಣ್ಣು ಬಾಯಿ ಬಿಟ್ಕೊಂಡು ಹೆಂಡ್ತಿನ ಹಂಗೆ ನೋಡ್ಕಂಡು ಸುಮ್ನೆ ಕುಂತ. ನಂದಾಗೂ ತನ್ನ ಈ ನಡವಳಿಕೆ ಬಗ್ಗೆ ಗಾಬರಿಯಾಗಿ ಬಿಟ್ಟಿತು. ಆಕಿಗೆ ಅರಿವೇ ಇಲ್ಲದಂಗೆ ಈ ಮಾತು ಬಂದು ಬಿಟ್ಟಿತ್ತು. ಅಲ್ಲಿ ಅರೆಕ್ಷಣ ನಿಲ್ದೆ ಸೀದಾ ಅಡಿಗೆ ಮನೆಗೆ ಹೋಗಿ, ಅವಲಕ್ಕಿ ನೆನಸಿ, ಒಗ್ಗರಣೆ ಮಾಡಿ ಬಿಸಿ ಟೀ ಮಾಡಿ ತಗಂಡು ಬಂದು ಜಗದೀಶನ ಮುಂದೆ ಟೀಪಾಯಿ ಮೇಲೆ ಇಟ್ಟು "ತಗಳ್ಳಿ" ಅಂದ್ಲು. ಅವನಿಗೆ ಪ್ರಿಯವಾದ್ದು. ಒಂದು ವಿಚಿತ್ರ ಭಾವ ಅದು ಬೇಸರ ಕೋಪ ಖುಷಿ ಪಶ್ಚಾತಾಪ ಎಲ್ಲಾ ಮೇಳೈಸಿದ್ದು ಅವಳನ್ನ ಆವರಿಸಿತ್ತು.

ಆನಂತರ ತನ್ನಲ್ಲೇನೋ ಬದಲಾವಣೆ ಆಗಿದೆ ಅಂತ ನಂದಾಗೆ ಅನ್ನಿಸಕೆ ಶುರುವಾದ ಮೇಲೆ ಏನೋ ಒಂಥರ ಸಮಾಧಾನ, ಒಳಗೊಳಗೇ ಸಂಭ್ರಮ. ಆ ಬದಲಾವಣೆ ಜಗದೀಶನಿಗೂ ಗೋಚರಿಸಿದಾಗ ಅದು ಇಮ್ಮಡಿಸಿತ್ತು. ಇದಕ್ಕೆ ಕಾರಣ ಹುಡುಕುವ ಪ್ರಯತ್ನ ಮಾಡಿದಾಗ ಅವಳಿಗೆ ಧುತ್ತನೇ ನೆನಪಾದ್ದು ಶಾರದ. ಅವಳನ್ನ ಯಾಕೋ ಆ ಕ್ಷಣವೇ ನೋಡಬೇಕೆನಿಸಿತ್ತು.

ಒಂದು ವಾರದ ನಂತರ ಮತ್ತೆ ಶಾರದಳನ್ನ ಭೇಟಿಯಾಗಲು ಹೊರಟ್ಲು ನಂದ. ಶಾರದಳ ಮೈಮೇಲಿನ ಸೀರೆ ಅಲ್ಲಲ್ಲಿ ಸವೆದದ್ದು ಕಣ್ಣಿಗೆ ಬಿದ್ದಿತ್ತು. ತನ್ನ ಒಂದೆರಡು ಹಳೇ ಸೀರೆಗಳನ್ನ ತಗಂಡು ಹೊಂಟ್ಲು. ಆಕಿ ಎದುರು ಹೋಗಿ ನಿಂತಾಗ ತಲೆಯತ್ತದೇನೇ ಕೈಚಾಚಿ "ಚಾಕ್ಲೇಟು?" ಅಂದ್ಲು ಶಾರದ. ನಂದಾ ಮುಖ ಸಣ್ಣಗಾಯ್ತು. ಸಾವರಿಸಿಕೊಂಡು "ನಿನ್ನ ಹೆಸರೇಳು ಕೊಡ್ತೀನಿ .." ಅಂದ್ಲು. ಅವ್ಳು ತಕ್ಷಣ "ಶಾರದ.." ಅಂದು ಮತ್ತೆ ಕೈಚಾಚಿದ್ಲು.

"ಓಹ್ ಶಾರದ! ಜ್ಞಾನದೇವತೆ! ಎಂತಹ ಸೊಗಸಾದ ಹೆಸರು...." ನಂದ ತನ್ನ ಸಂತೋಷನ ವ್ಯಕ್ತಪಡಿಸ್ತಾ, ಅವಳಲ್ಲಿನ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸ್ತಾ, ತಾನು ತಂದಿದ್ದ ಸೀರೆಗಳನ್ನ ಅವಳ ಕೈಯಲ್ಲಿಟ್ಟು ಅವಳನ್ನೇ ನೋಡಿದ್ಲು. ಸ್ವಲ್ಪವೇ ತಲೆಯೆತ್ತಿ, ಹುಬ್ಬೇರಿಸಿ ಸೀರೆಗಳ ಮೇಲೆ ಮೃದುವಾಗಿ ಕೈಯಾಡಿಸಿದ್ಲು ಶಾರದಾ.

"ಇಷ್ಟ ಆಯ್ತಾ?" ಅಂತ ಮೆಲ್ಲಗೆ ಕೇಳಿದ್ಲು ನಂದಾ.

"ಯಾರು ಕೊಟ್ಟಿದ್ದು?" ಶಾರದ ಸೀರೆಯಿಂದ ಕಣ್ಣು ಕೀಳದೇ ಕೇಳಿದ್ಲು.

"ಅಮ್ಮಾ ಕೊಡಿಸಿದ್ದು .." ನಂದ ಸಡಗರದಲ್ಲಿ ಹೇಳಿದ್ಲು.

ಶಾರದಾ ತನ್ನ ಸೀರೆ ತೋರಿಸಿ "ಇದೂ ಅಮ್ಮ ಕೊಟ್ಟಿದ್ದು. ಇದಕ್ಕೆ ಎಕ್ಸಪೈರಿ ಡೇಟೇ ಇಲ್ಲಾ .." ಅಂದ್ಲು.

ನಂದಂಗೆ ಛಟೀರ್ ಅಂತ ಹೊಡ್ದಂಗಾತು. ಅವ್ಳ ಕೈಲ್ಲಿದ್ದ ಸೀರೆಗಳ್ನ ಚಕ್ಕಂತ ಎಳ್ಕಂಡ್ಲು. ಶಾರದ ತನ್ನ ಜೋಳಿಗೆಯಿಂದ ನೀರು ತಗ್ದು ಎತ್ತಿ ಕುಡ್ದು ಮತ್ತೆ ಅದನ್ನ ಅಲ್ಲೇ ಮೇಲೆ ಸಿಕ್ಕಿಸಿ "ಬಾ ಬ್ರೆಡ್ಡು ಜಾಮು ತಿಂದು ಬರೋಣ .." ಅಂತ ನಂದನ್ನ ಕರದ್ಲು. ನಂದ ಮರುಮಾತಿಲ್ಲದೇ ಅವಳನ್ನ ಹಿಂಬಾಲಿಸಿ ಹೋಗುವಾಗ ಕೇಳಿದ್ಲು "ನೀವು ಓದಿದೀರಾ?" ಅದಕ್ಕೆ ಅವ್ಳ ನಗೂನೇ ಉತ್ತರ. "ಎಷ್ಟೋದಿದೀರಿ?" ಮತ್ತೆ ಕೇಳಿದ್ಲು.

"ನನ್ನ ತಿಳಿವಿಗೆ ತಿಳಿದಷ್ಟು.." ಈಗ ನಗುವ ಸರದಿ ನಂದಾದು.

"ಶಾರದ ನಿಮ್ಮ ಮನೆ ಇಲ್ವಾ?" ನಗುತ್ತಲೇ ಪ್ರಶ್ನಿದ್ಲು.

"ಇದೇ..." ಅಂದ್ಲು ಶಾರದ. ಅವ್ಳು ಪ್ರತಿಕ್ರಿಯಿಸ್ತಾ ಇದ್ದದು ನಂದಾಗೆ ಭಾಳ ಖುಷಿ ಕೊಡ್ತು.

ಮತ್ತೆ ಕೇಳಿದ್ಲು "ಹೌದಾ ಎಲ್ಲಿದೆ..?"

"ಇಲ್ಲೇ.." ಅಂದ್ಲು ಶಾರದ.

"ಎಲ್ಲೀ..?" ನಂದಾ ಸುತ್ತಾ ನೋಡ್ತಾ ಕೇಳಿದ್ಲು.

ಮತ್ತೆ ಶಾರದ "ಇಲ್ಲೇ.." ಅಂದ್ಲು.

"ತೋರ್ಸಿ ಹಾಗಾದ್ರೆ.." ನಂದನೂ ಬಿಡಲಿಲ್ಲ.

ಶಾರದಾ ಎದುರು ಇರೋ ಎಲ್ಲಾ ಹೋಟಲ್ಗಳತ್ತ ಕೈಮಾಡಿ "ಇವೆಲ್ಲಾ ನನ್ನದೇ ಮನೆಗಳು. ಅದರಲ್ಲಿ ಇರೋರೆಲ್ಲಾ ನನ್ನ ಅಪ್ಪ ಅಮ್ಮಾ ಅಣ್ಣ ತಮ್ಮ ಅಕ್ಕ ತಂಗೇರು.." ಅಂದ್ಲು. ನಂದ ಅವಕ್ಕಾದ್ಲು. ಅಷ್ಟೊತ್ತಿಗೆ ರಸವಂತಿ ಎದುರು ನಿಂತಿದ್ರು ಇಬ್ರು.

'ಎರಡು ಬ್ರೆಡ್ ಬಟರ್ ಜಾಮ್..' ಅಂತ ಹೇಳಿ ಕಾಯ್ತಾ ನಿಂತ್ರು ಇಬ್ರು. ಸುತ್ತಲಿನ ಜನ ನಂದಾಳನ್ನೂ ಸ್ವಲ್ಪ ಅನುಮಾನದಿಂದಲೇ ನೋಡಿದ್ರು. ಆದ್ರವ್ಳಿಗೆ ಅದಾವುದರ ಕಡೆ ಗಮನ ಇರ್ಲಿಲ್ಲಾ. ಅವಳ ಮನಸ್ಸೆಲ್ಲಾ ಶಾರದ ಆಡಿದ ಮಾತಲ್ಲೇ ಮುಳುಗಿತ್ತು. ಅಷ್ಟರಲ್ಲಿ ಇವರ ಪಕ್ಕದಲ್ಲಿ ಒಬ್ಬ ಹೆಂಗಸು ಮೂರು ವರ್ಷದ ಮಗೂನ ಎತ್ಗಂಡು ಬಂದು ನಿಂತ್ರು. ಅದರ ದೃಷ್ಟಿಯಲ್ಲಾ ಪಕ್ಕಕ್ಕೇ ನಿಂತಿದ್ದ ಶಾರದಳ ಗಂಟಿನೊಳಗಿಂದ ಇಣುಕುತ್ತಿದ್ದ ನೀರಿನ ಬಾಟಲ್ ಮೇಲೇ ಇತ್ತು. ಸ್ವಲ್ಪ ಹೊತ್ತು ನೋಡಿದ ಮಗು ಥಟ್ಟನೆ ಕೈ ಹಾಕಿ ಆ ಬಾಟಲನ್ನ ಸರಕ್ಕಂತ ಎಳ್ಕಂತು. ಶಾರದ ಆ ಮಗುವಿನಂಗೇ ನಕ್ಲು ಅದನ್ನ ನೋಡಿ. ಆದ್ರೆ ಮಗುವಿನ ಅಮ್ಮ ಆ ಮಗುವಿನ ಕೈಯಿಂದ ಬಾಟಲ್ಲು ಕಿತ್ತು ಶಾರದ ಕೈಗೇ ಕೊಟ್ಟು "ಥೂ ಗಲೀಜು..." ಅಂದು ಮಗೂಗೆ ಬೇರೆ ಒಂದು ಬಾಟಲ್ಲನ್ನು ಕೊಟ್ಲು. ಸ್ವಲ್ಪ ದೂರ ಸರ್ಕಂಡು ನಿಂತ್ಲು. ಅಲ್ಲಿವರ್ಗು ಸುಮ್ಮನಿದ್ದ ಶಾರದ ಹೋದೋಳೇ ಆ ಮಗುವಿನ ಕೈಲಿದ್ದ ಬಾಟಲ್ ಕಿತ್ತುಕೊಂಡ್ಲು. ಆ ಹೆಂಗಸು ಸುಮ್ಮನೆ ಕಿರುಚ್ಕಂಡು ಇನ್ನೂ ದೂರ ಹೋತು. ಎಲ್ಲರೂ ಗಾಬರಿ. ನಂದಾ " ಶಾರದ ಏನ್ಮಾಡ್ತಿದೀರಿ..?" ಅನ್ನಿದ್ರೂ ಶಾರದ ಆ ಬಾಟಲಿನ ಮುಚ್ಚಳ ತಗ್ದು ಬಿಸಾಕಿದ್ಲು. ತನ್ನ ಬಾಟಲಿನ ಮುಚ್ಚಳವನ್ನೂ ತಗ್ದು ಬಿಸಾಕಿ ಏನೋ ಪರೀಕ್ಷೆ ಮಾಡೋಳಂಗೆ ಎರಡ್ರಲ್ಲೂ ಇಣಿಕಿ ಇಣಿಕಿ ನೋಡಿದ್ಲು, ಮೂಸಿ ನೋಡಿದ್ಲು. ಆಮೇಲೆ ಎರಡು ಬಾಟಲಿನ ನೀರನ್ನ ಕುಡ್ಲು, ಆಮೇಲೆ ನೀರು ಚಲ್ಕಂತ "ಹೇ ಹೇ ಹೇ ಹೇ ಎರಡೂ ಒಂದೇ.. ಎರಡಕ್ಕೂ ಬಣ್ಣ ಇಲ್ಲಾ.. ವಾಸನೆ ಇಲ್ಲಾ.. ಎರಡೂ ಒಂದೇ.." ಅಂತ ಬಾಟಲ್ ಬಿಸಾಕಿ, ಜೋರಾಗಿ ಚಪ್ಪಾಳೆ ತಟ್ಕಂತಾ, ನಕ್ಕಂತಾ ಅಲ್ಲಿಂದ ಹೊರಟೇ ಬಿಟ್ಲು. ನಂದ ಫುಲ್ ಕಕ್ಕಾವಿಕ್ಕಿ. ಅವಳನ್ನ ಈ ಪರಿಸ್ಥಿಯಲ್ಲಿ ತಡೆಯೋದು ಸರಿಯಲ್ಲ ಅಂದುಕೊಂಡು ಮನೆಯತ್ತ ಹೊರಟ್ಲು ಅವಳು ಅಂಗಡಿಯವ ಕೊಟ್ಟ ಎರಡು ಪ್ಲೇಟ್ ಬ್ರೆಡ್ ಜಾಮ್ ಪಾರ್ಸಲ್ ಇಸ್ಕಂಡು.

ಮನೆಗೆ ಬಂದ್ರೂ ನಂದಂಗೆ ಸಮಾಧಾನವೇ ಇರಲಿಲ್ಲ. ಮತ್ತೆ ಮತ್ತೆ ಆ ಘಟನೆ ನೆನಪಾಗ್ತ ಆಕೇನ ದಂಗು ಬಡಿಸ್ತಾ ಇತ್ತು. ಮಲಗಲು ಪ್ರಯತ್ನಿಸಿದ್ಲು. ಆದ್ರೆ ಎದುರಿಗಿದ್ದ ಬ್ರೆಡ್ ಜಾಮ್ ಪ್ಯಾಕೆಟ್ಟುಗಳು ಅವಳನ್ನ ಬಡಿಬಡಿದು ಎಬ್ಬಿಸ್ತಿದ್ವು. ಶಾರದಾ ರಾತ್ರಿ ತಂಗುತ್ತಿದ್ದ ಅಪಾರ್ಟ್ಮೆಂಟಿಗೇ ಹೋಗಿ ಕೊಟ್ಟು ಬರಲೇ ಅಂತ ಯೋಚಿಸ್ತಿದ್ಲು. ಅವ್ಳು ಬಸ್ ಸ್ಟ್ಯಾಂಡ್ ಕಡೆಗೆ ಓಡಿದ್ಲು ಸಾಯಂಕಾಲ. ಅಲ್ಲೇ ಒಂದು ರೌಂಡ್ ಹೋಗಿ ಬರಲೇ ಅನ್ನುಸ್ತು. ಆದ್ರೆ ಆಗ್ಲೇ ಸಂಜೆ ಏಳ್ಗಂಟೆ ಆಗ್ತಾ ಇತ್ತು. ಗಂಡ ಮನೆಗೆ ಬರೋ ಹೊತ್ತು ಏನಾದ್ರು

ಅಂದ್ಬಿಟ್ರೆ ಅನ್ನೋ ಭಯ ಒಂದ್ಕಡೆ. ಅವಳನ್ನ ಭೇಟಿಯಾದಾಗಿನಿಂದ ನಡೆದ ಪ್ರತಿಯೊಂದು ಘಟನೆ ಅವಳ ಮನದಲ್ಲಿ ಹಸಿಯಾಗಿತ್ತು. 'ಹುಚ್ಚೀನೇ ಆಕಿ? ನಾವೆಲ್ಲರೂ ಆಕೀನ ಹಂಗೇ ತಿಳ್ಕಂಡಿದ್ವಿ. ಆದ್ರೆ ಅವ್ಳ ಒಂದೊಂದು ಮಾತೂ ಎಷ್ಟು ಅರ್ಥಗರ್ಭಿತ! ಅವಳ ಮಾತುಗಳಲ್ಲಿ ಏನೆಲ್ಲಾ ತತ್ವ, ತರ್ಕ, ನೀತಿ ಬೋಧ ಅಡಗಿರತ್ತೆ. ಶಾರದ ಹಿನ್ನಲೆ ಏನಿರ್ಬಹುದು? ಅವ್ಳು ಯಾರು? ಅವಳ ನಡೆನುಡಿ ಗಮನಿಸಿದ್ರೆ ಖಂಡಿತ ಆಕೆ ವಿದ್ಯಾವಂತೆ ಅನ್ಸುತ್ತೆ..' ಅಂತ ಒಂದೇ ಯೋಚನೆ ಅವ್ಳು ಮಾಡಿದ್ಲು ಕುಂತು.. ಆ ಮಗುವಿಗೂ, ಶಾರದಗೂ ಏನೂ ವ್ಯತ್ಯಾಸವಿರ್ಲಿಲ್ಲಾ. ಅದೇ ಮುಗ್ಧತೆ, ಅಷ್ಟೇ ನಿಷ್ಕಲ್ಮಶ..

ಆದ್ರೇ ಶಾರದಳ 'ಹೇ ಹೇ ಹೇ ಹೇ ಎಲ್ಲಾ ಒಂದೇ..' ಅನ್ನೋ ಮಾತಲ್ಲಿ ದೊಡ್ಡ ತತ್ವವೇ ಪ್ರತಿಫಲಿಸಿದ್ದು ಕಾಣಿಸ್ತು. ಶಾರದ ತನಗೆ ಅನ್ನ ಕೊಟ್ಟೋರನ್ನ ಅವ್ವ ಅಂತಾಳೆ. ಅಂಗಡಿ ಮುಂದೆ ಕೂರಲು ಜಾಗ ಕೊಟ್ಟೋರನ್ನ ಅಪ್ಪಾ ಅಂತಾಳೆ, ತನ್ನ ಸುತ್ತ ಇರೋರನ್ನೇ ಬಂಧು ಬಳಗ ಅಂತಾಳೆ, ತನಗೆಷ್ಟು ಬೇಕೋ ಅಷ್ಟೇ ತಿಂತಾಳೆ, ತಾನು ಕುಂತಿರೋ ಜಾಗನೇ ತನ್ನ ಮನಿ ಅಂತಾಳೆ, ತನಗೆ ಅವಶ್ಯ ಇಲ್ಲಾ ಅನ್ನೋದನ್ನ ಕಣ್ಣೆತ್ತಿಯೂ ನೋಡಲ್ಲ, ದುರಾಸೆ ಇಲ್ಲಾ. ತನಗೆ ಖುಷಿ ಅನ್ನಿಸಿದ್ದನ್ನು ಮಾಡ್ಕಂಡು, ಅವ್ಳಿಗೆ ಹುಚ್ಚು ಅಂತ ಎಲ್ಲರೂ ಹೇಳಿದ್ರೂ ತಾನು ಮಾತ್ರ ಯಾರಿಗೂ ಒಂಚೂರು ತೊಂದ್ರೆ ಕೊಟ್ಟೋಳಲ್ಲಾ. ತಾನಿರುವ ಸ್ಥಿತಿಯನ್ನು ಸಂಪೂರ್ಣ ಒಪ್ಪಿಕೊಂಡು, ಯಾರನ್ನೂ ದೂಷಿಸದೇ ಇರೋದ್ರಲ್ಲೇ ನೆಮ್ಮದಿ ಕಂಡುಕೊಂಡು ತೃಪ್ತಿಯಿಂದ ಬದುಕ್ತಾ ಇದಾಳೆ. ಇದೇ ಅಲ್ವಾ ವಿರಕ್ತಿ. ಇದೇ ವೈರಾಗ್ಯ.. ಇದೇ ತಾನೇ ಸಮದರ್ಶಿ ಭಾವ!

ನಂದ ದಿಗ್ಗನೆ ಎದ್ದು ನಿಂತ್ಲು. ಎದುರಿದ್ದ ಬ್ರೆಡ್ ಬಟರ್ ಜಾಮ್ ಪ್ಯಾಕೆಟ್ ಎತ್ತಿಕಂಡು, ಚಪ್ಪಲಿ ಮೆಟ್ಟಿ ಹೊರಟ್ಲು. ಆಗಲೇ ಎಂಟು ಗಂಟೆ. ಸೀದಾ ಬಸವರಾಜು ಅಂಗಡಿಗೆ ಹೋದ್ಲು. ಶಾರದಾ ಆಗ ಹೋದವ್ಳು ತಿರುಗಿ ಬಂದಿಲ್ಲಾ ಅಂತ ತಿಳೀತು. ಅವರಲ್ಲಿ ರಾಯರ ಮಠದ ರಸ್ತೆಯ ಆ ಅಪಾರ್ಟಮೆಂಟಿನ ವಿಳಾಸ ಪಡೆದು ಅತ್ತ ಹೊರಟ್ಲು ನಂದಾ. ಅಲ್ಲಿ ಹೋಗಿ ನೋಡಿದ್ರೆ ಯಾಕೋ ಭಾಳ ಜನ ಇದ್ದಂಗಿದ್ರು. ಅಲ್ಲಿ ನೆರದಿದ್ದವರಲ್ಲಿ ಒಬ್ಬರನ್ನ 'ಏನಾಯ್ತು?' ಅಂತ ಕೇಳಿದ್ದಕ್ಕೆ. "ನಮ್ಮ ಬಿಲ್ಡಿಂಗಿನಲ್ಲಿ ಒಬ್ಳು ಹುಚ್ಚಿ ಇರ್ತಿದ್ಲು ಅವಳನ್ನ ಪೋಲಿಸ್ರು ಹಿಡ್ಕಂಡೋದ್ರು ಐದ್ಗಂಟೆ ಹೊತ್ಗೆ ಅದಕ್ಕೆ.." ಅಂತ ಹೇಳಿದ್ರು. ಮೆಟ್ಟಿಬಿದ್ಲು ನಂದ. "ಯಾರೂ ಶಾರದನ್ನಾ..? ಯಾಕೆ? ಏನಾಯ್ತು..?" ಗಾಬರಿಯಿಂದ ಕೇಳಿದ್ಲು.

ತಕ್ಷಣ ಬಸವರಾಜುಗೆ, ಜಗದೀಶನಿಗೆ ಫೋನ್ ಮಾಡಿ ಅಳುತ್ತಳುತ್ತ ವಿಷಯ ತಿಳಿಸಿದ್ಲು. ಅವರಿಬ್ರೂ ಧಾವಿಸಿ ಬಂದ್ರು. ಆ ಬಿಲ್ಡಿಂಗ್ ಓನರ್ ಹತ್ರ ಕರ್ಕಂಡು ಹೋದ್ರು. ಎಲ್ಲರಿಗೂ ಗೊತ್ತಿರುವ ವಿಷಯ ಇಷ್ಟೇ.

ಅವರ ಬಿಲ್ಡಿಂಗಿನಿಂದ ಮೂರು ಮನೆಯ ಆಚೆಗೆ ಒಂದು ಹೊಸಮನೆಯ ಗೃಹಪ್ರವೇಶ ಇತ್ತು. ಆ ಮನೆಯವರೇ ಅವಳ ಮೇಲೆ ದೂರು ಕೊಟ್ಟಿರೋದು. ಶಾರದ ಅಲ್ಲಿ ಏನೋ ಕದಿಯೋಕೆ ಹೋಗಿ ಸಿಕ್ಕಿ ಹಾಕ್ಕಂಡ್ಲು ಅನ್ನೋದೇ ಅವರ ದೂರು. ಏನು ಕದ್ಲು ಅನ್ನೋದು ಮಾತ್ರ ಯಾರೂ ಹೇಳ್ತಿಲ್ಲಾ. ನಂದ ಓನರಿಗೆ ಕೇಳಿದ್ಲು "ನೀವು ನಂಬ್ತೀರಾ ಸರ್ ಶಾರದ ಕದೀತಾಳಂದ್ರೇ..?" ಕಣ್ಣೀರು ಹಾಕುತ್ತಾ.

"ಕಷ್ಟ ಕಣಮ್ಮಾ ಏನು ಹೇಳೋಕೇ ಆಗಲ್ಲಾ ಈಗಿನ್ಕಾಲದಗೇ" ಅಂದ್ರು ಅವರು. ನಂದಂಗೆ ಸಿಟ್ಟೇ ಬಂದುಬಿಡ್ತು. "ಏನ್ಸಾರ್ ಅವತ್ತು ನೀವೇ ತಾನೇ ಅವರನ್ನ ಅಷ್ಟು ಹಾಡಿ ಹೊಗಳಿದ್ದು.. ಅವರೇ ಇಡೀ ಬಿಲ್ಡಿಂಗಿಗೆ ಸೆಕ್ಯುರಿಟಿ ಅಂತಿದ್ರೀ.." ನಂದ ದಬಾಯಿಸಿದ್ಲು.

"ಹಂಗಲ್ಲಮ್ಮಾ. ಆ ಮನೆಯೋರೂ ತುಂಬಾ ದೊಡ್ಮನುಷ್ರು. ಅವ್ರು ವಿನಾಕಾರಣ ಆಕೇನಾ ಯಾಕೆ ಅರೆಸ್ಟ್ ಮಾಡಿಸ್ತಾರೆ ಹೇಳಿ.."

"ನೀವು ಕೇಳಿದ್ರಾ ಅವರನ್ನ..? ಬನ್ನಿ ಸರ್ ಹೋಗಿ ಏನಾಯ್ತು ಅಂತಾದ್ರೂ ಕೇಳೋಣ ಅಟ್ಲೀಸ್ಟ್..." ನಂದ ಪಟ್ಟು ಹಿಡಿದ್ಲು. "ಕೇಳೋಣ ಬನ್ನಿ ಎಲ್ರೂ ಹೋಗಿ" ಅಂತ ಬಸವರಾಜುನೂ ಹೇಳ್ದಾಗ ಹೊರಟ್ರು.

ಅವರನ್ನೆಲ್ಲಾ ತುಂಬಾ ಆದರದಿಂದ್ಲೇ ಬರಮಾಡಿಕೊಂಡು "ಕೂಡಿ.." ಅಂದರು ಆ ಮನೆಯ ಯಜಮಾನರು. ಬಸವರಾಜು ನೇರ ವಿಷಯಕ್ಕೇ ಬಂದ್ರು "ಸರ್ ಆ ಹೆಣ್ಮಗ್ಳು ತುಂಬಾ ಒಳ್ಳೇರು ಸರ್. ಇನ್ನೊಬ್ರ ವಸ್ತು ಕದಿಯೋ ಅಂತ ಹೆಣ್ಮಗ್ಳಲ್ಲಾ..."

ಅದಕ್ಕೆ ನಂದನೂ ದನಿ ಸೇರಿಸಿದ್ಲು "ನಾವು ಕರುಣೆ, ಪ್ರೀತಿಯಿಂದ ಎರಡು ಚಾಕ್ಲೇಟ್ ಕೊಟ್ರೆ ಅವಶ್ಯಕತೆಯಿಲ್ಲಾ ಅಂತ ಒಂದೇ ತಗಂತಿದ್ರು ಅಂತವ್ರು ಕದಿಯೋಕೆ ಸಾಧ್ಯನೇ ಇಲ್ಲಾ ಸರ್. ಏನೋ ಮಿಸ್ಟೇಕ್ ಆಗಿರ್ಬೇಕು ಸರ್.." ಅಂತ



ಚಿತ್ರ: ಸಂಘಮಿತ್ರೆ

"ಹೌದು ಸರ್ ನಮ್ ಬಿಲ್ಡಿಂಗ್ನಗೇ ಇರ್ತಿತ್ತು ಆಯಮ್ಮ ಯಾವಾಗ್ಲೂ. ಹೆಚ್ಚಕಮ್ಮಿ ಒಂದು ವರ್ಷದಿಂದ ಇತ್ತು. ಯಾವತ್ತೂ ಆಯಮ್ಮನಿಂದ ನಮ್ಗೆ ತೊಂದ್ರೆ ಆಗಿಲ್ಲಾ ಸರ್.." ಅಂತ ಓನರ್ರೂ ಹೇಳಿದ್ರು.


ಎಲ್ಲರ ಮಾತು ಕೇಳಿದ್ದೇ ಆತ "ಛೆ ಛೆ ಕಳ್ಳತನ ಮಾಡಿದಾಳೆ ಅಂತ ಅಲ್ಲಾ.. ಆಕೇನ ರಿಹಾಬಿಟೇಟ್ ಮಾಡೋಕೆ ಕರ್ಕಂಡು ಹೋಗಿರೋದು. ನೀವೆಲ್ಲಾ ಆಕೆ ಬಗ್ಗೆ ತೋರಿಸ್ತಿರೋ ಕಾಳಜಿ ಪ್ರೀತಿ ನಿಜಕ್ಕೂ ಗ್ರೇಟ್. ಆದರೆ ಆಕೆಗೂ ಒಂದು ನೆಲೆ ಬೇಕಲ್ಲಾ ಅದಕ್ಕೆ ಕರ್ಕೊಂಡು ಹೋಗಿರೋದು. ಷಿ ಇಸ್ ಇನ್ ಸೇಫ್ ಹ್ಯಾಂಡ್ಸ್ ಅಂಡ್ ಷಿ ವಿಲ್ ಬಿ ಆಲ್ರೈಟ್ ಡೋಂಟ್ ವರಿ.." ಅಂದು ಎದ್ದು ಕೈ ಮುಗಿದು ನಿಂತ್ರು ಇನ್ನು ಹೊರಡಿ ಎಂಬಂತೆ. ಹೆಚ್ಚು ಮಾತಿಗೆ ಅವಕಾಶವೇ ಕೊಡ್ಲಿಲ್ಲ ಆತ.

"ಸರ್ ಒಂದ್ಸಾರಿ ಅವರನ್ನ ನೋಡ್ಬಹುದಾ?" ನಂದ ಕಣ್ತುಂಬಿ ಕೇಳಿದ್ಲು.

"ಇಲ್ಲಮ್ಮಾ ಈಗ ಆಗೋಲ್ಲಾ. ಅವರಾಗ್ಲೆ ಬೆಂಗ್ಳೂರು ಹತ್ತತ್ರ ತಲುಪಿರ್ಬೇಕು. ಅವ್ರು ಸರಿ ಹೋಗೋವರ್ಗೂ ವಿಸಿಟರ್ಸನಾ ಬಿಡಲ್ಲಾ. ಚನ್ನಾಗಾದ್ಮೇಲೆ ಬರ್ತಾಳೆ ಬಿಡಿ.." ಅಂದ್ರು, ಹೆಚ್ಚು ಮಾತಾಡದೇ ಹೊರಟು ಬಂದ್ರು ಎಲ್ಲಾ. ಮತ್ತೇ ಶಾರದ ಕಾಣ್ಲೇ ಇಲ್ಲಾ. ಆದರೆ ಮೂರು ತಿಂಗಳಾದ ಮೇಲೆ ಗೊತ್ತಾದ ಸತ್ಯ ಏನಂದ್ರೆ ಆ ಹೊಸಮನೆಯ ಯಜಮಾನ ಬೇರಾರೂ ಅಲ್ಲಾ ಶಾರದಳ ಸ್ವಂತ ಅಣ್ಣನೇ ಅಂತ..

ಮತ್ತೆ ಶಾರದಳನ್ನ ಯಾರೂ ನೋಡ್ಲಿಲ್ಲಾ. ಸಮಯದ ಜತೆಗೆ ಆಕೆಯ ನೆನಪೂ ಮಾಸುತ್ತಾ ಬಂತು ಎಲ್ಲರಲ್ಲು. ಯಾಕೋ ನಂದಂಗೆ ಪದೇ ಪದೇ ಶಾರದ ಹೇಳಿದ 'ದುಡ್ಡಿನ ಮುಂದೆ ಏನೂ ಇಲ್ಲಾ' ಅನ್ನೋ ಮಾತೇ ನೆನಪಿಗೆ ಬರ್ತಿತ್ತು. ಎಷ್ಟೋ ಸಲ ಹೊಸಮನೆಗೆ ಹೋಗಿ ಬೈಸಿಕೊಂಡು ಬಂದ್ಲೇ ಹೊರ್ತು ಶಾರದಳ ಬಗ್ಗೆ ಏನೂ ತಿಳಿಲಿಲ್ಲಾ. ಜಗದೀಶನಿಗಾಗ್ಲಿ, ಬಸವರಾಜುಗಾಗ್ಲಿ ಯಾರಿಗೂ ಅವಳ ವಿಷ್ಯ ಮಾತಾಡೋ ಆಸಕ್ತಿ, ಪುರುಸೊತ್ತು ಉಹೂಂ ಏನೂ ಇರ್ಲಿಲ್ಲಾ.

ಆದರೆ ನಂದಳಲ್ಲಿ ಆಕೆ ಹಸುರಾಗಿಯೇ ಇದ್ಬಿಟ್ಲು. ಆಗಾಗ ಅವ್ಳೂ ಶಾರದಳ ಹಾಗೆಯೇ ಡ್ರೆಸ್ ಮಾಡಿಕೊಂಡು ಕನ್ನಡಿ ಮುಂದೆ ನಿಂತು " ನಾವೆಲ್ಲಾ ಮನುಷ್ಯರು ಅನ್ನೊ ಹಂಗೇನೇ ನಂದೂ ಅನ್ನೊ ಭಾವನೇನೂ ನಮ್ಮೊಳಗೆ ಚಿಗುರಿ ಬೆಳೀಬೇಕು. ಅದು ಯಾವತ್ತೂ ನಮ್ಮನ್ನ ನಮ್ಮ ಮೂಲದಿಂದ ದೂರ ಮಾಡಲ್ಲ.." ಅಂತ ಹೇಳ್ಕಂತಾಳೆ. ತಾನೂ ಒಂದು ನೂರು ಪೇಜಿನ ನೋಟ್‌ಬುಕ್ಕು ಇಟ್ಗಂಡು ಚುಕ್ಕಿಯಿಟ್ಟು ಗೆರೆಗಳಿಂದ ಕೂಡಿಸುತ್ತಾ ಕೂರ್ತಾಳೆ. ಅದರಿಂದಲೇ ತನಗೇ ತಾನು ಧೈರ್ಯ ತಗಂಡು ಸ್ಫೂರ್ತಿ ಪಡೆದು ಸಮದರ್ಶಿ ಭಾವಕ್ಕೆ ತುಡೀತಾಳೆ.



**(ದಾವಣಗೆರೆಯಲ್ಲಿ ನೆಲೆಸಿರುವ ಬಿ.ಟಿ. ಜಾಹ್ನವಿ ಕನ್ನಡದ ವಿಶಿಷ್ಟ ಕತೆಗಾರ್ತಿಯಾಗಿದ್ದು ಇಂಗ್ಲಿಷ್ ಸಾಹಿತ್ಯದ ಸ್ನಾತಕೋತ್ತರ ಪದವೀಧರೆ ಹಾಗೂ ರಂಗಭೂಮಿಯ ಸಕ್ರಿಯ ಕಾರ್ಯಕರ್ತೆಯೂ ಹೌದು)**

# 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು' ಎಂದ ಕನ್ನಡದ ನವೋದಯದ ಬಗ್ಗೆ...

–ಡಾ. ನಿತ್ಯಾನಂದ ಬಿ ಶೆಟ್ಟಿ

**ದಾರ್ಶನಿಕತೆ, ವೈಚಾರಿಕತೆ ಮತ್ತು ಸೃಜನಶೀಲತೆಗಳನ್ನು ಸಾಹಿತ್ಯವೊಂದರ ಜೀವದ್ರವ್ಯ ಎಂದು ಪರಿಭಾವಿಸುವ ನನ್ನಂಥ ಸಾಹಿತ್ಯ ಅಭ್ಯಾಸಿಗೆ ನವೋದಯದ ಸಾಹಿತ್ಯ ಈ ಕಾರಣಕ್ಕೆ ಲೋಕೋತ್ತರವಾಗಿದೆ ಎಂದು ಅನ್ನಿಸುತ್ತಿದೆ. ನನ್ನ ಮಟ್ಟಿಗೆ ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ ಮತ್ತು ಪುತಿನರಂಥವರ ಬಳಿಗೆ ನಾವು ಮತ್ತೆ ಮತ್ತೆ ಹೋಗಬೇಕಾಗಿರುವುದು ಅವರ ಸೃಜನಶೀಲ ನಿರೂಪಣೆಯ ಸುಭಗ ಶೈಲಿಗಲ್ಲ. ಅವರ ಕಥನಕ್ರಮಕ್ಕಾಗಿ ಅಲ್ಲ. ಬದಲಿಗೆ ಅವರು ಕಂಡರಿಸಿದ ದಾರ್ಶನಿಕತೆಗಾಗಿ. ಆ ದಾರ್ಶನಿಕತೆಯಲ್ಲಿ ನಮ್ಮನ್ನು ಕೈ ಹಿಡಿದು ಮುನ್ನಡೆಸುವ ಬೆಳಕಿದೆ.**

**ಬೆಂ**ಗಳೂರಿನಲ್ಲಿ ಇತ್ತೀಚೆಗೆ ನಡೆದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವೊಂದರಲ್ಲಿ ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಪ್ರಾಧ್ಯಾಪಕರೊಬ್ಬರು ಅಂಬೇಡ್ಕರ್ ಬಗ್ಗೆ ಬಹಳ ವಿದ್ವತ್‌ಪೂರ್ಣವಾದ ಉಪನ್ಯಾಸವೊಂದನ್ನು ನೀಡಿದರು. ಆಮೇಲೆ ಪ್ರಶ್ನೋತ್ತರ ಇತ್ತು. ನಾನು ಪ್ರೊಫೆಸರ್ ಅನ್ನು ಕೇಳಿದೆ. "ಸರ್, ಇವತ್ತು ಗಾಂಧಿಯನ್ನು ಟೀಕಿಸಿ–ಹಂಗಿಸಿ–ತಮಾಷೆ ಮಾಡಿದರೂ ಗಾಂಧೀವಾದಿಗಳು ಯಾರೂ ಕೋಪಿಸಿಕೊಳ್ಳುವುದಿಲ್ಲ, ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟ ಉಂಟು ಮಾಡುವುದಿಲ್ಲ. ಆದರೆ ಪ್ರವಾದಿ ಮುಹಮ್ಮದ್‌ರನ್ನು ಮತ್ತು ಅಂಬೇಡ್ಕರ್‌ರನ್ನು ಸಕಾರಣವಾಗಿ ಟೀಕಿಸಿದರೆ ಅಥವಾ ವ್ಯಂಗ್ಯ ಚಿತ್ರವೊಂದನ್ನು ಬರೆದರೆ ಸಮಾಜದ ಪರಿಸ್ಥಿತಿ ವಿಷಮಗೊಳ್ಳುತ್ತದಲ್ಲ. ಈ ಸಂಕೀರ್ಣ ಸಾಮಾಜಿಕ ವಿದ್ಯಮಾನವನ್ನು ಹೇಗೆ ವಿವರಿಸಬಹುದು? ಅದಕ್ಕೆ ಆ ಪ್ರೊಫೆಸರ್ ಅವರು "ನನಗೇನೂ ದಲಿತ ಮೂಲಭೂತವಾದ ಇದೆ ಅಂತ ಅನ್ನಿಸೋದಿಲ್ಲ. ಇದ್ದರೂ ಇರಲಿ ಬಿಡಿ" ಅಂದರು. ಸಾವರಿಸಿಕೊಂಡ ನನಗೆ ತಕ್ಷಣ ನೆನಪಿಗೆ ಬಂದದ್ದು ಕೆಲವು ತಿಂಗಳುಗಳ ಹಿಂದೆ ಮಂಗಳೂರಿನಲ್ಲಿ ನಡೆದ 'ಜನ–ನುಡಿ' ಸಮ್ಮೇಳನದಲ್ಲಿ ದೇವನೂರು ಮಹಾದೇವ ಅವರು ಭಗವದ್ಗೀತೆಯ ಕುರಿತಂತೆ ಆಡಿದ ಮಾತಿಗೆ ವ್ಯಗ್ರಗೊಂಡಿದ್ದ ಓರ್ವ ದಲಿತ ಹುಡುಗ (ಆತ ಹುಡುಗನೇ ಇದ್ದಿರಬಹುದು ಎಂಬುದು ನನ್ನ ಊಹೆ) ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸುತ್ತ 'ಮಹಾದೇವರನ್ನು ಕೊಲೆ ಮಾಡಬೇಕು' ಎಂದಿದ್ದ. 'ನನ್ನ ಕೊಲೆ ಓರ್ವ ದಲಿತನಿಂದಲೇ ಆಗುವುದಾದರೆ ಅದೂ ಆಗಲಿ ಬಿಡಿ' ಎಂದಿದ್ದರು ಮಹಾದೇವ.

ದಲಿತ ಸಾಹಿತ್ಯವೂ ಸೇರಿದಂತೆ ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಓದಿಕೊಂಡ ಯಾರೇ ಆದರೂ ಅವರು ರಾಜಕೀಯ ಸಿದ್ಧಾಂತವೊಂದರ ಕಾಲಾಳುಗಳಂತೆ ವರ್ತಿಸುವುದು ಸಾಧ್ಯವಿಲ್ಲ. ಆದರೆ ವಿಶೇಷವಾಗಿ ದಲಿತ ಮತ್ತು ಬಂಡಾಯ ಸಾಹಿತ್ಯದ ಓದು ಕನ್ನಡದ ಸಂದರ್ಭದಲ್ಲಿ ಅಪಾರ ಪ್ರಮಾಣದ ವಿವೇಕಿಗಳ ಜೊತೆ ಹಲವು ವಿಚಾರವಾದಿ ಸೈನಿಕರನ್ನೂ ಸೃಷ್ಟಿಸಿದೆ. ಈ ವಿಚಾರವಾದಿಗಳಿಗೆ ಪ್ರಾಚೀನವಾದುದೆಲ್ಲವೂ ಅಸಂಗತವಾಗಿ, ಬೂಸಾ ಆಗಿ ಕಂಡು ಬಂದಿದೆ. ನಮ್ಮ ಹಿಂದಣವನ್ನು ಇದುವರೆಗೆ ನೋಡಿದ ರೀತಿ ನಮ್ಮನ್ನು ಒಂದು ಹಂತದವರೆಗೆ ಕೊಂಡೊಯ್ದಿದೆ. ಆದರೆ ಇನ್ನು ಮುಂದೆ ಸಾಗುವುದಕ್ಕೆ ಈ ಮಾರ್ಗ ಬೆಳೆದಿಲ್ಲ. ಬದಲಿ ಮಾರ್ಗಗಳ ಮೂಲಕ ನಮ್ಮ ಪೂರ್ವಸೂರಿಗಳನ್ನು ಹೊಸದಾಗಿ ಅರಿಯುವ ಪ್ರಯತ್ನವನ್ನು ಮಾಡೋಣ ಎಂಬ ಹಿರಿಯರು ಈ ವಿಚಾರವಾದಿಗಳಿಗೆ ಪ್ರಗತಿವಿರೋಧಿಗಳೂ, ಸನಾತನಿಗಳೂ ಆಗಿ ಕಾಣುತ್ತಿದ್ದಾರೆ. ಹಾಗಾಗಿಯೇ ಅವರು ಕನ್ನಡದ ನವೋದಯವನ್ನು ಇದು ಕೇವಲ 'ಭಾವಶೀಲ' ಎಂದು ಕರೆದರು. ನವ್ಯದವರನ್ನು 'ವ್ಯಕ್ತಿ ಬಾಧಿತ' ಎಂದು ಜರೆದರು. ತಮ್ಮದು ಮಾತ್ರ 'ಸಮುದಾಯ ಕೇಂದ್ರಿತ' ಎಂದು ಬಣ್ಣಿಸಿಕೊಂಡರು. ಸಾಹಿತ್ಯವನ್ನು ತಾವು ನಂಬಿದ ವಿಚಾರವಾದವನ್ನು ಪ್ರಚುರ ಪಡಿಸಲು ಊರುಗೋಲಾಗಿ ಬಳಸಿಕೊಂಡ ಪರಿಣಾಮವಾಗಿ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ ಬಹಳ ಮಹತ್ತ್ವದವು ಎನ್ನಬಹುದಾದ ಕೃತಿಗಳು ನವೋದಯೋತ್ತರದಲ್ಲಿ ಬರಲೇ ಇಲ್ಲ.



ಓರ್ವ ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಕಾರಾನುಸಾರ ನೋಡುವುದು ಕಷ್ಟ. ಹಾಗಿದ್ದೂ ಪ್ರಕಾರಾನುಸಾರವೇ ನೋಡಬೇಕೆಂದು ಯಾರಾದರೂ ಒತ್ತಾಯಿಸಿದರೆ ನನಗೆ ಕಾಣಿಸುವುದು ನವೋದಯ ಮತ್ತು ನವೋದಯೋತ್ತರ ಅಷ್ಟೇ ಅಥವಾ ಕನ್ನಡದ ನವೋದಯವನ್ನು ಆಧುನಿಕ ಕನ್ನಡ ಸಾಹಿತ್ಯದ ದಾರ್ಶನಿಕ ಕಾಲ ಮತ್ತು ನವೋದಯೋತ್ತರವನ್ನು ಆಧುನಿಕ ಕನ್ನಡ ಸಾಹಿತ್ಯದ ವೈಚಾರಿಕ ಕಾಲ ಎಂದು ನೋಡುವುದು ಹೆಚ್ಚು ಸಮಂಜಸವಾಗಬಲ್ಲುದೇನೋ ಎನಿಸುತ್ತದೆ. ಇದರರ್ಥ ನವೋದಯದ ಸಂದರ್ಭದಲ್ಲಿ ವಿಚಾರ ಗೈರುಹಾಜರಾಗಿತ್ತು ಎಂದೂ ನವೋದಯೋತ್ತರದಲ್ಲಿ ದಾರ್ಶನಿಕತೆಯೇ ಇರಲಿಲ್ಲ ಎಂದೂ ಅಲ್ಲ. ಆದರೆ ಪ್ರಧಾನವಾಗಿ ಈ ಎರಡು ಅಂಶಗಳು ನವೋದಯ ಮತ್ತು ನವೋದಯೋತ್ತರದ ಸಾಹಿತ್ಯದ ಕೇಂದ್ರದಲ್ಲಿ ಕಾಣಿಸಿಕೊಂಡವು.



**ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು.**

ಬಹಳ ಮುಖ್ಯವಾಗಿ ಮಾರ್ಕ್ಸ್‌ವಾದೀ ಸಾಹಿತ್ಯ ವಿಮರ್ಶಕರಿಂದ ಯುರೋಪಿಯನ್ ನೋಟಕ್ರಮದ ಭಾಗವಾಗಿ 'ಭಾವಶೀಲ' ಎಂದು ಕರೆಯಲ್ಪಟ್ಟದ್ದು ಕನ್ನಡದ 'ನವೋದಯ' ಸಾಹಿತ್ಯ ಪರಂಪರೆ. ಮಾರ್ಕ್ಸ್‌ವಾದಿಗಳು ಪ್ರದಾನ ಮಾಡಿದ ಈ 'ಭಾವಶೀಲ' ಎಂಬ ಹೊಸ ನುಡಿಗಟ್ಟಿನಲ್ಲಿರುವುದು ಒಂದು ಬಗೆಯ ವ್ಯಂಗ್ಯವೇ. ಅಂದರೆ ಇದರಲ್ಲಿ ಭಾವ ಮಾತ್ರ ಇದೆ ಆದರೆ ವಿಚಾರ ಇಲ್ಲ ಎಂಬ ಹಂಗಿಸುವ ಧ್ವನಿ ಇದ್ದು, ವಿಚಾರ ಇಲ್ಲದ್ದರಿಂದ ಇದರ ಆಳ ಬಹಳ ಇಲ್ಲ ಎಂಬ ಉಡಾಫೆಯ ಧೋರಣೆ. ಆದರೆ ಓರ್ವ ಸಾಹಿತ್ಯದ ವಿದ್ಯಾರ್ಥಿಯಾಗಿ ಕನ್ನಡದ ಇಡಿಯ ಸಾಹಿತ್ಯ ಪರಂಪರೆಯನ್ನು ಅಖಂಡವಾಗಿ ನೋಡುವಾಗ ಇವತ್ತಿಗೂ ಅತ್ಯಂತ ಘನವಾದ ಮತ್ತು ಗಹನವಾದ 'ದರ್ಶನ'ವನ್ನು(ಫಿಲಸಾಫಿಕಲ್ ವಿಷನ್) ತನ್ನ ಸರಳಾತಿ ಸರಳ ಭಾಷಾ ಸಂರಚನೆಯಲ್ಲಿ ಹೊಂದಿರುವ ಆಧುನಿಕ ಕನ್ನಡದ ಏಕೈಕ ಪರಂಪರೆ ಅಂದರೆ ಅದು ನವೋದಯವೊಂದೇ.

ಪಶ್ಚಿಮದ ಜ್ಞಾನಮೀಮಾಂಸೆಗೆ ಮತ್ತು ಅದರ ಅನೇಕ ಕವಲುಗಳ ವಾಗ್ವಾದಗಳ ಹಿಂದೆ ಆಧುನಿಕ ಯುಗದ ಜ್ಞಾನಪರ್ವ(ಎನ್‌ಲೈಟನ್‌ಮೆಂಟ್) ಇದೆ. ಅದರ ಅನೇಕ ಬಗೆಯ ಅಹಂಕಾರಗಳನ್ನು ಅರಿವಿದ್ದೋ/ಇಲ್ಲದೆಯೋ ಫಳಾರ್ ಎಂದನ್ನಿಸಿದ ಅನೇಕ ಸಂಗತಿಗಳು ಕನ್ನಡದ ನವೋದಯದಲ್ಲಿವೆ. ಕನ್ನಡದ ಇನ್ನುಳಿದ ಅನೇಕ ಸಾಹಿತ್ಯ ಮಾರ್ಗಗಳು ಒಂದಲ್ಲ ಒಂದು ರೀತಿಯಲ್ಲಿ ಪಶ್ಚಿಮದ ಹಲವು ಬಗೆಯ ಆಧುನಿಕತೆಯನ್ನು ಸ್ವೀಕರಿಸಿದ/ನಿರಾಕರಿಸಿದ ಮತ್ತು ಸಂಘರ್ಷಕ್ಕಿಳಿದ ಕಥಾನಕಗಳಾದರೆ ಕನ್ನಡದ ನವೋದಯ ಪಶ್ಚಿಮದ ಆಧುನಿಕತೆಯ ಅಹಂಕಾರದ ಬಲೂನಿಗೆ ಸೂಜಿ ಚುಚ್ಚಿತ್ತು. ನನ್ನ ಈ ಮಾತಿಗೆ ಸ್ವಲ್ಪ ಮಟ್ಟಿನ ವಿವರಣೆಯ ಅಗತ್ಯ ಇದೆ. ಈ ವಿವರಣೆಗೆ ನಾನು ಆರಿಸುವುದು ನನ್ನನ್ನು ಮತ್ತೆ ಮತ್ತೆ ಕಾಡುವ ಕಥೆಯಾಗಿರುವ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರ *'ಜೋಗ್ಯೋರ ಅಂಜಪ್ಪನ ಕೋಳಿ ಕತೆ'*ಯನ್ನು. ಇದನ್ನು ಒಂದು ಪ್ರಾತಿನಿಧಿಕ ರಚನೆ ಎಂದು ಪರಿಗಣಿಸಿ ಮೇಲಿನ ನನ್ನ ಪ್ರಮೇಯವನ್ನು ವಿವರಿಸುವ ಪ್ರಯತ್ನವನ್ನು ಮಾಡುತ್ತೇನೆ.

ಅಂಜಪ್ಪನ ಜೋಳಿಗೆಯಲ್ಲಿ ಕೋಳಿ ಇತ್ತು. ಆದರೆ ಆ ಕೋಳಿ ಅವನದ್ದಲ್ಲ. ಹಾಗಂತ ಅವನು ಕದ್ದದ್ದೂ ಅಲ್ಲ. ಅದು ಹೆಣ್ಣುಮಗಳೊಬ್ಬಳು ಒತ್ತಾಯಪೂರ್ವಕವಾಗಿ ಕೊಟ್ಟಿದ್ದು. ಆ ಹೆಣ್ಣುಮಗಳಿಗೆ ಅಂಜಪ್ಪನ ಮೇಲೆ ಯಾವ ಸ್ವರೂಪದ ಅಭಿಮಾನವಿತ್ತು ಎಂಬುದು ಅಂಜಪ್ಪನಿಗೂ ಗೊತ್ತಿಲ್ಲ. ಕಥೆಗಾರನಿಗೂ ಗೊತ್ತಿಲ್ಲ. ಧರ್ಮಸಂಕಟದಲ್ಲಿರುವ ಅಂಜಪ್ಪ ಆ ಹೆಣ್ಣುಮಗಳ

**ಮಾಸ್ತಿ ವೆಂಕಟೇಶ ಅಯಂಗಾರ್ ಕುವೆಂಪು ದ,ರಾ. ಬೇಂದ್ರೆ ಶಿವರಾಮ ಕಾರಂತ ಪುತಿನ**

ಹೆಸರನ್ನು ಹೇಳಲಾರ. ಆದರೆ ಘನ ನ್ಯಾಯಾಲಯ ಅಂಜಪ್ಪನೇ ಕಳ್ಳ ಎಂದು 'ತೀರ್ಪು' ನೀಡಿ, ತನ್ನ ನ್ಯಾಯಪಾಲನೆ ಮಾಡಿ ಅಂಜಪ್ಪನಿಗೆ ೨೦ ರೂಪಾಯಿ ಜುಲ್ಮಾನೆ ಹಾಕಿದ ಕತೆ ಅದು. ಅಂದರೆ ಪೊಲೀಸರ ಮತ್ತು ವಕೀಲರ ಹಾಗೂ ಇತರೆ ಸಾಂದರ್ಭಿಕ ಸಾಕ್ಷಿಗಳ ಹೇಳಿಕೆಗಳು ನೇರ 'ಅನುಭವ'ಕ್ಕೆ ಬಂದ ಹಿನ್ನೆಲೆಯಲ್ಲಿ, ನ್ಯಾಯಾಲಯವು ನಿರಪರಾಧಿಯೊಬ್ಬನಿಗೆ ಶಿಕ್ಷೆ ಕೊಟ್ಟ ಕತೆ ಅದು. ಕನ್ನಡದ ನವ್ಯ ಆಧುನಿಕತೆಯನ್ನು ತೀವ್ರ ವಿರೋಧದೊಂದಿಗೆ ಮುಖಾಮುಖಿಯಾಯಿತು ಎನ್ನುವವರು ಮಾಸ್ತಿಯವರ ಈ ಬಹಳ ಮುಖ್ಯವಾದ ಕಥೆಯನ್ನು ಅತಿರೋಹಿಸಿ(ಟ್ರಾನ್ಸೆಂಡ್) ಮಾತಾಡುತ್ತಾರೆ. ಸಾಹಿತ್ಯದ ಈ ರಾಜಕಾರಣ ಏನೇ ಇರಲಿ. ಆಧುನಿಕತೆ ಮತ್ತು ಅದರ ಭಾಗವಾದ ಜ್ಞಾನಪರ್ವಕ್ಕೆ *"ಜೋಗ್ಯೋರ ಅಂಜಪ್ಪನ ಕೋಳಿ ಕತೆ"* ಒಂದು ದೊಡ್ಡ ಮರ್ಮಾಘಾತವನ್ನೇ ಮಾಡಿದೆ.

ಪೂರ್ವ ಮತ್ತು ಪಶ್ಚಿಮದ ಜ್ಞಾನ ಪರಂಪರೆಗಳು ಬಹಳ ಬೃಹತ್ತಾದ ಜ್ಞಾನಮೀಮಾಂಸೆಯನ್ನು ಇವತ್ತು ನಿರ್ಮಿಸಿವೆ. ಆದರೆ ಈ ಜ್ಞಾನಮೀಮಾಂಸೆಯನ್ನು ಗಹನವಾದ ದಾರ್ಶನಿಕ ಪರಂಪರೆಗಳ ಹಿನ್ನೆಲೆಯಲ್ಲೇ ನೋಡಬೇಕಾಗಿಲ್ಲ. ಸಾಮಾನ್ಯ ಜನರ ಬದುಕೂ ತಮ್ಮ ಜೀವನಾನುಭವದ ಮೂಲಕ ಪ್ರಾಪ್ತವಾದ ಸರಳ ದಾರ್ಶನಿಕತೆಯ ಮೂಲಕ ಜ್ಞಾನಮೀಮಾಂಸೆಯನ್ನು ಕಟ್ಟುತ್ತದೆ, ರೂಪಿಸುತ್ತದೆ ಎಂಬುದಕ್ಕೆ ಈ ಕಥೆ ಸಾಕ್ಷಿ. ಈ ಕಥೆ ಬಹಳ ಪ್ರಧಾನವಾಗಿ ಕೋರ್ಟು, ಮ್ಯಾಜಿಸ್ಟ್ರೇಟು, ಪೊಲೀಸು, ಸಾಕ್ಷಿ–ಪುರಾವೆ ಮತ್ತು 'ನ್ಯಾಯದಾನ' ಎಂಬ ಉದಾತ್ತವಾದ ಹೆಸರಿನಲ್ಲಿ ಮತ್ತು 'ನ್ಯಾಯ'ಕ್ಕೆ ಅಪಚಾರ ಬಗೆಯುವ ರೀತಿಯಲ್ಲಿ ಕೊಡುವ 'ತೀರ್ಪು' ಅನ್ನು ದಟ್ಟ ಅನುಮಾನಗಳಿಂದ ಮತ್ತು ಆಳವಾದ ಹತಾಶೆ ಹಾಗೂ ತಲ್ಲಣಗಳಿಂದ ನೋಡುತ್ತದೆ.

ನಮಗೆ ಗೊತ್ತಿದೆ ಈ ಕೋರ್ಟು–ಕಛೇರಿ, ಪೊಲೀಸು, ಪುರಾವೆ ಇತ್ಯಾದಿಗಳು ಬಹಳ ಸ್ಪಷ್ಟವಾಗಿ ಆಧುನಿಕ ಯುಗದ ವಿದ್ಯಮಾನಗಳು. ವಿಜ್ಞಾನದ ಪ್ರಾದುರ್ಭಾವದ ಜೊತೆಜೊತೆಗೆ ಉದಿಸಿದ ಸಮಾಜವಿಜ್ಞಾನದ ಅಲೆಯಲ್ಲಿ ತೇಲಿಬಂದ ಸಂಗತಿಗಳು. ಆಧುನಿಕತೆ ಕಾಣಿಸಿಕೊಂಡ ಕಾಲದಲ್ಲಿ ಪ್ರಕೃತಿಯ ನಿಗೂಢಗಳನ್ನು ವಿಜ್ಞಾನದ ಮೂಲಕ ನಮ್ಮ ಅರಿವಿಗೆ ತಂದುಕೊಳ್ಳುವುದು ಸಾಧ್ಯವಾದ ಮೇಲೆ ವಿಜ್ಞಾನ ಹೇಳುವುದೇ ಆತ್ಯಂತಿಕ ಸತ್ಯ ಎನಿಸಿತು. ಈ ಆಧುನಿಕ ವಿಜ್ಞಾನದಲ್ಲಿ ಕಲ್ಪನೆಗೆ ಅಥವಾ ಪಾರಮಾರ್ಥಿಕತೆಗೆ ಅವಕಾಶವೇ ಇಲ್ಲ. ಭೌತಿಕವಾಗಿ ಇರುವುದು ಮಾತ್ರ ಸತ್ಯ ಹಾಗಾಗಿ ಅದು ಮಾತ್ರ ಮುಖ್ಯ. ಇಂದ್ರಿಯಾನುಭವಕ್ಕೆ ಗೋಚರವಾಗುವಂತಹುದು ಮಾತ್ರ ಸತ್ಯ. ಉಳಿದುದು ಮಿಥ್ಯ ಎಂದು ಪ್ರತಿಪಾದಿತವಾಯಿತು. ಈ ಇಂದ್ರಿಯಾನುಭವವನ್ನೇ ನಂಬುವ ಮತ್ತು ಅದೇ ಆದರ್ಶವಾಗುವ ಏಕೈಕ ವಿದ್ಯಮಾನವೆಂದರೆ; ಅದು ನ್ಯಾಯಾಲಯ ಮತ್ತು ಅದರ ಸುತ್ತಲಿನ ಕಲಾಪಗಳು ಹಾಗೂ ಅದರ ಆನುಷಂಗಿಕ ಸಂಗತಿಗಳು. ಇಲ್ಲಿ ಇಂದ್ರಿಯಾನುಭವಗಳಷ್ಟೇ ಮುಖ್ಯ ಮತ್ತು ಆತ್ಯಂತಿಕ. ಸಾಕ್ಷಿ–ಪುರಾವೆ ಅಂದರೆ ಅದೇ ತಾನೇ..? ಇದು ನಮಗೆ ಎಲ್ಲಿಂದ ಬಂತು ಅಂದರೆ ಪಶ್ಚಿಮದ ಜ್ಞಾನಮೀಮಾಂಸೆಯ ಭಾಗವಾಗಿ ಮೂಡಿಬಂದ ಅನುಭವವಾದ (ಎಂಪಿರಿಸಿಸಮ್)ದಿಂದ ಬಂತು. ಅನುಭವವಾದಕ್ಕೆ ಅನುಭವವೇ ಮೂಲಾಧಾರವಾದುದರಿಂದ ಅದು ಯಾವುದೇ ಮಾನಸಿಕ ವಿಕಾರಗಳಿಲ್ಲದೆ ನಿರ್ವಿಕಾರದಲ್ಲಿ ದತ್ತಾಂಶಗಳನ್ನು(ಡಾಟಾಸ್ ಅಂದರೆ ಇಲ್ಲಿ ಪುರಾವೆ) ಸಂಗ್ರಹಿಸಿ ವಸ್ತುನಿಷ್ಠವಾದ ಸತ್ಯವನ್ನು (ಅಬ್ಜೆಕ್ಟಿವ್ ಟ್ರುತ್) ಕಂಡುಕೊಳ್ಳುತ್ತದೆ. ಈ ತಾತ್ತ್ವಿಕ ಹಿನ್ನೆಲೆಯಲ್ಲೇ ನಮ್ಮ ನ್ಯಾಯಾಲಯಗಳಲ್ಲಿ ನ್ಯಾಯದೇವತೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಾಳೆ. ಯಾವುದೇ ಸಾಕ್ಷ್ಯಾಧಾರಗಳಿಲ್ಲದ ಸಂಗತಿಯನ್ನು 'ಅನುಭವವಾದ' ಮಾನ್ಯ ಮಾಡುವುದಿಲ್ಲವಾದುದರಿಂದ ಅನುಭವವಾದವು ತನ್ನನ್ನು ತಾನು ವೈಜ್ಞಾನಿಕ ಎಂದೇ ಪ್ರತಿಪಾದಿಸುತ್ತದೆ. ತನ್ನದು ವಿಶ್ವಸನೀಯ ವಿಧಾನ ಎನ್ನುತ್ತದೆ. ಪ್ರಪಂಚದ ಎಲ್ಲ ನ್ಯಾಯಾಲಯಗಳ ಪಾಡೂ ಇದೇ ಆಗಿದೆ.

ಪಶ್ಚಿಮದ ಜ್ಞಾನಮೀಮಾಂಸೆಯ ಭಾಗವಾದ ಎಂಪಿರಿಸಿಸಮ್‌ನ ಮುಂದುವರಿಕೆಯಾಗಿರುವ ನ್ಯಾಯಾಲಯದ ವ್ಯವಸ್ಥೆಯನ್ನು ಜಾತಿಯಲ್ಲಿ ಓರ್ವ ದಲಿತನಾಗಿರುವ ಜೋಗ್ಯೋರ ಅಂಜಪ್ಪ ಯಾವ ಆಧುನಿಕ ಓದು–ವಾದ–ವಾಗ್ವಾದಗಳ ತಿಳುವಳಿಕೆ ಇಲ್ಲದೆ ಕೇವಲ ತನ್ನ ಜೀವಾನುಭವದ 'ಕಾಣ್ಕೆ'ಯ ಹಿನ್ನೆಲೆಯಲ್ಲಿ ಸ್ಫೋಟಿಸಿ ಬಿಡುತ್ತಾನೆ. 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು' ಎಂಬ ಆತನ ನಿರೂಪಣೆಯ ಇಂಗಿತಾರ್ಥದಲ್ಲಿರುವುದು 'ಕಾಣುವುದು' ಬೇರೆ ಮತ್ತು 'ನೋಡುವುದು' ಬೇರೆ ಎಂಬುದೇ ಆಗಿದೆ. ಈ ಕಥೆ ಇಂದ್ರಿಯಾನುಭವದ ಮೂಲಕ ತಲುಪುವ ತೀರ್ಮಾನದ ಬಗ್ಗೆ ಅಂಜಪ್ಪನ ಅಪನಂಬಿಕೆಯನ್ನೂ, ಮತ್ತು ಈ 'ತೀರ್ಪು'ಗಳು 'ನ್ಯಾಯ'ವಾಗದೆ ಹೋಗುವ ದುರಂತವನ್ನೂ ಸೂಚಿಸುತ್ತದೆ. ಅಂಜಪ್ಪ ಬಹಳ ಸ್ಪಷ್ಟವಾಗಿ ತನ್ನ ಸ್ವಾನುಭವ ನಿರೂಪಣೆಯಲ್ಲೇ ತೀರ್ಪು ಬೇರೆ, ನ್ಯಾಯ ಬೇರೆ ಎನ್ನುವುದನ್ನೂ ಧ್ವನಿಸುತ್ತಾನೆ. ನ್ಯಾಯ ಕೊಡುವವನು ಆರ್ಜಿಸಿಕೊಳ್ಳಬೇಕಾದ ಮತ್ತು ಸಿದ್ಧಿಸಿಕೊಳ್ಳಬೇಕಾದ 'ಅ–ಪಾರ ಕಾಣ್ಕೆ'ಯ ಬಗೆಗೂ ಈ ಕಥೆ ಹೇಳುತ್ತದೆ. ಸತ್ಯದ ಸಾಕ್ಷಾತ್ಕಾರಕ್ಕೆ ಮುಕ್ತಾಯ ಎನ್ನುವುದೇ ಇಲ್ಲ. ಹಾಗಾಗಿ ಅನುಭವದಿಂದಲೇ ಕಂಡದ್ದು ಸತ್ಯ ಅಲ್ಲ. ಅನುಭವದಿಂದಲೇ ಕೊಡುವುದು 'ನ್ಯಾಯ'ವೂ ಅಲ್ಲ.

ಪಶ್ಚಿಮದ ಜ್ಞಾನಮೀಮಾಂಸೆಯ ಕಣ್ಣಿಗೆ ಕಾಣುವ ಇಂದ್ರಿಯಾನುಭವದ ಸೀಮಿತ ಪ್ರಪಂಚಕ್ಕೆ 'ಸಾಮಾನ್ಯರಲ್ಲಿ ಸಾಮಾನ್ಯ'ನಾದ ಜೋಗ್ಯೋರ ಅಂಜಪ್ಪನ ಇಂದ್ರಿಯಾತೀತ ನೋಟವನ್ನು ಗ್ರಹಿಸುವ ಶಕ್ತಿ ಇಲ್ಲವಾಗಿದೆ. ಆದುದರಿಂದಲೇ ಅದು ಬಡವಾಗಿದೆ, ಕೃಶವಾಗಿದೆ. 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು' ಎಂಬ ಇಂಗಿತಾರ್ಥವನ್ನು ಹೊಂದಿರುವ ಅಂಜಪ್ಪನ ಮಾತು ನನ್ನ ಮಟ್ಟಿಗಂತೂ ದರ್ಜಿಯೊಬ್ಬನ ಕೈಯಲ್ಲಿರುವ ಸೂಜಿಯಂತೆ ಭಾಸವಾಗುತ್ತಿದೆ. ಅದು ಆರಂಭಿಕ ವಿಜ್ಞಾನದ ದೆಸೆಯಿಂದ ನಾವು ಬೇರೆ ಬೇರೆ ಎಂದು ಭಾವಿಸಿರುವ ನಮ್ಮ ಹೊರಗಿನ ಮತ್ತು ಒಳಗಿನ ಲೋಕಗಳನ್ನು ಪರಸ್ಪರ ಸೇರುವಂತೆ ಹೊಲಿಯುವ ಪ್ರಯತ್ನವನ್ನು ಮಾಡುವ ಸೂಜಿಯಾಗಿದೆ. ಹಾಗೆಯೇ ಅನುಭವವಾದೀ ಸತ್ಯವೇ ಅಂತಿಮ ಎಂದುಕೊಂಡ ಪಶ್ಚಿಮದ ಹುಸಿವೈಚಾರಿಕತೆಯ ಅಹಂಕಾರದ ಬಲೂನಿಗೆ ಚುಚ್ಚುವ ಸೂಜಿಯೂ ಆಗಿದೆ.

ನವೋದಯದ ಈ ಕಥೆಯನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ದಾರ್ಶನಿಕತೆ, ವೈಚಾರಿಕತೆ ಮತ್ತು ಸೃಜನಶೀಲತೆಗಳನ್ನು ಸಾಹಿತ್ಯವೊಂದರ ಜೀವದ್ರವ್ಯ ಎಂದು ಪರಿಭಾವಿಸುವ ನನ್ನಂಥ ಸಾಹಿತ್ಯ ಅಭ್ಯಾಸಿಗೆ ನವೋದಯದ ಸಾಹಿತ್ಯ ಈ ಕಾರಣಕ್ಕೆ ಲೋಕೋತ್ತರವಾಗಿದೆ ಎಂದು ಅನ್ನಿಸುತ್ತಿದೆ. ನನ್ನ ಮಟ್ಟಿಗೆ ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ ಮತ್ತು ಪುತಿನರಂಥವರ ಬಳಿಗೆ ನಾವು ಮತ್ತೆ ಮತ್ತೆ ಹೋಗಬೇಕಾಗಿರುವುದು ಅವರ ಸೃಜನಶೀಲ ನಿರೂಪಣೆಯ ಸುಭಗ ಶೈಲಿಗಲ್ಲ. ಅವರ ಕಥನಕ್ರಮಕ್ಕಾಗಿ ಅಲ್ಲ. ಬದಲಿಗೆ ಅವರು ಕಂಡರಿಸಿದ ದಾರ್ಶನಿಕತೆಗಾಗಿ.

ಆ ದಾರ್ಶನಿಕತೆಯಲ್ಲಿ ನಮ್ಮನ್ನು ಕೈ ಹಿಡಿದು ಮುನ್ನಡೆಸುವ ಬೆಳಕಿದೆ.

ಇಲ್ಲಿ
ಯಾರೂ ಮುಖ್ಯರಲ್ಲ;
ಯಾರೂ ಅಮುಖ್ಯರಲ್ಲ;
ಯಾವುದೂ ಯಃಕಶ್ಚಿತವಲ್ಲ !

ಇಲ್ಲಿ
ಯಾವುದಕ್ಕೂ ಮೊದಲಿಲ್ಲ;
ಯಾವುದಕ್ಕೂ ತುದಿಯಿಲ್ಲ;
ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ;
ಕೊನೆಮುಟ್ಟುವುದೂ ಇಲ್ಲ!

ಇಲ್ಲಿ
ಅವಸರವೂ ಸಾವಧಾನದ ಬೆನ್ನೇರಿದೆ!

ಇಲ್ಲಿ
ಎಲ್ಲಕ್ಕೂ ಇದೆ ಅರ್ಥ;
ಯಾವುದೂ ಇಲ್ಲ ವ್ಯರ್ಥ;
ನೀರೆಲ್ಲವೂ ತೀರ್ಥ!

–ಇದು ಕುವೆಂಪುರವರ ಸಾಲುಗಳಲ್ಲ. ಇಡಿಯ ನವೋದಯದ ಸಾಲುಗಳು. ನಿಜ. ಪುಟ್ಟಪ್ಪನವರನ್ನು ಹೊರತುಪಡಿಸಿದರೆ ಉಳಿದವರೆಲ್ಲ ಜಾತಿಯಲ್ಲಿ ಬ್ರಾಹ್ಮಣರೇ ಹೌದು. ಆದರೆ ಅವರು ಯಾವ ಬಗೆಯ ಬ್ರಾಹ್ಮಣರು ಎಂಬುದನ್ನೂ ನಾವು ತಿಳಿಯಬೇಕಾಗಿದೆ. ಕನ್ನಡದ ನವೋದಯ ತನ್ನ ದಾರ್ಶನಿಕತೆಯ ಉತ್ತುಂಗದಲ್ಲಿ ಸೃಜಿಸಿದ ಈ ಸಾಲುಗಳು ನಮ್ಮ ಕಾಲದ ನಮ್ಮ ದೇಶದ ಬಾಳದೀವಿಗೆಯಾಗಿದೆ. ಈ ಮಾತು ಆಳದಲ್ಲಿ ಹುದುಗಿಸಿಕೊಂಡಿರುವ ನೈಜ ಸಮಾಜವಾದೀ ದರ್ಶನ ನಮ್ಮ ಸದ್ಯದ ಕಾಲದೇಶಗಳ ಎಲ್ಲ ಬಗೆಯ ನಾಗರಿಕರ ಮತ್ತು ಎಲ್ಲ ಬಗೆಯ ಸೈನಿಕರ ಕಣ್ಣು ತೆರೆಸಬೇಕಾಗಿದೆ.

ನಾವು ಬದುಕುವ ಕಾಲ–ದೇಶಗಳ ಚಾರಿತ್ರಿಕ ಒತ್ತಡಗಳಿಂದಾಗಿ ನಮ್ಮ ಕಾಲದ ಅನೇಕ ಯುವಕರ ನೋಡುವ ಕಣ್ಣಿನಲ್ಲಿ ವಕ್ರತೆ ಮತ್ತು ಗ್ರಹಿಸುವ ಮನಸ್ಸಿನಲ್ಲಿ ವ್ಯಗ್ರತೆಯೂ ತುಂಬಿ ನಿಂತಿದೆ. ಇದು ಇವರು ನಂಬಿದ ಸಿದ್ಧಾಂತಗಳಲ್ಲಿರುವ ವಕ್ರತೆ ಮತ್ತು ವ್ಯಗ್ರತೆಗಳು. ಈ ಕರ್ಮಠ ಸಿದ್ಧಾಂತಗಳಿಗೆ ಮೊದಲ ಬಲಿಪಶುಗಳಾಗಿರುವ ಈ ಯುವಕರು ತಮ್ಮದೇ ಆದ ಬಲಿಷ್ಠ 'ರಾಷ್ಟ್ರ' ಕಟ್ಟುವ ಹಲವು ಮಾರ್ಗಗಳನ್ನು ಆಯ್ದುಕೊಂಡು ಸಕಲ ಬಗೆಯ ವಿರೋಧವನ್ನೂ ನಿರ್ಮೂಲನ ಮಾಡಲಿಕ್ಕಾಗಿ, ನಾಮಾವಶೇಷ ಮಾಡಲಿಕ್ಕಾಗಿ ಸನ್ನದ್ಧರಾಗಿ ನಿಂತಿದ್ದಾರೆ. ಹಾಗಾಗಿ ನಮ್ಮ ಕಾಲದ ಈ ಅನೇಕ ಯುವಕರ ಕಣ್ಣು ಕೆಂಪಗಾಗಿದೆ. ಕನ್ನಡದ ನವೋದಯಕ್ಕಿರುವ ಲೋಕವನ್ನು ಕಂಡರಿಸುವ ದಾರ್ಶನಿಕತೆಯ ಬೆಳಕಿನ ಹಿನ್ನೆಲೆಯಲ್ಲಿ ನಾವು ಮತ್ತೆ ನಮ್ಮ ಪ್ರಯಾಣವನ್ನು ಆರಂಭಿಸಿದರೆ ನಮ್ಮ ಕಣ್ಣು ಕೆಂಪಾಗದೆ ತಿಳಿಯಾದೀತು. ಬದುಕು ಬಾಳ್ವೆಯಾಗುವ ಪರಿ ಹೊಳೆದೀತು.

**(ತುಮಕೂರು ವಿಶ್ವವಿದ್ಯಾನಿಲಯದ ಡಿವಿಜಿ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರಾಗಿರುವ ನಿತ್ಯಾನಂದ ಶೆಟ್ಟಿ ಅವರು ಆ ವಿಶ್ವವಿದ್ಯಾನಿಲಯದ ವಿದ್ವತ್‌ಪತ್ರಿಕೆ 'ಲೋಕಜ್ಞಾನ'ದ ಸಂಪಾದಕರೂ ಆಗಿದ್ದು, ನಮ್ಮ ನಡುವಿನ ಗಮನಾರ್ಹ ಸಾಹಿತ್ಯ ಚಿಂತಕರೂ ಆಗಿದ್ದಾರೆ.)**



## ಡಾ. ಡಿ. ಆರ್. ನಾಗರಾಜರನ್ನು ನೆನೆಯುತ್ತಾ...

### ದೇವವಾಣಿ

**ಏಳು ನರ ಕುನ್ನಿಯೆ ಎದ್ದು ನಿಲ್ಲು**
**ಮಾತಿಗುತ್ತರ ಕೊಡು**
**ನಾನು ಈ ಪೃಥ್ವಿಗೆ ಪಾಯ ಹಾಕಿದಾಗ ನೀನೆಲ್ಲಿದ್ದೆ**
**ಈ ಧರೆಯ ಗೊತ್ತುಗುರಿ ದಿಕ್ಕುದಿಸೆ ಗೊತ್ತ?**
**ಗೊತ್ತ ಈ ಧರಣಿಯ ಅಳತೆ ಆಯಾಮಗಳು?**
**ಇದರ ತೊಲೆ ಕಂಬಗಳಲ್ಲಿವೆ ಹೇಗೆ ನಿಂತಿವೆ?**
**ಈ ಭೂಮಿಗೆ ಬಾಂದಿನಕಲ್ಲು ಇಟ್ಟವರ್ಯಾರು, ಗೊತ್ತ ನಿನಗೆ?**

**ಸಮುದ್ರದ ಹುಟ್ಟು ಗೊತ್ತೇನು?**
**ಗರ್ಭದಿಂದ ಪ್ರವಾಹದಂತೆ ಅದು ಸಿಡಿದದ್ದು**
**ಆಗ ಮೋಡದ ಕಂಬಳಿಯಲ್ಲದನ್ನು ಸುತ್ತಿ ನಾ**
**ಹಿಮದ ತೊಟ್ಟಿಲಲ್ಲಿಟ್ಟು ತೂಗಿದ್ದು, ಗೊತ್ತೆ?**
**ಆಮೇಲೆ ಅದಕ್ಕೊಂದು ದಿಕ್ಕುದೆಸೆ ಕಾಣಿಸಿ**
**ದಿಡ್ಡಿಬಾಗಿಲು ಇಟ್ಟು ಹೇಳಿದೆ**
**'ಏ, ಕಡಲೆ ಇದು ನಿನ್ನ ಗಡಿ, ಗೆರೆ, ದಾಟಬಾರದು ನೀನು'**
**ನಾ ಹಾಗೆ ಅಂದದನ್ನು ನೋಡಿದವರುಂಟೆ?**



**ಡಾ. ಡಿ. ಆರ್. ನಾಗರಾಜ್**



**ಬೆಳಕಿನರಮನೆಗೆ ದಾರಿ ಯಾವುದು ಹೇಳು?**
**ಹಾಗೇ ಕತ್ತಲೆ ಮೆರೆವ ಗೂಡಿಗೆ?**
**ಮನೆತನಕ ಕಾವಲಿಗೆ ಹೋಗುವೆಯ ಜತೆಗೆ, ನರಕುನ್ನಿ,**
**ಇವೆಲ್ಲ ನಿನಗೆ ಗೊತ್ತೇ ಇರಬೇಕಲ್ಲ?**
**ಎಲ್ಲಕ್ಕೂ ಮುಂಚೆ ನೀನು ಹುಟ್ಟಿದ್ದೆಯಲ್ಲ?**

**ಆ ಮಂಜಿನರಮನೆಗೆ ಎಂದಾದರೂ ಹೋಗಿದ್ದೆಯೇನು?**
**ಬಿರುಗಾಳಿಗಳನ್ನು ಕೂಡಿಡುವ ದೊಡ್ಡಿಗೆ?**
**ಅವೆಲ್ಲ ಕಾದಿರಿಸಿದ್ದೇನೆ ಪ್ರಳಯಕ್ಕೆ**

**ಸಂಘರ್ಷಕ್ಕೆ ಸಮರಕ್ಕೆ ಸರ್ವನಾಶಕ್ಕೆ**
**ಬೆಂಕಿ ನೂರು ದಾರಿಗಳಿಂದ ನುಗ್ಗುತ್ತದೆ**
**ಉಘೋ ಎಂದು ಸುರಿವ ಬಿರುಗಾಳಿ ಭೋರ್ಗರೆಯುತ್ತದೆ**
**ಗುಡುಗಿನ ದಾರಿಯ ಆ ಬಿರುಮಳೆ**
**ಆ ಬಿರುಮಳೆ**

**–ಹೀಬ್ರೂ ಕಾವ್ಯ** *(ಓಲ್ಡ್ ಟೆಸ್ಟ್‌ಮೆಂಟ್‌ನಿಂದ)*

**(ಕನ್ನಡಕ್ಕೆ: ಡಾ. ಡಿ.ಆರ್. ನಾಗರಾಜ)**

**ಹೊಸ ಮನುಷ್ಯ' ಪತ್ರಿಕೆಯ ಓದುಗರಿಗೆ ಶುಭ ಹಾರೈಕೆಗಳು**


**–ಬಿ.ಎಸ್.ದಿವಾಕರ, ಕೆ.ಆರ್.ಚಂದ್ರಶೇಖರ್, ಬಿ.ಸಿ.ಭಾಸ್ಕರ್, ಬಿ.ಕೆ.ಶ್ರೀಕಾಂತ, ರೇಣುಕಾಪ್ರಸಾದ್, ಬೆಂಗಳೂರು.**

(ಜಾಹೀರಾತು)

## ಪುಸ್ತಕಾವಲೋಕನ

ಪು: **ಡಾ.ಎ.ರಾಮಲಿಂಗಂ: ಜನಮುಖಿ ಹೋರಾಟಗಾರ** (ನೆನಪಿನ ಹೊತ್ತಗೆ) ಸಂಪಾದಕರು: **ಡಾ. ಎಂ.ಎಂ.ಶೆಣೈ** ಮತ್ತು **ಪ್ರೊ. ಟಿ.ಎಸ್. ವೇಣುಗೋಪಾಲ್** ಪ್ರ: **ಭಾರತೀ ಪ್ರಕಾಶನ,** ಮೈಸೂರು. ಪುಟ ೨೨೩

## ವಿಶಿಷ್ಟ ಹೋರಾಟಗಾರನೊಬ್ಬನ ನೆನಪುಗಳು




**ಡಾ.** ಎ.ರಾಮಲಿಂಗಂ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಅಲ್ಲೂರಿನವರು. ೧೯೭೦ರ ದಶಕದ ಆದಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದ ಅಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಬಂದರು. ಅಲ್ಲಿಂದ ಸುಮಾರು ನಾಲ್ಕು ದಶಕಗಳ ಕಾಲ ಮೈಸೂರಿನ ಪ್ರಗತಿಪರ ಚಳವಳಿಯ ಪ್ರಮುಖ ಧ್ವನಿಯಾಗಿ ಹೋರಾಟ ನಡೆಸಿದ್ದರು. ಅವರೊಬ್ಬ ಅಪ್ಪಟ ಆಕ್ಟಿವಿಸ್ಟ್.. ಸಾಮಾಜಿಕ ಬದಲಾವಣೆ ಎಂಬುದು 'ಬುಲೆಟ್'ನಿಂದ ಸಾಧ್ಯ ಎಂದು ಅವರು ತಿಳಿದಿದ್ದರು. ಮಾರ್ಕ್ಸಿಸಂ–ಲೆನಿನಿಸಂನಿಂದ ಅವರು ಪ್ರಭಾವಿತರಾಗಿದ್ದರು. ಆದ್ದರಿಂದಲೇ ಅವರು ಸದಾ ವ್ಯವಸ್ಥೆಯ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಆದ್ಯತೆ ನೀಡುತ್ತಿದ್ದರು. ತಮಗೆ ಬಾಂಬ್ ತಯಾರಿಸಲು ಬರುತ್ತದೆ ಎಂದೂ ಆಂಧ್ರದಲ್ಲಿ ಅನೇಕ ಭೂಮಾಲೀಕರನ್ನು ಆ ಮೂಲಕ ಉಡಾಯಿಸಿದ್ದೇವೆಂದೂ ಹೇಳುತ್ತಿದ್ದರು. ಶ್ರೀಮಂತರು ಸದಾ ಶೋಷಕರು. ಅವರ ವಿರುದ್ಧ ಬಡವರನ್ನು– ನೊಂದವರನ್ನು ಜಾಗೃತಗೊಳಿಸಿ ಹೋರಾಟಕ್ಕೆ ಸಿದ್ಧಗೊಳಿಸಬೇಕೆಂದು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದ ಅವರು ಆಂಧ್ರದ ಗದ್ದರ್ ಅವರನ್ನು ಅನುಸರಿಸಿ ತಾವೇ ಅನೇಕ ಹೋರಾಟದ ಹಾಡುಗಳನ್ನು ಬರೆದರು. ಮೈಸೂರಿನಲ್ಲಿ 'ಜನಕಲಾರಂಗ' ತಂಡವನ್ನು ಕಟ್ಟಿ, ಆ ಮೂಲಕ ಮೈಸೂರು ನಗರದಲ್ಲಿ ಮಾತ್ರವಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲೂ ಜನಜಾಗೃತಿಯ ಅಂಗವಾಗಿ ಬೀದಿ ನಾಟಕಗಳನ್ನು ಆಡಿಸಿದರು. ಮನೆಮಾತು ತೆಲುಗಾದರೂ ಮೈಸೂರಿಗೆ ಬಂದು ಕನ್ನಡವನ್ನು ಕಲಿತು ಜನಭಾಷೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ಅಪರೂಪದ ಆಕ್ಟಿವಿಸ್ಟ್. ಅಕ್ಷರ ಜ್ಞಾನ ಜಾಗೃತಿಗೆ ಮೂಲಧಾತು ಎಂದು ತಿಳಿದಿದ್ದ ಅವರು ತಮ್ಮ ಕಮ್ಯುನಿಸ್ಟ್ ಗೆಳೆಯರ ಜತೆಗೂಡಿ ಮೈಸೂರಿನ ಕುಕ್ಕರಹಳ್ಳಿಯ ದಲಿತರ ಮನೆ ಮನೆಗೆ ಹೋಗಿ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪ್ರಭಾವಿಸಿದರು. ಕುಕ್ಕರಹಳ್ಳಿಯಲ್ಲೇ 'ಮಹದೇವಪ್ಪ ಸ್ಮಾರಕ ಮಾರ್ಕ್ಸಿಸ್ಟ್ ಗ್ರಂಥಾಲಯ'ವನ್ನು ಸ್ಥಾಪಿಸಿ, ಶೋಷಣೆಯ ವಿವಿಧ ಸ್ವರೂಪಗಳ ಬಗ್ಗೆ ಹಾಗೂ ಹೋರಾಟದ ಅನಿವಾರ್ಯತೆಯ ಬಗ್ಗೆ ಅಲ್ಲಿ ಪ್ರತಿವಾರ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಕುಕ್ಕರಹಳ್ಳಿಯಲ್ಲಿ ಪ್ರಗತಿಪರ ಯುವಕರ ಪಡೆಯೊಂದನ್ನು ಕಟ್ಟಿ ಹೋರಾಟಗಳಿಗೆ ಕೆಚ್ಚನ್ನು ಮೂಡಿಸಿದರು.


ಮೈಸೂರು ವಿಶ್ವವಿದ್ಯಾನಿಲಯದ ಜಾತಿ ಕಾರಣದ ವಿರುದ್ಧ ಅವರು ತಮ್ಮ ವೃತ್ತಿಜೀವನದುದ್ದಕ್ಕೂ ಹೋರಾಡಿದರು. ಅದರಿಂದಾಗಿ ಅವರನ್ನು ಧಾರವಾಡಕ್ಕೆ ವರ್ಗ ಮಾಡಲಾಯಿತು. ಸ್ವಯಂ ನಿವೃತ್ತಿ ಪಡೆದು ಮತ್ತೆ ಮೈಸೂರಿಗೆ ಬಂದು ಅವರು ತಮ್ಮ ಜೀವಿತದ ಕೊನೆಯವರೆಗೆ ಜನಹಿತ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಭಾಷಾ ಚಳವಳಿ, ವಿಶ್ವಕನ್ನಡ ಮೇಳದ ವಿರುದ್ಧದ ಹೋರಾಟ. ಬರ ಪರಿಹಾರಾರ್ಥ ಧಾನ್ಯ ಸಂಗ್ರಹ ಮತ್ತು ವಿತರಣೆ, ರಟ್ಟನಹಳ್ಳಿ ಅಣುಸ್ಥಾವರದ ವಿರುದ್ಧದ ಹೋರಾಟ – ಇವು ಅವರ ಹೋರಾಟದ ಪ್ರಮುಖ ಘಟನೆಗಳು. ಈ ಪುಸ್ತಕದ ಸಂಪಾದಕರಲ್ಲೊಬ್ಬರಾದ ಟಿ.ಎಸ್.ವೇಣುಗೋಪಾಲ್ ಹೇಳುವಂತೆ, 'ಒಬ್ಬ ಪಬ್ಲಿಕ್ ಇಂಟೆಲೆಕ್ಟ್ ಅನ್ನು ನಾವು ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಆದರೆ, ಒಬ್ಬ ಪಬ್ಲಿಕ್ ಆಕ್ಟಿವಿಸ್ಟ್ ಅನ್ನು ಮರೆತೇಬಿಡುತ್ತೇವೆ'. ಅವರು ತಮ್ಮ ಬದುಕಿನುದ್ದಕ್ಕೂ ತಮ್ಮ ಸಂಪಾದನೆಯ ಬಹುಪಾಲನ್ನು ಸಮಾಜದ ಒಳಿತಿನ ಕನಸಿಗಾಗಿ ವ್ಯಯಿಸಿದರು. ತಮಗಾಗಿ, ಕುಟುಂಬಕ್ಕಾಗಿ ಏನನ್ನೂ ಉಳಿಸಿ ಹೋಗಲಿಲ್ಲ.

ಸಾಮಾಜಿಕ ಸಮಾನತೆ ಆರ್ಥಿಕ ಸಮಾನತೆಯಿಂದ ತನಗೆ ತಾನೇ ಬರುತ್ತದೆ ಎಂದು ನಂಬಿದ್ದ ರಾಮಲಿಂಗಂ ಜಾತಿ ವ್ಯವಸ್ಥೆಯ ವಿರೋಧಿಯಾಗಿದ್ದರು. ಮೈಸೂರಿನಲ್ಲಿ – ಧಾರವಾಡದಲ್ಲಿ ಅನೇಕ ಅಂತರಜಾತೀಯ ಮದುವೆಗಳನ್ನು ಮಾಡಿಸಿ, ರಕ್ಷಣೆ ನೀಡಿದ್ದರು. ರಾಮಲಿಂಗಂ ಅವರ ಇಂಥ ಹೋರಾಟದ ಗುಣಗಳನ್ನು ಈ ಕೃತಿಯ ಬಹುಪಾಲು ಎಲ್ಲ ಲೇಖನಗಳು ನೆನಪಿಸಿಕೊಳ್ಳುತ್ತವೆ. ಈ ಲೇಖನಗಳು ಒಂದೇ ಅಭಿಪ್ರಾಯಗಳನ್ನು ಪುನರುಚ್ಚಿಸುವುದರಿಂದ ಏಕತಾನತೆ ಕಾಡುತ್ತದೆ. ಅವರೊಬ್ಬ ತತ್ವನಿಷ್ಠ ಹೋರಾಟಗಾರ ಎಂದು ಹೇಳಿದರೂ, ಅವರ ಕಮ್ಯುನಿಸ್ಟ್ ಸೈದ್ಧಾಂತಿಕತೆಯ ಬಗ್ಗೆ ಸ್ಪಷ್ಟವಾಗಿ ಯಾವ ಲೇಖನವೂ ಮಾತನಾಡುವುದಿಲ್ಲ. ಈ ಬಗ್ಗೆ ರಾಮಲಿಂಗಂ ಮೌಲಿಕವಾಗಿ ಬರೆಯದಿರುವುದೂ ಕಾರಣವಾಗಿರಬಹುದು.

ಡಾ. ರಾಜಾಸಾಬ್, ಡಾ. ಜನಾರ್ದನ ಮತ್ತು ಗೆಳೆಯರು ಡಾ.ರಾಮಲಿಂಗಂ ಅವರೊಡನೆ ನಡೆಸಿರುವ ಸಂದರ್ಶನ ಈ ಕೃತಿಯ ಮೌಲಿಕ ಬರಹ. ಅವರು ಕೇವಲ ಆಕ್ಟಿವಿಸ್ಟ್ ಮಾತ್ರವಲ್ಲ. ಅವರೊಬ್ಬ ಅತ್ಯುತ್ತಮ ಅಧ್ಯಾಪಕ, ಸಂಶೋಧಕ ಮತ್ತು ಚಿಂತಕರಾಗಿದ್ದರು ಎಂಬುದನ್ನು ಈ ಸಂದರ್ಶನ ತೆರೆದಿಡುತ್ತದೆ. ರಾಮಲಿಂಗಂ ನಮ್ಮ ದೇಶದ ಕೆಲವೇ ಕೆಲವು ಮಂದಿ ವಾಯು ಸಸ್ಯಶಾಸ್ತ್ರದ ವಿಜ್ಞಾನಿಯಾಗಿದ್ದರು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅವರು ಮಾನ್ಯತೆ ಪಡೆದಿದ್ದರು. ಪ್ರಕೃತಿಯ ಅತ್ಯಮೂಲ್ಯ ಸಂಪತ್ತುಗಳಾದ ಗಾಳಿ, ನೀರು ಮತ್ತು ಮರಗಿಡಗಳನ್ನು ಸಂರಕ್ಷಿಸಬೇಕೆಂಬ ಅವರ ಕಾಳಜಿಗಳು ಇಲ್ಲಿ ನಮ್ಮ ಮುಂದೆ ತೆರೆದುಕೊಳ್ಳುತ್ತವೆ. ಇಷ್ಟಲ್ಲಾ ರಾಮಲಿಂಗಂ ತಮ್ಮ ಕಾಳಜಿಗಳನ್ನು ಶುದ್ಧ ಅಕಾಡೆಮಿಕ್ ಆಗಿ ಮಾತ್ರ ಇರಲು ಬಿಡದೇ, ಅವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರು. ಇದರ ಅಂಗವಾಗಿ ಅವರು ಶುದ್ಧ ಕುಡಿಯುವ ನೀರಿನ ಬಗ್ಗೆ ಜನಜಾಗೃತಿಯ ಕಾರ್ಯಕ್ರಮ ರೂಪಿಸಿದರು. ಮಳೆ ಕೊಯ್ಲನ್ನು ಸ್ವತಃ ತಾವೇ ಮಾಡಿ ಮಾದರಿ ತೋರಿಸಿದರು. ಪಾರಂಪರಿಕ ವೃಕ್ಷಗಳ ಸಂರಕ್ಷಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೈಸೂರು ನಗರ ಮತ್ತು ಸುತ್ತಲ ಗ್ರಾಮೀಣ ಪ್ರದೇಶದ ಮರಗಳನ್ನು ಗುರುತಿಸಿ, ಅವುಗಳನ್ನು ಸಂರಕ್ಷಿಸಿದರು. ಆ ಮರಗಳನ್ನು ಇಂದಿಗೂ ಸಂರಕ್ಷಿತವಾಗಿ ಉಳಿದಿವೆಯೆಂಬುದು ಗಮನಾರ್ಹ ಅಂಶ.

ಡಾ.ರಾಮಲಿಂಗಂ ಅವರ ಪತ್ನಿ ಕುಸುಮಾ ಅವರು ಬರೆದಿರುವ ಲೇಖನ ಅತ್ಯಂತ ಭಾವಗರ್ಭಿತವಾಗಿದೆ. ರಾಮಲಿಂಗಂ ಅವರನ್ನು ಮದುವೆಯಾದಾಗ ಅವರಿಗೆ ಹದಿನಾಲ್ಕು ವರ್ಷ. ಅಂದಿನಿಂದ ರಾಮಲಿಂಗಂ ಅವರ ಜೀವಿತಕಾಲದವರೆಗೂ ಆರೈಕೆ ಮಾಡಿದರು. ಕುಸುಮಾ ಅವರು ಬೇಸರಿಸದೇ ಪತಿಯ ಹೋರಾಟಕ್ಕೆ ಸಾಥ್ ನೀಡಿದರು. ಗಂಡನ ಅಭಿಪ್ರಾಯ ಮತ್ತು ನಂಬಿಕೆಯನ್ನು ತನ್ನ ನಂಬಿಕೆಯೆಂದು ಬಗೆದು ಜೀವನಪೂರ್ತಿ ದುಡಿದರು. ನಮಗೆ ಇಲ್ಲಿ ಕಾಡುವ ಪ್ರಶ್ನೆ ಎಂದರೆ, ಸಾಮಾಜಿಕ ಸಮಾನತೆಯ ಬಗ್ಗೆ ಸದಾ ಹೋರಾಡುತ್ತಿದ್ದ ರಾಮಲಿಂಗಂ ಅವರಿಗೆ ಲಿಂಗ ಸಮಾನತೆಯ ಬಗ್ಗೆ ಆಸ್ಥೆ ಇತ್ತೇ ಎಂಬುದು. ಇದ್ದಿದ್ದರೆ ಅವರನ್ನು ದುಡಿಯುವ ಮಟ್ಟಿಗಷ್ಟೇ ಬೆಳೆಸುತ್ತಿರಲಿಲ್ಲ. ಆದರೆ, ಈ ಬಗ್ಗೆ ಕುಸುಮಾ ಅವರಿಗೆ ಬೇಸರವಿಲ್ಲ. ಪತಿಯ ಹೋರಾಟ ಸದಾಶಯವನ್ನು ಹೊಂದಿರುವುದರಿಂದ ಅದರಲ್ಲಿ ತನ್ನ ಭಾಗವೂ ಸೇರಲಿ ಎಂದು ದುಡಿದರು. ರಾಮಲಿಂಗಂ ತಮ್ಮ ಆದರ್ಶ ಮತ್ತು ಹಠದ ಸ್ವಭಾವದಿಂದಾಗಿ ತಾವು ನಿವೃತ್ತಿಹೊಂದಿದ ನಂತರ ಪಿಂಚಣಿ ಪಡೆಯುವುದಿಲ್ಲ ಎಂಬ ತೀರ್ಮಾನಕ್ಕೆ ಬಂದರು. ತಾನು ದುಡಿದಾಗ ಮಾತ್ರ ವೇತನ ಪಡೆಯಲು ಅರ್ಹನೆಂಬ ತೀರ್ಮಾನದಿಂದಾಗಿ ಅವರ ಕೊನೆಯ ದಿನಗಳನ್ನು ಅತ್ಯಂತ ಕಷ್ಟದಿಂದ ಕಳೆಯಬೇಕಾಗಿ ಬಂತು. ಮಾತ್ರವಲ್ಲ; ಕುಸುಮಾ ಅವರನ್ನೂ ಕಷ್ಟಪಡುವಂತೆ ಮಾಡಿತು. ಆ ಕಷ್ಟ ಇಡೀ ಲೇಖನದಲ್ಲಿ ಉಸಿರಾಡಿದೆ..

**–ಪ್ರೊ. ಶಿವರಾಮು ಕಾಡನಕುಪ್ಪೆ**



**(ಮೈಸೂರಿನ ಖಾಸಗಿ ಪ್ರ. ದ. ಕಾಲೇಜೊಂದರ ಪ್ರಾಂಶುಪಾಲರಾಗಿ ನಿವೃತ್ತರಾಗಿರುವ ಶಿವರಾಮು ಅವರು ಕನ್ನಡದ ಹಿರಿಯ ಸಾಹಿತ್ಯ ವಿಮರ್ಶಕ ಹಾಗೂ ಸಂಸ್ಕೃತಿ ಚಿಂತಕರಲ್ಲೊಬ್ಬರಾಗಿದ್ದಾರೆ)**

# ಎಲ್ಲರೂ ವ್ಯಾಪಾರಿಗಳೇ...!

ಒಂದು ಲಲಿತ ಪ್ರಬಂಧ

–ವಿಜಯೇಂದ್ರ ಪಾಟೀಲ



('ಸದಾರಮೆ' ನಾಟಕದ ಒಂದು ದೃಶ್ಯ ಕೃಪೆ: ರಂಗಾಯಣ, ಮೈಸೂರು)

**ಊ**ರಿನ ಆಗರ್ಭ ಶ್ರೀಮಂತ ವ್ಯಾಪಾರಿ ರಾಮಚಂದ್ರ ಶೆಟ್ಟರು ತೀರಿ ಹೋದ ಸುದ್ದಿ ಬಂತು. ಅವರದು ತಮ್ಮ ತಾತನ–ತಾತನ ಕಾಲದಿಂದಲೂ ನಮ್ಮೂರಲ್ಲಿ ಪಾತ್ರೆ, ಬಟ್ಟೆ, ಕಿರಾಣಿ ಅಂಗಡಿಗಳನ್ನು ನಡೆಸಿಕೊಂಡು ಬಂದ ಮನೆತನ. ಮತ್ತು ನಮ್ಮದು ನಮ್ಮ ತಾತನ, ತಾತನ ಕಾಲದಿಂದಲೂ ಅವರ ಪಾತ್ರೆ, ಬಟ್ಟೆ, ಕಿರಾಣಿ ಅಂಗಡಿಗಳಲ್ಲಿ ಉದ್ರಿ ವ್ಯವಹಾರ ಮಾಡಿದ ಮನೆತನ. ಈ ಸಂಬಂಧದಿಂದಾಗಿ ಅವರ ಅಂತಿಮ ಸಂಸ್ಕಾರಕ್ಕೆ ಹೋಗಬೇಕಾಯಿತು.

ಎರಡು, ಮೂರು ತಿಂಗಳ ಉದ್ರಿ ಬಾಕಿ ಇದ್ದರೂ ಈ ಸಂದರ್ಭದಲ್ಲಿ ಅವರ ಮಕ್ಕಳನ್ನು ನೋಡಲು ಯಾವ ಹೆದರಿಕೆಯೂ ಆಗಲಿಲ್ಲ. ಅಷ್ಟೇ ಏಕೆ, 'ನಾವೆಲ್ಲ ನಿಮ್ಮೊಂದಿಗಿದ್ದೇವೆ' ಎಂಬ ಧೈರ್ಯ ಕೊಡುವ ಮಾತನ್ನು ಹೇಳುವಲ್ಲಿ ಯಾವ ಅಳುಕೂ ಉಂಟಾಗಲಿಲ್ಲ. ಸಂಸ್ಕಾರ ಮುಗಿಸಿ ಮರಳುವಾಗ ಜೊತೆಯಾದ ರಾಮಣ್ಣ, 'ಅಂತೂ ವ್ಯಾಪಾರ ಮತ್ತು ಇಹಲೋಕ ವ್ಯಾಪಾರ ಎರಡೂ ಮುಗಿಸಿದರು' ಎಂದು ಸಂದರ್ಭೋಚಿತವಾಗಿ ನಿಟ್ಟುಸಿರು ಬಿಟ್ಟು ತಮ್ಮ ಋಣ ತೀರಿಸಿಕೊಂಡನು. ಉದ್ರಿ ಚುಕ್ತಾ ಆಗುವವರೆಗೆ ನಮ್ಮ ಋಣ ತೀರಲಾರದ್ದೆಂದು ಅರಿತ ನಾನು ಮೌನ ತಾಳಿದೆ.

ಹದಿಮೂರನೇ ದಿನದ ಸಂಸ್ಕಾರಕ್ಕೆ ಹೋದ ಹಕ್ಕಿನಿಂದಾಗಿ ವೈಕುಂಠ ಸಮಾರಾಧನೆಗೂ ಪ್ರವೇಶಾವಕಾಶವಿದ್ದಿತು. ಹೋದೆವು. ತೀರಿ ಹೋದ ರಾಯರು ಮೊಮ್ಮಗನ ರೂಪದಲ್ಲಿ ಅವತರಿಸಿ ಬಂದಿದ್ದಾರೆಂಬ ಸುದ್ದಿ ಅಲ್ಲೆಲ್ಲ ಸಂಚಲನವನ್ನುಂಟುಮಾಡಿತ್ತು. ಬೇರೆ ಬೋರ್ಡಿನೊಂದಿಗೆ ವ್ಯಾಪಾರ ಮಾಡಲು ಬಂದ ರಾಯರನ್ನು ನೋಡುವ ಕುತೂಹಲದಿಂದ ಮಗು ಮಲಗಿರುವ ಕೋಣೆಗೆ ಹೋದೆ. ಹತ್ತು ದಿನದ ಮಗು ಆಗಲೇ ಚಿನ್ನಾಭರಣ ಧಾರಣ ಮಾಡಿ ಅದರ ಧಾರಣೆಯ ಬಗೆಗೆ ಆಲೋಚಿಸುತ್ತಿತ್ತೋ ಏನೋ? ನಮ್ಮ ಕಡೆಗೆ ಗಮನ ಕೊಡಲಿಲ್ಲ. ಆದರೆ ಇದ್ದಕ್ಕಿದ್ದಂತೆ ಶೇರು ಮಾರುಕಟ್ಟೆ ಬಿದ್ದು ಹೋದಂತೆ ಅಳಲಾರಂಭಿಸಿತು. ನಾನು ಅದರ ಮುಖದಲ್ಲಿ ಕರಿ ಕೋಟಿನ, ಕರಿ ಟೊಪ್ಪಿಗೆಯ ರಾಯರನ್ನು ಹುಡುಕಿದೆ. ಆದರೆ ಬಣ್ಣಬಣ್ಣದ ಸೂಟು ಮತ್ತು ಉದ್ದೋ ಉದ್ದ ಕಾರು ಹಾಗೂ ಹೆಲಿಕಾಪ್ಟರ್ಗಳು ಕಂಡು ಬಂದುವು. ಇನ್ನು ಮುಂದೆ ಹೊಚ್ಚ ಹೊಸ ವ್ಯಾಪಾರ ನಡೆಯಲಿದೆ ಅಂದುಕೊಂಡು ಹೊರಗೆ ಬಂದೆ.

ಸಮಾರಾಧನೆ ಜೋರಾಗಿತ್ತು. ತಲೆ ಮತ್ತು ಗಡ್ಡ ಮೀಸೆ ಬೋಳಿಸಿಕೊಂಡ ಮೂವರು ರಾಯರ ಮಕ್ಕಳೆಂದು ಗೊತ್ತಾಗುತ್ತಿದ್ದರೂ ಯಾರು ಯಾರೆಂದು ತಿಳಿಯುತ್ತಿರಲಿಲ್ಲ. ಅವರಲ್ಲೊಬ್ಬ ಯಾರಿಗೋ ಹೇಳುತ್ತಿದ್ದ, 'ಪ್ರತಿ ಊಟಕ್ಕೆ ಇನ್ನೂರು. ಒಟ್ಟೂ ಸಾವಿರ ಜನ. ಎಲ್ಲ ಗುತ್ತಿಗೆ. ಪುರೋಹಿತರಿಗೆ ಇಪ್ಪತ್ತೈದು ಸಾವಿರ. ಕಾಂಟ್ರಾಕ್ಟು. ದಾನ ಧರ್ಮಕ್ಕೆ ಒಂದು ಲಕ್ಷ. ಗರುಡಪುರಾಣದವರು ಹದಿನೈದು ಸಾವಿರ ಕೇಳಿದರು. ಆದರೆ ಪುರೋಹಿತರು ಹತ್ತು ಸಾವಿರಕ್ಕೆ ಹೊಂದಿಸಿದರು. ಅದಕ್ಕಾಗಿ ಅವರಿಗೂ ಎರಡು ಸಾವಿರ ಕೊಡಬೇಕಾಯ್ತು. ಅಂದರೂ ಮೂರು ಸಾವಿರ ಉಳಿಯಿತು. ಪೆಂಡಾಲು ಅದು ಇದು ಅಂತ ಸುಮಾರು ಖರ್ಚಾಯ್ತು. ಆದರೆ ಹಿರಿಯರ ಕಾಯಕ. ಅವರಿಗೆ ಸಮಾಧಾನವಾದರೆ ಆಯ್ತು.' ಅಷ್ಟರಲ್ಲಿ ಯಾವುದೋ ದೊಡ್ಡ ಕಾರು ಬಂತು. ದೊಡ್ಡ ಮನುಷ್ಯರು ಬಂದರು. ರಾಯರ ಮಕ್ಕಳು ಅವರೊಂದಿಗೆ ಪಕ್ಕದ ಕೋಣೆ ಸೇರಿದರು. 'ಯಾವುದೋ ಹೊಸ ಡೀಲರ್ಶಿಪ್ ವ್ಯವಹಾರ ಈಗ ಮುಗಿಯಲಿದೆ' ಎಂದು ರಾಮಣ್ಣ ಹೇಳಿದ.

ನಾವು ಊಟ ಮಾಡಿ ಕೈ ತೊಳೆಯುವಾಗಲೇ ತೀರಿಹೋದವರ ಹೆಣ್ಣುಮಕ್ಕಳಿಬ್ಬರು, 'ನಾವು ಊಟ ಮಾಡುವುದಿಲ್ಲ,' ಎಂದು ಅಳುತ್ತಿದ್ದರು. 'ಎಷ್ಟೆಂದರೂ ಹೆಣ್ಣುಮಕ್ಕಳದೇ ನಿಜವಾದ ಕರುಳು...' ಎಂದು ನಾವು ತೀರ್ಮಾನಿಸುತ್ತಿರುವಾಗಲೇ, 'ನಾವೂ ಅಪ್ಪನ ಮಕ್ಕಳೇ. ಅಪ್ಪನ ಆಸ್ತಿಯಲ್ಲಿ ನಮ್ಮ ಪಾಲು ನಿರ್ಧಾರವಾಗುವವರೆಗೆ ನಾವು ಊಟ ಮಾಡುವುದಿಲ್ಲ, ನೀರೂ ಕುಡಿಯುವುದಿಲ್ಲ' ಎಂದು ಅಳು ಮುಂದುವರಿಸಿದರು. ಹೆಂಡಂದಿರ ವ್ಯವಹಾರ ಮಿಶ್ರಿತ ದುಃಖದಲ್ಲಿ 'ಸಮಪಾಲು ಸಮಬಾಳು' ಎನ್ನುವುದನ್ನು ಸೂಚಿಸುವಂತೆ ಅವರ ಗಂಡಂದಿರೂ ಊಟ ಮಾಡದೇ ನಿಂತಿದ್ದರು. ಅಷ್ಟರಲ್ಲಿ ಹಿರಿಯ ಸಂಬಂಧಿಯೊಬ್ಬರು ವೃತ್ತಿನಿರತ ಸಂಧಾನಕಾರರಂತೆ ನಡೆದು ಬಂದು ಕೈ ಮಾಡಿ ಎದೆ ತಟ್ಟಿ ಏನೋ ಹೇಳಿದರು. ಎಲ್ಲರೂ ಊಟಕ್ಕೆ ಹೊರಟರು. ಇಂಥದ್ದೆಲ್ಲ ಗೊತ್ತಿದ್ದೂ ಇಹಲೋಕ ವ್ಯಾಪಾರಕ್ಕೆಂದು ಮತ್ತೊಮ್ಮೆ ಜನಿಸಿ ಬಂದ ರಾಯರ ವ್ಯಾಪಾರ ಪ್ರೇಮದ ಬಗೆಗೆ ಗಾಬರಿ ಸಹಿತದ ಆಶ್ಚರ್ಯವಾಯಿತು.

ಮನೆಗೆ ಹೋಗುವ ಕಡೆಗೆ ಯಾರದಾದರೂ ಗಾಡಿ ಸಿಕ್ಕಿದರೆ ಆಟೋದ ಐವತ್ತು ರೂಪಾಯಿ ಉಳಿಸಬಹುದೆಂದು ಆಲೋಚಿಸುತ್ತಿದ್ದೆ. ಸಿಕ್ಕ ಒಂದಿಬ್ಬರು ನನ್ನ ಅಂತರಂಗದ ವ್ಯಾಪಾರ ಅರಿತವರಂತೆ ತಮ್ಮ ಮಾರ್ಗದ ನಕ್ಷೆಯನ್ನು ದಕ್ಷಿಣದ ಮೂಲಕ ಉತ್ತರಕ್ಕೆ ಬದಲಾಯಿಸಿದರು. ರಾಮಣ್ಣನ ನೆನಪಾಗಿ ಹುಡುಕಿಕೊಂಡು ಒಳಗೆ ಹೋದೆ. ಆತ ಅಡಿಗೆ ಗುತ್ತಿಗೆದಾರರ ಚರವಾಣಿ ಸಂಖ್ಯೆ ಪಡೆದುಕೊಳ್ಳುತ್ತಿದ್ದ. ಗಿರಾಕಿ ಹೊಂದಿಸಿಕೊಟ್ಟರೆ ಶೇಕಡಾ ಐದರ ಕಮೀಶನ್ ಎಂಬ ಹೊಸ ಒಡಂಬಡಿಕೆಯಿಂದಾಗಿ ವೈಕುಂಠಕ್ಕೆಂದು ಬಂದ ರಾಮಣ್ಣನಿಗೆ ವೈಕುಂಠವೇ ಸಿಕ್ಕಂತಾಗಿತ್ತು. 'ಆಟೋದಲ್ಲಿ ಹೋಗೋಣ, ಅರ್ಧರ್ಧ ಕೊಡೋಣ' ಎಂಬ ಪರಸ್ಪರ ಲಾಭದ ಯೋಜನೆಯನ್ನು ಆತನೇ ಘೋಷಿಸಿದ. ಯೋಜನೆ ಜಾರಿಯಾಗಿ ಆಟೋದಲ್ಲಿ ಸಾಗುವಾಗ ಎಲ್ಲದರಲ್ಲೂ ಒಳ್ಳೆಯದನ್ನು ಹುಡುಕುವ ರಾಮಣ್ಣ, 'ಮದುವೆ–ಮುಂಜಿ–ಹುಟ್ಟು ಹಬ್ಬಗಳಂತೆ ವೈಕುಂಠ ಸಮಾರಾಧನೆಗಳಲ್ಲಿ ಆಹೇರು ಕೊಡುವ ಪದ್ಧತಿಯೊಂದಿಲ್ಲ ನೋಡು. ಆಟೋ ಖರ್ಚೊಂದು ಬಿಟ್ಟರೆ ಇದು ನಿಜಕ್ಕೂ ಒಳ್ಳೆಯ ಸಮಾರಂಭ. ಇಂಥವು ಎಷ್ಟು ಬಂದರೂ ಹೋಗುತ್ತಿರಬಹುದು' ಎಂದು ಹೇಳಿದ. ತನ್ನ ಜಾಗ ಬಂದಾಗ ನನ್ನ ಕೈಯ್ಯಲ್ಲಿ ಇಪ್ಪತ್ತೈದು ರೂಪಾಯಿ ಇಟ್ಟು ಇಳಿದು ಹೋದ. ರಾಮಣ್ಣನ ತಲೆಯಲ್ಲಿನ ಲೆಕ್ಕಾಚಾರದ ಭೂತ ನನ್ನ ತಲೆ ಸೇರಿಕೊಂಡಿತು. ನನ್ನ ಆತ್ಮಸಾಕ್ಷಿ ನನ್ನನ್ನು 'ಥೀ ಥೂ' ಎಂದು ಹಿನ್ನೆಲೆಯಲ್ಲಿ ಬೈಯ್ಯುತ್ತಿರುವಾಗಲೇ ಹೋಗುವಾಗಿನ ಆಟೋ ಐವತ್ತು. ಬರುವಾಗಿನ ಇಪ್ಪತ್ತೈದು. ಊಟದ ಇನ್ನೂರರಲ್ಲಿ ಎಪ್ಪತ್ತೈದು ತೆಗೆದರೂ ನೂರಿಪ್ಪತ್ತೈದರ ಲಾಭ. ಆದರೆ ಅಷ್ಟರ ಊಟ ಮಾಡಿದೆನೇ? ಇನ್ನಷ್ಟು ಮಾಡಬಹುದಾಗಿತ್ತೇ? ಎಂದೆಲ್ಲ ಲೆಕ್ಕ ಮಾಡಿ ಮುಗಿಸಿದೆ.

ನನ್ನದೆಂಬ ಈ ಆತ್ಮಸಾಕ್ಷಿ ಲೆಕ್ಕದಲ್ಲಿ ಸೊನ್ನೆ ಅಂಕ ಪಡೆದ ವಿದ್ಯಾರ್ಥಿಯಾಗಿದ್ದಿರಬಹುದೆಂದು ನನಗೆ ಅನ್ನಿಸಿದ್ದಿದೆ. ನಾನು ಕುಳಿತಲ್ಲೆ ಏನಾದರೂ ಲಾಭ ಮಾಡಿಕೊಳ್ಳುವ ಲೆಕ್ಕಕ್ಕಿಳಿದರೆ ಸಾಕು, ಸೂಜಿ ಚುಚ್ಚಿದಂತೆ ಚುಚ್ಚುತ್ತ ಕೆಟ್ಟದಾಗಿ ತೆಗಳುತ್ತ ನನ್ನ ಕೂಡುವ ಲೆಕ್ಕವನ್ನು ಕೆಡಿಸಿ ಕಳೆಯುವ ಲೆಕ್ಕವನ್ನಾಗಿ ಮಾಡುತ್ತದೆ. ಹೆಂಡತಿ, 'ಕೈಲಾಗದವರು' ಎಂದು ನಮ್ಮಿಬ್ಬರನ್ನೂ

ಮೂದಲಿಸುತ್ತ, 'ಮೂಲೆಯಲ್ಲಿ ಕುಳಿತು ವಟಗುಡುವ ಮುದುಕಿಗೇಕೆ ಹೆದರುತ್ತೀರಿ? ಅದೇನು ಕಾರ್ಯಕಾರಿಣಿಯೋ? ಕೇವಲ ಸಲಹಾ ಸಮಿತಿ' ಎಂದು ಆತ್ಮಸಾಕ್ಷಿಯನ್ನು ಅಲಕ್ಷಿಸುವಂತೆ ಬುದ್ಧಿ ಹೇಳುತ್ತಾಳೆ. ನಾನು ಒಂದು ಸಾರಿ ಇದರ ಮಾತನ್ನು ಮತ್ತೊಂದು ಸಾರಿ ಹೆಂಡತಿಯ ಮಾತನ್ನು ಕೇಳಿಕೊಂಡು ಹಾಗೂ ಹೀಗೂ ಸಂಸಾರ ವ್ಯಾಪಾರ ಸಾಗಿಸುತ್ತಿದ್ದೇನೆ. ನನಗೆ ಕಾಡಿದಷ್ಟು ನನ್ನ ಅಕ್ಕಪಕ್ಕದವರಿಗೆ ಈ ಆತ್ಮಸಾಕ್ಷಿ ಕಾಡಿದಂತಿಲ್ಲ ಎಂಬುದು ನನ್ನ ಕಾಯಂ ಭಾವನೆ. ಅವರು ಸಮಾಜ ವಿಜ್ಞಾನ, ಪೌರನೀತಿ, ಕಾನೂನು ಶಾಸ್ತ್ರಗಳಲ್ಲಿ ಸೊನ್ನೆ ಅಂಕ ಪಡೆದರೂ ಭೌತಜ್ಞಾನದಲ್ಲಿ ಮಾತ್ರ ಲೋಕವಿಶಾರದರು. ಗಣಿತದಲ್ಲಂತೂ 'ಅಗಣಿತ ಗುಣಧಾಮರು'. ನನ್ನ ಅಕ್ಕಪಕ್ಕದವರೂ ನನ್ನ ಬಗ್ಗೆ ಹೀಗೇ ಅಂದುಕೊಳ್ಳುತ್ತಾರೋ ಏನೋ! ಯಾರಿಗೆ ಗೊತ್ತು?

ರಾಯರ ವೈಕುಂಠದ ಊಟ ನಿದ್ದೆಗೆಳೆಯಿತು ಮತ್ತು ಅದರ ಪ್ರಭಾವ ಕನಸಲ್ಲೂ ಕಂಡಿತು. ಅವರಂತೆಯೇ ವ್ಯಾಪಾರ ಮಾಡಿದೆ. ಅವರಂತೆಯೇ ಆಸ್ತಿ ಮಾಡಿದೆ. ಮೆರೆದಾಡಿದೆ. ಆದರೆ ಅವರಂತೆ ಸಾಯುವುದಕ್ಕೆ ಹೋಗದೆ ಕನಸಿನಿಂದ ಹೊರಗೆ ಬಂದೆ. 'ಒಳ್ಳೇ ಕನಸು' ಎಂದು ಪ್ರಕಟಪಡಿಸಿದೆ. ಮನಸ್ಸಿಟ್ಟು ಸಾಧನೆ ಮಾಡಿದರೆ ನೀವು ನಿರಂತರ ಒಳ್ಳೆಯ ಕನಸುಗಳನ್ನು ಕಾಣಬಹುದೆಂದು ಧನಾಶ್ರಮದ ಸ್ವಾಮೀಜಿ ಹೇಳುತ್ತಿರುತ್ತಾರೆ. ಆದರೆ ಇಂಥ ಮಾತುಗಳನ್ನು ಕೇಳಲು ಅವರ ತುಟ್ಟಿಯ ತರಗತಿಗೆ ಸೇರಬೇಕು. ಅವರ ಟೀಶರ್ಟ್ ಕೊಳ್ಳಬೇಕು. ಮತ್ತು ಇತರರಿಗೆ ಮಾರಿ ಹಣ ಕೊಡಬೇಕು. ಆ ಎಲ್ಲ ವ್ಯಾಪಾರ ಬೇಡವೆಂದು ಆ ಕಡೆಗೆ ಹೋಗುವುದನ್ನು ನಿಲ್ಲಿಸಿ ಬಿಟ್ಟೀದ್ದೇನೆ.

ಮುದ್ದಿನ ಮಗಳು ನೆನಪಾದಳು. ಅವಳ ಕೋಣೆಗೆ ನಡೆದೆ. ಅವಳು ಮನೋ ವ್ಯಾಪಾರದಲ್ಲಿ ತೊಡಗಿದ್ದಳು. ಖಾಲೀ ಗೋಡೆಯ **ಪಡದೆಯ** ಮೇಲೆ ಅವಳದು ಸಧ್ಯದಲ್ಲಿ ಮುಗಿಯದ ವ್ಯಾಪಾರ. ಇಪ್ಪತ್ತು–ಇಪ್ಪತ್ತೈದು ವರ್ಷಗಳ ಹಿಂದೆ ನಾನೂ ಈ ವ್ಯಾಪಾರ ಬಲ್ಲವನಾಗಿದ್ದೆ. ಅದರ ಒಳ ಮರ್ಮಗಳೂ ತಿಳಿದಿದ್ದುವು. ಅಂತೆಯೇ ಗೋಡೆಯ ಪಡದೆಯ ಚಿತ್ರಗಳನ್ನು ನೋಡತೊಡಗಿದೆ. ದೇವಸ್ಥಾನದ ಪಕ್ಕದ, SSLC ಸೇತುವೆ ದಾಟದ, ಬಣ್ಣಬಣ್ಣದ ಕನಸಿನಂಥ ಹೂ ಮಾರುವ ಮೊಂಡು ಮೂಗಿನ ಹುಡುಗನೊಂದಿಗೆ ಮಗಳು ಕಣ್ಣು–ಬಾಯಿ– ಮೈ–ಮನಸ್ಸುಗಳೊಂದಿಗೆ ಮಾತನಾಡುವುದು ಮೊದಲ ದೃಶ್ಯ. ಹುಡುಗ ಕಾರಿನಲ್ಲಿ ಹೂ ತುಂಬಿಸಿಕೊಂಡು ಬೃಹತ್ ಬಂಗಲೆಯಿಂದ ಹೊರಡುವುದು ಎರಡನೆಯ ದೃಶ್ಯ. ಮರಳಿ ಅದೇ ಬಂಗಲೆಗೆ ಬಂದು ಹೂ ಮಾರಿ ಬಂದ ಹಣದ ಸೂಟಕೇಸನ್ನು ಮಗಳಿಗೆ ಒಪ್ಪಿಸುವುದು ಅಂತಿಮ ದೃಶ್ಯ. ಈ ಕೊನೆಯ ದೃಶ್ಯವನ್ನು ಮತ್ತೆ ಮತ್ತೆ ನೋಡುತ್ತ ಮಗಳು ಕುಳಿತಲ್ಲೇ ಕುಣಿದಾಡುತ್ತಿರುವಾಗಲೇ ನಾನು ಅವಳನ್ನು ಕನಸಿನ ವ್ಯಾಪಾರದಿಂದ ಲೋಕ ವ್ಯಾಪಾರಕ್ಕೆ ಎಳೆ ತಂದೆ. 'ಮಗಳೇ ಈ ಹೂ ಮಾರುವ ಹುಡುಗನಿಗೆ ಕಾರು ಎಟುಕದಮ್ಮ. ಹೆಚ್ಚೆಂದರೆ ಬೈಸಿಕಲ್ಲು. ಬಂಗಲೆ–ಗಿಂಗಲೆ ದೂರವಮ್ಮ. ಏನಿದ್ದರೂ ಗುಡಿಸಲು. ಅದಕ್ಕಿಂತ PUC ಹುಡುಗರಿಗೆ ಮನೆಪಾಠ ಹೇಳುವ ಮೇಷ್ಟ್ರನ್ನು ಈ ಗೋಡೆಯ **ಪಡದೆಯ** ಮೇಲೆ ಮೂಡಿಸಿಕೋ. ಕಲ್ಪವೃಕ್ಷ–ಕಾಮಧೇನು ಬೇರಿಲ್ಲ ಕಣಮ್ಮ. ಈ ಹೂ ಹುಡುಗನಿಗೆ ಯಾರಮ್ಮ ಕಾರು ಬಂಗಲೆ ಕೊಡುವವರು?' ಎಂದು ಅನುನಯಿಸಲು ಯತ್ನಿಸಿದೆ. ಮಗಳು ನನ್ನತ್ತ ನಮ್ಮ ರಿಯಲ್ ಎಸ್ಟೇಟ್ ಮುನಿಸ್ವಾಮಿ ನೋಡಿದಂತೆ ನೋಡಿ, 'ಅಪ್ಪ, ಅದು ನನಗೂ ಗೊತ್ತು. ನನಗೆ ಮೊದಲ ದೃಶ್ಯದ ಹುಡುಗನನ್ನು ಪಡೆವುದಷ್ಟೇ ಬೇಕು. ಎರಡು–ಮೂರರ ಕಾರು ಬಂಗಲೆ ದೃಶ್ಯಗಳಿಗಾಗಿ ನೀನು ಪ್ರಾಯೋಜಕನಾದರೆ ಸಾಕು' ಎಂದು ಹೇಳಿ, 'ನಾನೊಬ್ಬಳೇ ಮಗಳು ಎಂದು ತಿಳಿದಾಗಿನಿಂದ ಅವನ ಪ್ರೀತಿ ಚಿನ್ನದ ದರದಂತೆ ಏರುತ್ತಲೇ ಸಾಗಿದೆ. ಅಂಗಡಿ–ಬಂಗಲೆಗಳನ್ನೂ ನೋಡಿಟ್ಟಿದ್ದಾನೆ' ಎಂದವಳೇ ಮೂರನೇ ದೃಶ್ಯದಲ್ಲಿ ಐಕ್ಯಳಾದಳು.

ನಾನು ಅವಳ ಮನೋವ್ಯಾಪಾರವನ್ನು ಮೊದಲ ಬಾರಿ ಗಂಭೀರವಾಗಿ ಪರಿಗಣಿಸಬೇಕಾಯ್ತು. ಇದುವರೆಗೆ, 'ಮನಸ್ಸಿನ ಮಂಡಿಗೆ ತಾನೇ! ತಿಂದರೆ ತಿನ್ನಲಿ' ಎಂದು ಹಗುರಾಗಿ ತೆಗೆದುಕೊಂಡಿದ್ದೆ. ಆದರೆ ಗೋಧಿ–ತುಪ್ಪದ ಲೆಕ್ಕ ನಾನೇ ಕೊಡಬೇಕಾಗುತ್ತದೆಂದು ಅಂದುಕೊಂಡಿರಲಿಲ್ಲ.

ಚಹ ಬೇಕೆನ್ನಿಸಿತು. ಆದರೆ ನಾಲ್ಕೂವರೆಗೆ ಚಹ ಕೊಟ್ಟರೆ ಆರೂವರೆಗೆ ಮತ್ತೊಮ್ಮೆ ಚಹ ಕೇಳುವ ಸಾಧ್ಯತೆ ಇರುತ್ತದೆಂಬ ಕಾರಣಕ್ಕೆ ಹೆಂಡತಿ ಚಹದ ಸಮಯವನ್ನು ಐದೂವರೆಯ ನಂತರಕ್ಕೆ ನಿಗದಿಗೊಳಿಸಿದ್ದಳು. ಆದರೆ ಆಶ್ಚರ್ಯವೆಂಬಂತೆ ಚಹ ಬಂದು ಬಿಟ್ಟಿತು. 'ಕುಡಿದು ದೇವಸ್ಥಾನಕ್ಕೆ ಹೊರಡಿ' ಎಂಬ ಅಪ್ಪಣೆಯೂ ಆಯಿತು. ದೇವಸ್ಥಾನಕ್ಕೆ ನನ್ನ ಕಾರಣವಾಗಿಯೇ ಹೋಗಬೇಕಾಗಿತ್ತು. ಕಚೇರಿಯಲ್ಲಿಯ ಒಂದು ಬಡ್ತಿಗಾಗಿ ನಾವು ಐದು ಜನ ಸಹೋದ್ಯೋಗಿಗಳು ಅದರ ದಾವೇದಾರರಾಗಿದ್ದೆವು. ಹೀಗಾಗಿ ದೇವರಿಗೆ ಒಂದು ಪೂಜೆ ಮಾಡಿಸಿ, ಹರಕೆ ಹೊತ್ತು ಬಂದರೆ ಕೆಲಸವಾಗುತ್ತದೆಂಬ ಅಂದಾಜು ಹೆಂಡತಿಯದಾಗಿತ್ತು.

ಇಲ್ಲಿ ಒಂದು ವಿಷಯ ಸ್ಪಷ್ಟಪಡಿಸಬೇಕು. ನಮ್ಮ ಕುಲದೇವತೆಯ ದೇವಸ್ಥಾನ ಮನೆಯಿಂದ ಮೂರೂವರೆ ಕಿಲೋಮೀಟರು ದೂರ. ಬಸ್ಸು ಇಲ್ಲ. ನಡೆಯಲು ದೂರ. ಆಟೋ ತುಟ್ಟಿ. ಹೀಗಾಗಿ ನಾವು ಮನೆ ಹತ್ತಿರದ ದೇವಸ್ಥಾನ ಸಂಕೀರ್ಣಕ್ಕೆ ತೆರಳುತ್ತಿದ್ದೆವು. ಅದೊಂದು ರೀತಿಯ ದೇವಸ್ಥಾನ ಮಾಲ್ ಇದ್ದಂತೆ. ಎಲ್ಲ ದೇವರುಗಳು ಒಂದೇ ಕಡೆಗೆ ಸಿಕ್ಕುತ್ತಿದ್ದರು. ನಿಜ ಹೇಳಬೇಕೆಂದರೆ ಈ ಸಂಕೀರ್ಣದಲ್ಲಿ ನಮ್ಮ ಕುಲದೇವತೆ ಇದ್ದಿರಲಿಲ್ಲ. ಈ ದೇವತೆಗೆ ನಮ್ಮೂರಲ್ಲೇ ಸಾವಿರಾರು ಭಕ್ತರಿದ್ದಾರೆಂದು ಅರ್ಚಕರಿಗೆ ಮನವಿ ಸಲ್ಲಿಸಿದ ಮೇಲೆ ದೇವಸ್ಥಾನದ ಆವಾರದ ಹಿಂದಿನ ಮೂಲೆಯಲ್ಲಿ ಎರಡಡಿಯ ಪುಟ್ಟ ದೇವಸ್ಥಾನ ನಿರ್ಮಿಸಿ ಅದರಲ್ಲಿ ಆರಂಗುಲದ ಮೂರ್ತಿ ಪ್ರತಿಷ್ಠಾಪಿಸಿ ಅದಕ್ಕೆ ನಮ್ಮ 'ಕುಲದೇವತಾ ಪ್ರಸನ್ನ' ಎಂದು ಬರೆಸಿದ್ದರು. ಹಾಗಾಗಿ ಅದು ನಮ್ಮ ಕುಲದೇವತೆಯೇ. ಸಧ್ಯಕ್ಕೆ ನಾವಿಬ್ಬರು ಮಾತ್ರ ಕಾಯಂ ಭಕ್ತರಾದುದರಿಂದ ನಮ್ಮನ್ನು ಅತ್ಯಂತ ಕರುಣೆಯಿಂದ ನೋಡುತ್ತದೆಂದು ಹೆಂಡತಿ ನಂಬಿದ್ದಳು. ಅಷ್ಟೊಂದು ಪುಟ್ಟ ಪುಟ್ಟ ದೇವಸ್ಥಾನಗಳಿದ್ದರೂ 'ದೇವನೊಬ್ಬ ನಾಮ ಹಲವು' ಎಂಬಂತೆ ಎಲ್ಲದಕ್ಕೂ ಒಬ್ಬರೇ ಅರ್ಚಕರಿದ್ದರು. ಆದರೆ ಅವರು ಪೂಜೆ ಮಾಡುತ್ತಿರಲಿಲ್ಲ. ಅನೇಕರನ್ನು ನೇಮಿಸಿಕೊಂಡು ಪೂಜೆಯ ದೇಖರೇಕಿ ಮಾಡುತ್ತಿದ್ದರು. ಅವರಿಗೆ ಇನ್ನೂ ಎರಡು ಮೂರು ದೇವಸ್ಥಾನ ಸಂಕೀರ್ಣಗಳಿವೆ ಎಂದು ಜನರು ಹೇಳುತ್ತಿದ್ದರು. ನಿಜಕ್ಕೂ ಇವೆಲ್ಲ ಮೊನ್ನೆ ಮೊನ್ನೆ ತೀರಿ ಹೋದ ರಾಯರ ಕೊನೆಯ ಮಗನಿಗೆ ಸೇರಿದವುಗಳೆಂದೂ ಹಲವಾರು ವರ್ಷಗಳಿಂದ ಈ ಅರ್ಚಕರು ಅವುಗಳನ್ನು ವರ್ಷದ ಕರಾರಿನೊಂದಿಗೆ ನಡೆಸುತ್ತಿದ್ದಾರೆಂದೂ ಜನರು ಮಾತನಾಡಿಕೊಳ್ಳುತ್ತಿದ್ದರು. ಇದನ್ನೆಲ್ಲ ಕೇಳಿದರೂ ಜನರ ಭಕ್ತಿಯೇನೂ ಕಡಿಮೆಯಾಗಿರಲಿಲ್ಲ. ಹಣ ನೀಡಿ ಪಾವತಿ ಪಡೆದರೆ ಸಾಕು–ನಾವಿರಲಿ, ಇರದಿರಲಿ–ಪೂಜೆ ನಡೆಯಿತೆಂದೇ ಲೆಕ್ಕ. ಐವತ್ತರಿಂದ ಐದುಸಾವಿರದವರೆಗಿನ ಪೂಜೆಗಳಿವೆ. ಅವರವರ ತಾಕತ್ತಿನಂತೆ ಪೂಜೆ.

ಪದೋನ್ನತಿಗೆ ಎಷ್ಟರ ಪೂಜೆಯು ಅಗತ್ಯವಿದೆ ಎಂಬುದು ಬಗೆಹರಿಯದಾದಾಗ ನನ್ನ ಹೆಂಡತಿ ಉಳಿದ ನಾಲ್ಕು ಅಭ್ಯರ್ಥಿಗಳ ಹರಕೆಯ ವಿವರಗಳನ್ನೂ ಅರ್ಚಕರ ಮೂಲಕವೇ ಪತ್ತೆ ಹಚ್ಚಿದಳು. ಮೂವರು ಮಧ್ಯಮ ಗಾತ್ರಕ್ಕೆ ಶರಣು ಹೋಗಿದ್ದರೆ ಒಬ್ಬರು ಮಾತ್ರ ಬಲವಾದ ದಿಂಡರಕಿ–ಅಂದರೆ ಉರುಳು ಸೇವೆಯಲ್ಲಿ–ಹಣ ಹೂಡಿದ್ದರು. ನಮ್ಮಾಕೆ ಪಂಚದಿಂಡರಕಿ ಎಂಬ ಬ್ರಹ್ಮಾಸ್ತ್ರ ಹೂಡಿದಳು. ಅಂದರೆ ಐವರಿಂದ ಉರುಳುಸೇವೆ ಮಾಡಿಸುವ ಹರಕೆ. ಉರುಳುಸೇವೆಯನ್ನು ನಾವೇ ಮಾಡಬೇಕಾಗಿಲ್ಲ. ಹಣ ಕೊಟ್ಟರೆ ಬಾಡಿಗೆ ಉರುಳುಸೇವಕರನ್ನೂ ಅರ್ಚಕರೇ ಹೊಂದಿಸುತ್ತಾರೆ. ಎಲ್ಲ ವ್ಯವಹಾರ ಮುಗಿಸಿ ಮನೆಗೆ ಬಂದೆವು. ಮಾರನೆಯ ದಿನ ಉರುಳುಸೇವಕಿಯೊಬ್ಬಳು ಮನೆಗೆ ಬಂದು ಸೇವೆ ಸಾಂಗವಾಗಿ ನಡೆದುದನ್ನು ಹೇಳಿ ಪ್ರಸಾದ ಕೊಟ್ಟು ಖುಷಿ ಪಡೆದು ಕೊನೆಯದಾಗಿ, 'ಉರುಳುಸೇವಕರಲ್ಲಿ ಇಬ್ಬರು ಅನ್ಯಧರ್ಮೀಯರಿದ್ದರೂ ಏನೂ ತೊಂದರೆಯಾಗಲಿಲ್ಲ' ಎಂಬ ಅನಗತ್ಯ ಮಾತು ಹೇಳಿ ಹೊರಟುಹೋದಳು. ನನಗೂ ಅದು ಗೊತ್ತಿದ್ದ ವಿಷಯವೇ. ಜನರ ಭಕ್ತಿ ಹೆಚ್ಚಾಗಿ ಅವರ ಪರವಾಗಿ ಸೇವೆ ಮಾಡುವಷ್ಟು ಜನ ಸ್ವಧರ್ಮೀಯರು ಸಿಕ್ಕುತ್ತಿಲ್ಲ. ಏನು ಮಾಡಲಾಗುತ್ತದೆ?

ಮುಂದಿನ ದಿನಗಳಲ್ಲಿ ನನಗೆ ಪ್ರೊಮೋಶನ್ ಬರಲಿಲ್ಲ. ನನ್ನ ಶ್ರೀಮತಿ ನಮ್ಮ ಸೇವೆ ದೇವರಿಗೆ ಕಡಿಮೆ ಬಿದ್ದಿರಬಹುದು ಎಂಬ ನಿರ್ಧಾರಕ್ಕೆ ಬಂದ ಹಾಗಿತ್ತು. ನಿನ್ನದು ಅತಿಯಾದ ಲೆಕ್ಕಾಚಾರ ಎಂದು ಬೈದೆ. 'ಲೆಕ್ಕಾಚಾರದಲ್ಲಿ ಆಚಾರವಿದೆ' ಎಂದು ಎಥಿಕ್ಸಿನ ಮಾತಾಡಿದಳು. ನಾನು ಆಚಾರವೇ ಸ್ವರ್ಗ ಎಂದು ಗೊಣಗಿಕೊಂಡೆ.

ಲೆಕ್ಕಾಚಾರದಲ್ಲಿ ಆಚಾರ ಉಳಿಸಿಕೊಳ್ಳಲೆತ್ನಿಸುವುದು ಒಳ್ಳೆಯ ವಿಚಾರವೇ. ಇನ್ನೂ ಅಷ್ಟಿಷ್ಟು ಜೀವನಾಡಿ ಬಡಕೊಂಡಿರುತ್ತದೆ ಎನ್ನಬಹುದು. ಆದರೆ ಆಚಾರದಲ್ಲೂ ಲೆಕ್ಕ ಹಾಕುವುದಾದರೆ ಏನು ಮಾಡಬೇಕು? ಸಿಂಥೆಟಿಕ್ ಹಾಲನ್ನು ನಗುನಗುವ ಹಸುವಿನ ಚಿತ್ರದೊಡನೆ ಮಾರಾಟ ಮಾಡುತ್ತಾರೆ. ಎಮ್ಮೆಯ

ಚಿತ್ರದ ತುಪ್ಪದ ಪ್ಯಾಕೆಟ್ಟಿನಲ್ಲಿ ಯಾವ ಹಂದಿ ನಮಗಾಗಿ ತನ್ನ ನೆಣವಿಟ್ಟು ಸತ್ತು ಹೋಗಿರುತ್ತದೋ ಯಾರು ಬಲ್ಲರು? ವನಸ್ಪತಿ ಎಂಬ ಹೆಸರಿನಲ್ಲಿ ಮಾರುವ ವಸ್ತುಗಳಲ್ಲಿ ಸಸ್ಯದ ಅಂಶ ಇರಲೇಬೇಕೆಂದಿಲ್ಲ. ಒಟ್ಟಾರೆ ಎಲ್ಲೆಲ್ಲೂ ವ್ಯಾಪಾರವೇ.

ಕಾಲ ಬದಲಾಗಿದೆ. ಹುಡುಗರ ಹವ್ಯಾಸಗಳೂ ಬದಲಾಗಿವೆ. ದುಡ್ಡು ತರಲಾರದ ಲಲಿತಕಲೆಗಳ ಬಗೆಗೆ ಯಾರಿಗೂ ಆಸಕ್ತಿ ಇಲ್ಲ. ಮೊನ್ನೆ ನನ್ನ ಗೆಳೆಯನ ಮನೆಯಲ್ಲಿ ಒಂದು ಕನ್ಯಾ ಪರೀಕ್ಷೆ ನಡೆಯಿತು. 'ನಿನ್ನ ಹವ್ಯಾಸಗಳಾವುವು ಮಗಳೇ?' ಎಂದು ಕೇಳಿ ಸಾಹಿತ್ಯ, ಸಂಗೀತ, ಚಿತ್ರಕಲೆ, ಕ್ರೀಡೆ ಇತ್ಯಾದಿಗಳಲ್ಲಿಯ ಒಂದು ಉತ್ತರವನ್ನು ನಿರೀಕ್ಷಿಸಿದ್ದೆ. ಆ ಮಗು 'ಶೇರ ಮಾರ್ಕೆಟ್' ಎಂಬ ವಿಭಿನ್ನವಾದ ಉತ್ತರ ನೀಡಿತು.

ಯಾಕೋ ಬೇಜಾರೆನ್ನಿಸಿತು. ಈ ವ್ಯಾಪಾರೀಲೋಕದಿಂದ ಕೊಂಚ ಸಾಹಿತ್ಯ ಪರಿಸರಕ್ಕೆ ಹೋದರೆ ನೆಮ್ಮದಿ ಸಿಕ್ಕಬಹುದೆಂದು ನನ್ನ ಹಳೆಯ ಕತೆಗಾರ ಗೆಳೆಯನನ್ನು ಹುಡುಕಿಕೊಂಡು ಹೊರಟೆ. ಅವನನ್ನ ನೋಡಿ ಹತ್ತಾರು ವರ್ಷಗಳೇ ಕಳೆದಿದ್ದುವು. ಪುಣ್ಯಕ್ಕೆ ಮನೆಯಲ್ಲೇ ಇದ್ದ. ಆದರೆ, 'ಕೇವಲ ಏಳು ನಿಮಿಷ ಬಿಡುವಿದೆ. ಮಾತಾಡು,' ಎಂದ. ಇತ್ತ ಮಾತನಾಡುತ್ತಲೇ ಅತ್ತ ಕಂಪ್ಯೂಟರಿನಲ್ಲಿ ಕತೆ ಬರೆಯುತ್ತಿದ್ದ. ಆತ ದಿನಕ್ಕೊಂದು ಕತೆ ಬರೆಯುವ ಶಿಸ್ತಿಗೆ ತನ್ನನ್ನು ಒಳಪಡಿಸಿಕೊಂಡಿದ್ದರಿಂದ ಈ ಒತ್ತಡ ಉಂಟಾಗಿತ್ತು. ಇನ್ನೂರು–ಮುನ್ನೂರು ಸಂಭಾವನೆ ಕೊಡುವ 'ಕರುನಾಡ ಕಂದ'ದಂಥ ಪತ್ರಿಕೆಗಳ ವಿನಂತಿ ಬಂದೊಡನೆ ತನ್ನ ದಿನಕ್ಕೊಂದು ಕಥೆಯ ಸಂಗ್ರಹದಿಂದ ಒಂದನ್ನ ಬಿಸಾಡಿಬಿಡುತ್ತಿದ್ದ. ದೀಪಾವಳಿ ವಿಶೇಷಾಂಕಗಳಿಗೆ ನಾಲ್ಕು ದಿನ ವ್ಯಯಿಸಿ ಮಸಾಲೆ ಟೀ ಕುಡಿಯುತ್ತ ವಿಶೇಷವಾದ ಕಥೆಗಳನ್ನು ರಚಿಸುತ್ತಿದ್ದ. ಹತ್ತುಸಾವಿರದಿಂದ ಇಪ್ಪತ್ತೈದು ಸಾವಿರದ ಕಥಾಸ್ಪರ್ಧೆಗಳನ್ನು ಮಾತ್ರ ಆತ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದ. ಅದಕ್ಕಾಗಿ ಅಪರೂಪದ ಫಾರ್ಮುಲಾ ಬಳಸುತ್ತಿದ್ದ. ಶೋಷಣೆ ಮತ್ತು ಪ್ರೀತಿಯೆಂಬ ಚಿರಂಜೀವಿಗಳನ್ನು ಹದವಾಗಿ ಬೆರೆಸಿ ಜಾಗತೀಕರಣದ ಮಿಕ್ಸಿಗೆ ಸೇರಿಸಿ ನಿರೂಪಕನ ಮೂಲಕ ಒಂದೂವರೆ ಸುತ್ತು ಮಾತ್ರ ತಿರುಗಿಸಿ ಅನ್ಯಾಯದ ತೆಳು ಕೆಂಬಣ್ಣದ ಎಣ್ಣೆಯ ವಗ್ಗರಣೆ ಹಾಕುತ್ತಿದ್ದ. ಅದು ಪಾತ್ರಗಳ ಅಗತ್ಯಕ್ಕೆ ತಕ್ಕಂತೆ ಅವುಗಳಲ್ಲಿ ಸೇರಿಕೊಳ್ಳುತ್ತಿತ್ತು. ನಂತರ ಮೆಲ್ಲಗೆ ಬೇಯಲು ಬಿಡುತ್ತಿದ್ದ. ಕತೆ ಸೀಯದಷ್ಟು ಮತ್ತು ಒಂದಷ್ಟು ಹೆಚ್ಚೇ ಬೇಯುವಷ್ಟು. ಓದುಗನಿಗೆ ವಿಮರ್ಶಕನಿಗೆ ಒಟ್ಟಿಗೆ 'ಶ್ರೀಮಂತನೂ ಸೈ, ಬಡವನೂ ಸೈ, ಪರಿಸ್ಥಿತಿಗೆ ಮಾತ್ರ ಬೈಯಿ' ಎಂಬ ಅನುಭವ ಕೊಡಬೇಕು. ಆತ ಕಡೆಗೆ ಹೇಳಿದ, 'ಈ ಕಲೆಗೆ ಈಗ ಡಾಲರ್ ಕೂಡ ಒಲಿದಿದೆ.' ಈ ಸಾರಿ 'ಅಣ್ಣ' ಸಮ್ಮೆಳನಕ್ಕೆ ಕರೆ ಬಂದಿದೆ. ನಾಳೆ ಹೊರಡಬೇಕು. ನೀನೂ ಹೊರಡು, ಎಂದ. ಹೊರಟೆ.

ದಾರಿಯಲ್ಲಿ ಸಂಗೀತ ಕಚೇರಿ ನಡೆದಿತ್ತು. ಫ್ಯೂಜನ್ ಸಂಗೀತ ನನಗೆ ಇಷ್ಟವಾಗದ್ದು. 'ಅವರಿಗೆ ಶಾಸ್ತ್ರೀಯ ಸಂಗೀತ ಕೂಡ ಗೊತ್ತು. ಆದರೆ ಅದರಲ್ಲಿ ಇಷ್ಟು ಗಿಟ್ಟುವುದಿಲ್ಲ' ಎಂದು ಯಾರೋ ಯಾರಿಗೋ ಹೇಳುತ್ತಿದ್ದರು. 'ಇದರಲ್ಲೇನೋ ದಮ್ಮಿದೆ' ಎಂಬ ಖ್ಯಾಲ್ ನುಡಿಸುತ್ತಿದ್ದರು. ಇನ್ನೂ ಏನೇನೋ ಹುಡುಕಬೇಕೆಂದು, ಏನೇನೋ ಬೇಕೆಂದು ಅನ್ನಿಸುತ್ತಿರುವಾಗಲೇ ಮನೆಯ ಕಡೆಗೆ ಕಾಲೆಳೆದುಕೊಂಡು ಹೊರಟೆ.

ನನ್ನ ಕಟ್ಟಕಡೆಯ ಭರವಸೆಯಾಗಿ ಓರ್ವ ಕವಿಯನ್ನು ಭೆಟ್ಟಿಯಾಗುವ ಬಲವಾದ ಆಸೆಯಿದ್ದಿತು. ವ್ಯಾಪಾರೀಕರಣದ ಪ್ರಭಾವದಿಂದ ಆತನೊಬ್ಬನಾದರೂ ಹೊರಗುಳಿದಿರಬಹುದೆಂಬ ಹಂಬಲ ಹಾಗೂ ನಿರೀಕ್ಷೆ. ಆದರೂ ಯಾಕೋ ಧೈರ್ಯ ಸಾಲಲಿಲ್ಲ. ಕನಸು ಒಡೆದೀತೆಂಬ ಲೆಕ್ಕಾಚಾರ. ಮನೆ ತಲುಪಿದಾಗ ಮುಸ್ಸಂಜೆ ಮೀರಿತ್ತು. ತಂದೆ ದೇವರ ಮುಂದೆ ಕುಳಿತು ಜಪ ಮಾಡುತ್ತ ಬೆರಳೆಣಿಸುತಿದ್ದರು. ಏಕಕಾಲಕ್ಕೆ ನೂರಾಎಂಟರ ಅಂಕಿ ಮತ್ತು ಧ್ಯಾನ ಎರಡನ್ನೂ ಸಾಧಿಸುವುದು ಅವರಿಗೆ ಅಭ್ಯಾಸವಾಗಿತ್ತು. ಅಡಿಗೆ ಮನೆಯಲ್ಲಿ ನನ್ನ ಹೆಂಡತಿ ಕೂಡ ಬೆರಳೆಣಿಸುತ್ತ ಏನೋ ಮಾಡುತ್ತಿದ್ದಳು. ಏನು ಲೆಕ್ಕಾಚಾರದಲ್ಲಿ ತೊಡಗಿದ್ದಾಳೆಂಬುದು ತಿಳಿಯಲಿಲ್ಲ.



**(ನಮ್ಮ ನಡುವಿನ ವಿಶಿಷ್ಟ ಲಲಿತ ಪ್ರಬಂಧಕಾರರಲ್ಲೊಬ್ಬರಾದ ವಿಜಯೇಂದ್ರ ಪಾಟೀಲರು ಮೂಲತಃ ಗೋಕಾಕ ಬಳಿಯ ಬೆಟಗೇರಿಯವರಾಗಿದ್ದು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.)**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

**ನಮ್ ಟೀಮ್?!**

**ನಂ. ೧೫೯, ಅಂಬೆ, ೧ನೇ ತಿರುವು, ೩ನೇ ಮುಖ್ಯರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಿವಮೊಗ್ಗ**

**ಸಂಪರ್ಕ: ೯೮೪೪೫ ೧೮೮೭೭**



**ಕುವೆಂಪು ಅವರ *ಶ್ರೀರಾಮಾಯಣ ದರ್ಶನಂ* ಕೃತಿ ಆಧರಿಸಿದ ' ಓ ಲಕ್ಷ್ಮಣ' ನಾಟಕದ ಒಂದು ದೃಶ್ಯ.ರಂಗರೂಪ, ನಿರ್ದೇಶನ– ಎಸ್.ಆರ್. ವಿಜಯಲಕ್ಷ್ಮಿ.**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಸ್ವರ್ಗ, ನರಕ, ಪುನರ್ಜನ್ಮ ಇತ್ಯಾದಿ ಶಬ್ದಾಡಂಬರವನ್ನೆಲ್ಲ ಬಿಟ್ಟುಬಿಡಿ. ನೀವು ಸಹಜವಾಗಿ ಇರುವಂತೆ ಇರಿ. ನೀವು ಯಾರು ಎನ್ನುವುದನ್ನು ಕಂಡುಕೊಳ್ಳುವಿರಿ

– ರಮಣ ಮಹರ್ಷಿ



**ಬಿ.ವಿ.ಸುರೇಂದ್ರ**

**ಶ್ರೀಮತಿ ವಿಜಯಶ್ರೀ,**

**ಚಿ. ಉಲ್ಲಾಸ ಮತ್ತು**

**ಚಿ. ವಿಶ್ವಾಸ,**

೫ನೇ ಕ್ರಾಸ್, ಕಲ್ಯಾಣನಗರ,


ಧಾರವಾಡ

# ಆ–ಲೋಕ ಈ–ಲೋಕಗಳ ದ್ವಂದ್ವದಲ್ಲಿ....

ವಿಶೇಷ ಲೇಖನ–೧

–ಲಕ್ಷ್ಮೀಶ ತೋಳ್ಪಾಡಿ

**ಲೋಕವೇ ನಮಗೆ ಕೊಡಲ್ಪಟ್ಟರೂ ನಮ್ಮ ದುಃಖಕ್ಕೆ ಮಾತ್ರ ಕೊನೆ ಇಲ್ಲವಾಗಿದೆ! ಕೊಡುಗೆ ದೊಡ್ಡದಾದಂತೆ ದುಃಖವೂ ದೊಡ್ಡದಾಗಿ ಬೆಳೆಯುತ್ತದೇನೋ. ಈ ಲೋಕ ನಮ್ಮದೆಂದು ಎಷ್ಟು ಸಮರ್ಥಿಸಿಕೊಂಡರೂ ಇದು ಇನ್ನೂ ಪೂರ್ತಿ ನಮ್ಮದಾಗಿಲ್ಲವಲ್ಲ; ಇಲ್ಲಿ ಇನ್ನಿತರರೂ ಇದ್ದಾರಲ್ಲ! ಸ್ವಕೀಯ–ಪರಕೀಯ ಎಂಬ ಭೇದ ನಡೆಯುತ್ತಲೇ ಇದೆಯಲ್ಲ. ನಮ್ಮಲ್ಲಿರುವ 'ಸ್ವ'ಕ್ಕೆ ದುಃಖದ ಮೇಲೆ ಅದೇನು ಆಸೆಯೋ ಕಾಣೆ! ಆಸೆಯೇ ದುಃಖಕ್ಕೆ ಮೂಲವಿರಬಹುದು. ನಮಗಾದರೋ ದುಃಖದ ಮೇಲೇ ಆಸೆಯಾಗಿರುವಂತಿದೆ! ಆದುದರಿಂದಲೇ ಯಾವ ಶೋಧನೆಗೂ ಇಳಿಯದೆ, ತಲೆತೊಳೆಯುವ ಮಾತುಗಾರಿಕೆಗಳಿಂದ ಎಲ್ಲ ಸೂಕ್ಷ್ಮಗಳಿಗೂ ಎರವಾಗುತ್ತಿದ್ದೇವೆ. ಆದುದರಿಂದಲೇ, ನಮಗೆ ಬೇಕಾದಂತೆ ಧರ್ಮ–ಅಧ್ಯಾತ್ಮಗಳನ್ನೂ ವ್ಯಾಖ್ಯಾನಿಸುತ್ತ ಎಲ್ಲರ ಸೊತ್ತಾಗಿರುವುದುನ್ನು, ಜಾತಿಗಳ–ಮತಗಳ ಸೊತ್ತಾಗಿಸುತ್ತ ಸಾಗುತ್ತಿದ್ದೇವೆ.**



ಇಲ್ಲಿ ಈ ಲೋಕದಲ್ಲಿ ಈ ನಮ್ಮ ಬದುಕಿನಲ್ಲಿ ಒಂದು 'ರಹಸ್ಯ' ಅಡಗಿದೆ ಎನ್ನುವುದು ಅಧ್ಯಾತ್ಮದ ಮೂಲಗ್ರಹಿಕೆಗಳಲ್ಲಿ ಒಂದಾಗಿದೆ. '*ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ*'–ನಮ್ಮೆಲ್ಲರನ್ನೂ ಧಾರಣ ಮಾಡಿದ ತತ್ತ್ವವು ಅಂತರಂಗದ ಆಳದಲ್ಲಿ ಅಡಗಿದೆ ಎನ್ನುವ ಮಾತು, ಸತ್ಯದ ಮುಖವನ್ನು ಬಂಗಾರದ ಮುಚ್ಚಳವೊಂದು ಮುಚ್ಚಿಬಿಟ್ಟಿದೆ ಎನ್ನುವ ಮಾತು, 'ಗೂಢಂ' ಎಂಬ ಮಾತು ಇವೆಲ್ಲ ರಹಸ್ಯವಾಚಕಗಳೇ. ಉಪನಿಷತ್ತುಗಳಲ್ಲಿ ಈ ಮಾತುಗಳು ಬಂದಿವೆ. 'ಉಪನಿಷತ್ತು' ಎನ್ನುವ ಪದಕ್ಕೇ ರಹಸ್ಯ ಎನ್ನುವ ಅರ್ಥ ಬಂದುಬಿಟ್ಟಿದೆ. ಶಿಲೆಯೊಳಗಣ ಪಾವಕ, ಬೀಜದೊಳಗಣವೃಕ್ಷ, ಶಬ್ದಗೊಳಗಣ ನಿಃಶಬ್ದ– ಇಂಥ ಮಾತುಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ರಹಸ್ಯವೊಂದನ್ನು ಸೂಚಿಸುತ್ತವೆ; ತಮ್ಮ ಮಾತಿನ ಶೈಲಿಯಲ್ಲಿಯೇ. 'ಗುಹೇಶ್ವರ'ನೆಂಬ ಅಂಕಿತ, ಗುಹೇಶ್ವರನೆಂಬುದು ಅಪ್ರಮಾಣ ಎನ್ನುವ ಮಾತು, 'ಆಯುಷ್ಯ ಹಿರಿದು–ಭಾಷೆ ಕಿರಿದು' ಎನ್ನುವ ಮಾತು, ಇವೆಲ್ಲ ಇನ್ನಷ್ಟು ಗಾಢವಾಗಿ ರಹಸ್ಯವನ್ನೇ ಹೇಳುತ್ತವೆ.

ಇಂಥ ಮಾತುಗಳೇನೋ ಇವೆ. ಒಪ್ಪೋಣ.

ಈಗ ಈ 'ರಹಸ್ಯ' ಎನ್ನುವ ಪದವನ್ನು ಹೇಗೆ ಕೇಳಿಸಿಕೊಳ್ಳಬೇಕು? ಈ ಮಾತುಗಳಿಗೆ ಹೇಗೆ ಸ್ಪಂದಿಸಬೇಕು? ಒಂದು ರಹಸ್ಯವಿದೆ ಎನ್ನುತ್ತಿದ್ದಾರೆ. ಇರಲಿ. ಒಳ್ಳೆಯದಾಯಿತು! ಈ ರಹಸ್ಯವನ್ನು ನಾವು ಭೇದಿಸಬೇಕಾಗಿದೆ. ಒಡೆಯಬೇಕಾಗಿದೆ. ಇದೊಂದು ಪಂಥಾಹ್ವಾನ. ಈ ಆಹ್ವಾನವನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ ನಾವು ರಹಸ್ಯವನ್ನು ಭೇದಿಸಬಲ್ಲೆವು. ಯಾವುದೇ ರಹಸ್ಯವನ್ನು ಭೇದಿಸುವಂತೆ ನಾವು equip ಆಗಿರುವೆವು. ಸಜ್ಜುಗೊಂಡಿರುವೆವು. ಅಥವಾ ನಮ್ಮ ತಯಾರಿ ಪರ್ಯಾಪ್ತವಲ್ಲದಿದ್ದರೆ ಇನ್ನಷ್ಟು ಸಜ್ಜುಗೊಳ್ಳುವುದು ಸಾಧ್ಯ. ನಮ್ಮ ಬೌದ್ಧಿಕತೆ, ನಮ್ಮ ಸೂಕ್ಷ್ಮ ಗ್ರಹಣಶಕ್ತಿ, ನಮ್ಮ ಜಿಜ್ಞಾಸಾ ಸಾಮರ್ಥ್ಯ, ನಮ್ಮ ಪ್ರಯೋಗ ಕೌಶಲ–ಇವೆಲ್ಲ ಯಾವುದೇ ರಹಸ್ಯವನ್ನು ಒಡೆಯುವುದಕ್ಕಾಗಿಯೇ ಇವೆಯಲ್ಲವೆ? ಆದುದರಿಂದಲೇ ನಮಗನ್ನಿಸುವುದು ಏನೆಂದರೆ– ರಹಸ್ಯವು ತನ್ನನ್ನು ಒಡೆಯುವುದನ್ನೇ ಕಾದುಕೊಂಡಿದೆ ಎಂದು. ರಹಸ್ಯವಾಗಿಯೇ ಇದ್ದರೆ ಅದೊಂದು ಬಂಧನದ ಸ್ಥಿತಿಯೇ ಸರಿ! ಈ ಬಂಧನದ ಸ್ಥಿತಿಯಿಂದ ಆ ರಹಸ್ಯವನ್ನು ನಾವು ಬಿಡುಗಡೆಗೊಳಿಸಬೇಕಾಗಿದೆ. ಬಿಡುಗಡೆಗೊಳಿಸಬಲ್ಲೆವು.

ಹೀಗೆ ಯೋಚಿಸುವುದಿದೆಯಲ್ಲ–ಇದೊಂದು ರೀತಿಯ ಕೇಳಿಸಿಕೊಳ್ಳುವಿಕೆ. ಇದು ಲೌಕಿಕವಾದ ರೀತಿ. 'ರಹಸ್ಯ' ಎಂದಾಗಲೇ ಅದೊಂದು ಸವಾಲೆಂಬಂತೆ ಗ್ರಹಿಸುವ ರೀತಿ. ಇದೊಂದು ವ್ಯವಸ್ಥಾತ್ಮಕವಾದ ಚಿಂತನೆ. ಎಲ್ಲವನ್ನೂ ನಮ್ಮ ತಿಳುವಳಿಕೆಯಲ್ಲಿ ವ್ಯವಸ್ಥಿತಗೊಳಿಸುವುದರಲ್ಲಿ ಉದ್ಯುಕ್ತರಾಗಿರುವ ನಮಗೆ, ರಹಸ್ಯ ಎನ್ನುವುದು ನಮ್ಮ ಅರಿವಿಗೆ ಒಂದು ಸವಾಲೆಂಬಂತೆ, ಒಂದು ನಾಚಿಕೇಗೇಡಿನ ಸಂಗತಿ ಎಂಬಂತೆ ಕೇಳಿಸುವುದು. ಲೌಕಿಕದ ವಿಜ್ಞಾನಮುಖದಲ್ಲಿ ಪ್ರಕೃತಿಯ ರಹಸ್ಯಗಳನ್ನು ಒಡೆಯುತ್ತ ಮುನ್ನಡೆದಿರುವೆವು; ರಹಸ್ಯವನ್ನು ಒಪ್ಪುವುದು ಹಿನ್ನಡೆಯಾಗಿ ಕಾಣಿಸುವುದು.

ಈ ರೀತಿಯ ಲೌಕಿಕ ಕೇಳಿಸಿಕೊಳ್ಳುವಿಕೆಯಿಂದ ಗುಣಾತ್ಮಕವಾಗಿ ಬೇರೆಯಾದ ಇನ್ನೊಂದು ರೀತಿಯ ಸಹಜ ಕೇಳಿಸಿಕೊಳ್ಳುವಿಕೆ ಇದೆ ಎಂದು ಸೂಚಿಸುವುದೇ ಆಧ್ಯಾತ್ಮಿಕ ವಾಙ್ಮಯಗಳ ಗುರಿಯಾಗಿದೆ. ರಹಸ್ಯವೆಂದಾಗ ಅದೊಂದು ಸವಾಲಲ್ಲ. ನಮ್ಮ ಪಕ್ಕದಲ್ಲಿ ಕುಳಿತು ಬದುಕಿನಲ್ಲಿ ಒಂದು ರಹಸ್ಯವಿದೆ ಎಂದವರು ನಮ್ಮನ್ನು ಸ್ಪರ್ಧಿಗಳೆಂದು ಬಗೆದವರಲ್ಲ. ಅದು ನಮ್ಮ ಅಹಂಕಾರವನ್ನು ಕೆಣಕುವ ಮಾತಲ್ಲ. ಅದು ಆಪ್ತವಾಕ್ಯ!

'ರಹಸ್ಯ'ವೆಂದಾಗ–ಅದು 'ಸತ್ಯ'ವು ತನ್ನನ್ನು ತಾನು ತೋಡಿಕೊಂಡ ಬಗೆ. ಈ ಲೋಕದ ಪ್ರಜೆಗಳು ನಾವು ಎಂದು ಗಟ್ಟಿಯಾಗಿ ನಂಬಿದ ನಮ್ಮ ಮುಂದೆ, ನಮ್ಮ ನಂಬಿಕೆಗಿಂತ ಬೇರೆಯಾಗಿ 'ಸತ್ಯ' ಇದೆ ಎಂದು ತನ್ನ ಸ್ಥಿತಿಯನ್ನು ಹೇಳಿಕೊಂಡ ಬಗೆ. ಅದು ಬಹಳ ಮೆತ್ತಗೆ ಬಹಳ ಮೃದುವಾಗಿ ತನ್ನ ಬಾಯಿಗೆ ಕೈ ಇಟ್ಟುಕೊಂಡು ಮಾತ್ರವಲ್ಲ, ನಮ್ಮ ದರ್ಪ–ಧಿಮಾಕುಗಳಿಂದಲೂ ಸಜ್ಜುಗೊಂಡಿರುವೆವೆಂದು ಅದಕ್ಕೆ ತಿಳಿದಿದೆ. 'ಸತ್ಯ'ವು ನಮ್ಮ ಧಿಮಾಕನ್ನು ತಾನು ಅನುಕರಿಸಲಾರದು. ತನ್ನ ವಿನೀತ ನಿಲುವು ತಾನು ಬಿಡಲಾರದು.

'ರಹಸ್ಯ'ವೆಂದಾಗ–ನಮ್ಮ 'ನಂಬಿಕೆ'ಗಿಂತ 'ಸತ್ಯ'ವು ಬೇರೆಯಾಗಿ ಇದೆ ಎಂಬ ಭಾವ. ನಂಬಿಕೆಯೇ 'ಸತ್ಯ'ವೆನ್ನುವಲ್ಲಿ, ನಾವು ನಂಬಿದ್ದರಿಂದ ಅದು 'ಸತ್ಯ'ವಾದದ್ದು ಎನ್ನುವ ಅರ್ಥವೂ ಹೊರಪಡುತ್ತದೆ. ಅದಕ್ಕೆ ನಮ್ಮ ನಂಬಿಕೆಯ ಅಗತ್ಯವಿದೆ; ನಾವು ನಂಬದೆ ಅದು ಇರಲಾರದು ಎನ್ನುವ ಭಾವವಿದೆ. ಅಲ್ಲದೆ ನಾವು ನಂಬಿದ್ದರಲ್ಲಿ ನಾವು ಶೋಧನೆ ಮಾಡಿ ಪಡೆದ ಅಂಶ ಯಾವುದೂ ಇಲ್ಲ. ನಂಬಿಕೆಗಳೆಂದರೆ, ಇಲ್ಲಿ ಈ ಲೋಕದಲ್ಲಿ ನಾವು ಬರಿಯ inherit ಮಾಡಿದ್ದಷ್ಟೇ. ಒಂದೊಮ್ಮೆ ನಂಬಿಕೆಗಳು 'ಸತ್ಯ'ವೇ ಆಗಿದ್ದರೂ ಅವು ನಮ್ಮ ಅನುಭವವಾಗದೆ ಬರಿಯ ಬೌದ್ಧಿಕ ನಂಬಿಕೆಗಳಾಗಿರುವಷ್ಟು ಕಾಲ–ಅವು 'ಸತ್ಯ'ವಲ್ಲ. ಸತ್ಯಕ್ಕೆ ತನ್ನ image ಮುಖ್ಯ. Image ಬೆಳೆಸಿರಿ ಎಂದು ನಾಚಿಕೆ ಇಲ್ಲದೆ ಹೇಳುತ್ತಿರುತ್ತೇವೆ. ಲೋಕ, ಕಲಿಸುವುದು ಕೂಡಾ ಇದನ್ನೇ. ನಮ್ಮ ಅಬ್ಬರಕ್ಕೆ ಪ್ರತಿಯಾಗಿ, ಒಂದು ಗುಟ್ಟಿದೆ ಎಂದು ತನ್ನಲ್ಲೇ ತಾನು ಹೇಳಿಕೊಂಡಂತೆ, 'ಸತ್ಯ' ಪಿಸುನುಡಿಯುತ್ತಿದೆ.

'ರಹಸ್ಯ'ವೆಂದಾಗ ಅದೂ ಒಂದು ತಿಳುವಳಿಕೆಯೇ. ಅದನ್ನು ಅದೇ ತಿಳಿಸದೆ

ನಾವು ನಾವಾಗಿ ತಿಳಿಯಲಾರೆವು. ಈ ಲೋಕದಲ್ಲಿ ಕೂಡ ನಾವು ತಿಳಿದುದೆಲ್ಲವೂ ಲೋಕದಿಂದ ನಾವು ಕಲಿತದ್ದೇ. ಅಂದರೆ ಲೋಕ ನಮಗೆ ತಿಳಿಸಿದ್ದೇ. ಲೋಕ ತಿಳಿಸದೆ ನಾವೇನೂ ತಿಳಿಯಲಾರೆವು. ಆಮೇಲೆ ತಿಳುವಳಿಕೆಯನ್ನು ಬೆಳೆಸಿಕೊಂಡೆವೆಂದು ನಾವು ಹೇಳುವುದು ಕೂಡ ಅದರಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಲೋಕದ ದಾಯವಿದೆ. ಹೀಗಿದ್ದೂ ನಾವು ತುಂಬ ತಿಳುವಳಿಕೆಯುಳ್ಳವರು–ಬುದ್ಧಿಜೀವಿಗಳು ಎಂದು ಭಾವಿಸಿಕೊಂಡಿರುವುದು ಕೂಡ ಈ ಲೋಕದಿಂದ ನಾವು ಪಡೆದದ್ದೇ. ಅಂದರೆ ಲೋಕದಿಂದ ಪಡೆದ ತಿಳುವಳಿಕೆಯು ನಮ್ಮ ಅಹಂಕಾರವನ್ನು ಉದ್ದೀಪಿಸುವ ತಿಳುವಳಿಕೆಯಾಗಿದೆ. ಹೀಗಿರಲಾಗಿ, ತಿಳುವಳಿಕೆಯನ್ನೂ ಅಹಂಕಾರವನ್ನೂ ಪರಸ್ಪರ ಬೇರ್ಪಡಿಸಲಾಗದಂತೆ ಲೋಕದಿಂದಲೇ ಕಲಿತ ನಮಗೆ, ಲೋಕದ ಪ್ರಭಾವ ನಮ್ಮ ವ್ಯಕ್ತಿತ್ವದ ಮೇಲೆ ದಟ್ಟವಾಗಿರಲಾಗಿ, ಇಂಥ ನಮ್ಮೊಡನೆ ಸತ್ಯವು ಮಾತನಾಡುವುದಾದರೆ ಅದು ಬೇರೆಯೇ ಒಂದು ರೀತಿಯಲ್ಲಿ ಮಾತನಾಡಬೇಕಿದೆ. ನಿಜವಾದ ತಿಳುವಳಿಕೆಯ ರೀತಿಯೇ ಬೇರೆ ಎಂದು ಸತ್ಯಕ್ಕೆ ತಿಳಿಸಬೇಕಾಗಿದೆ. ಅದಕ್ಕಾಗಿ ಸತ್ಯವು ಕಂಡುಕೊಂಡ ಉಪಾಯವೆಂದರೆ–ಒಂದು ರಹಸ್ಯವಿದೆ ಇಲ್ಲಿ ಎಂದು ಮೆತ್ತಗೆ ನಮ್ಮ ಕಿವಿಯಲ್ಲಿ ನಮ್ಮದೇ ಒಳದನಿ ಎಂಬಂತೆ ಪಿಸುಗುಡುವುದು.

ರಹಸ್ಯವಿದೆ ಎಂದು ಮಾತ್ರವಲ್ಲ. ಆ ರಹಸ್ಯದ ನಾನಾ ಒಳರೂಪಗಳನ್ನು ಕೂಡ ಹೇಳುವುದು. ಹೇಳುವಾಗ ರಹಸ್ಯವನ್ನು ಕೆಡಿಸದೆ ಹೇಳುವುದು. ನಾನಾ ರೂಪಗಳೆಂದರೆ– ಸತ್ಯ ತಿಳಿದಿದೆ ಎಂದವನಿಗೆ ಅದು ನಿಜಕ್ಕೂ ತಿಳಿದಿಲ್ಲ; ತಿಳಿದಿಲ್ಲ ಎಂದವನಿಗೆ ಸತ್ಯ ತಿಳಿದಿರಬಹುದು, ಎನ್ನುವುದು. ಸತ್ಯವು ಮಾತಿಗೆ ಮೀರಿದ್ದೆನ್ನುವುದು. ಮಾತು, ಮನಸ್ಸುಗಳು ಸತ್ಯವನ್ನು ಹುಡುಕಾಡಿದ್ದು ನಿಜ; *ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ*'–ಎನ್ನುವುದು. ಮುಟ್ಟಲಾರದೆ ಹಿಂತಿರುಗಿದ ಮಾತಿಗೆ ತನ್ನ ಮಿತಿ ತಿಳಿಯಿತೆನ್ನುವುದು. ತನ್ನ ಮಿತಿಯನ್ನು ತಿಳಿಯುವುದು, ತನ್ನ ಸತ್ಯವನ್ನು ತಿಳಿದಂತೆ ಕೂಡಾ ಎನ್ನುವುದು. ಸತ್ಯವನ್ನು ಹಿಡಿಯಲಾರೆನೆನ್ನುವ ಮಾತು, ಮಾತಿನ ಸತ್ಯವಾಗಿರುವುದರಿಂದ ಅದು ಇನ್ನೊಂದು ರೀತಿಯಲ್ಲಿ ಸತ್ಯವೇ ತನ್ನನ್ನು ತಾನು ಮಾತಿಗೆ ಒಪ್ಪಿಸಿಕೊಂಡ ರೀತಿ–ಎನ್ನುವುದು. ಇವೆಲ್ಲ ರಹಸ್ಯದ ನಾನಾ ರೂಪಗಳು.

ರಹಸ್ಯವೆಂದಾಗ– ಸತ್ಯವು ತನ್ನನ್ನು ತಾನು ನಮಗೆ–ಲೋಕಕ್ಕೆ ಒಪ್ಪಿಸಿಕೊಂಡೇ ಇದೆ. ಅಂದರೆ ನಾನು ನಿನ್ನವನಾಗಿರುವುದು ಇನ್ನೂವರೆಗೆ ನಿನಗೆ ತಿಳಿದಿಲ್ಲವೇನು ಎಂದು 'ರಹಸ್ಯ' ಪದ ಸೂಚಿಸುತ್ತದೆ. ಇದು ತನ್ನನ್ನು ಒಪ್ಪು ಎಂಬ ಬಲಾತ್ಕಾರದ ಹೇರುವಿಕೆಯಿಂದ ಪೂರ್ತಿಯಾಗಿ ಬೇರೆಯಾದದ್ದು. ಲೋಕದ ರೀತಿ ಎಂದರೆ ಬಲಾತ್ಕಾರ. ಹೇರುವಿಕೆ. ಕೆಲವೊಮ್ಮೆ ರೂಕ್ಷ; ಕೆಲವೊಮ್ಮೆ ಸೂಕ್ಷ್ಮ–ಆದರೆ ಬಲಾತ್ಕಾರ ಬಲಾತ್ಕಾರವೇ. ಆದುದರಿಂದಲೇ ಅದು ಭಾರ. ಆದುದರಿಂದಲೇ ನಾವು ಹೊರುತ್ತಿರುವ ಭಾರವನ್ನು ಇನ್ನೊಬ್ಬರ ಮೇಲೆ ಹೇರದೆ ಸಮಾಧಾನವಿಲ್ಲ ನಮಗೆ. ಇದು ಪ್ರೀತಿಯ ನಡವಳಿಕೆಯೇ ಅಲ್ಲ. ಇಲ್ಲಿ ಪ್ರೀತಿಯೂ ಕೂಡ ಪ್ರಚ್ಛನ್ನ ಬಲಾತ್ಕಾರವೇ. ರಹಸ್ಯವೆಂದಾಗ–ನಾನು ನಿಜಕ್ಕೂ ನಿನ್ನನ್ನು ಪ್ರೀತಿಸುತ್ತಿದ್ದೇನೆ. ಆದುದರಿಂದಲೇ ನಿನ್ನ ಎಂಥ ನಿರ್ಲಕ್ಷ್ಯ; ದುರ್ಲಕ್ಷ್ಯಗಳನ್ನೂ ನನಗೆ ಸಹಿಸಲಾಗುತ್ತಿರುವುದು. ನಿಜವಾದ ಪ್ರೀತಿಯ ಶಕ್ತಿ ಎಷ್ಟು ಅಗಾಧ ಬಲ್ಲೆಯಾ– ಎಂದು ಕೇಳಿದಂತೆ!

ಕೃಷ್ಣ; ಗೀತೆಯಲ್ಲಿ ಅರ್ಜುನನೊಡನೆ ಈ ಮಾತು ಹೇಳುತ್ತಾನೆ: 'ನಾನು ನಿನ್ನ ಜನುಮಜನುಮಗಳ ಒಡನಾಡಿ. ಈ ಒಡನಾಟದ ಎಲ್ಲ ನೆನಪುಗಳೂ ನನ್ನಲ್ಲಿ ಜೀವಂತವಾಗಿವೆ. ನಿನಗೆ ಮಾತ್ರ ಒಂದೂ ನೆನಪಿಲ್ಲ'. ಈ ಮಾತಿನ ಅರ್ಥ; ನನಗೆ ನಿನ್ನನ್ನು ಬಿಟ್ಟಗಲುವುದು ಸಾಧ್ಯವಿಲ್ಲ. ಅಗಲಿ ಇರುವುದು ನನ್ನ ಸ್ವಭಾವವೇ ಅಲ್ಲ. (ನಾನು ಎಲ್ಲೆಡೆ ಇರುವವನು) ಒಡನಾಡಿಯಾಗಿರುವುದೇ ನನ್ನ ಸ್ವಭಾವ. ನೀನು ತಿಳಿಯದೆ ಇದ್ದಾಗಲೂ ಅಂದರೆ ಅಜ್ಞಾನಿಯಾಗಿದ್ದರೂ ತಿಳಿದು ಮರೆತಾಗಲೂ ಅಂದರೆ ನಿರ್ಲಕ್ಷ್ಯ ಮಾಡಿದಾಗಲೂ ಮರೆಯದೇ ದುರ್ಲಕ್ಷ್ಯ ಮಾಡಿದಾಗಲೂ ನಾನು ನಿನ್ನನ್ನು ಎಂದೂ ಬಿಟ್ಟಿಲ್ಲ. ಇದು ರಹಸ್ಯ. ಇದು ಈ ಲೋಕದಲ್ಲಿ ಮನುಷ್ಯರ ನಡವಳಿಕೆಗಿಂತ ತೀರ ಬೇರೆಯಾದ್ದು. ಲೋಕದಲ್ಲಿ ಜೊತೆಗಾರಿಕೆಯೇ ಕಷ್ಟ. ಇರುವಷ್ಟು ಕಾಲವೂ ಹಿಂಸೆಯೇ. ಅಹಂಕಾರಗಳ ಘರ್ಷಣೆ ಇಲ್ಲದ ಸಹಜೀವನವನ್ನು ಊಹಿಸುವುದೇ ಕಷ್ಟ ಸಾಧ್ಯ. ಇಂಥ ಮನುಷ್ಯ ಜೀವಿಗಳಿಗೆ ಸತ್ಯ ಅಥವಾ ದೇವರು, ಕಿವಿಯಲ್ಲಿ ಉಸುರುವ ಗುಟ್ಟು ಇದು. ನಾನು ನಿಮ್ಮ ಎಡೆಬಿಡದ ಸಂಗಾತಿ ಎನ್ನುವುದು. ನಾನಿರುವುದು ಎಂದಾದರೊಮ್ಮೆ ನಿಮಗೆ ತಿಳಿದುಬರಬಹುದೆನ್ನುವುದು. ನೀವು ಹೇಗಿರುವಿರೋ



ಹಾಗೆ ಒಂದಿನಿತೂ ಬದಲಿಸದೆ, ನೀವೇ ಕೆಲವೊಮ್ಮೆ ಒಪ್ಪುವ ನಿಮ್ಮೆಲ್ಲ ವಕ್ರತೆಯ ನಡುವೆಯೂ– ನಾನು ನಿಮ್ಮ ಸಹಪಯಣಿಗನೆನ್ನುವುದು.

ಇದು ನಿಜಕ್ಕೂ ರಹಸ್ಯವಲ್ಲವೇ? ಈ ಮಾತಿಗೆ ಕಿವಿಗೊಡುವ ಸೂಕ್ಷ್ಮವೇ ಬೇರೆ. ಅದು ಈ ಮಾತುಗಳನ್ನು ಒಂದು ಸವಾಲೆಂದು ಕೇಳಿಸಿಕೊಂಡು ರಹಸ್ಯವನ್ನು ಒಡೆಯೋಣ ಎಂದು ಹೊರಡುವಂಥ ಒರಟು ಕೇಳ್ಮೆ ಅಲ್ಲ. ಹಾಗೆಂದು ಸೂಕ್ಷ್ಮವಾದ ಕೇಳ್ಮೆಯಲ್ಲಿಯೂ ಒಂದು ವಿಧದ ರಹಸ್ಯ ಭೇದನವಿದೆ. ಅದು ತನಗೇ ತಿಳಿಯದ ತನ್ನ ರಹಸ್ಯವನ್ನು ತಾನೇ ಹೊರಗೆಳೆಯಲನುವಾಗುವ ಪರಿ! ತನ್ನೊಳಗೇ ಇರುವ ಈ ಇನ್ನೊಂದು ಅದಾವುದು? ಅದು ಇರುವುದಾದರೆ, ಏಕೆ ತಿಳಿದುಬಂದಿಲ್ಲ? ತನ್ನೊಳಗೇ ಅದಿರುವ ಜಾಗೆ ಯಾವುದು? ಈ ಅನ್ವೇಷಣೆ ಮುಂದುವರಿದರೆ, ವಾಙ್ಮಯಗಳಲ್ಲಿ, ಅಲ್ಲಲ್ಲೇ ಉತ್ತರಗಳೂ ಸೂಚನೆಗಳೂ ಸಿಗುತ್ತ ಹೋಗುವವು. ರಹಸ್ಯವನ್ನು ಕೆಡಿಸದೆ! ಕೃಷ್ಣ ಹೇಳಿದ್ದ: 'ಸರ್ವಸ್ವ ಚಾಹಂ ಹೃದಿ ಸನ್ನಿವಿಷ್ಟಃ'. 'ಎಲ್ಲೆಡೆ ಇರುವ ನಾನು ಎಲ್ಲರ ಹೃದಯದಲ್ಲಿ ಇದ್ದೇನೆ'. ಹೃದಯವೆನ್ನುವುದು ಜೀವದ ಕೇಂದ್ರ. ಆದುದರಿಂದಲೇ ಹೃದಯಸ್ಪಂದನ ನಿಂತಾಗ ಸಾವು. ಹೃದಯವೆನ್ನುವ ಕೇಂದ್ರದಲ್ಲಿ ಆ ಇನ್ನೊಂದು ಇರುವುದಾದರೆ ಅದೇಕೆ ತಿಳಿಯುತ್ತಿಲ್ಲ? ಹೃದಯದಲ್ಲಿರುವ ಅದರ ಪರಿಚಯ ನಮಗೇಕೆ ಆಗುತ್ತಿಲ್ಲ? ಏಕೆ ಆಗುವುದಿಲ್ಲವೆಂದರೆ–ನಮಗೆ ಚಿರಪರಿಚಿತಗಳಾಗಿರುವುದು ನಮ್ಮ ಆಸೆಗಳಲ್ಲವೆ? ನಮ್ಮ ಕಾಮನೆಗಳಲ್ಲವೇ? ಈ ಆಸೆಗಳನ್ನಲ್ಲವೆ ಬರಿಯ ಮಾನಸಿಕವಾಗಿಯೂ ನಾವು ಮತ್ತೆ ಮತ್ತೆ ಸವಿಯುತ್ತಿರುವುದು? ಈ ಆಸೆಗಳ ನೆಲೆಯೂ ಕೂಡ ಇದೇ ಹೃದಯವೇ ಆಗಿದೆ! 'ಕಾಮಾಯೇಸ್ಯ ಹೃದಿಶ್ರಿತಾಃ' ಎನ್ನುವುದು ಉಪನಿಷತ್ತಿನ ಮಾತು–ಎದೆಯಾಳದಲ್ಲಿ ನೆಲೆಗೊಂಡಿರುವ ಆಸೆಗಳು! ಹೃದಯದಲ್ಲೇ ಆಸೆಗಳು ಬೇರುಬಿಟ್ಟಿವೆ. ಹೃದಯದಲ್ಲೇ ದೇವರೂ ಇದ್ದಾನೆ. ದೇವರೆನ್ನುವುದನ್ನು 'ಸತ್ಯ' ಎಂದು ಓದಿಕೊಂಡರೆ ನಮ್ಮ 'ಸತ್ಯ' ನಮ್ಮ 'ನಿಜ' ನಮ್ಮ ಎದೆಯಾಳದಲ್ಲಿದೆ. ಆದರೆ ಆಸೆಗಳು ತಮ್ಮ ಪರಿಚಯವನ್ನು ತಾವೇ ಮಾಡಿಕೊಡುತ್ತಿರುವಷ್ಟು ಕಾಲ, ಅದಕ್ಕೆ ನಾವು ಎಡೆಕೊಡುತ್ತಿರುವಷ್ಟು ಕಾಲ 'ಸತ್ಯ' ಸುಮ್ಮಗೆ ಇದನ್ನೆಲ್ಲ ನೋಡುತ್ತಿದೆ–ಅಷ್ಟೇ!

ಎರಡು ಹಕ್ಕಿಗಳ ರೂಪಕಾತ್ಮಕ ಚಿತ್ರಣವನ್ನು ಉಪನಿಷತ್ ವಾಙ್ಮಯದಲ್ಲಿ ನೋಡುತ್ತೇವೆ. ಇದು ಪ್ರಸಿದ್ಧವಾದದ್ದು. ಒಂದೇ ಮರದಲ್ಲಿ ಎರಡು ಹಕ್ಕಿಗಳು ಇವೆ. ಇವು ಕೆಳೆ–ಹಕ್ಕಿಗಳು. ಒಂದೇ ರೀತಿ ಇವೆ. ಆದರೆ ಒಂದು ಹಕ್ಕಿ, ಸವಿಯುತ್ತ ಚಪ್ಪರಿಸುತ್ತ ಹಣ್ಣು ತಿನ್ನುತ್ತಿದೆಯಾದರೆ, ಇನ್ನೊಂದು ಹಕ್ಕಿ ಏನೊಂದನ್ನೂ ತಿನ್ನದೆ ನಡೆಯುತ್ತಿರುವ ಎಲ್ಲವನ್ನೂ ತಾನು ತನ್ನ ಬೆಳಕಿನಿಂದಲೇ ನೋಡುತ್ತಿದೆ! ಎರಡೂ ಜೊತೆಗಿವೆ; ಒಡನಾಡಿಗಳಂತಿವೆ ನಿಜ. ಆದರೆ ಹಣ್ಣು ತಿನ್ನುವುದರಲ್ಲಿ ನಿತಾಂತವಾಗಿ ಮುಳುಗಿರುವ ಭೋಗಾಸಕ್ತವಾದ ಹಕ್ಕಿಗೆ ಆ ಇನ್ನೊಂದು ಹಕ್ಕಿಯ ಕಡೆಗೆ ಗಮನವೇ ಇಲ್ಲವಾಗಿದೆ. ಹಣ್ಣು ತಿನ್ನದ ಹಕ್ಕಿಯಾದರೋ ತಾನೆಷ್ಟು ತಟಸ್ಥವಾಗಿದೆಯೆಂದರೆ ಅದು ತಾನಿರುವ ಸೂಚನೆಯನ್ನು ಕೂಡ ಯಾವ ರೀತಿಯಲ್ಲೂ ಉಂಟುಮಾಡುತ್ತಲಿಲ್ಲ. ಏಕೆಂದರೆ ಈ ಹಣ್ಣು ತಿನ್ನುವ ಆಸೆಬುರುಕ ಹಕ್ಕಿಯ ಆಸೆಗಳೆಲ್ಲ ತಣಿಯಲಿ; (ಆಸೆಗಳು ತಣಿಯುವುದಾದರೂ ಉಂಟೆ?) ತಣಿದ ಮೇಲೆ ತಾನಾಗಿ ಆ ಇನ್ನೊಂದು; ತನ್ನಿಂದ ಭಿನ್ನವಾದ ಸ್ವಭಾವದ

ಹಕ್ಕಿಯ ಇರವು ಇದಕ್ಕೆ ತಿಳಿದುಬರುತ್ತದೆ. ತಿಳಿದುಬರಬೇಕು; ತಾನಾಗಿ ತಿಳಿದುಬರಬೇಕು. ಅದೇ ಚೆಂದ! ಯಾವ ಬಲಾತ್ಕಾರವೂ ಕೂಡದು. ತನ್ನ ಇರವನ್ನು ಸೂಚಿಸುವುದು ಕೂಡ, ಅದಕ್ಕೆ ಇಚ್ಛೆ ಇಲ್ಲದೆ ಇದ್ದಾಗ, ಹೇರುವಿಕೆಯಾಗಬಹುದು. ಹೇರುವಿಕೆ ಯಾವ ವಿಧದಲ್ಲೂ ಕೂಡದು. ಇದು ಹಣ್ಣು ತಿನ್ನದ ಹಕ್ಕಿಯ ನಿಲುವು! ಅಂದರೆ ಇದು ಸತ್ಯದ ನಿಲುವು.

ಇದನ್ನೇ ಬುದ್ಧ–ಆಸೆಗಳೇ ದುಃಖಕ್ಕೆ ಮೂಲ ಎಂದಾಗ, ಆಸೆಗಳ ನೆಲೆವೀಡಾದ ಹೃದಯದ ಈ ಜಾಗೆಯನ್ನು ತೋರಿಸಿದ. ಹಣ್ಣು ತಿನ್ನದ ಅಂದರೆ ಆಸೆಗಳನ್ನೆಲ್ಲ ಗೆದ್ದ ಆ ಇನ್ನೊಂದು ಹಕ್ಕಿಯ ಕುರಿತು ಮಾತೇ ಆಡಲಿಲ್ಲ. ಆಡಬೇಕಿಲ್ಲ. ಅವನೇ ಆ ಇನ್ನೊಂದು ಹಕ್ಕಿಯಂತಿದ್ದ!

ಅಧ್ಯಾತ್ಮವೆಂದರೆ ನಮ್ಮದೇ ಇನ್ನೊಂದು ಮುಖವನ್ನು– ನಾವು ಮರೆತಿರುವ ಮುಖವನ್ನು– ನಮ್ಮ ನಿಜವನ್ನು ನಮಗೆ ಪರಿಚಯ ಮಾಡಿಕೊಡುವ ಅತಿಸೂಕ್ಷ್ಮವಾದ ಉಪಕ್ರಮವಾಗಿದೆ. ನಮಗೆ ಲೋಕದಲ್ಲಿ ಅಭ್ಯಾಸವಾದ ರೀತಿಯಲ್ಲಿಯೇ ಆಧ್ಯಾತ್ಮಿಕ ವಾಙ್ಮಯಗಳಿಗೆ ಪ್ರತಿಕ್ರಿಯೆ ಮಾಡುವುದಾದರೆ– ರಹಸ್ಯವೆಂದಾಗ ಅದನ್ನೊಡೆಯಬೇಕೆಂಬ ರೀತಿಯ–ಪ್ರತಿಕ್ರಿಯೆ ಮಾಡುವುದಾದರೆ– 'ನಾವು ರಸವನ್ನು ಕಳೆದುಕೊಂಡು ತೊಗಟೆಯನ್ನು ಮಾತ್ರ ಪಡೆದಂತೆ. ರಹಸ್ಯವೆಂದಾಗ, ಅದು ತನ್ನನ್ನು ಅನುಭವಿಸು ಎಂದು ಹೇಳುತ್ತಿದೆ. ಭೇದಿಸು ಎಂದಲ್ಲ. ತನ್ನನ್ನು ಅನುಭವಿಸಿದರೆ ಇದುವರೆಗಿನ ಲೋಕಾನುಭವಕ್ಕಿಂತ ಬೇರೆಯಾದ ಅನುಭವವೊಂದು ನಿನಗೆ ಕಾದಿದೆ ಎನ್ನುತ್ತದೆ. ಈ ಅನುಭವ ನಿನ್ನ ವ್ಯಕ್ತಿತ್ವವನ್ನೇ ಬದಲಿಸುತ್ತದೆ ಎನ್ನುತ್ತದೆ. ಲೋಕಾನುಭವ ನಿನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿದೆ. ಲೋಕಾನುಭವವನ್ನು ನೀನು ಬಹಳ ನೆಚ್ಚಿಕೊಂಡಿರುವೆ. ಸ್ವಾನುಭವವೇ ಪರಮ ಪ್ರಮಾಣ ಎಂದು ಘೋಷಿಸುವೆ ಕೂಡ. ಆದರೆ 'ಸ್ವಾನುಭವ' ಎನ್ನುವಲ್ಲಿ 'ಸ್ವ' ಎನ್ನುವುದುಂಟಲ್ಲ, ಅದು ನೀನು ಯಾವ ಶೋಧನೆಯೂ ಇಲ್ಲದೆ ಬರಿದೆ ನಂಬಿಕೊಂಡು ಬಂದ ಸಂಗತಿಯಾಗಿದೆ. ಒಂದೊಮ್ಮೆ 'ಸ್ವ' ಎನ್ನುವುದೇ ಪ್ರಶ್ನಾರ್ಹವಾಗುವುದಾದರೆ ಆಗ 'ಸ್ವಾನುಭವ' ಎನ್ನುವ ಮಾತಿಗೆ ನೆಚ್ಚಿಕೆ ಎಲ್ಲಿ ಉಳಿಯುತ್ತದೆ?

ಶೋಧನೆಯಲ್ಲಿ 'ಸ್ವ' ಎನ್ನುವುದು ಒಂದು ಪರಿಕಲ್ಪನೆಯಷ್ಟೇ. ನಿಜಕ್ಕೂ 'ಸ್ವ' ಎನ್ನುವುದು ಕಲ್ಪಿತ ಎಂದು ಕಂಡುಬಂದರೆ(?) ಆಗ ಸ್ವಾನುಭವ ಎನ್ನುವ ಮಾತೇ ಬಿದ್ದು ಹೋಗುತ್ತದೆ. ಆದರೆ 'ಅನುಭವ' ಬಿದ್ದುಹೋಗುವುದಿಲ್ಲ. 'ಸ್ವ' ಬಿದ್ದುಹೋಗುತ್ತದೆ; ಅಷ್ಟೇ. ಉಳಿಯುವುದು ಸ್ವ–ಕೇಂದ್ರಿತವಲ್ಲದ ಅನುಭವ ಮಾತ್ರ. ನನ್ನ ಗುರುಗಳು ಹೇಳುತ್ತಿದ್ದರು–ಕೊನೆಯ ಮಾತೆಂಬಂತೆ. "ಅನುಭವ ಇದೆ. ಅನುಭವಿಸುವವನಿಲ್ಲ." ಜೆ.ಕೆ. ಕೂಡ ಇದೇ ಪರಿಭಾಷೆಯಲ್ಲಿ ಹೇಳುತ್ತಿದ್ದರು. ಜೆ.ಕೆ. ಬೌದ್ಧ ದರ್ಶನದ ಆಧುನಿಕ ಮೀಮಾಂಸಕರಂತೆ ಕಂಡುಬರುವುದರಿಂದ, ಅನುಭವಿಸುವ 'ಸ್ವ'ದ ಕಣ್ಮರೆಯನ್ನೇ ಬುದ್ಧ 'ಶೂನ್ಯ' ಎಂಬ ಪರಿಭಾಷೆಯಲ್ಲಿ ಸೂಚಿಸಿದ್ದಾಗಿರಬಹುದು ಎಂದುಕೊಳ್ಳುತ್ತೇನೆ. 'ಅನುಭವಿಸುವವನಿಲ್ಲ– ಅನುಭವವಿದೆ' ಎಂದಾಗ ಇದರ ಮತ್ತೊಂದು ಮುಖ–ಅನುಭವಿಸುವವನು ಗಟ್ಟಿಯಾಗಿ ಹಾಜರು ಇರುವವರೆಗೆ ನಿಜವಾದ ಅನುಭವವೂ ಇಲ್ಲ ಎಂದಂತೆಯೂ ಕೇಳಿಸುತ್ತದೆ. ನಿಜಕ್ಕೂ ರಹಸ್ಯಮಯವಲ್ಲವೇ!

ಸಮಸ್ಯೆ ಎಂದರೆ ಲೋಕ–ಜೀವನದಲ್ಲಿ ಬಾಳುತ್ತಿರುವಾಗ ಈ ಅನುಸಂಧಾನಗಳೆಲ್ಲ ಬರಿಯ ಗಾಳಿಗೋಪುರಗಳಾಗದೆ, ಬರಿಯ ಪಾಂಡಿತ್ಯ ಪ್ರದರ್ಶನವಾಗದೆ, ಮಾತುಗಾರಿಕೆಯಾಗದೆ ನಿಜವಾದ persuit ಆಗಿ ಉಳಿಯುವುದು ಹೇಗೆ ಎನ್ನುವುದು. ಗಾಂಧೀ ಒಂದು ದಿಕ್ಸೂಚಿ. ರಹಸ್ಯವಿದೆ ಎಂದಾಗ, ಗಾಂಧೀ ಆ ರಹಸ್ಯಾನುಭವಕ್ಕೆ ತನ್ನನ್ನು ಒಡ್ಡಿಕೊಳ್ಳುವ ಬಗೆ ಹೇಗೆಂದರೆ– ತನ್ನ ವ್ಯಕ್ತಿತ್ವದ ಎಲ್ಲ ರಹಸ್ಯಗಳನ್ನೂ ಬಯಲಾಗಿಸುವ ಮೂಲಕ. ಅದು ಅದರ ಗುಟ್ಟುಗಳನ್ನು ನಮ್ಮಲ್ಲಿ ಉಸುರಬೇಕಾದರೆ, ನಮ್ಮಲ್ಲಿ ಯಾವುದೇ ಗುಟ್ಟುಗಳಿರಬಾರದು. ಇದು 'ಸ್ವ–ರಹಸ್ಯ ಭೇದನ'. 'secrecy is sin' ಎಂದರು ಗಾಂಧೀ. ಏಕೆ ಪಾಪ? ಏಕೆಂದರೆ ದೇವರು ಎಲ್ಲವನ್ನೂ ನೋಡುತ್ತಾನೆ ಎಂದು ನೀನು ತಿಳಿದೆಯಾದರೆ ನೀನು ಏನೋ ಗುಟ್ಟು ಮಾಡುವುದು ದೇವರಿಗೆ ವಂಚನೆ ಮಾಡಿದಂತೆ. ದೇವರ ವಿರುದ್ಧ ನಿಂತಂತೆ. ಮುಖ್ಯವಾಗಿ, ಇದು ದೇವರನ್ನು ಅನುಭವಿಸುವ ದಾರಿಯಲ್ಲ. ಅಂದರೆ ಎಲ್ಲವನ್ನೂ ನೋಡಬಲ್ಲವನ ನೋಟ ನಿನ್ನ ಮೇಲೆ ಬಿದ್ದಾಗ, ಅದು ನಿನಗೆ ತಿಳಿಯಬೇಕಾದರೆ ನೀನು ನಿನ್ನ ಗುಟ್ಟಿನಗಂಟು ಬಿಚ್ಚಿಡಬೇಕಲ್ಲ. ನಿಜಕ್ಕಾದರೆ 'ಸ್ವ' ಎನ್ನುವುದು ಗುಟ್ಟಿನ ಮೇಲೆ ನಿಂತಂತಿದೆ. ಗುಟ್ಟಿಲ್ಲದವನು ಮಕ್ಕಳಂತೆ. ಅಲ್ಲಿ 'ಸ್ವ' ಕೂಡ ಇಲ್ಲ. ಅಥವಾ ಇದ್ದರೂ ಇಲ್ಲದಂತೆ.

ಲೋಕವೇ ನಮಗೆ ಕೊಡಲ್ಪಟ್ಟರೂ ನಮ್ಮ ದುಃಖಕ್ಕೆ ಮಾತ್ರ ಕೊನೆ ಇಲ್ಲವಾಗಿದೆ! ಕೊಡುಗೆ ದೊಡ್ಡದಾದಂತೆ ದುಃಖವೂ ದೊಡ್ಡದಾಗಿ ಬೆಳೆಯುತ್ತದೇನೋ. ಈ ಲೋಕ ನಮ್ಮದೆಂದು ಎಷ್ಟು ಸಮರ್ಥಿಸಿಕೊಂಡರೂ ಇದು ಇನ್ನೂ ಪೂರ್ತಿ ನಮ್ಮದಾಗಿಲ್ಲವಲ್ಲ; ಇಲ್ಲಿ ಇನ್ನಿತರರೂ ಇದ್ದಾರಲ್ಲ! ಸ್ವಕೀಯ–ಪರಕೀಯ ಎಂಬ ಭೇದ ನಡೆಯುತ್ತಲೇ ಇದೆಯಲ್ಲ. ನಮ್ಮಲ್ಲಿರುವ 'ಸ್ವ'ಕ್ಕೆ ದುಃಖದ ಮೇಲೆ ಅದೇನು ಆಸೆಯೋ ಕಾಣೆ! ಆಸೆಯೇ ದುಃಖಕ್ಕೆ ಮೂಲವಿರಬಹುದು. ನಮಗಾದರೋ ದುಃಖದ ಮೇಲೇ ಆಸೆಯಾಗಿರುವಂತಿದೆ! ಆದುದರಿಂದಲೇ ಯಾವ ಶೋಧನೆಗೂ ಇಳಿಯದೆ, ತಲೆತೊಳೆಯುವ ಮಾತುಗಾರಿಕೆಗಳಿಂದ ಎಲ್ಲ ಸೂಕ್ಷ್ಮಗಳಿಗೂ ಎರವಾಗುತ್ತಿದ್ದೇವೆ. ಆದುದರಿಂದಲೇ, ನಮಗೆ ಬೇಕಾದಂತೆ ಧರ್ಮ–ಅಧ್ಯಾತ್ಮಗಳನ್ನೂ ವ್ಯಾಖ್ಯಾನಿಸುತ್ತ ಎಲ್ಲರ ಸೊತ್ತಾಗಿರುವುದನ್ನು, ಜಾತಿಗಳ–ಮತಗಳ ಸೊತ್ತಾಗಿಸುತ್ತ ಸಾಗುತ್ತಿದ್ದೇವೆ.

ಇದು 'ಸ್ವ'ದ ಪಾಡು. ಅದರ ಮೇಲಿನಿಂದ ಬೆಳೆದ ಎಲ್ಲ ಕಲ್ಪನೆಗಳ ಪಾಡು. ಜೆ.ಕೆ. ಹೇಳುತ್ತಿದ್ದರು: 'ಸತ್ಯ'ವನ್ನು ಬಿಡುವುದು ಸುಲಭ. ಕಲ್ಪನೆಗಳನ್ನು ಬಿಡುವುದು ಕಡುಕಷ್ಟ'. ಸತ್ಯದ ಜಾಗದಲ್ಲಿ ಕಲ್ಪನೆಗಳನ್ನು ಸ್ಥಾಪಿಸುವುದು, ಅದನ್ನೇ ಸತ್ಯವೆನ್ನುವುದು, ಅದಕ್ಕಾಗಿ ಹೋರಾಡುವುದು ಲಾಗಾಯ್ತಿಯಿಂದ ನಡೆದು ಬರುತ್ತಿರುವ ವಿದ್ಯಮಾನ. ಇದೆಲ್ಲದರ ನಡುವೆ 'ಸತ್ಯ'ದ ಸಹನೆ ಮಾತ್ರ ಅಮೋಘ. ಆ ಸಹನೆಯನ್ನು, ನಿಶ್ಚಲತೆಯನ್ನು, ತಿನ್ನದ ಹಕ್ಕಿಯ ನಿರಾತಂಕ ನಿರೀಕ್ಷೆಯನ್ನು ನೆನೆಯುವುದು ನಿಜಕ್ಕೂ ಉತ್ತೇಜಕ.



**(ಬಹುಶ್ರುತ ಪಾಂಡಿತ್ಯದ ಮತ್ತು ನಮ್ಮ ನಡುವಿನ ಅಪರೂಪದ ಚಿಂತಕರೂ ಆದ ಲಕ್ಷ್ಮೀಶ ತೋಳ್ಪಾಡಿ ಪುತ್ತೂರಿನವರು)**

**ಹೊಸ ಮನುಷ್ಯ ಓದುಗರೆಲ್ಲರಿಗೂ ಹಾರ್ದಿಕ ಶುಭಾಶಯಗಳು**



**–ಡಾ. ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ(ರಿ.), ಅಂಕೋಲಾ(ಉ.ಕ.)**

**–ಸ್ವಾತಂತ್ರ್ಯ ಯೋಧ ಡಾ. ಅಮ್ಮೆಂಬಳ ಸ್ಮಾರಕ ಸೇವಾ ಪ್ರತಿಷ್ಠಾನ(ರಿ.),\ ಬಂಟ್ವಾಳ (ದ.ಕ.)**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

**ನಿಜಕ್ಕೆ ಶೃಂಗಾರದ ಹಂಗಿಲ್ಲ. ಒಳಿತಿಗೆ ತರ್ಕದ ಹಂಗಿಲ್ಲ. ಅರಿವಿಗೆ ಜ್ಞಾನದ ಹಂಗಿಲ್ಲ**

– ತಾವೋ ಗುರು ಲಾವೋತ್ಸೆ

ಬಿ. ಸುರೇಶ

ಬೆಂಗಳೂರು

# ವಿಜ್ಞಾನದ ಶಿವ ತಾಂಡವ: ವರದಂಡವೆ, ತಲೆದಂಡವೆ?

ವಿಶೇಷ ಲೇಖನ-೨

–ನಾಗೇಶ ಹೆಗಡೆ

**ನಾಲ್ಕು ನೂರು ವರ್ಷಗಳ ಹಿಂದೆ ಧರ್ಮಲಂಡರು, ವಿಶೇಷವಾಗಿ ಚರ್ಚ್‌ಗಳ ಕಟ್ಟಾಳುಗಳು ಅಂದಿನ ವಿಜ್ಞಾನಿಗಳನ್ನು ಜೈಲಿಗೆ ಅಟ್ಟುತ್ತಿರಲಿಲ್ಲವೆ? ಕಂಬಕ್ಕೆ ಕಟ್ಟಿಹಾಕಿ ಜೀವಂತ ಸುಡುತ್ತಿರಲಿಲ್ಲವೆ? ಆಗಿನ ಕಾಲದ ಅಂಥ ಎಲ್ಲ ಬಗೆಯ ದೌರ್ಜನ್ಯಗಳನ್ನು ಸಹಿಸಿಕೊಂಡೂ ವಿಜ್ಞಾನ ಅರಳಲಿಲ್ಲವೆ? ಈಗೇಕೆ ಅದು ಉಳ್ಳವರ ಊಳಿಗದಲ್ಲಿದ್ದಂತೆ, ಹರಕೆಯ ಗೂಳಿಯಂತೆ ವರ್ತಿಸುತ್ತಿದೆ? ತನ್ನ ಸುತ್ತಲೂ ತಾನೇ ಸೃಷ್ಟಿಸಿದ ಉತ್ಪಾತಗಳನ್ನು ಸರಿಪಡಿಸಲಾಗದ ದೌರ್ಬಲ್ಯ ಅದಕ್ಕೇಕೆ ಬಂದಿದೆ? ಅದನ್ನು ನಿಯಂತ್ರಿಸಲಾಗದಷ್ಟು ಅಶಕ್ತತೆ ಇಡೀ ಮಾನವಕುಲಕ್ಕೆ ಏಕೆ ಬಂದಿದೆ?**



**ಕೋ**ಳಿ ಕೂಗೋ ಹೊತ್ತು, ದನ ಬಿಡೋ ಹೊತ್ತು, ಹೊತ್ತು ಮುಳುಗೋ ಹೊತ್ತು ಮುಂತಾದ ಪದಗಳು 'ಗಡಿಯಾರ ಬಂದ ಮೇಲೆ ನಮ್ಮ ಶಬ್ದಕೋಶದಿಂದಲೂ ಭಾವಕೋಶದಿಂದಲೂ ಕ್ರಮಕ್ರಮೇಣ ನಿರ್ಗಮಿಸಿ ಬಿಡುತ್ತಿವೆಯಲ್ಲ!' ಎಂದು ಈಚೆಗೆ ಪ್ರೊ. ಎಮ್ ಕೃಷ್ಣೇಗೌಡರು ಒಂದು ಸುಂದರ ಪ್ರಬಂಧದಲ್ಲಿ ವಿವರಿಸಿದ್ದರು. ನಮ್ಮ ಜೈವಿಕ ಗಡಿಯಾರವನ್ನು ಅದುಮಿದಷ್ಟೇ ಸಲೀಸಾಗಿ ಈಗಿನ ಮೊಬೈಲ್‌ಗಳು ನಮ್ಮ ಸ್ಮರಣಶಕ್ತಿಯನ್ನೂ ಈಗಿನ ವೈದ್ಯಕೀಯ ಉಪಕರಣಗಳು ಡಾಕ್ಟರ್‌ಗಳ ಸಾಮರ್ಥ್ಯವನ್ನೂ, ತೂಕದ ಯಂತ್ರಗಳು ನಮ್ಮ ಕೈಯಳತೆ- ಕಣ್ಣಳತೆಗಳ ಸೂಕ್ಷ್ಮತೆಯನ್ನೂ ಹೇಗೆ ತೊಡೆದು ಹಾಕುತ್ತಿವೆ ಎಂಬುದನ್ನು ವಿಶ್ಲೇಷಿಸಿದ್ದರು.

ಇಂದಿನ ವಿಜ್ಞಾನ ತಂತ್ರಜ್ಞಾನವನ್ನು ನಮ್ಮ ಅದೇ ಕೈಯಳತೆ, ಕಣ್ಣಳತೆಗಳಲ್ಲಿ ತೂಗಿ ನೋಡೋಣ ಬನ್ನಿ. ಈಗಿನ ಈ ವೈಜ್ಞಾನಿಕ ಉಪಕರಣಗಳು, ಪರಿಕರಗಳು ನಮ್ಮ ಸಹಾಯಕ್ಕೆ ಬರುತ್ತಿವೆಯೊ ಅಥವಾ ನಮ್ಮನ್ನು ಇನ್ನಷ್ಟು ದುರ್ಬಲ ಮಾಡುತ್ತಿವೆಯೊ? ಈ ಪ್ರಶ್ನೆಯೊಂದಿಗೆ ನಾವು ಬುದ್ಧಿವಂತ ಜನರು ಎರಡು ಪಂಗಡಗಳಾಗಿ ಭಾಗವಾಗುತ್ತೇವೆ: ಒಂದು ಪಂಗಡದ ವಾದ ಏನೆಂದರೆ, ನಾವೆಲ್ಲ ದುರ್ಬಲರಾಗುತ್ತಿದ್ದೇವೆ, ಉಪಕರಣಗಳ ದಾಸರಾಗುತ್ತಿದ್ದೇವೆ. ಇನ್ನೊಂದು ಪಂಗಡದ ವಾದ ಏನೆಂದರೆ– ನಾವು ಹಿಂದೆಂದಿಗಿಂತ ಸಮರ್ಥರಾಗುತ್ತಿದ್ದೇವೆ: ಪಾತಾಳಕ್ಕೂ ಮಂಗಳಲೋಕಕ್ಕೂ ದಾಪುಗಾಲು ಹಾಕುತ್ತಿದ್ದೇವೆ.

ವಿಜ್ಞಾನದ ಆವಿಷ್ಕಾರಗಳಿಂದ ಮಾನವಕುಲಕ್ಕೆ ಒಳ್ಳೆಯದಾಗಿದೆಯೆ? ಕೆಲವರಿಗೆ ಒಳ್ಳೆಯದೇ ಆಗಿದೆ. ಸುಖಸೌಕರ್ಯಗಳು, ವೈದ್ಯಕೀಯ ಸೌಲಭ್ಯಗಳು ಅಪಾರವಾಗಿ ಹೆಚ್ಚಿವೆ. ಕೆಳ ಮಧ್ಯಮ ವರ್ಗದವರೂ ಹಿಂದಿನ ಕಾಲದ ರಾಜಮಹಾರಾಜರಿಗಿಂತ ಹೆಚ್ಚಿನ ಸೌಖ್ಯವನ್ನು ಅನುಭವಿಸುತ್ತಿದ್ದಾರೆ. ಆದರೆ ಅಸಮಾನತೆ ವಿಪರೀತ ಹೆಚ್ಚಿದೆ. ಅನುಕೂಲಸ್ಥರ ಬದುಕೇ ಆದರ್ಶವೆಂಬಂತೆ, ಎಲ್ಲರೂ ಜಿದ್ದಿಗೆ ಬಿದ್ದವರಂತೆ ಸುಖದ ಸುಪ್ಪತ್ತಿಗೆಯನ್ನು ಹುಡುಕಿಕೊಂಡು ಧಾವಿಸುವುದೇ ಆಗಿದೆ. ಧಾವಿಸುವ ತಾಕತ್ತಿಲ್ಲದ ದುರ್ಬಲರಿಗೆ ಬದುಕು ಮೊದಲಿಗಿಂತ ಭಾರವಾಗಿದೆ. ಅದು ಹಾಗಿರಲಿ, ಇತರ ಜೀವಸಂಕುಲಕ್ಕೆ ಏನಾದರೂ ಒಳ್ಳೆಯದಾಗಿದೆಯೆ? ಎಂಥದ್ದೂ ಇಲ್ಲ. ಮನುಷ್ಯನ ಆಳ್ವಿಕೆಯಲ್ಲಿ ಕುರಿ, ಮೇಕೆ, ಹಂದಿ, ಹಸುಗಳು ಕೊಬ್ಬಿದ್ದು ನಿಜ. ಮನುಷ್ಯನಿಗೆ ಬೇಕಿದ್ದ ಸಸ್ಯಗಳು, ವೃಕ್ಷಗಳು ಐಷಾರಾಮಿ ಬದುಕು ನಡೆಸುತ್ತಿದ್ದುದು ನಿಜ. ಆದರೆ ನಿಸರ್ಗದಲ್ಲಿ ಸಹಜವಾಗಿ ಬದುಕಬೇಕಿದ್ದ ಎಲ್ಲ ಸಸ್ಯ, ಪ್ರಾಣಿ, ಪಕ್ಷಿಗಳು ನಿರ್ವಂಶವಾಗುವ ಸ್ಥಿತಿಗೆ ಬಂದಿವೆ. ಹೋಗಲಿ, ಭೂಮಿಗೆ ಏನಾದರೂ ಒಳ್ಳೆಯದಾಗಿದೆಯೆ? ಅದಂತೂ ಸುತರಾಂ ಇಲ್ಲ. ನದಿ, ಕೆರೆ, ಕರಾವಳಿ, ಅರಣ್ಯ, ಮಣ್ಣು, ಅಂತರ್ಜಲ, ಹಿಮಖಂಡ, ವಾಯುಮಂಡಲ ಎಲ್ಲವೂ ಮಲಿನವಾಗಿವೆ. ಓಝೋನ್ ವಲಯವೇ ಅಲ್ಲಲ್ಲಿ ಭಗ್ನವಾಗುತ್ತಿದೆ. ಪೆಟ್ರೋಲು, ಡೀಸೆಲ್ಲನ್ನು ನಾವು ಎಗ್ಗಿಲ್ಲದೆ ಸುಡುತ್ತ ಇಡೀ ಭೂಮಿಯನ್ನೇ ಉರಿಗೋಲವಾಗಿಸುತ್ತಿದ್ದೇವೆ.

ಪ್ರಶ್ನೆ: ಅದಕ್ಕೆ ವಿಜ್ಞಾನವನ್ನು ದೂಷಿಸುವುದು ಏಕೆ? ನಮ್ಮೆಲ್ಲರನ್ನು ಹೈಟೆಕ್ ಬದುಕಿನತ್ತ ಧಾವಿಸುವಂತೆ ಮೋಡಿ ಮಾಡಿದ ಕಾರ್ಪೊರೇಟ್ ಶಕ್ತಿಗಳನ್ನು, ಅಂದರೆ ಬಹುರಾಷ್ಟ್ರೀಯ ಕಂಪನಿಗಳನ್ನು ಟೀಕಿಸೋಣ. ಅಂಥ ಶಕ್ತಿಗಳಿಗೆ ಮಣೆ ಹಾಕುವ ರಾಜಕೀಯ ಮುತ್ಸದ್ದಿಗಳನ್ನು ಟೀಕಿಸೋಣ. ಅಂಥ ರಾಜಕೀಯ ವ್ಯವಸ್ಥೆಯನ್ನು ಪೋಷಿಸುವ ನಮ್ಮನ್ನೇ ದೂಷಿಸಿಕೊಳ್ಳೋಣ. ವಿಜ್ಞಾನವನ್ನೇಕೆ ಹೀಗಳೆಯುವುದು? ಇಷ್ಟಕ್ಕೂ ಭೂಮಿಗೆ ಇಂಥ ದುಃಸ್ಥಿತಿ ಬರುತ್ತಿದೆ ಹುಷಾರಾಗಿರಿ ಎಂದು ಎಚ್ಚರಿಸುತ್ತಿರುವವರೂ ವಿಜ್ಞಾನಿಗಳೇ ಅಲ್ಲವೆ?

ಅದು ಹಾಗಲ್ಲ. ವಿಜ್ಞಾನ ಅನ್ನೋದು ಬಲಾಢ್ಯರ ಬಿಗಿಮುಷ್ಟಿಯಲ್ಲಿ ಇಂದು ಸಿಲುಕಿದ್ದರೆ ಅದಕ್ಕೆ ನಾವು ವಿಜ್ಞಾನವನ್ನೇ ದೂಷಿಸಬೇಕು. ಅದರ ದೌರ್ಬಲ್ಯವನ್ನೇ ಟೀಕಿಸಬೇಕು. ನಾಲ್ಕು ನೂರು ವರ್ಷಗಳ ಹಿಂದೆ ಧರ್ಮಲಂಡರು, ವಿಶೇಷವಾಗಿ ಚರ್ಚ್‌ಗಳ ಕಟ್ಟಾಳುಗಳು ಅಂದಿನ ವಿಜ್ಞಾನಿಗಳನ್ನು ಜೈಲಿಗೆ ಅಟ್ಟುತ್ತಿರಲಿಲ್ಲವೆ? ಕಂಬಕ್ಕೆ ಕಟ್ಟಿಹಾಕಿ ಜೀವಂತ ಸುಡುತ್ತಿರಲಿಲ್ಲವೆ? ಆಗಿನ ಕಾಲದ ಅಂಥ ಎಲ್ಲ ಬಗೆಯ ದೌರ್ಜನ್ಯಗಳನ್ನು ಸಹಿಸಿಕೊಂಡೂ ವಿಜ್ಞಾನ ಅರಳಲಿಲ್ಲವೆ? ಈಗೇಕೆ ಅದು ಉಳ್ಳವರ ಊಳಿಗದಲ್ಲಿದ್ದಂತೆ, ಹರಕೆಯ ಗೂಳಿಯಂತೆ ವರ್ತಿಸುತ್ತಿದೆ? ತನ್ನ ಸುತ್ತಲೂ ತಾನೇ ಸೃಷ್ಟಿಸಿದ ಉತ್ಪಾತಗಳನ್ನು ಸರಿಪಡಿಸಲಾಗದ ದೌರ್ಬಲ್ಯ ಅದಕ್ಕೇಕೆ ಬಂದಿದೆ? ಅದನ್ನು ನಿಯಂತ್ರಿಸಲಾಗದಷ್ಟು ಅಶಕ್ತತೆ ಇಡೀ ಮಾನವಕುಲಕ್ಕೆ ಏಕೆ ಬಂದಿದೆ?

ಮಾನವಕುಲದ ವಿವೇಕಕ್ಕೆ ಸದ್ಯಕ್ಕೇನೋ ಮಂಕು ಹಿಡಿದಿರಬಹುದು. ಆದರೆ ವಿಜ್ಞಾನಕ್ಕೆ ಎಚ್ಚರ ತಪ್ಪಿದಾಗಲೆಲ್ಲ ಅದು ಲಗಾಮು ಹಾಕುತ್ತಲೇ ಬಂದಿದೆ. ಯಹೂದ್ಯರ ನರಮೇಧಕ್ಕೆ ಹೆಚ್ಚಿನದಾಗಿ ವಿಜ್ಞಾನಿಗಳೇ ಕಾರಣರಾಗಿದ್ದರು. ವೈಜ್ಞಾನಿಕ ಸಂಶೋಧನೆಯ ಹೆಸರಿನಲ್ಲೇ ಎಲ್ಲ ಅಮಾನುಷ ಕೃತ್ಯಗಳೂ ನಡೆದುಹೋದವು. ಅಲ್ಲಿ ಅಮಾಯಕರ ಮೇಲೆ ನಡೆಸಲಾದ ಸಂಶೋಧನೆಯಿಂದ ಶರೀರ ವಿಜ್ಞಾನದಲ್ಲಿ ಅಭೂತಪೂರ್ವ ಬೆಳವಣಿಗೆ ಆದುವೆಂದು ಹೇಳಲಾಗುತ್ತಿತ್ತು. ಆದರೆ ಅದು ಅನೈತಿಕವೆಂದೂ ಮತ್ತೆಂದೂ ಅಂಥದ್ದು ನಡೆಯಬಾರದೆಂದೂ ನಮ್ಮ ವಿವೇಕ ಎಚ್ಚರಿಸಿದೆಯಲ್ಲವೆ? ಅದೇ ರೀತಿ, ಹಿರೊಶಿಮಾ ನಾಗಾಸಾಕಿಗಳ ಮೇಲೆ ಬಾಂಬ್ ಹಾಕುವಾಗಲೂ ವಿಜ್ಞಾನ ದಾರಿ ತಪ್ಪಿತ್ತು. ಸೈನಿಕ ನೆಲೆಯೇ ಇಲ್ಲದ, ಶಾಂತಿ– ಸುವ್ಯವಸ್ಥೆಯುಳ್ಳ ನಾಗರಿಕ ಸಮಾಜದ ಮೇಲೆ ಬಾಂಬ್ ಹಾಕಿದರೆ ಮಾತ್ರ




ಅದರ ಅಸಲೀ ಸಾಮರ್ಥ್ಯ ಗೊತ್ತಾಗುತ್ತದೆ ಎಂದು ಅಮೆರಿಕದ ವಿಜ್ಞಾನಿಗಳು ತೀರ್ಮಾನಿಸಿದಾಗ ಅವರ ವಿವೇಕಕ್ಕೆ ಮಂಕು ಹಿಡಿದಿತ್ತೇನೊ. ಆದರೆ ಆ ಒಂದು ಜೋಡಿ ಬಾಂಬ್ ಬೀಳಿಸಿದ ನಂತರದ ೭೦ ವರ್ಷಗಳಲ್ಲಿ ಅದೆಷ್ಟೋ ಯುದ್ಧಗಳಾಗಿವೆಯಾದರೂ ಎಲ್ಲೂ ಪರಮಾಣು ಬಾಂಬ್‌ಗಳ ಪ್ರಯೋಗ ಆಗಿಲ್ಲ ಎಂಬುದೂ ಅಷ್ಟೇ ಸತ್ಯ ತಾನೆ? ಅದು ಮನುಕುಲದ ಸಮಷ್ಟಿ ವಿವೇಕದ ಪ್ರತೀಕವೇ ಹೌದು. ಇಂದಿನ ಸಂಕಟಗಳೂ ವಿಜ್ಞಾನದ ಅವಿವೇಕದ ಚಲನೆಯಿಂದಲೇ ಆಗಿದ್ದರೆ ಈಗಲೂ ಅದನ್ನು ಸರಿದಾರಿಗೆ ತರಲು ಸಾಧ್ಯವಿದೆ. ಇಡೀ ಮನುಕುಲಕ್ಕೆ ಸಂಕಟ ಬಂದಾಗ ಅದನ್ನು ನಿಭಾಯಿಸಬಲ್ಲ ಸಮಷ್ಟಿ ಪ್ರಜ್ಞೆ ತಾನಾಗಿ ಹೇಗೋ ವ್ಯಕ್ತವಾಗುತ್ತದೆ ಎಂದು ಈಗಲೂ ಭಾವಿಸಬಹುದು. ಈಗಿನ ಜಾಗತಿಕ ತಾಪಮಾನ ಏರಿಕೆಯ ಸಂದರ್ಭದಲ್ಲೂ ನಮ್ಮ ನಿಲುವನ್ನು ಸರಿಪಡಿಸುವ ಯತ್ನಗಳು ಜಾಗತಿಕ ಶೃಂಗಸಭೆಯ ಮೂಲಕ ನಡೆಯುತ್ತಿವೆ.

ಆದರೆ ಆ ಯತ್ನ ಪದೇ ಪದೇ ವಿಫಲವಾಗುತ್ತಿದೆಯಲ್ಲ? ಪೃಥ್ವಿಯ ಒಟ್ಟಾರೆ ಯೋಗಕ್ಷೇಮದ ದೃಷ್ಟಿಯಿಂದ ಎಲ್ಲ ರಾಷ್ಟ್ರಗಳನ್ನೂ ಒಗ್ಗೂಡಿಸುವ ಯತ್ನ ಕಳೆದ ೨೨ ವರ್ಷಗಳಿಂದ ವಿಫಲವಾಗುತ್ತಿದೆ. ಬಲಾಢ್ಯ ರಾಷ್ಟ್ರಗಳ ಸ್ವಾರ್ಥ ಈಗಂತೂ ಜಾಗತಿಕ ಮಟ್ಟದಲ್ಲಿ ಬಿಂಬಿತವಾಗುತ್ತಿದೆ ವಿನಾ ಜಾಗತಿಕ ಮಟ್ಟದಲ್ಲಿ ಸಂಕಟಕ್ಕೆ ಸಮಾಧಾನ ಹುಡುಕುವ ನಿಟ್ಟಿನಲ್ಲಿ ಹೊಸ ಒಡಂಬಡಿಕೆ ಕಾಣುತ್ತಿಲ್ಲ. ಅದರ ಬದಲು, ಭೂಮಿ ಬಿಸಿಯಾಗುತ್ತಿದ್ದರೆ ಜಾಗತಿಕ ಮಟ್ಟದ ತಂತ್ರಜ್ಞಾನದಿಂದಲೇ ಅದನ್ನು ಮತ್ತೆ ತಂಪು ಮಾಡಲೆಂದು ಶತಕೋಟಿ ಗಾಳಿಪಟಗಳನ್ನು ಬಾಹ್ಯಾಕಾಶಕ್ಕೆ ಹಾರಿಬಿಟ್ಟು ಬಿಸಿಲನ್ನು ದೂರಕ್ಕೆ ಪ್ರತಿಫಲಿಸುವಂತೆ ಮಾಡುವ ಹೈಟೆಕ್ ಪ್ರಸ್ತಾವನೆಗಳು ಬರತೊಡಗಿವೆ. ಯಾವ ಸಮಸ್ಯೆಯ ನಿವಾರಣೆಗೂ ಜನರ ಅಗತ್ಯವೇ ಇಲ್ಲದಂತೆ ತಾನೇ ನಿಭಾಯಿಸಬಲ್ಲೆನೆಂಬ ನಿರಂಕುಶ ಪ್ರವೃತ್ತಿ ಕಾಣತೊಡಗಿದೆ.

ಹೋಗಲಿ, ಇಂದಲ್ಲ ನಾಳೆ ಡೀಸೆಲ್ ಪೆಟ್ರೋಲ್‌ಗಳ ಬಿಗಿಮುಷ್ಟಿಯಿಂದ ಪೃಥ್ವಿಗೆ ಬಿಡುಗಡೆ ಸಿಕ್ಕೀತು ಅಂದುಕೊಳ್ಳೋಣ. ಆದರೆ ಸಮಸ್ಯೆ ಅದೊಂದೇ ಅಲ್ಲವಲ್ಲ. ಇಂದು ರೋಬಾಟ್‌ಗಳ ಇಲೆಕ್ಟ್ರಾನಿಕ್ ನರಮಂಡಲದಲ್ಲಿ ವಿವೇಚನಾಶಕ್ತಿಯನ್ನೂ ಊಡಿಸುವ ನಿಟ್ಟಿನಲ್ಲಿ ಅಕ್ಷರಶಃ ಮಿಂಚಿನ ವೇಗದಲ್ಲಿ ಸುಧಾರಣೆಗಳನ್ನು ಕಾಣುತ್ತಿದ್ದೇವೆ. ಈಗ ಯಂತ್ರಗಳೇ ಸರ್ಜರಿ ಮಾಡುತ್ತವೆ, ಯಂತ್ರಗಳೇ ಯುದ್ಧ ವಿಮಾನಗಳನ್ನು ಓಡಿಸುತ್ತವೆ, ಯಂತ್ರಗಳೇ ದಾದಿಯರಾಗಿ ಅಜ್ಜ–ಅಜ್ಜಿಯರ ಯೋಗಕ್ಷೇಮ ನೋಡಿಕೊಳ್ಳುತ್ತವೆ. ಅದೇ ಹೊಸ ಯುಗದ ಸಮಸ್ಯೆಯನ್ನು ಸೃಷ್ಟಿ ಮಾಡುತ್ತಿದೆ. ಏಕೆಂದರೆ ಮನುಷ್ಯನನ್ನು ನಿತ್ಯದ ಜಂಜಾಟಗಳಿಂದ ಬಿಡುಗಡೆ ಮಾಡುವುದೇ ರೋಬಾಟಿಕ್ ತಂತ್ರಜ್ಞಾನದ ಉದ್ದೇಶವಾಗಿದ್ದರೆ ಅದು ಮನುಷ್ಯರ ಕಲ್ಯಾಣಕ್ಕೆ ಬಂದಿದ್ದೆಂದು ತೀರ್ಮಾನಿಸುವಂತಿಲ್ಲ. ಇಷ್ಟಕ್ಕೂ 'ಜಂಜಾಟ' ಎಂಬ ಪದದ ವ್ಯಾಖ್ಯೆಯನ್ನು ನಿರ್ಧರಿಸಿದವರು ಯಾರು? ವಯಸ್ಸಾದ ತಂದೆತಾಯಿಗಳನ್ನು ನೋಡಿಕೊಳ್ಳುವುದು ಜಂಜಾಟ ಎಂದು ತೀರ್ಮಾನಿಸಿದ್ದೇ ತಪ್ಪಲ್ಲವೆ?


ವಿಜ್ಞಾನದ ಪ್ರಗತಿಯ ಇನ್ನೂ ಕೆಲವು ಧಾರೆಗಳನ್ನು ನೋಡೋಣ: ಯಾವುದೇ ಜೀವಿಯ ಜೀವತಂತುಗಳನ್ನೂ ಬೇಕೆಂದಂತೆ ತಿದ್ದಬಹುದು, ಬದಲಿಸಬಹುದು ಅಷ್ಟೇಕೆ ಹೊಚ್ಚಹೊಸ ಡಿಎನ್ಎ ಸರಮಾಲೆಯನ್ನೂ ಸೃಷ್ಟಿಸುವ ಸಾಮರ್ಥ್ಯ ವಿಜ್ಞಾನಕ್ಕೆ ಬಂದಿದೆ. ಮನುಷ್ಯನ ಜೀವಿತಾವಧಿಯನ್ನು ೧೫೦–೨೦೦ ವರ್ಷಗಳಿಗೂ ವಿಸ್ತರಿಸಲು ಸಾಧ್ಯವಾಗಬಲ್ಲ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಕ್ರೇಗ್ ವೆಂಟರ್‌ನಂಥ ಖಾಸಗಿ ವಿಜ್ಞಾನಿಗಳೂ ಕಂಪನಿಗಳನ್ನು ಸ್ಥಾಪಿಸಿ, ನೊಬೆಲ್ ವಿಜೇತರನ್ನು ಊಳಿಗದಲ್ಲಿಟ್ಟುಕೊಂಡು ತಮಗೆ ಬೇಕಿದ್ದಂತೆ



ಜೀವಿಗಳ ವಿಕಾಸಪಥವನ್ನು ಬದಲಿಸಲು ಹೊರಟಿದ್ದಾರೆ. ನಾಳಿನ ಪೀಳಿಗೆಯ ನಮ್ಮದೇ ಸಂತಾನ ಇಂದಿಗಿಂತ ನೆಮ್ಮದಿಯ ಬದುಕು ಬಾಳಬೇಕೆಂಬ 'ಎನಿಮಲ್ ಇನ್‌ಸ್ಟಿಂಕ್ಟ್' ಈ ಭೂಮಿಯ ಪ್ರತಿಯೊಂದು ಜೀವಿಯ ಜೀವತಂತುವಿನಲ್ಲಿ ಅಂತರ್ಗತವಾಗಿತ್ತು. ಜೀವಿಗಳ ಇದುವರೆಗಿನ ವಿಕಾಸದ ಈ ಮಹಾಸೂತ್ರದಲ್ಲಿ ವಿಜ್ಞಾನ ಹಸ್ತಕ್ಷೇಪ ಮಾಡುತ್ತಿದೆ. ಅಣುಗಾತ್ರಕ್ಕಿಳಿದು, ದ್ರವ್ಯಗಳ ಕೆಮಿಸ್ಟ್ರಿಯನ್ನೂ ಭೌತಿಕ ಗುಣಗಳನ್ನೂ ಬೇಕೆಂದಂತೆ ಬದಲಾಯಿಸಬಲ್ಲ ನ್ಯಾನೊ ತಂತ್ರಜ್ಞಾನ ತನ್ನದೇ ವಿರಾಟ್ ಭೂಮಿಕೆಯನ್ನು ಸಜ್ಜುಗೊಳಿಸುತ್ತಿದೆ. ತನ್ನ ಹಾದಿಯಲ್ಲಿ ಯಾವುದೇ ಸಮಸ್ಯೆ ಎದುರಾದರೂ ಅದನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯ ತನಗಿದೆ ಎಂಬ ಹಮ್ಮು ಅಲ್ಲಿ ವ್ಯಕ್ತವಾಗುತ್ತಿದೆ. ಮನುಕುಲಕ್ಕೆ ಇಷ್ಟವಿರಲಿ ಇಲ್ಲದಿರಲಿ ತಾನು ನಡೆದದ್ದೇ ಹಾದಿ ಎಂಬ ಸರ್ವಶಕ್ತ ಹಮ್ಮು ಅದು. ಮಾನವ ಸಮಾಜ ಕಟ್ಟಿಕೊಂಡ ನೈತಿಕ ಬೇಲಿಗಳನ್ನು, ಪ್ರಜಾತಂತ್ರದಂಥ ಮೌಲ್ಯಗಳನ್ನು, ಸಮಾನತೆ–ಪಾಪಪುಣ್ಯದಂಥ ವಿವೇಕಗಳನ್ನು, ಧರ್ಮಪ್ರಜ್ಞೆಯನ್ನು ಕಡೆಗಣಿಸುತ್ತ ಸಾಗುತ್ತಿದೆ.

ಕೊನೆಗೂ ಇದೋ, ಧರ್ಮದ ವಿಷಯ ಬಂದೇಬಿಟ್ಟಿತು. ಧರ್ಮ ಮತ್ತು ವಿಜ್ಞಾನದ ನಡುವಣ ಸಂಬಂಧದ ಬಗ್ಗೆ ಜಗತ್ತಿನ ಶ್ರೇಷ್ಠ ಚಿಂತಕರೆಲ್ಲ ಚರ್ಚಿಸಿದ್ದಾರೆ. ಅವೆರಡೂ ಒಂದಕ್ಕೊಂದು ವಿರುದ್ಧವಾಗಿರದೆ ಪರಸ್ಪರ ಸಹವಾಸಿಗಳಾಗಿ ಅಸ್ತಿತ್ವದಲ್ಲಿರಲು ಸಾಧ್ಯವೇ ಎಂಬುದರ ಬಗ್ಗೆ ಕೊನೆಯಿಲ್ಲದ ವಾಗ್ವಾದಗಳು ನಡೆದಿವೆ. ವಿವಿಧ ಧರ್ಮಗಳು ಮೆಲ್ಲಗೆ ವಿಜ್ಞಾನದ ಫಲಗಳನ್ನು ತಮ್ಮಲ್ಲಿ ಅಂತರ್ಗತ ಮಾಡಿಕೊಳ್ಳುತ್ತ ಮನುಕುಲದ ಮೇಲಿನ ತಮ್ಮ ಹಿಡಿತವನ್ನು ಸಡಿಲಗೊಳಿಸುತ್ತಿವೆ ಎಂಬುದೂ ಕೆಲವರಿಗೆ ಆತಂಕದ ವಿಷಯವೇ ಆಗುತ್ತಿದೆ. ಹಿಡಿತ ಸಡಿಲವಾದರೂ ಕಷ್ಟ, ಬಿಗಿಯಾದರೆ ಇನ್ನೂ ಕಷ್ಟವೇನೊ. ಈಗಿನ ಉಗ್ರವಾದಿಗಳ ಅಟಾಟೋಪ ನೋಡಿದರೆ ತಂತ್ರಜ್ಞಾನದ ನೆರವಿನಿಂದ ಅವರು ಧರ್ಮದ ಮೇಲೆ ಹಿಡಿತವನ್ನು ಬಿಗಿಗೊಳಿಸಹೊರಟಿರುವುದೂ ಆತಂಕದ ಸಂಗತಿಯಾಗಿದೆ. ಇತ್ತ ವಿಜ್ಞಾನ ತನಗೆ ತಾನೇ ಸೂಪರ್ ಧರ್ಮವಾಗುತ್ತ ತನ್ನಿಂದಲೇ ಸಕಲವೂ ಸೂತ್ರಬದ್ಧವಾಗಲಿದೆಯೆಂಬ ಹೊಸ ಮೂಢನಂಬಿಕೆಯನ್ನು ಬಿತ್ತುತ್ತ ಹೊರಟಿದೆ.

ವಿಜ್ಞಾನದ ವಿರಾಟ್ ಸಂಕೇತವೆಂಬಂತೆ ಯುರೋಪ್‌ನಲ್ಲಿ ಸ್ಥಾಪಿತವಾಗಿರುವ 'ಸರ್ನ್' ಹೆಸರಿನ ಭೂಗತ ಪ್ರಯೋಗಾಲಯದ ಪ್ರವೇಶದ್ವಾರದಲ್ಲಿ ಶಿವನ ತಾಂಡವ ನೃತ್ಯದ ಪ್ರತಿಮೆಯೊಂದನ್ನು ನಿಲ್ಲಿಸಲಾಗಿದೆ. ಫ್ರಿತ್ಯೋಫ್ ಕ್ಯಾಪ್ರಾ ಬರೆದ 'ತಾವೊ ಆಫ್ ಫಿಸಿಕ್ಸ್' ಹೆಸರಿನ ಪುಸ್ತಕದ ಮುಖಪುಟದಲ್ಲೂ ಅದೇ ಶಿವತಾಂಡವ ಚಿತ್ರವಿದೆ. ಕೈಯಲ್ಲಿ ನಾನಾ ಬಗೆಯ ಶಸ್ತ್ರಾಸ್ತ್ರಗಳನ್ನೂ ವರದಂಡಗಳನ್ನೂ ಹಿಡಿದು ಕುಣಿಯುವ ಆ ಮಹಾನ್ ಶಕ್ತಿ ತನ್ನ ಸುತ್ತಲಿನ ಸಕಲವನ್ನೂ, ಕೊನೆಗೆ ಸಾವನ್ನೂ ನಿರ್ನಾಮ ಮಾಡಿ ವಿಶ್ವದ ಮರುನಿರ್ಮಾಣಕ್ಕೆ ಟೊಂಕಕಟ್ಟಿದ ಬೃಹತ್ ಬಿಂಬದಂತಿದೆ. ಯಾರನ್ನು ತುಳಿಯುತ್ತದೊ, ಯಾರನ್ನು ಹರಸುತ್ತದೊ, ಅಂತೂ ಎಲ್ಲರಿಂದ ಭಯಭಕ್ತಿಯನ್ನು ಡಿಮಾಂಡ್ ಮಾಡುವ ಪ್ರತಿಮೆ ಅದು. ವಿಜ್ಞಾನಕ್ಕೆ ಬೇರೆ ಹೋಲಿಕೆ ಬೇಕೆ?



**(ಬೆಂಗಳೂರಿನಲ್ಲಿ ನೆಲೆಸಿರುವ ನಾಗೇಶ ಹೆಗಡೆಯವರು ಕನ್ನಡದ ಸುಪ್ರಸಿದ್ಧ ವಿಜ್ಞಾನ ಲೇಖಕರು, ಅಂಕಣಕಾರರು ಮತ್ತು ಪರಿಸರವಾದಿಗಳು)**

# ಇಂದಿನ ಮಾಧ್ಯಮಗಳ ಪರಿದೃಶ್ಯ : ಒಂದು ಚಿಂತನೆ

ವಿಶೇಷ ಲೇಖನ-೩

-ಡಾ. ಎಚ್.ಎಸ್. ಈಶ್ವರ

**ಮಾಧ್ಯಮ ಮಂಥನದಲ್ಲಿ ಅವಶ್ಯಕವಾಗಿ ನೆನಪಿಡಲೇಬೇಕಾದ ಅಂಶವೊಂದಿದೆ. ಸ್ವಾತಂತ್ರ್ಯ ಎನ್ನುವುದು ಉನ್ನತ ಮೌಲ್ಯ, ನಿಜ. ಆದರೆ ಅದು ಯಾವತ್ತೂ ಸರ್ವತಂತ್ರ ಎಂದು ಪರಿಭಾವಿಸಬಾರದು. ಸ್ವಾತಂತ್ರ್ಯ ಮತ್ತು ಸ್ವೇಚ್ಛೆಗಳು ಬೇರೆಯವೇ. ಸ್ವಾತಂತ್ರ್ಯದ ಹಕ್ಕು ಮತ್ತು ಅದರ ಜವಾಬ್ದಾರಿಯುತ ಬಳಕೆ ಒಂದಕ್ಕೊಂದು ಪೂರಕವಾದ ಸಹವರ್ತಿಗಳು. ಯಾವಾಗ ಸ್ವಾತಂತ್ರ್ಯದ ದುರ್ಬಳಕೆಯಾಗುತ್ತದೋ ಆಗ ಅದನ್ನು ನಿಯಂತ್ರಣಕ್ಕೆ ಒಳಪಡಿಸುವ ಸನ್ನಿವೇಶ ಸೃಷ್ಟಿಯಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳುವುದು ಸಮಾಜಕ್ಕೂ ಹಿತ, ಮಾಧ್ಯಮಗಳಿಗೂ ಕ್ಷೇಮ.**




ಪ್ರಸಿದ್ಧ ಇತಿಹಾಸಕಾರ ಡೇನಿಯಲ್ ಬೂರ್ಸ್ಟಿನ್‌ನ *'ದಿ ಇಮೇಜ್'* ಕೃತಿಯಲ್ಲಿನ ಸಂಭಾಷಣೆಯ ತುಣುಕೊಂದು ನನಗೆ ಆಪ್ಯಾಯಮಾನವಾದದ್ದಾಗಿದೆ. ಅದು ಹೀಗಿದೆ: ಸ್ನೇಹಿತಳೊಬ್ಬಳು ಮಗುವಿನ ತಾಯಿಗೆ ಹೇಳುತ್ತಾಳೆ: "ಅಹಾ, ನಿನ್ನ ಮಗು ಅದೆಷ್ಟು ಮುದ್ದಾಗಿದೆ!" ಅದಕ್ಕೆ ಮಗುವಿನ ತಾಯಿ ಕೊಡುವ ಉತ್ತರ: "ನೀನು ಅವಳ ಫೋಟೋ ನೋಡಬೇಕು. ಅದರಲ್ಲಿ ಇನ್ನೂ ಸುಂದರವಾಗಿದ್ದಾಳೆ." ವಾಸ್ತವಕ್ಕಿಂತಲೂ ವಿಭಿನ್ನವಾದ ಭ್ರಮೆಗಳನ್ನು ಸೃಷ್ಟಿಸುವ ಮೂಲಕ ಮಾಯಾಲೋಕಕ್ಕೆ ಕರೆದೊಯ್ಯುವ ಕೆಲಸದಲ್ಲಿ ಮಾಧ್ಯಮ ಜಗತ್ತು ತೊಡಗಿಸಿಕೊಂಡಿರುವ ಸತ್ಯ ಈ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣಬರುವ ಕಾರಣ ಮಾಧ್ಯಮ ವಿದ್ಯಾರ್ಥಿಯಾದ ನನಗೆ ಅದು ಒಂದು ಔಚಿತ್ಯಪೂರ್ಣವಾದ ಸೈದ್ಧಾಂತಿಕ ಸೂತ್ರವಾಗಿ ಗೋಚರಿಸುತ್ತದೆ.

ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಪ್ರಸ್ತುತ ಸಂದರ್ಭದಲ್ಲಿ ಮಾಧ್ಯಮ ಜಗತ್ತು ವೈವಿಧ್ಯಮಯವಾಗಿದ್ದು ನಮ್ಮ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟಿದೆ. ಮಾಧ್ಯಮಗಳು ಸೃಷ್ಟಿಸುವ ಭ್ರಮೆಗಳು, ಹುಟ್ಟುಹಾಕುವ ಆಸೆಗಳು ಮತ್ತು ಅಗತ್ಯಗಳು, ಅವುಗಳ ಪೂರೈಕೆಗೆ ಸೂಚಿಸುವ ಉಪಾಯಗಳು, ಪೋಷಿಸುವ ಮೌಢ್ಯಗಳು, ಬಿತ್ತುವ ಅನುಮಾನಗಳು ಮತ್ತು ಗೊಂದಲಗಳು, ಆ ಮೂಲಕ ಪರಿಣಮಿಸುವ ಹತಾಶೆ, ಆಶಾಭಂಗ, ಖಿನ್ನತೆ, ಹಿಂಸಾತ್ಮಕ ಮನೋಭಾವನೆಗಳು ಮತ್ತು ನಡೆಗಳು –ಈ ಎಲ್ಲವೂ ಮಾಧ್ಯಮಗಳ ಮೂಲೋದ್ದೇಶಗಳನ್ನು ಮರೆಮಾಡಿ, ಅವುಗಳ ಸಾಮಾಜಿಕ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಕಡೆಗಾಣಿಸುವ ಹತಾಶ ಪರಿಸ್ಥಿತಿಗೆ ಎಡೆಮಾಡಿಕೊಟ್ಟಿವೆ. ಈ ಪರಿಸ್ಥಿತಿಯ ನಿರ್ಮಾಣಕ್ಕೆ ಕಾರಣಗಳೇನು, ಅದರಿಂದ ಉದ್ಭವಿಸಬಹುದಾದ ಪರಿಣಾಮಗಳೇನು, ಮತ್ತು ಇಂತಹ ಒಂದು ಅನಾರೋಗ್ಯ ಮಾಧ್ಯಮ ಪರಿಸರವನ್ನು ಸುಧಾರಿಸುವಲ್ಲಿ ಇರುವ ಪರಿಹಾರೋಪಾಯಗಳು ಯಾವುವು?

ಆಧುನಿಕ ಸಮಾಜದಲ್ಲಿ ಮಾಧ್ಯಮಗಳಿಗೆ ಒಂದು ಪ್ರತಿಷ್ಠಿತ ಸ್ಥಾನವಿದ್ದು, ಅವು ಸರ್ಕಾರದ 'ನಾಲ್ಕನೆಯ ಅಂಗ' (*ಫೋರ್ತ್ ಎಸ್ಟೇಟ್*) ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಅವುಗಳ ಉದ್ದೇಶಗಳಾದರೂ ಗಹನವಾದುವೇ ಆಗಿವೆ. ಸುದ್ದಿ ಸಮಾಚಾರಗಳನ್ನು ಒದಗಿಸುವುದು, ತಿಳುವಳಿಕೆಯನ್ನು ಕೊಡುವುದು, ಶಿಕ್ಷಣ ಮತ್ತು ಮನೋರಂಜನೆಗಳು ಮಾಧ್ಯಮಗಳ ಪ್ರಮುಖ ಉದ್ದೇಶಗಳಾಗಿ ಪರಿಗಣಿಸಲ್ಪಟ್ಟಿವೆ. ಮುಂದುವರಿದಂತೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳಿಗೆ ಇನ್ನೂ ಹೆಚ್ಚಿನ ಆದ್ಯತೆಗಳನ್ನು ವಹಿಸಲಾಗಿದೆ. ಸರ್ಕಾರ ಮತ್ತು ಜನತೆಯ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಮಾಧ್ಯಮಗಳು, ಸರ್ಕಾರದ ನೀತಿನಿಯಮಗಳನ್ನು ಜನರಿಗೆ ಮನವರಿಕೆ ಮಾಡಿಸುವ, ಜನರ ಆಶೋತ್ತರಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವ, ಸಾರ್ವಜನಿಕ ಅಭಿಪ್ರಾಯಗಳನ್ನು ರೂಡಿಸುವ, ಸರ್ಕಾರದ ಕಾರ್ಯನಿರ್ವಹಣೆಯ ಮೇಲೆ ನಿಗಾ ವಹಿಸುವ 'ಕಾವಲು ನಾಯಿ'(*ವಾಚ್ ಡಾಗ್*) ಕರ್ತವ್ಯಗಳು ಮಾಧ್ಯಮಗಳ ಪಾಲಿನ ಹೊಣೆಗಾರಿಕೆಗಳಾಗಿವೆ. ಹೀಗೆ ಅವುಗಳಿಗೆ ಆರೋಪಿಸಲಾಗಿರುವ ಕರ್ತವ್ಯಗಳನ್ನು ಮಾಧ್ಯಮಗಳು ಪ್ರಸ್ತುತದಲ್ಲಿ ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿವೆ ಎನ್ನುವುದು ಮಹತ್ತರ ಚರ್ಚಾಸ್ಪದ ವಿಷಯವಾಗಿದೆ.

ಯಾವುದೇ ಒಂದು ದಿನ ಮಾಧ್ಯಮಗಳಲ್ಲಿ ವರದಿಯಾಗುವ ಸುದ್ದಿಗಳು, ಬಿತ್ತರಿಸಲಾಗುವ ಕಾರ್ಯಕ್ರಮಗಳನ್ನು ಗಮನಿಸಿದರೆ ಅವುಗಳ ಅಪಸಾಮಾನ್ಯ (*ಡಿಸ್‌ಫಂಕ್ಷನಲ್*) ಸ್ವರೂಪ ಮನವರಿಕೆಯಾಗುತ್ತದೆ. ಪತ್ರಿಕೆಗಳ ಮುಖಪುಟದಲ್ಲಿ ಕಾಣಬರುವ ರಾಜಕೀಯ ದೊಂಬರಾಟಗಳು, ಭ್ರಷ್ಟಾಚಾರಗಳು, ಕೊಲೆ, ಸುಲಿಗೆ, ಹಿಂಸೆ, ಆತ್ಮಹತ್ಯೆ, ಅಪಘಾತ ಇವೇ ಮೊದಲಾದ ಕೇವಲ ಕ್ಷುಲ್ಲಕ, ನಿರರ್ಥಕ, ಯಃಕಶ್ಚಿತ್ ಸುದ್ದಿಗಳು ಮೇಲೆ ಪಟ್ಟಿಮಾಡಿರುವ ಯಾವುದೇ ಮಾಧ್ಯಮ ಉದ್ದೇಶಗಳನ್ನು ಪೂರೈಸಲು ಸಹಕಾರಿಯಾಗಲಾರವು. ವಾಸ್ತವದಲ್ಲಿ, ಎಲೆಕ್ಟ್ರಾನಿಕ್ ಮಾಧ್ಯಮಗಳ ಜೊತೆಯಲ್ಲಿ ಸ್ಪರ್ಧೆಯಲ್ಲಿ ತೊಡಗಿಸಿಕೊಂಡಿರುವ ಪತ್ರಿಕೆಗಳು ಈಗ ಸುದ್ದಿಯನ್ನು ನೇರವಾಗಿ ವರದಿ ಮಾಡುವ ಬದಲು, ಅವುಗಳನ್ನು ಅತಿ ರಂಜಕವಾಗಿ ತಮ್ಮದೇ ಅಭಿಪ್ರಾಯ ಮತ್ತು ಟೀಕೆಗಳನ್ನು ಜೋಡಿಸಿ, ನ್ಯಾಯಾಲಯದ ತೀರ್ಪಿನಂತೆ ವರದಿ ಮಾಡುವ ಪರಿಪಾಠ ಅತಿ ಸಾಮಾನ್ಯವಾಗಿದೆ. ಹಾಗಾಗಿ ಸುದ್ದಿಯ ಪಾವಿತ್ರ್ಯತೆ ಹಳಸಲು ಮೌಲ್ಯವಾಗಿದ್ದು, ವಸ್ತುನಿಷ್ಠತೆ ಕೊರತೆಯಿಂದ ಪತ್ರಿಕೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿವೆ. ಇದು ಪತ್ರಿಕೆಗಳ ಪರಿಸ್ಥಿತಿಯಾದರೆ, ಟೆಲಿವಿಷನ್ ಮಾಧ್ಯಮದ ವಿಚಾರ ಇನ್ನೂ ಗಂಭೀರ ಸ್ವರೂಪದ್ದಾಗಿದೆ.

ಇಂದು ಪ್ರಸಾರವಾಗುತ್ತಿರುವ ಬಹಳಷ್ಟು ಟೆಲಿವಿಷನ್ ಕಾರ್ಯಕ್ರಮಗಳನ್ನು ವೀಕ್ಷಿಸಿದಾಗ ಒಂದು ಬಗೆಯ ಜಿಗುಪ್ಸೆಯಾಗುತ್ತದೆ. ಮಾಟ, ಮಂತ್ರ, ಭವಿಷ್ಯ, ಜಾತಕ ಫಲ, ವಾಮಾಚಾರ, ವ್ಯಭಿಚಾರಗಳಿಂದಲೇ ತುಂಬಿಹೋಗಿರುವ ಕಾರ್ಯಕ್ರಮಗಳಿಂದ ನಾವು ಏನನ್ನು ಸಾಧಿಸಲಿಕ್ಕೆ ಹೊರಟಿದ್ದೀವಿ ಎನ್ನುವ ಚಿಂತೆ ಟೀವಿ ನೋಡಿದಾಗಲೆಲ್ಲಾ ಪ್ರಜ್ಞಾವಂತರನ್ನು ಕಾಡುತ್ತಲೇ ಇರುತ್ತದೆ. ಪ್ರಸಾರದ ಹೆಚ್ಚಿನ ಸಮಯವನ್ನು ಆವರಿಸುವ, ನಮ್ಮ ಜೀವಿತ ಅವಧಿಯಲ್ಲಿ ಕೊನೆಗೊಳ್ಳುವ ಸಾಧ್ಯತೆ ಇಲ್ಲವೋ ಎನಿಸುವ ಮತ್ತು ನಿರಂತರವಾಗಿ ಸಾಗುತ್ತಾ ಹೋಗುವ ಧಾರಾವಾಹಿಗಳಂತೂ ಮಾಧ್ಯಮಗಳ ಮಹತ್ತರ ಉದ್ದೇಶಗಳಿಗೆ ಅಪವಾದ ಎನ್ನಿಸುತ್ತವೆ. ಟಿ. ವಿ. ಕಣ್ಣುಗಳಿಗೆ 'ಚ್ಯೂಯಿಂಗ್ ಗಮ್' ಇದ್ದಂತೆ ಎನ್ನುವ ಮಾತು ಇದೆ. ಅದು ವೀಕ್ಷಕರಲ್ಲಿ ಒಳ್ಳೆಯ ಆಸಕ್ತಿ ಅಥವಾ ಅಭಿರುಚಿಗಳನ್ನು ಬೆಳೆಸುವುದೂ ಇಲ್ಲ, ಅಥವಾ ಮನಸ್ಸಿಗೆ ಚೇತೋಹಾರಿಯಾದ ಸಾಮಾಗ್ರಿಗಳನ್ನು ಒದಗಿಸುವುದೂ ಇಲ್ಲ. ಟೆಲಿವಿಷನ್ ವೀಕ್ಷಣೆ ಯಾಂತ್ರಿಕವಾಗಿ ಸಾಗುವ ಚರ್ವಿತಚರ್ವಣ ಕ್ರಿಯೆಯಾಗಿ ಪರಿಣಮಿಸುತ್ತದೆ. "ಜನರು ಇಂತಹ ಕಾರ್ಯಕ್ರಮಗಳನ್ನು ನೋಡುತ್ತಾರೆ. ಅವರು ಎಲ್ಲಿಯವರೆಗೆ ಇಂತಹ ಕಾರ್ಯಕ್ರಮಗಳನ್ನು ನೋಡಲು ಇಚ್ಛಿಸುತ್ತಾರೋ, ಅಲ್ಲಿಯವರೆಗೆ ನಾವು

ಇವುಗಳನ್ನು ಪೂರೈಸುತ್ತಲೇ ಹೋಗುತ್ತೇವೆ" ಎಂದು ವಾದ ಮಾಡುವವರೂ ಇದ್ದಾರೆ. ಎಂದರೆ, ಜನರು ಆತ್ಮಹತ್ಯೆ ಮಾಡಿಕೊಳ್ಳಲು ಇಚ್ಛಿಸುತ್ತಾರೆಂದು, ನಾವು ಅವರನ್ನು ಆತ್ಮಹತ್ಯೆ ಮಾಡಿಕೊಳ್ಳಲು ಬಿಟ್ಟು ಬಿಡಬೇಕೇ ಎನ್ನುವ ಭೀತಿ ನನ್ನನ್ನು ಕಾಡುತ್ತದೆ. ವೀಕ್ಷಕರಲ್ಲಿ ಭಯವನ್ನು ಹುಟ್ಟುಹಾಕಿ, ಮೌಢ್ಯವನ್ನು ಪ್ರಚೋದಿಸಿ, ಮಾನಸಿಕ ಸ್ವಾಸ್ತ್ಯವನ್ನು ಹಾಳುಮಾಡಿ, ನಮ್ಮ ಸಂಸ್ಕೃತಿಯನ್ನು ವಿನಾಶ ಮಾಡುವಂತಹ ಕಾರ್ಯಕ್ರಮಗಳು ಸಹ ಮಾಧ್ಯಮಗಳ ಘನ ಉದ್ದೇಶಗಳಿಗೆ ಪೂರಕವಾಗುವುದಿಲ್ಲ.

ಒಟ್ಟಾರೆಯಾಗಿ ಪರಿಗಣಿಸಿದಾಗ, ಮೋಸ, ವಂಚನೆ, ಅಪರಾಧ, ಹಿಂಸೆ, ಕ್ರೌರ್ಯ, ಕೊಲೆ, ಸುಲಿಗೆ, ಅಪಘಾತ, ಮೋಜಿನ ಹುಡುಗಿಯರ ಬೆತ್ತಲೆ ಪ್ರದರ್ಶನ, ರಾಜಕಾರಣಿಗಳ ಪರಸ್ಪರ ಕೆಸರೆರಚಾಟ ಮತ್ತು ಪೊಳ್ಳು ಭರವಸೆಗಳು ಮುಂತಾದ ಭಕ್ಷ್ಯಗಳಿಂದ ಕೂಡಿದ ಬಫೆಯನ್ನು ಮಾಧ್ಯಮಗಳು ನಮಗೆ ನಿರಂತರವಾಗಿ ಒದಗಿಸುತ್ತಲೇ ಹೋಗುತ್ತವೆ. ಕ್ಷುಲ್ಲಕ ವಿಚಾರಗಳನ್ನು ವಿಜೃಂಭಣೆಗೊಳಿಸುವ ಮೂಲಕ ಮಾಧ್ಯಮಗಳು ತಮ್ಮ ಸರಕುಗಳನ್ನು ಜನಪ್ರಿಯಗೊಳಿಸುವ, ಮಾರುಕಟ್ಟೆಯಲ್ಲಿ ಲಾಭಗಳಿಸುವ ಪ್ರವೃತ್ತಿ ಇಂದು ಸಾಮಾನ್ಯವಾಗಿದೆ. ಇನ್ನು ಇಂತಹ ವಿಚಾರಗಳು ಓದುಗರ ಅಥವಾ ವೀಕ್ಷಕರ ಮೇಲೆ ಯಾವ ಬಗೆಯ ದುಷ್ಪರಿಣಾಮಗಳನ್ನು ಉಂಟುಮಾಡುತ್ತವೆ ಎನ್ನುವ ಬಗ್ಗೆ ಜವಾಬ್ದಾರಿಯುತ ಮಾಧ್ಯಮ ವೃತ್ತಿಯವರು ಆಲೋಚಿಸುವುದೇ ಇಲ್ಲ. ಮಾಧ್ಯಮ ಸರಕುಗಳು ಅವುಗಳ ಬಳಕೆದಾರರ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತವೆ ಎನ್ನುವ ಬಗ್ಗೆ ಸಂವಹನ ಸಂಶೋಧಕರು ಮತ್ತು ಸಮಾಜ ಮನೋವಿಜ್ಞಾನಿಗಳು ನಿರ್ದಿಷ್ಟ ತೀರ್ಮಾನಗಳಿಗೆ ಬಂದಿದ್ದಾರೆ. ಸಂಶೋಧನೆಗಳಿಂದ ತಿಳಿದು ಬರುವಂತೆ, ಮಾಧ್ಯಮಗಳು ನಮ್ಮ ನಡವಳಿಕೆಗೆ 'ಮಾದರಿ'ಗಳನ್ನು ಒದಗಿಸುತ್ತವೆ; ನಮ್ಮ ಕೃತ್ಯಗಳಿಗೆ ಪ್ರಚೋದನೆ ನೀಡುತ್ತವೆ, ಮತ್ತು ಅಂತಹ ಕೃತ್ಯಗಳನ್ನು ನೆರವೇರಿಸಲು ಅಗತ್ಯವಾದ ಮಾರ್ಗೋಪಾಯಗಳನ್ನು ಸೂಚಿಸುತ್ತವೆ ಅಥವ ಕಲಿಸಿಕೊಡುತ್ತವೆ.

ಈ ಮೇಲಿನ ಅಂಶಗಳನ್ನು ಪುಷ್ಟೀಕರಿಸಲು ಸುಮಾರು ಐವತ್ತು ವರ್ಷಗಳ ಹಿಂದೆ ನಾನು ಅಮೆರಿಕೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಸಂಭವಿಸಿದ ಒಂದು ಘಟನಾವಳಿಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಚಿಕಾಗೋ ನಗರದ ಆಸ್ಪತ್ರೆಯೊಂದರಲ್ಲಿ ರಾಬರ್ಟ್ ಸ್ಪೆಕ್ ಎಂಬ ತರುಣ, ಅಲ್ಲಿ ನಿದ್ರಿಸುತ್ತಿದ್ದ ಹದಿಮೂರು ಜನ ದಾದಿಯರನ್ನು ನಿಷ್ಕಾರಣವಾಗಿ ಇರಿದು ಕೊಲೆ ಮಾಡಿದ. ಈ ಸುದ್ದಿ ಸಹಜವಾಗಿಯೇ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆಯಿತು. ಸ್ಪೆಕ್ ಭಾವಚಿತ್ರಗಳು ಪತ್ರಿಕೆಗಳಲ್ಲಿ, ಟಿ. ವಿ. ಜಾಲಗಳಲ್ಲಿ ಪದೇ ಪದೇ ಕಾಣಿಸಿಕೊಂಡವು. ಸ್ಪೆಕ್ ಆ ದಿನಗಳಲ್ಲಿ ಅಮೆರಿಕಾದ ಮನೆ ಮಾತಾದ. ಈ ಘಟನೆಯ ನಂತರದ ಕೆಲವೇ ದಿನಗಳಲ್ಲಿ ವಿಟ್ಮನ್ ಎಂಬ ಇನ್ನೊಬ್ಬ ಯುವಕ, ಟೆಕ್ಸಾಸ್ ವಿಶ್ವವಿದ್ಯಾಲಯದ ಗೋಪುರದ ಮೇಲಿಂದ ಗುಂಡು ಹಾರಿಸಿ ಆಸುಪಾಸಿನ ಹದಿನಾರು ಜನರನ್ನು ಸಾಯಿಸಿದ. ಸ್ವಾಭಾವಿಕವಾಗಿಯೇ ಈ ಸುದ್ದಿಗೂ ವ್ಯಾಪಕ ಪ್ರಚಾರ ದೊರಕಿತು; ವಿಟ್ಮನ್ ಕೂಡಾ ದೇಶದ ಮಾಧ್ಯಮಗಳಲ್ಲಿ ರಾರಾಜಿಸಿದ. ಇದಾದ ಕೆಲವೇ ದಿನಗಳಲ್ಲಿ ಸ್ಮಿತ್ ಎಂಬ ಇನ್ನೊಬ್ಬ ಯುವಕ ಜನನಿಬಿಡ ವ್ಯಾಪಾರಿ ಮಳಿಗೆಯೊಂದಕ್ಕೆ ನುಗ್ಗಿ, ಅಲ್ಲಿ ವ್ಯಾಪಾರದಲ್ಲಿ ತೊಡಗಿದ್ದ ಐವರು ಮಹಿಳೆಯರನ್ನು ಸಾಲಾಗಿ ನಿಲ್ಲಿಸಿ, ಅವರಿಗೆ ಗುಂಡಿಕ್ಕಿ ಸಾಯಿಸಿದ. ಸ್ಮಿತ್‌ನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ, ತಾನು ಸ್ಪೆಕ್- ವಿಟ್ಮನ್‌ರ ಸಾಹಸಗಳನ್ನು ಪತ್ರಿಕೆಗಳಲ್ಲಿ ಓದಿ, ಟಿ. ವಿ. ಯಲ್ಲಿ ನೋಡಿ, ತಾನೂ ಅವರಂತೆ ಒಬ್ಬ 'ಹೀರೋ' ಆಗಬೇಕೆಂಬ ಆಶೆ ತನ್ನನ್ನು ಕಾಡುತ್ತಿದ್ದುದಾಗಿಯೂ, ಅದಕ್ಕಾಗಿ ತಾನು ಈ ಕೃತ್ಯವನ್ನು ಎಸಗಿದ್ದಾಗಿಯೂ ಅವನು ಹೇಳಿಕೆ ನೀಡಿದ. ಸ್ಪೆಕ್-ವಿಟ್ಮನ್ ಮಾದರಿಗಳನ್ನು ನಿರಂತರವಾಗಿ ಉಣಿಸುವ ಮಾಧ್ಯಮಗಳು ನಮ್ಮ ಮಕ್ಕಳನ್ನು ಮತ್ತು ಯುವ ಜನತೆಯನ್ನು ಯಾವ ಹಾದಿಯಲ್ಲಿ ಕೊಂಡೊಯ್ಯಬಹುದು ಎನ್ನುವುದನ್ನು ಯಾರೂ ಕಲ್ಪಿಸಿಕೊಳ್ಳಬಹುದು.

ಮಾಧ್ಯಮಗಳ ಈ ದುಸ್ಥಿತಿಗೆ ಏನು ಕಾರಣ? ಅವುಗಳ ಸುಸೂತ್ರ ಕಾರ್ಯನಿರ್ವಹಣೆಗೆ ಯಾವ ಅಂಶಗಳು ಅವಶ್ಯಕವಾಗಿವೆ? ಈ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಎರಡು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಬೇಕು. ಮೊದಲಿಗೆ, ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಪೂರಕವಾದ ಸಾಮಾಜಿಕ ಹಾಗೂ ರಾಜಕೀಯ ಸನ್ನಿವೇಶ; ಎರಡನೆಯದು, ಅಂತಹ ಸ್ವಾತಂತ್ರ್ಯವನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವ ಮಾಧ್ಯಮ ವೃತ್ತಿಯ ಸಾಮಾಜಿಕ ಹೊಣೆಗಾರಿಕೆ. ನಮ್ಮ ಸಂದರ್ಭಕ್ಕೆ ಸೀಮಿತವಾಗಿ ಈ ವಿಚಾರಗಳನ್ನು ಪರಿಶೀಲಿಸಿದಾಗ, ಈ ವಿಚಾರಗಳಲ್ಲಿ ನಮ್ಮ ಮಾಧ್ಯಮಗಳ ಪರಿಸ್ಥಿತಿ ಅಪೇಕ್ಷಿತ ಮಟ್ಟದಲ್ಲಿ ಇದ್ದಂತೆ ತೋರುವುದಿಲ್ಲ.

ಮಾಧ್ಯಮಗಳ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ ನಮಗೆ ಥಟ್ಟನೆ ಹೊಳೆಯುವುದು ಪ್ರಭುತ್ವದ ನಿಯಂತ್ರಣ. ಈ ವಿಚಾರದಲ್ಲಿ ನಮ್ಮ ಸಂವಿದಾನ ಉದಾರವಾಗಿದೆ; ವಾಕ್ ಮತ್ತು ಮಾಧ್ಯಮ ಸ್ವಾತಂತ್ರ್ಯಕ್ಕೆ ಅವಕಾಶ ಒದಗಿಸಿಕೊಟ್ಟಿದೆ. ತುರ್ತು ಪರಿಸ್ಥಿತಿ ಸಂದರ್ಭವನ್ನು ಹೊರತುಪಡಿಸಿ ಮತ್ತು ಕೆಲವು ವಿಶೇಷ ಸಂಗತಿಗಳಿಗೆ ಅನ್ವಯಿಸುವುದನ್ನು ಬಿಟ್ಟು, ಯಾವತ್ತೂ ಸರ್ಕಾರ ಮಾಧ್ಯಮಗಳಲ್ಲಿ ಅಷ್ಟಾಗಿ ಹಸ್ತಕ್ಷೇಪ ಮಾಡಿದ್ದು ಅಪರೂಪ. ಹಾಗಾದರೂ ನಮ್ಮ ಮಾಧ್ಯಮಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ ಎಂದು ಭಾವಿಸಿದರೆ ತಪ್ಪಾಗುತ್ತದೆ. ಪ್ರಮುಖವಾಗಿ ಮಾಧ್ಯಮ ಸ್ವಾತಂತ್ರಕ್ಕೆ ಅಡ್ಡಿಯಾಗಿರುವುದು ಒಡೆತನದ ಏಕಸ್ವಾಮ್ಯತೆ, ಎಂದರೆ ಮಾಧ್ಯಮಗಳ ಮಾಲಿಕತ್ವ ಕೆಲವೇ ಹಿತಾಸಕ್ತ ಗುಂಪುಗಳ ಹಿಡಿತಕ್ಕೆ ಒಳಪಟ್ಟಿದ್ದು, ಈ ಮಾಲೀಕರು ಬೃಹತ್ ಉದ್ಯಮಿಗಳು ಅಥವಾ ಕೈಗಾರಿಕಾ ಗುಂಪುಗಳು. ಈಚಿನ ದಿನಗಳಲ್ಲಿ ರಾಜಕಾರಣಿಗಳು ಸಹ ಮಾಧ್ಯಮಗಳ ಮೇಲೆ ಹಿಡಿತ ಸಾಧಿಸುವ ಪ್ರವೃತ್ತಿ ಹೆಚ್ಚಾಗಿ ಕಾಣಬರುತ್ತದೆ. ಇವರು ಮಾಧ್ಯಮಗಳನ್ನು ತಮ್ಮ ವ್ಯವಹಾರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಸಾಧನಗಳನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಮಾಧ್ಯಮಗಳ ಮೇಲೆ ಪ್ರಭಾವ ಬೀರುವ ಇನ್ನೊಂದು ಗುಂಪು ಜಾಹಿರಾತುದಾರರು. ಜಾಹಿರಾತು ಮೂಲದ ಆದಾಯ ಮಾಧ್ಯಮಗಳ ಆರ್ಥಿಕ ಸ್ಥಿತಿಗೆ ಅಡಿಪಾಯವಾಗಿರುವ ಕಾರಣ, ಜಾಹಿರಾತುದಾರರು ಮತ್ತು ಮಾಧ್ಯಮಗಳ ನಡುವಣ 'ಕೊಡು ಕೊಳ್ಳುವ' ಹೊಂದಾಣಿಕೆಗಳು ಮಾಧ್ಯಮಗಳು ಅನುಸರಿಸುವ ನೀತಿ ಮತ್ತು ಧೋರಣೆಗಳನ್ನು ಅವಶ್ಯಕವಾಗಿ ತಿರುಚುತ್ತವೆ ಎನ್ನುವುದನ್ನು ಕೂಡಾ ಅಲ್ಲಗಳೆಯುವಂತಿಲ್ಲ. ಇನ್ನು ಸಂಪಾದಕ, ವರದಿಗಾರ, ನಿರ್ದೇಶಕ ಮೊದಲಾದ ಮಾಧ್ಯಮ ಸಂಸ್ಥೆಯ ಕಾರ್ಯನಿರ್ವಾಹಕರು ತಮ್ಮದೆ ಅಭಿಪ್ರಾಯ, ಧೋರಣೆ, ಪಕ್ಷಪಾತಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವ ಮೂಲಕ ಅವುಗಳ ವಸ್ತುನಿಷ್ಠತೆಗೆ ಕಂಟಕಪ್ರಾಯರಾಗುತ್ತಾರೆ. ಈ ಎಲ್ಲ ಮೂಲಗಳಿಂದ ಒದಗಿಬರುವ ನಿಯಂತ್ರಣಗಳನ್ನು ಗಮನಿಸಿದಾಗ, ಮಾಧ್ಯಮ ಸ್ವಾತಂತ್ರ್ಯ ಕೇವಲ ಮರೀಚಿಕೆಯಾಗಿ ತೋರಿಬರುತ್ತದೆ.

ಇನ್ನು ಮಾಧ್ಯಮಗಳಲ್ಲಿ ಎಷ್ಟರಮಟ್ಟಿನ ವೃತ್ತಿಪರತೆ ಎನ್ನುವುದು ಕೂಡಾ ಮಾಧ್ಯಮಗಳ ಒಳ್ಳೆಯ ಅಥವಾ ಕಳಪೆ ನಿರ್ವಹಣೆಗೆ ಪೂರಕವಾಗುತ್ತದೆ. ಮಾಧ್ಯಮಗಳು ಹೆಚ್ಚು ವಸ್ತುನಿಷ್ಠವಾಗಲು, ಜವಾಬ್ದಾರಿಯುತವಾಗಲು ಅವು ಹೆಚ್ಚು ಹೆಚ್ಚು ವೃತ್ತಿಪರವಾಗುವ ಅವಶ್ಯಕತೆ ಇದೆ. ಯಾವುದೇ ವೃತ್ತಿ, ವೃತ್ತಿಯೆಂದು ಪರಿಗಣಿಸಲ್ಪಡಲು ಕನಿಷ್ಠ ಎರಡು ಅರ್ಹತೆಗಳನ್ನು ಹೊಂದಿರಬೇಕು. ಒಂದು, ವೃತ್ತಿ ಸಂಬಂಧಿ ಕಾರ್ಯನಿರ್ವಹಣೆಗೆ ಅವಶ್ಯಕವಾದ ತರಬೇತಿ; ಎರಡು, ವೃತ್ತಿಗೆ ಸಂಬಂಧಿಸಿದ ನೀತಿ ಸಂಹಿತೆ ಮತ್ತು ಅದರ ಕಟ್ಟುನಿಟ್ಟಿನ ಅನ್ವಯ. ಈ ಎರಡೂ ಮಾನದಂಡಗಳನ್ನು ಮಾಧ್ಯಮವೃತ್ತಿಗೆ ಅನ್ವಯಿಸಿದರೆ, ಎರಡೂ ವಿಚಾರದಲ್ಲಿ ಕೊರತೆ ಎದ್ದು ಕಾಣುತ್ತದೆ. ವೃತ್ತಿಗೆ ಸಂಬಂಧಿಸಿದ ಯಾವುದೇ ಬಗೆಯ ತರಬೇತಿ ಇಲ್ಲದೆಯೂ ಮಾಧ್ಯಮಗಳಲ್ಲಿ ಕೆಲಸ ಪಡೆದುಕೊಳ್ಳುವ ಸಾಧ್ಯತೆ ಇದೆ. ಬೇರೆ ಬೇರೆ ನೀತಿ ಸಂಹಿತೆಗಳು ಲಭ್ಯವಿದ್ದರೂ, ಅವು ಕಾರ್ಯರೂಪದಲ್ಲಿ ಜಾರಿಯಾದದ್ದು ತೀರಾ ಅಪರೂಪ.

ಮಾಧ್ಯಮಗಳಲ್ಲಿ ಇನ್ನೂ ಹೆಚ್ಚಿನ ಅಪಾಯಕಾರಿ ಬೆಳವಣಿಗೆಗಳು ಇತ್ತೀಚಿನ ದಿನಗಳಲ್ಲಿ ಗೋಚರವಾಗುತ್ತಿರುವ ಅಪಾದನೆಗಳು ಕೇಳಿಬರುತ್ತಿವೆ. ತನಿಖಾ ವರದಿಗಳ ನೆಪದಲ್ಲಿ ಮಾಧ್ಯಮಗಳು ತಮ್ಮದೇ ತನಿಖೆ ನಡೆಸಿ, ಅದರ ಆಧಾರದ ಮೇಲೆ ತಮ್ಮದೇ ತೀರ್ಮಾನಗಳನ್ನು ಕೈಗೊಂಡು ನ್ಯಾಯವಿತರಣೆಯ ಹಾದಿ ತಪ್ಪಿಸುವ ಅಥವಾ ನ್ಯಾಯಾಂಗ ತನಿಖೆಯ ಮೇಲೆ ಪ್ರಭಾವ ಬೀರುವ ಕೆಲಸ ವ್ಯಾಪಕವಾಗಿ ನಡೆಯುತ್ತದೆ. ಯಾವುದೋ ಹಗರಣದಲ್ಲಿ ಯಾರನ್ನೋ ಅಪರಾಧಿ ಎಂದು ಪರಿಗಣಿಸಿ, ನ್ಯಾಯಾಲಯಗಳು ತೀರ್ಪು ನೀಡುವ ಮೊದಲೇ, ಮಾಧ್ಯಮಗಳು ಪ್ರಚಾರ ಮಾಡುವುದು ಅವುಗಳ ಸ್ವಾತಂತ್ರ್ಯದ ದುರ್ಬಳಕೆಯಾಗುತ್ತದೆ. ಇನ್ನು ಮಾಧ್ಯಮಗಳ ಭ್ರಷ್ಟಾಚಾರದ ಬಗೆಗೂ ಸಾಕಷ್ಟು ಅನುಮಾನಗಳು ಇದ್ದೇ ಇವೆ. 'ಕಾಸಿಗಾಗಿ ಸುದ್ದಿ' ಎನ್ನುವ ಹೊಸ ಪ್ರವೃತ್ತಿಯಂತೂ ತುಂಬಾ ಅಪಾಯಕಾರಿ ಬೆಳವಣಿಗೆ. ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಗಳಿಂದ ಹಣ ಪಡೆದು ಅವರ ಪರ ಅಥವಾ ವಿರೋಧವಾಗಿ ಪ್ರಚಾರದಲ್ಲಿ ತೊಡಗಿಸಿಕೊಳ್ಳುವ ಮಾತು ಆಗಾಗ ಕೇಳಿಬರುತ್ತಲೇ ಇರುತ್ತವೆ. ಇಂತಹ ದುಷ್ಟ ಪ್ರವೃತ್ತಿಗಳು ಮಾಧ್ಯಮಗಳ ಮೂಲ ಆಶಯಗಳಿಗೆ ತೀರಾ ವ್ಯತಿರಿಕ್ತವಾಗಿರುವುದು ಯಾವುದೇ ನಾಗರೀಕ ಸಮಾಜದ ದುರಂತವೇ ಸರಿ.

ಮಾಧ್ಯಮ ಮಂಥನದಲ್ಲಿ ಅವಶ್ಯಕವಾಗಿ ನೆನಪಿಡಲೇ ಬೇಕಾದ ಅಂಶವೊಂದಿದೆ. ಸ್ವಾತಂತ್ರ್ಯ ಎನ್ನುವುದು ಉನ್ನತ ಮೌಲ್ಯ, ನಿಜ. ಆದರೆ ಅದು ಯಾವತ್ತೂ ಸರ್ವತಂತ್ರ

(೬೫ನೇ ಪುಟಕ್ಕೆ

# ಹೊಸ ಕಾಲದ ಮನೋದೈಹಿಕ ಅಸ್ವಸ್ಥತೆಗಳು

–ಡಾ. ಸಿ. ಅರ್. ಚಂದ್ರಶೇಖರ್

**ಈ ದಿನಗಳಲ್ಲಿ ಪ್ರಶಾಂತ ಮನಸ್ಕರಿಗಿಂತ ಪ್ರಕ್ಷುಬ್ಧ ಮನಸ್ಸಿನವರೇ ಹೆಚ್ಚುತ್ತಿದ್ದಾರೆ. ಆತಂಕ, ಖಿನ್ನತೆ, ನಿರಾಶೆ, ಕೋಪ, ಆಕ್ರಮಣಶೀಲತೆ ಮತ್ತು ಅತಿ ಸ್ವಾರ್ಥ ಮನೋಭಾವದಿಂದ, ಅನಾಥಪ್ರಜ್ಞೆಯಿಂದ ಬಳಲುತ್ತಿದ್ದಾರೆ. ತತ್ಪರಿಣಾಮವಾಗಿ ಬಹುತೇಕ ಜನರ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಧಕ್ಕೆಯುಂಟಾಗಿದೆ.**



**ಜಾ**ಗತೀಕರಣ ಎಂಬ ಬದಲಾವಣೆಯ ಗಾಳಿ ಬೀಸಲಾರಂಭಿಸಿ ಅದು ಬಿರುಗಾಳಿಯಾಗಿ ಸೈಕ್ಲೋನ್ ಆಗಿ ಇಡೀ ಪ್ರಪಂಚವನ್ನು ಅಲ್ಲೋಲ ಕಲ್ಲೋಲ ಮಾಡಿರುವುದರ ಅನುಭವ ನಮ್ಮೆಲ್ಲರದ್ದು. ಮುಕ್ತಮಾರುಕಟ್ಟೆಯಲ್ಲಿ ಯಾರು ಬೇಕಾದರೂ ತಮ್ಮ ಸರಕನ್ನು ಎಲ್ಲಿ ಬೇಕಾದರೂ ಮಾರಬಹುದು, ಲಾಭಮಾಡಿಕೊಳ್ಳಬಹುದು ಎನ್ನುವ ಅನೇಕ ಮಲ್ಟಿ ನ್ಯಾಶನಲ್ ಕಂಪನಿಗಳು ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದು, ತತ್ಪರಿಣಾಮವಾಗಿ ಸ್ಥಳೀಯ ಉತ್ಪಾದಕರು, ಸ್ಥಳೀಯ ಮಾರಾಟಗಾರರು ಉಸಿರು ಕಟ್ಟಿ ಸಾಯುತ್ತಿರುವುದನ್ನೂ ನೋಡುತ್ತಿದ್ದೇವೆ. ಸಂವಹನ ಕ್ಷೇತ್ರದಲ್ಲಿ ಆದ ಕ್ರಾಂತಿಯಿಂದಾಗಿ ಈಗ ಪ್ರತಿಯೊಬ್ಬರ ಕೈಗೆ–ಕಿವಿಗೆ ಮೊಬೈಲ್ ಬಂದಿದೆ. ಎಲ್ಲ ಕಡೆ ಕಂಪ್ಯೂಟರ್‌ಗಳ ದರ್ಬಾರು ನಡೆದಿದೆ. ಕುಳಿತಲ್ಲೇ ಬೇಕಾದ್ದನ್ನು ಖರೀದಿಸಬಹುದು, ಮಾರಬಹುದು. ಹಣದ ವಹಿವಾಟನ್ನು ನಡೆಸಬಹುದು. ೨೪ X ೭ ಪ್ರತಿಕ್ಷಣ ಮುನ್ನೂರಕ್ಕಿಂತ ಹೆಚ್ಚು ಚಾನಲ್‌ಗಳ ಮೂಲಕ ಮನೋರಂಜನೆಯನ್ನು ಪಡೆಯಬಹುದು. ಯುವ ಜನ ದಿಢೀರ್ ಮಸ್ತ್ ಮಜಾ ಮಾಡಲು ಜಂಕ್ ಫುಡ್‌ಗಳು, ಮದ್ಯಪಾನೀಯಗಳು, ಮಾದಕ ವಸ್ತುಗಳು, ಡಾನ್ಸ್ ಪಾರ್ಟಿಗಳು, ಮುಕ್ತ ಲೈಂಗಿಕ ಚಟುವಟಿಕೆಗಳು ಈಗ ಲಭ್ಯವಿದೆ. ಕೆಲವೇ ಸಾವಿರ ರೂಪಾಯಿಗಳ ಸಂಬಳ ಈಗ ತಿಂಗಳಿಗೆ ಐದಂಕಿ–ಆರಂಕಿಗಳನ್ನು ದಾಟುತ್ತಿದೆ. ಕಂಡಿದ್ದನ್ನೆಲ್ಲಾ ಕೊಳ್ಳುವ, ಕೇಳಿದ್ದನ್ನೆಲ್ಲಾ ಪಡೆಯುವ ಕೊಳ್ಳುಬಾಕತನಕ್ಕೆ ಜನ ಸ್ವ–ಇಚ್ಛೆಯಿಂದ ಮುಂದಾಗಿದ್ದಾರೆ. ಒಂದು ಊಟಕ್ಕೆ ಒಂದು ಸಾವಿರದಿಂದ ಎರಡು ಸಾವಿರ ರೂಪಾಯಿ ಖರ್ಚು ಮಾಡಲು ಈ ಮಂದಿ ತಯಾರಾಗಿದ್ದಾರೆ. ಸ್ಥಳೀಯ ಭಾಷೆಗಳನ್ನು ಸಾವಿನ ಬಾಯಿಗೆ ನೂಕುತ್ತಾ, ಎಲ್.ಕೆ.ಜಿ, ಯು.ಕೆ.ಜಿಯಿಂದ ಆರಂಭವಾದಂತೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್ ತನ್ನ ಕಬಂಧ ಬಾಹುವನ್ನು ಚಾಚಿದೆ. ಜನರ ಜೀವನ ಶೈಲಿಯೇ ಬದಲಾಗಿಹೋಗಿದೆ. ಇವುಗಳೆಲ್ಲದರ ಪರಿಣಾಮ ಏನಾಗುತ್ತಿದೆ ನೋಡೋಣ.

ಈ ದಿನಗಳಲ್ಲಿ ಪ್ರಶಾಂತ ಮನಸ್ಕರಿಗಿಂತ ಪ್ರಕ್ಷುಬ್ಧ ಮನಸ್ಸಿನವರೇ ಹೆಚ್ಚುತ್ತಿದ್ದಾರೆ. ಆತಂಕ, ಖಿನ್ನತೆ, ನಿರಾಶೆ, ಕೋಪ, ಆಕ್ರಮಣಶೀಲತೆ ಮತ್ತು ಅತಿ ಸ್ವಾರ್ಥ ಮನೋಭಾವದಿಂದ, ಅನಾಥಪ್ರಜ್ಞೆಯಿಂದ ಬಳಲುತ್ತಿದ್ದಾರೆ. ತತ್ಪರಿಣಾಮವಾಗಿ ಬಹುತೇಕ ಜನರ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಧಕ್ಕೆಯುಂಟಾಗಿದೆ.

**೧. ಮನೋದೈಹಿಕ ರೋಗಗಳು:** ಜನಸಂಖ್ಯೆಯ ಶೇಕಡಾ ೩೫ರಷ್ಟು ಜನ ಅಧಿಕ ರಕ್ತದೊತ್ತಡದಿಂದ, ಶೇ ೨೫ರಷ್ಟು ಮಧುಮೇಹದಿಂದ, ಶೇ ೩೦ ರಷ್ಟು ಜನ ಬೊಜ್ಜಿನಿಂದ, ಶೇ. ೩೦ರಷ್ಟು ಜನ ಕೀಲು ಬೇನೆಯಿಂದ, ಶೇ ೧೨ರಷ್ಟು ಜನ ಥೈರಾಕ್ಸಿನ್ ಕೊರತೆಯಿಂದ, ಹಾಗೂ ಮನೋದೈಹಿಕ ರೋಗಲಕ್ಷಣಗಳಾದ ತಲೆನೋವು, ಮಲಬದ್ಧತೆ, ಲೈಂಗಿಕ ದೌರ್ಬಲ್ಯಗಳಿಂದ ಬಳಲುತ್ತಿದ್ದಾರೆ. ಶೇ ೪೦ರಷ್ಟು ಜನ ಹೃದ್ರೋಗದ ಅಪಾಯಕ್ಕೆ ಒಳಗಾಗಿದ್ದಾರೆ.

**೨. ಗ್ಯಾಡ್ಜೆಟ್ ಅಡಿಕ್ಷನ್** : ಮಕ್ಕಳು, ಹದಿಹರೆಯದವರು, ಸ್ತ್ರೀಯರು ಮೊಬೈಲ್, ಟೀವಿ, ಕಂಪ್ಯೂಟರ್ ಅಂತರ್ಜಾಲಗಳಿಗೆ ಚಟ ಬೆಳೆಸಿಕೊಳ್ಳುತ್ತಿದ್ದಾರೆ. *ಫೇಸ್‌ಬುಕ್, ವಾಟ್ಸ್‌ಪ್* ಮೋಹಿಗಳಾಗುತ್ತಿದ್ದಾರೆ. ಓದು, ಅಧ್ಯಯನ, ರೂಢಿಯ ಕೆಲಸ ಕರ್ತವ್ಯಗಳನ್ನು ನಿರ್ಲಕ್ಷಿಸುತ್ತಿದ್ದಾರೆ.

**೩. ಖಿನ್ನತೆ ಮತ್ತು ಆತ್ಮಹತ್ಯೆ:** ಶೇಕಡಾ ೨೦ ರಷ್ಟು ಮಂದಿ ಆಬಾಲ ವೃದ್ಧರಾದಿಯಾಗಿ ಖಿನ್ನತೆಯ ರೋಗಕ್ಕೊಳಗಾಗಿದ್ದಾರೆ. ಬೇಸರ, ದುಃಖ, ನಿರಾಸಕ್ತಿ, ನಿರುತ್ಸಾಹ, ಅಸಹಾಯಕತೆ, ನಿರಾಶೆಗಳಿಂದ ಬಳಲುತ್ತಿದ್ದಾರೆ. ಲಭ್ಯವಿರುವ ಸವಲತ್ತುಗಳಿಂದ ಸಂತೋಷಪಡುತ್ತಿಲ್ಲ. ಸದಾ ಅತೃಪ್ತಿ ಮನೆಮಾಡಿದೆ. ಯಾವುದೇ ಕಷ್ಟ ನಷ್ಟ ಸೋಲು ಅಪಮಾನಗಳಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ೨೦೧೪ ರಲ್ಲಿ ಭಾರತದಲ್ಲಿ ದಾಖಲಾದ ಆತ್ಮಹತ್ಯಾ ಸಾವುಗಳ ಸಂಖ್ಯೆ ೧ ಲಕ್ಷದ ೩೭ ಸಾವಿರ. ಬಹುಷಃ ಇದಕ್ಕೆ ಹತ್ತು ಪಟ್ಟು ಹೆಚ್ಚಿನ ಜನ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾರೆ.

**೪. ಆತಂಕ–ಭಯದ ರೋಗ:** ಅಭದ್ರತೆ, ಅನಿಶ್ಚಯತೆ, ನಿಜವಾದ ಅಥವಾ ಕಲ್ಪಿತ ಅಪಾಯಗಳಿಂದ ಶೇಕಡಾ ೧೫ ರಷ್ಟು ಜನ ಆತಂಕ–ಭಯದ ರೊಗಕ್ಕೆ ತುತ್ತಾಗಿದ್ದಾರೆ.

**೫. ಕೋಪ–ಆಕ್ರಮಣಶೀಲತೆ–ಕ್ರೌರ್ಯ–ಹಿಂಸೆ:** ಮಿತಿಯಿಲ್ಲದ ಸುಖದಾಸೆ ಮತ್ತು ಹೆಚ್ಚಿದ ಸ್ಪರ್ಧಾತ್ಮಕತೆಯಿಂದಾಗಿ ಸಮಾಜದ ಎಲ್ಲ ವರ್ಗಗಳ ಜನರಲ್ಲಿ, ಸಿಟ್ಟು ಕೋಪ, ಆಕ್ರಮಣಕಾರಿ ಮನೋಭಾವ, ಕ್ರೌರ್ಯ, ಹಿಂಸೆ ಹೆಚ್ಚುತ್ತಿದೆ. ಧರ್ಮ, ವರ್ಗ, ಜಾತಿ, ಭಾಷೆ, ರಾಜ್ಯ, ಸ್ಥಳೀಯ ಭಿನ್ನತೆಯ ಆಧಾರದ ಮೇಲೆ ಗುದ್ದಾಡುವ, ಹಿಂಸಾಚಾರದಲ್ಲಿ ತೊಡಗುವ ಪ್ರವೃತ್ತಿ ಹೆಚ್ಚುತ್ತಿದೆ. ಕ್ಷಣಾರ್ಧದಲ್ಲಿ ಜನ ಕಾನೂನನ್ನು ತಮ್ಮ ಕೈಗೆತ್ತಿಕೊಳ್ಳುತ್ತಾರೆ.

**೬. ಹಣ–ಆಸ್ತಿ–ಅಧಿಕಾರ ಗಳಿಸುವ ಗೀಳು:** ಭೋಗ–ಭಾಗ್ಯಗಳ ಹಿಂದೆ ಬಿದ್ದು, ಅಪಾರವಾದ ಹಣ ಸಂಗ್ರಹಣೆ ಆಸ್ತಿಪಾಸ್ತಿ, ಅಧಿಕಾರ ಸಂಪಾದಿಸುವ ಗೀಳು ಬಹುತೇಕ ಜನರನ್ನು ಆವರಿಸಿಕೊಂಡಿದೆ. ಇದಕ್ಕಾಗಿ ಅಕ್ರಮ, ಅನೀತಿ, ಅನ್ಯಾಯದ ಮಾರ್ಗಗಳನ್ನು ಬಳಸುವುದಕ್ಕೆ ಜನ ಹಿಂಜರಿಯುತ್ತಿಲ್ಲ. ಮೋಸ ವಂಚನೆ, ಶೋಷಣೆ ಮಾಡಲು ಹೆದರುತ್ತಿಲ್ಲ. ನೀತಿ ನಿಯಮಗಳ ಪಾಲನೆ ಅವರಿಗೆ ಬೇಕಿಲ್ಲ. ಶ್ರಮವಿಲ್ಲದೆ, ಬೆವರು ಸುರಿಸದೆ, ಹಣಗಳಿಕೆ ಎಲ್ಲರ ಆದ್ಯತೆಯಾಗಿದೆ.

**೭.ಛಿದ್ರ ಛಿದ್ರವಾದ ಕುಟುಂಬ ವ್ಯವಸ್ಥೆ:** ತಂದೆ, ತಾಯಿ, ಸೋದರ, ಸೋದರಿಯರು, ಬಂಧು ಬಾಂಧವರು ಎಂಬ ಕುಟುಂಬ ವ್ಯವಸ್ಥೆ ಶಿಥಿಲವಾಗಿದೆ. ಎಲ್ಲರು self centred (ಸ್ವ–ಕ್ಷೇಮ ಕೇಂದ್ರಿತ) ಆಗುತ್ತಿದ್ದಾರೆ. ಪರಸ್ಪರ ಆಸರೆ–ಸಹಕಾರ–ಹೊಂದಿಕೊಂಡು ಹೋಗುವ ಮನೋ ಪ್ರವೃತ್ತಿ ಮಾಯವಾಗಿದೆ. ಸಂಬಂಧಗಳನ್ನು ಲಾಭ–ನಷ್ಟದ ದೃಷ್ಟಿಯಿಂದ ನೋಡಲಾಗುತ್ತಿದೆ. ಪಡೆಯುವುದಕ್ಕೇ ಪ್ರಾಧಾನ್ಯತೆ ನೀಡಲಾಗುತ್ತಿದೆ. ಹೀಗಾಗಿ ಕುಟುಂಬದಲ್ಲಿ ವಿರಸಗಳೂ, ದಾಂಪತ್ಯ ಕಲಹಗಳು, ವಿಚ್ಛೇದನಗಳು ಹೆಚ್ಚುತ್ತಿವೆ. ಸ್ತ್ರೀಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ.

**೮. ಕತ್ತುಕೊಯ್ಯುವ ಸ್ವಾರ್ಥ:** ಮುಖ್ಯವಾಗಿ ವಿದ್ಯಾಭ್ಯಾಸದಲ್ಲಿ ಮಕ್ಕಳನ್ನು ರೇಸುಕುದುರೆಗಳಂತೆ ನೋಡಲಾಗುತ್ತಿದೆ. ಆಡುವ ಆನಂದಿಸುವ ಪ್ರಕ್ರಿಯೆಯಿಂದ ಅವರನ್ನು ದೂರವಿಟ್ಟು, ಓಡು, ವೇಗವಾಗಿ ಓಡು, ಎಲ್ಲರಿಗಿಂತ ಮುಂದಿರು, ಶೇಕಡಾ ೮೦, ೯೦, ಸಾಧ್ಯವಾದರೆ ನೂರಕ್ಕೆ ನೂರು ಅಂಕಗಳನ್ನು ತೆಗಿ ಇಲ್ಲದಿದ್ದರೆ, ನಿನಗೆ ಭವಿಷ್ಯವಿಲ್ಲ ಎಂದು ಹೆದರಿಸಲಾಗುತ್ತಿದೆ. ವಿದ್ಯಾಭ್ಯಾಸ ಇಂದು ಜ್ಞಾನಾರ್ಜನೆ ಮಾಡಲು ಅಲ್ಲ. ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆಯುವುದೇ ಗುರಿ. ಟೆಕ್ಕಿಯಾಗಿ(ತಂತ್ರಜ್ಞ), ಬುಕ್ಕಿಯಾಗಿ (ಬ್ಯೂರೋಕ್ರಾಟ್–ಆಡಳಿತಗಾರ) ಅಥವಾ ಡಿಕ್ಕಿಯಾಗಿ(ಡಾಕ್ಟರ್) ಐಶಾರಾಮ ಜೀವನ ಮಾಡು ಎಂದು ಹೇಳಲಾಗುತ್ತದೆ. ಈ ಸ್ಪರ್ಧೆಗೆ ರೇಸ್ ಕುದುರೆಗಳಾಗಿ ತಯಾರು ಮಾಡಲು 'ಇಂಟರ್ ನ್ಯಾಶನಲ್ ಇಂಗ್ಲಿಷ್ ಸ್ಕೂಲ್'ಗಳು ಹಳ್ಳಿ–ದಿಲ್ಲಿಯಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿ ನಿಂತಿವೆ. ತಂದೆ ತಾಯಿಗಳ ಮಹತ್ವಾಕಾಂಕ್ಷೆ–ದುರಾಶೆಯೇ ಇವುಗಳ ಬಂಡವಾಳ.

**೯.ಭಾವಸೂಕ್ಷ್ಮತೆ ಅಲ್ಲ, ಬರಿಯ ಭಾವೋದ್ವೇಗಗಳು:** ನವಿರು ಭಾವನೆಗಳಿಗೀಗ ಮನಸ್ಸಿನಲ್ಲಿ ಎಡೆ ಇಲ್ಲ. ದಯೆ, ಅನುಕಂಪ, ನಿಸ್ವಾರ್ಥ ಪ್ರೀತಿ, ಶ್ಲಾಘನೆ, ಮೆಚ್ಚುಗೆ ವ್ಯಕ್ತಪಡಿಸಿ ಸಂಭ್ರಮಿಸುವುದು ಈಗ ಅನೇಕರಿಗೆ ಮರೆತು ಹೋಗಿದೆ. ಭಾವೋದ್ವೇಗಗಳನ್ನು ಪ್ರದರ್ಶಿಸುವುದು ದೃಶ್ಯಮಾಧ್ಯಮಗಳಲ್ಲಿ ಈಗ ಸರ್ವೇ ಸಾಮಾನ್ಯ.

ಹೀಗೆ ಜಾಗತೀಕರಣದ ಸೈಕ್ಲೋನ್‌ನಿಂದಾಗಿ ಮನೆ–ಮನ–ಸಮಾಜದ ವಾತಾವರಣ ಕಲುಷಿತವಾಗಿದೆ. ಅನಾರೋಗ್ಯದ ಜಡಿಮಳೆ ಸುರಿಯುತ್ತಿದೆ. ವಿಚಾರ–ವಿವೇಚನೆ–ಜ್ಞಾನದ ಸೂರ್ಯನ ಬೆಳಕು ಈಗ ಬೇಕಾಗಿದೆ. ಜಾಗತೀಕರಣ ತಂದಿರುವ ವ್ಯಾಪಾರೀಕರಣ–ವಾಣಿಜ್ಯೀಕರಣವೆಂಬ ಕತ್ತಲು ದೂರವಾಗಬೇಕಿದೆ. ಇರುವುದನ್ನು ಹಂಚಿಕೊಂಡು, ಲಭ್ಯವಿರುವುದರಲ್ಲಿ ತೃಪ್ತಿ ಪಟ್ಟುಕೊಂಡು, ಸರಳ ಮತ್ತು ಸುಂದರ ಬದುಕನ್ನು ರೂಪಿಸಿಕೊಳ್ಳಬೇಕಾಗಿದೆ.



**(ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಮತ್ತು ನರರೋಗ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವ ಡಾ. ಸಿ. ಆರ್. ಚಂದ್ರಶೇಖರ್ ಖ್ಯಾತ ಮನೋವೈದ್ಯರು ಮತ್ತು ಲೇಖಕರು)**

**೬೪ನೇ ಪಟದಿಂದ)**

ಎಂದು ಪರಿಭಾವಿಸಬಾರದು. ಸ್ವಾತಂತ್ರ್ಯ ಮತ್ತು ಸ್ವೇಚ್ಛೆಗಳು ಬೇರೆಯವೇ. ಸ್ವಾತಂತ್ರ್ಯದ ಹಕ್ಕು ಮತ್ತು ಅದರ ಜವಾಬ್ದಾರಿಯುತ ಬಳಕೆ ಒಂದಕ್ಕೊಂದು ಪೂರಕವಾದ ಸಹವರ್ತಿಗಳು. ಯಾವಾಗ ಸ್ವಾತಂತ್ರ್ಯದ ದುರ್ಬಳಕೆಯಾಗುತ್ತದೋ ಆಗ ಅದನ್ನು ನಿಯಂತ್ರಣಕ್ಕೆ ಒಳಪಡಿಸುವ ಸನ್ನಿವೇಶ ಸೃಷ್ಟಿಯಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳುವುದು ಸಮಾಜಕ್ಕೂ ಹಿತಕರ, ಮಾಧ್ಯಮಗಳಿಗೂ ಕ್ಷೇಮ.

ಪ್ರಸ್ತುತ ಲೇಖಕ ಇನ್ನೊಂದು ಸಂದರ್ಭದಲ್ಲಿ ನಿರೂಪಿಸಿರುವ ಕೆಲವು ಮಾತುಗಳು ಇಲ್ಲಿ ಉಲ್ಲೇಖನೀಯ: "ಇಷ್ಟೆಲ್ಲ ಹೇಳಿದ ಮೇಲೂ ನಾಗರಿಕ ಸಮಾಜದ ಅಳಿವು ಉಳಿವು ಅನಿವಾರ್ಯವಾಗಿ ಮಾಧ್ಯಮಗಳ ಆರೋಗ್ಯಕರ ನಿರ್ವಹಣೆಯನ್ನೇ ಅವಲಂಬಿಸಿರುತ್ತದೆ. ಮಾಧ್ಯಮ ವಿಮುಕ್ತ ಸಮಾಜ ಕಲ್ಪನೆಗೂ ನಿಲುಕದಷ್ಟು ಅವು ನಮ್ಮ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಅವುಗಳ ಅರೆಕೊರೆಗಳನ್ನು ಹೇಳಿದ ಮಾತ್ರಕ್ಕೆ ಈ ಮೇಲಿನ ವಿಚಾರಧಾರೆ ಮಾಧ್ಯಮ ವಿರೋಧಿ ಎಂದು ಯಾರೂ ಪರಿಗಣಿಸಬೇಕಾಗಿಲ್ಲ. ಮಾಧ್ಯಮಗಳ ಇತಿಮಿತಿಗಳನು ಗಮನದಲ್ಲಿಟ್ಟುಕೊಂಡು ನಾವು ಮಾಧ್ಯಮ ಸರಕುಗಳನ್ನು ಅರ್ಥೈಸಬೇಕು, ಒಪ್ಪಿಕೊಳ್ಳಬೇಕು ಎನ್ನುವುದು ಇಲ್ಲಿನ ವಿಚಾರ ಸರಣಿಯ ಸಾರಾಂಶ. ಪಾಲ್ ಬೆಕೆಟ್ ಎಂಬ ಮಾಧ್ಯಮ ವಿಮರ್ಶಕನ ಹೇಳಿಕೆಯೊಂದನ್ನು ಉದ್ಧರಿಸುವ ಮೂಲಕ ಇಲ್ಲಿನ ವಿಶ್ಲೇಷಣೆಯನ್ನು ಕೊನೆಗೊಳಿಸಬಹುದು: "ಸ್ವತಂತ್ರ ಮಾಧ್ಯಮ (ಅದರ ನಿಜ ಅರ್ಥದಲ್ಲಿ) ಶಕ್ತಿಶಾಲಿ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗ. ಭ್ರಷ್ಟ ಮಾಧ್ಯಮ ಕುಲಗೆಟ್ಟ ಪ್ರಜಾಪ್ರಭುತ್ವದ ಸೂಚಿ ಮತ್ತು ಅದನ್ನು ಶಾಶ್ವತಗೊಳಿಸುವ ಸಾಧನ ಎರಡೂ ಆಗಿರುತ್ತದೆ."



**(ಈಗ ಬೆಂಗಳೂರಿನಲ್ಲಿ ನೆಲೆಸಿರುವ ಮೂಲತಃ ತೀರ್ಥಹಳ್ಳಿಯವರಾದ ಮಾಧ್ಯಮ ತಜ್ಞ ಡಾ. ಎಚ್.ಎಸ್. ಈಶ್ವರ ಅವರು ಕೆಲ ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾಲಯದಲ್ಲಿ ಮನಃಶ್ಶಾಸ್ತ್ರದ ಅಧ್ಯಾಪಕರಾಗಿ ನಂತರ ಬೆಂಗಳೂರು ವಿಶ್ವವಿದ್ಯಾನಿಲಯದ ಸಂವಹನ ವಿಭಾಗದ ಮುಖ್ಯಸ್ಥರಾಗಿದ್ದವರು)**

**ಹೊಸ ಮನುಷ್ಯ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**

**ಹೊಸ ಸಮಾಜವಾದಿ ನಾಗರೀಕತೆ ಜಗತ್ತಿನ ಎಲ್ಲ ಜನಾಂಗಗಳ ದೈಹಿಕ ಮತ್ತು ಸಾಂಸ್ಕೃತಿಕ ಸಮೀಪೀಕರಣವನ್ನು ಸಾಧಿಸುವ ಮೂಲಕ ಮಿಶ್ರ ಜನಾಂಗವೊಂದು ಜಗತ್ತಿನ ತುಂಬ ಹಬ್ಬುವ ದಿನವನ್ನು ಎದುರು ನೋಡುತ್ತೇನೆ.**

**–ರಾಮಮನೋಹರ ಲೋಹಿಯಾ**

**ಎಂ.ಜೆ. ಹೆಗಡೆ,**
**ಮಾಜಿ ನಗರ ಸೇವಕ (1985-2002)**
**ಮುಂಬಯಿ ನಗರ ಪಾಲಿಕೆ**
**ಮುಂಬಯಿ.**

**ಸಿನಿಮಾ ಪುಟ**

# ನಾನು ಮತ್ತು ನನ್ನ ಸಿನಿಮಾ

-ಪಿ.ಶೇಷಾದ್ರಿ

**'ಅತಿಥಿ', 'ಬೇರು', 'ತುತ್ತೂರಿ', 'ಮುನ್ನುಡಿ', 'ವಿಮುಕ್ತಿ', 'ಬೆಟ್ಟದ ಜೀವ', 'ಭಾರತ್ ಸ್ಟೋರ್ಸ್', 'ಡಿಸೆಂಬರ,1' ಮತ್ತು 'ವಿದಾಯ ಚಿತ್ರಗಳ ಮೂಲಕ ಕನ್ನಡ ಚಿತ್ರಲೋಕದಲ್ಲಿ ಹೊಸ ಮಧ್ಯಮ ಮಾರ್ಗವೊಂದನ್ನು ತರೆದು ಪ್ರೇಕ್ಷಕರ ಗಮನ ಸೆಳೆದಿರುವ ನಿರ್ದೇಶಕ ಪಿ. ಶೇಷಾದ್ರಿ ಅವರು ಇಲ್ಲ, ತಾವು ನೆದುಬಂದ ದಾರಿಯ ಬಗ್ಗೆ ಒಂದು ಹಿನ್ನೋಟ ಹರಿಸಿದ್ದಾರೆ–ಸಂ.**

**ನಾ**ನೇಕೆ ಸಿನಿಮಾ ಮಾಡುತ್ತೇನೆ?

ನನಗೆ ಗೊತ್ತಿಲ್ಲ!

ಒಬ್ಬ ರೈತ ಬೆಳೆ ಬೆಳೆದ ಹಾಗೆ, ಒಬ್ಬ ಗುಮಾಸ್ತ ಕಚೇರಿಯಲ್ಲಿ ಕೆಲಸ ಮಾಡಿದ ಹಾಗೆ, ಒಬ್ಬ ಸಾಹಿತಿ ಬರೆದ ಹಾಗೆ ನಾನೂ ಸಿನಿಮಾ ಮಾಡುತ್ತೇನೆ. ನನಗೆ ಸಿನಿಮಾ ಮಾಡುವುದು ಒಂದು ವೃತ್ತಿ.

ಒಂದು ಸಣ್ಣ ಫ್ಲ್ಯಾಷ್‌ಬ್ಯಾಕ್!

ನಾನು ಹುಟ್ಟಿ ಬೆಳೆದದ್ದು ಹಳ್ಳಿಯಲ್ಲಿ. ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಂಡಿನಶಿವರ ನನ್ನೂರು. ಆಗ ನಮ್ಮೂರಲ್ಲಿ ಸಿನಿಮಾ ಟೆಂಟಿರಲಿಲ್ಲ, ಟಿವಿ ಬಂದಿರಲಿಲ್ಲ, ಇಡೀ ಊರಿಗೆ ನಾಲ್ಕೈದು ಮನೆಗಳಲ್ಲಿ ದಿನಪತ್ರಿಕೆ ಬರುತ್ತಿತ್ತು. ಊರಿನ ಗ್ರಾಮಪಂಚಾಯಿತಿಯಲ್ಲಿ ಮಾತ್ರ ರೇಡಿಯೋ ಇತ್ತು. ಸಂಜೆ ಒಂದು ಗಂಟೆ ಚಾಲೂ ಇರುತ್ತಿತ್ತು. ಅದರಲ್ಲಿ ಬರುತ್ತಿದ್ದ ಪ್ರದೇಶ ಸಮಾಚಾರದ ತಲೆಬುಡ ಅರ್ಥವಾಗುತ್ತಿರಲಿಲ್ಲ. ಮನರಂಜನೆಗೆ ನಮಗೆ ಇದ್ದದ್ದು ಹುಡುಗರೊಂದಿಗೆ ಆಡುತ್ತಿದ್ದ ಆಟ ಒಂದೇ.

ರಾತ್ರಿ ಕತ್ತಲಾಗುತ್ತಿದ್ದಂತೆ ನಮ್ಮ ಅಜ್ಜಿ ನಾನು ಮತ್ತು ನನ್ನ ಓರಗೆಯ ಹುಡುಗರನ್ನು ಸುತ್ತಲೂ ಕೂರಿಸಿಕೊಂಡು ಕತೆ ಹೇಳುತ್ತಿದ್ದಳು. ಅವು ಅದ್ಭುತ ರಮ್ಯ ಕತೆಗಳು. ನಾವೆಲ್ಲಾ ಅಚ್ಚರಿಯಿಂದ ಕಣ್ಣು ಬಾಯಿಬಿಟ್ಟುಕೊಂಡು ಸುತ್ತಲೂ ಕೂತು ಕೇಳುತ್ತಿದ್ದೆವು. ಹಗಲಲ್ಲಿ ನಮ್ಮ ಅಮ್ಮ ಹೊಲದಲ್ಲಿ ಕಳೆ ಕೀಳುವಾಗ, ಸಸಿ ನೆಡುವಾಗ ಅಕ್ಕ–ತಂಗಿಯರ, ಅಣ್ಣ–ತಮ್ಮಂದಿರ ನೋವಿನ, ಸಾಂದರ್ಭಿಕ ಕತೆಗಳನ್ನು ಹೇಳುತ್ತಿದ್ದಳು. ಅವನ್ನೂ ನಾನು ಕುತೂಹಲದಿಂದ ಕೇಳುತ್ತಿದ್ದೆ.

ವರ್ಷಕ್ಕೊಮ್ಮೆ ನಮ್ಮೂರಲ್ಲಿ ಗ್ರಾಮದೇವತೆಯ ಜಾತ್ರೆ ಆಗುತ್ತಿತ್ತು. ಆಗ ಟೂರಿಂಗ್ ಟಾಕೀಸು ಬರುತ್ತಿತ್ತು. ನಮ್ಮ ಸ್ಕೂಲಿನ ಮೈದಾನದಲ್ಲಿ ಗೂಟು ಹೊಡೆದು, ಡೇರೆ ಎತ್ತಿ ಎರಡು ತಿಂಗಳು ಚಲನಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ನಾನು ಮೇಷ್ಟ್ರ ಮಗನಾದ್ದರಿಂದ ನಮ್ಮ ಮನೆಯಲ್ಲಿ ಎಲ್ಲರಂತೆ ಸಿನಿಮಾ ನೋಡಲು ನಿಷೇಧವಿತ್ತು. ನಾನು ಬಾಲ್ಯದಲ್ಲಿ ಸಿನಿಮಾ ನೋಡಿದ್ದು ತುಂಬ ಕಡಿಮೆ. ಆದರೆ ಅದರ ಲೌಡ್ ಸ್ಪೀಕರ್‌ನಿಂದ ಬರುತ್ತಿದ್ದ ಶಬ್ದವನ್ನು ಕೇಳಿಸಿಕೊಳ್ಳುತ್ತಾ ಬೆಳೆದೆ.

ಆಗೆಲ್ಲಾ ನನಗೆ ಸಿನಿಮಾದಲ್ಲಿ ಹೀರೋ ಎಂದರೆ ರಾಜ್‌ಕುಮಾರ್, ವಿಲನ್ ಎಂದರೆ ವಜ್ರಮುನಿ, ಹೀರೋಯಿನ್ ಎಂದರೆ ಭಾರತಿ! ಹೀಗೆ ಸಿನಿಮಾಗೆ ತೆರೆದುಕೊಂಡವನು ನಾನು.

ಆಗ ನನ್ನ ಹಿರಿಯಣ್ಣ ಕನ್ನಡದಲ್ಲಿ ಎಂ.ಎ. ಓದುತ್ತಿದ್ದ. ನಾನು ಏಳನೇ ತರಗತಿಯಲ್ಲಿ ಓದುತ್ತಿದ್ದೆ. ನನಗೆ ಗಣಿತ, ಸಮಾಜಶಾಸ್ತ್ರ, ವಿಜ್ಞಾನ



**'ಮುನ್ನುಡಿ' ಚಿತ್ರಕ್ಕಾಗಿ ರಾಷ್ಟ್ರಪತಿ ಪ್ರತಿಭಾ ಪಾಟೀಲರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ಪಿ. ಶೇಷಾದ್ರಿ**

ಎಂದರೆ ಬೋರು. ಒಮ್ಮೆ ಆಕಸ್ಮಿಕವಾಗಿ ಆತನ ಪಠ್ಯಪುಸ್ತಕ ಸಿಕ್ಕಿತು. ತಿರುವಿಹಾಕಿ ನೋಡಿದರೆ ಅದೊಂದು ಕಾದಂಬರಿ. ಶಿವರಾಮಕಾರಂತರದ್ದು ಎಂದು ನನ್ನ ನೆನಪು. ಕುತೂಹಲದಿಂದ ಓದಿದೆ. ನನ್ನ ಓದು ಆರಂಭವಾದದ್ದು ಹೀಗೆ! ಎಂ.ಎ. ಓದುವವರಿಗೆ ಕತೆ/ಕಾದಂಬರಿ ಪಠ್ಯವಾಗಿಡುತ್ತಾರೆ, ನಮಗೇಕೆ ಈ ಗಣಿತ, ವಿಜ್ಞಾನಗಳ ಹೇರಿಕೆ ಎಂದು ಬೈದುಕೊಂಡಿದ್ದೆ. ನಂತರ ಕುವೆಂಪು, ಭೈರಪ್ಪ ಅವರನ್ನೆಲ್ಲಾ ಓದಲು ತೊಡಗಿದೆ. ಓದಿ ನಾನೇ ಕತೆ ಬರೆಯಲು ಪ್ರಾರಂಭಿಸಿದೆ. ಯಾವುದೋ ಒಂದು ತುಮಕೂರಿನ ಪತ್ರಿಕೆ ನನ್ನ ಕತೆಯೊಂದನ್ನು ಪ್ರಕಟಿಸಿದ್ದು ನನಗೆ ನೂರಾನೆ ಬಲ ಕೊಟ್ಟಿತು. ಅದೇ ಸಂದರ್ಭದಲ್ಲಿ ಚಿತ್ರಕಲೆಯ ಬಗ್ಗೆ ಒಲವು ಬೆಳೆದು ಎಂ.ಟಿ.ವಿ.ಆಚಾರ್ಯರ ಶಿಷ್ಯನಾಗಿ ಆ ಕ್ಷೇತ್ರದಲ್ಲೂ ಒಂದಿಷ್ಟು ಮಣ್ಣು ಹೊತ್ತೆ.

ಚಿತ್ರಕಲೆ, ಸಾಹಿತ್ಯ ಎರಡರ ಪ್ರಭಾವಕ್ಕೆ ಸಿಕ್ಕಿ ಬೆಂಗಳೂರಿಗೆ ಬಂದು ಒಂದಷ್ಟು ವರ್ಷ ಸಿನಿಮಾ ಪತ್ರಕರ್ತನಾಗಿ 'ಸುದ್ದಿ ಸಂಗಾತಿ' ಎಂಬ ವಾರಪತ್ರಿಕೆಯೊಂದರಲ್ಲಿ ಕೆಲಸ ಮಾಡಿದೆ. ಆಗ ನನಗೆ ಸಿನಿಮಾ ಜಗತ್ತಿನ ವಿವಿಧ ಮಗ್ಗುಲುಗಳ ಪರಿಚಯವಾಯಿತು. ಹಾಗೆಯೇ ಜಾಗತಿಕ ಸಿನಿಮಾಗಳಿಗೆ




**ಭಾರತ್ ಸ್ಟೋರ್ಸ್**



**ಡಿಸೆಂಬರ್, ೧**



**ಬೆಟ್ಟದ ಜೀವ**

ನಾನು ತೆರೆದುಕೊಳ್ಳುತ್ತಾ ಹೋದ ಮೇಲೆ ಸಿನಿಮಾ ಎಂದರೆ ಬರೀ ರಾಜ್‌ಕುಮಾರ್, ವಜ್ರಮುನಿ ಅಷ್ಟೇ ಅಲ್ಲ, ಈ ಮಾಧ್ಯಮ ಇದನ್ನೆಲ್ಲ ಮೀರಿದ್ದು ಎಂಬುದನ್ನು ಅರಿತುಕೊಂಡೆ. ನಾನಾಗ ನನ್ನ ಅಭಿವ್ಯಕ್ತಿಗೆ ಸಂಪೂರ್ಣವಾಗಿ ಅಕ್ಷರಗಳನ್ನು ನಂಬಿದ್ದೆ. ಒಂದು ದಿನ ನಾನು ಕೆಲಸ ಮಾಡುತ್ತಿದ್ದ ಪತ್ರಿಕೆ ಮುಚ್ಚಿತು. ಮುಂದೇನು? ಬೀದಿಯಲ್ಲಿ ದಿಕ್ಕುತೋಚದೆ ನಿಂತಿದ್ದ ನನ್ನನ್ನು ಸಿನಿಮಾ ಆಕರ್ಷಿಸಿತು. ಇಲ್ಲಿ ಬರೆದು ಬದುಕೋಣ ಎಂದುಕೊಂಡು ಬಂದೆ. ಒಂದು ಚಿತ್ರಕ್ಕೆ ಚಿತ್ರಕತೆ ಸಂಭಾಷಣೆ ಬರೆದು ನಿರ್ದೇಶನ ವಿಭಾಗದಲ್ಲಿ ಕೆಲಸವನ್ನೂ ಮಾಡಿದ ಮೇಲೆ ನಿರ್ದೇಶಕನಾಗಬೇಕು ಅನ್ನಿಸಿತು. ಅಲ್ಲಿಂದ ಸಿನಿಮಾದ ಅ,ಆ,ಇ,ಈ ಕಲಿಯುತೊಡಗಿದೆ. ಇದಾಗಿ ಇಪ್ಪತ್ತರು ವರ್ಷಗಳೇ ಆಗಿಹೋದವು!

ಟಿ.ಎನ್.ಸೀತಾರಾಮ್ ಜೊತೆ ಸೇರಿ 'ಕಥೆಗಾರ' ಮತ್ತು 'ಮಾಯಾಮೃಗ'ದಂತ ಧಾರಾವಾಹಿಗಳನ್ನು ಮಾಡಿದ ನಂತರ ನನಗೆ ಸಿನಿಮಾದಲ್ಲಿ ಪ್ರಯೋಗ ಮಾಡುವ ಹೆಬ್ಬಯಕೆ ಹೆಚ್ಚಾಯಿತು. ಅಷ್ಟರಲ್ಲಾಗಲೇ ದೃಶ್ಯ ಮಾಧ್ಯಮ ನನ್ನ ವೃತ್ತಿಕ್ಷೇತ್ರವೂ ಆಗಿ ಹೋಗಿತ್ತು. ಆಗ ನಾನು ಎಂಥ ಸಿನಿಮಾ ಮಾಡಬೇಕು ಎಂಬ ಪ್ರಶ್ನೆ ಬೃಹದಾಕಾರವಾಗಿ ಎದ್ದಿತು. ಬದುಕಿಗಾಗಿ ವ್ಯಾಪಾರಿ ಸೂತ್ರಗಳ ಕಮರ್ಷಿಯಲ್ ಚಿತ್ರಗಳನ್ನು ಮಾಡುವುದೋ ಅಥವಾ ಸಂತೋಷಕ್ಕಾಗಿ ಕಲಾತ್ಮಕ ಚಿತ್ರಗಳ ಜಾಡನ್ನು ಹಿಡಿಯುವುದೋ? ಕೊನೆಗೆ ನನ್ನ ಬುದ್ಧಿಗಿಂತ ಮನಸ್ಸಿನ ಮಾತೇ ಗೆದ್ದಿತು.

ಬೊಳುವಾರು ಮಹಮದ್ ಕುಂಞಿ ಅವರ 'ಮುತ್ತುಚ್ಚೇರ' ಸಣ್ಣಕತೆಯನ್ನು ಆಧರಿಸಿ 'ಮುನ್ನುಡಿ' ಚಿತ್ರ ಮಾಡಬೇಕೆಂದು ತೀರ್ಮಾನಿಸಿದೆ. ಭರವಸೆಕೊಟ್ಟ ನಿರ್ಮಾಪಕರೆಲ್ಲ ಕೈ ಎತ್ತಿದರು. ಕೊನೆಗೆ ಹತ್ತುಜನ ಸ್ನೇಹಿತರನ್ನು ಸೇರಿಸಿಕೊಂಡು ಸಹಕಾರಿ ತತ್ವದಲ್ಲಿ ತಂಡಕಟ್ಟಿ ನಿರ್ಮಾಣಕ್ಕೂ ಇಳಿದೆ. ಅದೊಂದು ಹುತ್ತಕ್ಕೆ ಕೈ ಹಾಕುವ ವಿಚಿತ್ರ ಪ್ರಯೋಗವಾಗಿತ್ತು. ನಮ್ಮ ನಿರೀಕ್ಷೆಗೆ ಮೀರಿ ಚಿತ್ರ ಯಶಸ್ವಿಯಾಯಿತು. ಎರಡು ರಾಷ್ಟ್ರಪ್ರಶಸ್ತಿ, ಆರು ರಾಜ್ಯ ಪ್ರಶಸ್ತಿ ಮತ್ತು ಹಲವಾರು ಚಲನಚಿತ್ರೋತ್ಸವಗಳಲ್ಲಿ ಭಾಗಿಯಾಗುವುದರೊಂದಿಗೆ ನನ್ನ ಚಿತ್ರಜೀವನಕ್ಕೆ ಅದ್ಭುತವಾದ ಮುನ್ನುಡಿ ಬರೆದು ನನ್ನ ಇಲ್ಲಿನ ಹಾದಿಯನ್ನು ಸ್ಪಷ್ಟಪಡಿಸಿತು.

'ಮುನ್ನುಡಿ'ಯಿಂದ ಸಾಗಿದ ನನ್ನ ಚಿತ್ರ ಪ್ರಯಾಣ 'ಅತಿಥಿ', 'ಬೇರು', 'ತುತ್ತೂರಿ', 'ವಿಮುಕ್ತಿ', 'ಬೆಟ್ಟದ ಜೀವ', 'ಭಾರತ್‌ಸ್ಟೋರ್ಸ್', 'ಡಿಸೆಂಬರ್-೧' ಮತ್ತು 'ವಿದಾಯ' ಸೇರಿ ಒಂಭತ್ತಕ್ಕೆ ಬಂದು ನಿಂತಿದೆ. ಇದರಲ್ಲಿ ಎರಡು ಚಿತ್ರಗಳು ಮಾತ್ರ ಸಾಹಿತ್ಯಕೃತಿಯನ್ನು ಆಧರಿಸಿದ್ದು, ಹೆಚ್ಚಿನವುಗಳಿಗೆ ನಾನೇ ಕತೆ/ಚಿತ್ರಕತೆ ಬರೆದುಕೊಂಡಿದ್ದೇನೆ. ಯಾರಿಂದಲೋ ಕೇಳಿದ ಘಟನೆ, ಪತ್ರಿಕೆಯಲ್ಲಿ ಓದಿದ ಸುದ್ದಿಗಳು ನನ್ನ ಚಿತ್ರಕ್ಕೆ ವಸ್ತುವಾಗಿವೆ. ಒಂದೊಂದರ ಹಿಂದೆಯೂ ಒಂದೊಂದು ಕತೆಯಿದೆ. ಸದ್ಯಕ್ಕೆ 'ಭಾರತ್ ಸ್ಟೋರ್ಸ್' ಮಾಡಿದ ಹಿನ್ನೆಲೆಯನ್ನು ಹೇಳುತ್ತೇನೆ.

೨೦೧೨ ನೇ ಇಸವಿ ಸಪ್ಟೆಂಬರ್ ಹದಿನಾಲ್ಕನೇ ತಾರೀಖು.

ದೆಹಲಿಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಒಂದು ಪ್ರಮುಖ ನಿರ್ಧಾರ ಹೊರಬಂತು.

ಭಾರತದ ಆರ್ಥಿಕ ಸುಧಾರಣೆಯ ನೆಪದಲ್ಲಿ **'ಬಹುಬ್ರಾಂಡ್ ಚಿಲ್ಲರೆ ಮಾರಾಟ ವಲಯದಲ್ಲಿ ಶೇಕಡ ೫೧ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಲಾಯಿತು'**. ಈ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದ್ದಂತೆಯೇ ಇದರ 'ಪರ' ಮತ್ತು 'ವಿರೋಧ' ಚರ್ಚೆಗಳು ಸಾರ್ವಜನಿಕ ವಲಯದಲ್ಲಿ ಕ್ಷಿಪ್ರವಾಗಿ ಆರಂಭವಾದವು... ನಾನು ಇದನ್ನೆಲ್ಲ ಕುತೂಹಲದಿಂದ ಗಮನಿಸುತ್ತಿದ್ದೆ.

ಒಂದು ಬೆಳಗ್ಗೆ, ನನ್ನ ಮಗನನ್ನು ಟ್ಯೂಷನ್‌ನಿಂದ ಮನೆಗೆ ಕರೆದುಕೊಂಡು ಬರಲು ಹೋಗಿದ್ದೆ. ಇನ್ನೂ ಅವನ ಕ್ಲಾಸ್ ಬಿಟ್ಟಿರಲಿಲ್ಲ. ಹಾಗಾಗಿ ರಸ್ತೆಬದಿಯಲ್ಲಿ ಕಾದಿದ್ದೆ. ಅಲ್ಲೇ ಬದಿಯಲ್ಲಿ ಒಂದು ಪುಟ್ಟ ಕಿರಾಣಿ ಅಂಗಡಿ ಇತ್ತು. ವಯಸ್ಸಾದ ವ್ಯಕ್ತಿಯೊಬ್ಬರು ಗಲ್ಲದಲ್ಲಿ ಕುಳಿತಿದ್ದರು. ನಿಸ್ತೇಜ ಕಳೆ. ಅಂಗಡಿಯಲ್ಲಿ ಯಾವುದೇ ಆಕರ್ಷಣೆ ಇರಲಿಲ್ಲ. ಮುಂದೆ ಸಾಲಾಗಿ ಜೋಡಿಸಿದ್ದ ಗಾಜಿನ ಶೀಶೆಯಲ್ಲಿ ಚಾಕಲೇಟ್‌ಗಳು, ಪೆಪ್ಪರ್‌ಮೆಂಟ್‌ಗಳು, ತೂಗುಬಿದ್ದ ಪ್ಲಾಸ್ಟಿಕ್ ಚೀಲದಿಂದ ಕರಿದ ಬೋಟಿ, ಮೂಲೆಯಲ್ಲಿ ಕಟ್ಟಿದ್ದ ಒಂದು ಮಾಸಲು ಮಾಸಲಾದ ಬಾಳೆಗೊನೆ, ಹೊರಗೆ ಚೀಲದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಪೊರಕೆಕಟ್ಟು, ಒಳಗೆ ಒಂದಿಷ್ಟು ಸಾಮಗ್ರಿ ಜೊತೆಯಲ್ಲಿ ದಂಡಿಯಾಗಿ ಕತ್ತಲು, ಕತ್ತಲು... ಅವರನ್ನು ನೋಡಿದರೆ ನಮ್ಮೂರಿನ ಶೆಟ್ಟರ ಅಂಗಡಿ ನೆನಪಿಗೆ ಬರುತ್ತಿತ್ತು. ಆದರೆ ಇಲ್ಲಿ ಯಾವುದೇ ಚಟುವಟಿಕೆ ಇರಲಿಲ್ಲ. ಅದರ ಬದಿಯಲ್ಲೇ ಒಂದು ಪ್ಲಾಸ್ಟಿಕ್ ಅಂಗಡಿ ಇತ್ತು. ಅದು ಬಣ್ಣ, ಲೈಟಿನ ಆಕರ್ಷಣೆಯಲ್ಲಿ ಜಿಗಿಜಿಗಿ ಎನ್ನುತ್ತಿತ್ತು. 'ಭಾರತ್ ಸ್ಟೋರ್ಸ್' ಸಣ್ಣ ಎಳೆ ಹುಟ್ಟಿದ್ದು ಆಗಲೇ.

ಈ ಐಡಿಯಾವನ್ನು ಯೋಚನೆ ಮಾಡುತ್ತಿದ್ದಾಗ ನನ್ನ ಬದುಕಿನಲ್ಲಿ ನಡೆದ ಒಂದು ಘಟನೆ ನೆನಪಿಗೆ ಬಂತು.

ನಾನು ಬೆಂಗಳೂರಿಗೆ ವೃತ್ತಿಯನ್ನು ಅರಸಿ ಬಂದದ್ದು ೧೯೮೫ರಲ್ಲಿ. ಮೆಜಸ್ಟಿಕ್‌ನಲ್ಲಿ ಕೆಲಸ. ಅಕ್ಕನ ಮನೆಯಿದ್ದದ್ದು ಶ್ರೀನಗರದಲ್ಲಿ. ಪ್ರತಿದಿನವೂ ಸಿಟಿ ಬಸ್ಸಿನಲ್ಲಿ ಹೋಗಿ ಬರುತ್ತಿದ್ದೆ. ಉದ್ದಕ್ಕೂ ಹಲವಾರು ನಿಲ್ದಾಣಗಳು ಸಿಗುತ್ತಿದ್ದವು. ಕಾರ್ಪೋರೇಷನ್, ಸಿಟಿ ಮಾರ್ಕೆಟ್, ಚಾಮರಾಜಪೇಟೆ, ರಾಮಕೃಷ್ಣಆಶ್ರಮ, ಗಣೇಶ್ ಭವನ್, ದೇವಸ್ಥಾನ ಸ್ಟಾಪ್, ನಿರ್ಮಲಾ ಸ್ಟೋರ್ಸ್ ಸ್ಟಾಪ್ ಹೀಗೆ..ಪ್ರತಿಯೊಂದೂ ಸ್ಟಾಪ್‌ಗೆ ಆಯಾಯಾ ಹೆಸರು ಬರಲು ಒಂದೊಂದು ಹಿನ್ನೆಲೆ ಸ್ಪಷ್ಟವಾಗಿತ್ತು. ಆದರೆ ನನಗೆ ನಿರ್ಮಲಾ ಸ್ಟೋರ್ಸ್‌ನ ಹಿನ್ನೆಲೆ ಗೊತ್ತಾಗಲಿಲ್ಲ. ಆ ಸ್ಟಾಪ್‌ಗೆ ಆ ಹೆಸರು ಏಕೆ ಬಂತು ಎಂದು ಕಂಡೆಕ್ಟರ್‌ಗಳನ್ನು ಕೇಳಿದೆ ಉತ್ತರ ಸಿಗಲಿಲ್ಲ. ಪ್ರಯಾಣಿಕರು ಗೊತ್ತಿಲ್ಲ ಎಂದರು. ಒಂದು ದಿನ ಆ ಸ್ಟಾಪ್‌ನಲ್ಲಿ ಇಳಿದು ಹಿನ್ನೆಲೆ ಹುಡುಕುತ್ತಾ ಹೋದ ನನಗೆ ಅಲ್ಲೊಂದೆಡೆ ಪುಟ್ಟ ಮಾಸಲು ಬಣ್ಣದ 'ನಿರ್ಮಲಾ ವಸ್ತ್ರಾಲಯ' ಎಂಬ ಬೋರ್ಡ್ ತೋರಿಸಿದರು. ತುಕ್ಕು ಹಿಡಿದ ಶಟರ್ ಅಂಗಡಿಗೆ ಬೀಗ ಹಾಕಲಾಗಿತ್ತು. ಆ ಅಂಗಡಿ ಯಾರದ್ದು? ಯಾಕೆ ಮುಚ್ಚಲಾಯಿತು? ಎಂಬ ಯಾವ ಪ್ರಶ್ನೆಗಳಿಗೂ ನನಗೆ ಸಮರ್ಥ ಉತ್ತರ ಸಿಗಲಿಲ್ಲ. ಅಲ್ಲಿಗೇ ಅದನ್ನು ಬಿಟ್ಟುಬಿಟ್ಟೆ.

ಇಪ್ಪತ್ತೆಂಟು ವರ್ಷಗಳ ನಂತರ 'ಭಾರತ್‌ಸ್ಟೋರ್ಸ್' ಸಿನಿಮಾ ಮಾಡಬೇಕು ಎಂದು ಹೊರಟಾಗ ನನಗೆ ಈ ಘಟನೆ ತಟ್ಟನೆ ನೆನಪಿಗೆ ಬಂತು. ಎರಡು ವಾರ ಕುಳಿತು ಒಂದುಕತೆ ಹೆಣೆದುಕೊಂಡೆ.

ಕಥೆ ಸ್ಥೂಲವಾಗಿ ಹೀಗಿದೆ:

ಆಕೆ ಭಾರತಿ. ಸುಮಾರು ಒಂಬತ್ತು ವರ್ಷಗಳ ನಂತರ ಅಮೆರಿಕಾದಿಂದ ಗಂಡ ಶರತ್‌ನೊಂದಿಗೆ ಬೆಂಗಳೂರಿಗೆ ಬಂದಿದ್ದಾಳೆ. ಆಕೆಯ ಉದ್ದೇಶ ತನ್ನ ತಂದೆಯ ಸ್ನೇಹಿತ ಗೋವಿಂದಶೆಟ್ಟಿಯನ್ನು ಭೇಟಿಯಾಗಿ ಋಣ ಸಂದಾಯ ಮಾಡುವುದು.

'ಭಾರತ್ ಸ್ಟೋರ್ಸ್' ಎಂಬುದು ಗೋವಿಂದಶೆಟ್ಟಿ ನಡೆಸುತ್ತಿದ್ದ ಒಂದು ಪುಟ್ಟ ಕಿರಾಣಿ ಅಂಗಡಿ. ಒಂದು ಕಾಲದಲ್ಲಿ ಅದರ ಖ್ಯಾತಿಯಿಂದಾಗಿಯೇ ಆ ಬಸ್ ನಿಲ್ದಾಣಕ್ಕೆ **'ಭಾರತ್ ಸ್ಟೋರ್ಸ್ ಸ್ಟಾಪ್** 'ಎಂದು ಹೆಸರು ಬಂದಿತ್ತು! ಗೋವಿಂದಶೆಟ್ಟಿಯನ್ನು ಹುಡುಕಿಕೊಂಡು ಬಂದ ಭಾರತಿಗೆ ಭಾರತ್ ಸ್ಟೋರ್ಸ್ ಹೆಸರಿನ ನಿಲ್ದಾಣ ಸಿಗುತ್ತದೆ, ಆದರೆ ಅಂಗಡಿಯಾಗಲಿ, ಶೆಟ್ಟಿಯಾಗಲಿ ಸಿಗುವುದಿಲ್ಲ!

ಶೆಟ್ಟಿಯ ಪತ್ತೆಯನ್ನು ಹುಡುಕುತ್ತಾ ಹೋದವಳಿಗೆ ಆತನ ಅಂಗಡಿಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಚಂದ್ರ ಮತ್ತು ಮಂಜುನಾಥ ಸಿಗುತ್ತಾರೆ. ಶೆಟ್ಟಿಯನ್ನು ತೀರ ಹತ್ತಿರದಿಂದ ಕಂಡ ಅವರಿಬ್ಬರು ಶೆಟ್ಟಿಯ ಒಂದೊಂದು ಹಂತದ ಕತೆಯನ್ನು ಹೇಳತೊಡಗುತ್ತಾರೆ. ಅದರ ಮೂಲಕ ಶೆಟ್ಟಿಯ ಕಿರಾಣಿ ಅಂಗಡಿಯ ವ್ಯಾಪಾರ, ಆತ ಮತ್ತು ಗಿರಾಕಿಗಳ ಸಂಬಂಧ, ಆತನ ಕುಟುಂಬ, ಅಲ್ಲಿನ ಆಗು-ಹೋಗುಗಳು ಎಲ್ಲವೂ ಪರಿಚಯವಾಗುತ್ತವೆ... ಕೊನೆಗೆ ಭಾರತಿ ಗೋವಿಂದಶೆಟ್ಟಿಯನ್ನು ತುಂಬ ದಯನೀಯ ಸ್ಥಿತಿಯಲ್ಲಿ ವೃದ್ಧಾಶ್ರಮದಲ್ಲಿ ಭೇಟಿಯಾಗುತ್ತಾಳೆ. ಆಗ ಊರಲ್ಲಿ ಎಫ್‌ಡಿಐನ ಚರ್ಚೆ ತೀವ್ರವಾಗಿ ನಡೆದಿರುತ್ತದೆ. ಭಾರತಿ ಗೋವಿಂದಶೆಟ್ಟಿಯ ಕತೆಗೂ ಎಫ್‌ಡಿಐಗೂ ತಾಳೆ ಹಾಕುತ್ತಾಳೆ, ಚರ್ಚಿಸುತ್ತಾಳೆ.

ಹೀಗೆ ಚಿತ್ರ ತಯಾರಾಯಿತು. ಈ ಚಿತ್ರಕ್ಕೂ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಬಂದವು. ಇದು ಚಿತ್ರಮಂದಿರಗಳಲ್ಲೂ ಬಿಡುಗಡೆಯಾಯಿತು. ಸಂಘಟನೆಯೊಂದು ಮುಂದೆ ಬಂದು ಅದರ ಒಂದು ಸಾವಿರ ಪ್ರದರ್ಶನಗಳನ್ನು ರಾಜ್ಯದ ಅನೇಕ ಕಡೆ ಮಾಡಿತು. ಇಂದೂ 'ಭಾರತ್‌ಸ್ಟೋರ್ಸ್' ದೆಹಲಿ ದೂರದರ್ಶನ ಮತ್ತು ಬೆಂಗಳೂರು ದೂರದರ್ಶನದಿಂದ ಆಗಾಗ ಪ್ರಸಾರವಾಗುತ್ತಲೇ ಇರುತ್ತದೆ. ನಾನು ಹೋದ ಕಡೆ ಜನ ನೆನಪಿಸಿಕೊಳ್ಳುತ್ತಾರೆ. ನಾವು ಗೋವಿಂದಶೆಟ್ಟಿಯ ಸ್ಥಿತಿ ನೋಡಿ ಕಣ್ಣೀರು ಹಾಕಿದೆವು ಅನ್ನುತ್ತಾರೆ. ಅದು ನನಗೆ ಮುಖ್ಯ ಅನ್ನಿಸುವುದಿಲ್ಲ. ಈ ಚಿತ್ರ ನೋಡಿದ ಮೇಲೆ ನಾನು ಮಾಲ್‌ಗಳಲ್ಲಿ ಏನನ್ನೂ ಕೊಳ್ಳುವುದು ಬೇಡ ಎಂದು ನಿರ್ಧರಿಸಿ, ಈಗೆಲ್ಲ ಶೆಟ್ಟಿಅಂಗಡಿ, ಕಾಕಾ ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತೇನೆ ಎನ್ನುವವರನ್ನು ಕಂಡಿದ್ದೇನೆ. ಅದನ್ನು ಕೇಳಿದಾಗ ನನಗೆ ಮನಸ್ಸು ತುಂಬಿ ಬರುತ್ತದೆ. ಸರ್ಕಾರವೂ ಮಲ್ಟಿಬ್ರಾಂಡ್ ಎಫ್‌ಡಿಐ ಹೂಡಿಕೆಯಿಂದ ನಿರ್ಧಾರದಿಂದ ಹಿಂದೆ ಸರಿದಿದೆ.

ಒಬ್ಬ ಚಿತ್ರ ನಿರ್ಮಾತೃಗೆ ಇದಕ್ಕಿಂತ ಇನ್ನೇನು ಬೇಕು?

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ನೀವು ದೀಪದಂತೆ ಸ್ವಯಂಪ್ರಕಾಶಿತರಾಗಿ, ಪರಪ್ರಕಾಶಿತರಾಗಬೇಡಿರಿ. ನಿಮ್ಮನ್ನು ನೀವು ನಂಬಿಕೊಂಡು ಹೋಗಿರಿ. ಎರಡನೆಯವರ ಅಂಕಿತದಲ್ಲಿ ಹೋಗಬೇಡಿ.

**– ಭಗವಾನ್ ಬುದ್ಧ**



**ಹೋಟೆಲ್ ವಿಶ್ವ ರೆಸಾರ್ಟ್**

ಮಾಲೀಕರು: **ನಾರಾಯಣ ಶೆಟ್ಟಿ**

ಮತ್ತು **ಕುಟುಂಬ**

ಮಮಿಗಟ್ಟಿ ಗ್ರಾಮ

ಪವರ್ ಗ್ರಿಡ್ ಎದುರು

ಧಾರವಾಡ ತಾಲ್ಲೂಕು

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

**ನಿಜವಾಗಿಯೂ ಕಷ್ಟದಿಂದ ಲಾಭವೇ ಇದೆ**

~ ಕುರಾನ್



# ಸ್ಟಾರ್ ಫೋಟೋ ಸ್ಟುಡಿಯೋ ಮತ್ತು ಲ್ಯಾಬ್

**ಮಾಲೀಕರು:**

**ಮೊಹಮ್ಮದ್ ಹನೀಫ್ ಮೇಸ್ತ್ರಿ**

**ಅಂಜುಮಾನ್ ಕಾಂಪ್ಲೆಕ್ಸ್**

**ಸಿಟಿ ಬಸ್ ಟರ್ಮಿನಲ್ ಎದುರು**

**ಧಾರವಾಡ**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಪ್ರತಿ ಅಲೆಯ ಹಿಂದೆಯೂ ಸಮುದ್ರವೇ ಇರುತ್ತದೆ.

- ಸ್ವಾಮಿ ವಿವೇಕಾನಂದ



**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ,**
ಗೊಟ್ಟಿಗೆರೆ, ಬನ್ನೇರುಘಟ್ಟ,
ಬೆಂಗಳೂರು.

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಇರುವೆಯ ಕಾಲ ಸಪ್ಪಳವನ್ನೂ ಕೇಳಬಲ್ಲ ಭಗವಂತನಿಗೆ ಗದ್ದಲವನ್ನು ಮಾಡಿಕೊಂಡೇಕೆ ಪ್ರಾರ್ಥನೆ ಸಲ್ಲಿಸಬೇಕು?

**– ಸಂತ ಕಬೀರ**



**ಕೆ ಜಿ. ಶ್ರೀನಿವಾಸ್**
**ಸಪ್ತಗಿರಿ, ನಂ. 301,**
**2ನೇ ಮುಖ್ಯರಸ್ತೆ, 16ನೇ ಕ್ರಾಸ್,**
**ಮಲ್ಲೇಶ್ವರಂ, ಬೆಂಗಳೂರು** – 560003

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ತನ್ನನ್ನು ತಾನು ಗೆದ್ದಾಗ ಎಲ್ಲವನ್ನೂ ಗೆದ್ದಂತೆ.

–ಭಗವಾನ್ ಮಹಾವೀರ



**ಎನ್. ಪಾಪಣ್ಣ**

ಶ್ರೀ ರಾಮಕೃಷ್ಣ ಇಂಜಿನಿಯರಿಂಗ್ ವರ್ಕ್ಸ್

ISO 9001 ಕಂಪೆನಿ

ನಂ. ೮೭/ಅ, ೩ನೇ ಮುಖ್ಯರಸ್ತೆ,

ಇಂಡಸ್ಟ್ರಿಯಲ್ ಟೌನ್

ರಾಜಾಜಿನಗರ, ಬೆಂಗಳೂರು – 560044

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಸೂಜಿ ಕಣ್ಣಿನಲ್ಲಿ ಒಂಟೆಯಾದರೂ ಹಾದು ಹೋದೀತು. ಆದರೆ ಧನಿಕನು ಮಾತ್ರ ಸುಲಭವಾಗಿ ದೇವರ ಸಾಮ್ರಾಜ್ಯವನ್ನು ಪ್ರವೇಶಿಸಲಾರ

- ಬೈಬಲ್




**ಜಿ.ಆರ್. ಕೃಷ್ಣಪ್ಪ,**

ಸಂಸ್ಥಾಪಕರು, **ಸೈಂಟ್ ಫ್ಲವರ್ ಸ್ಕೂಲ್,**

**ವಿದ್ಯಾರಣ್ಯನಗರ, ಪ್ರಸನ್ನ ಥಿಯೇಟರ್ ಹತ್ತಿರ,**

**ಬೆಂಗಳೂರು**

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ನಾವು ಜೊತೆಯಾಗಿ ನಡೆಯೋಣ. ಒಳ್ಳೆಯ ಮನಸ್ಸಿನಿಂದ ಮಾತನಾಡಿ

ಒಬ್ಬರನ್ನೊಬ್ಬರು ತಿಳಿದುಕೊಂಡು ಬದುಕೋಣ

–ಯಜುರ್ವೇದ



ಹೋಟೆಲ್ ವೈಭವ್ (ಸಸ್ಯಾಹಾರಿ)

ತುಮಕೂರು-ಮೈಸೂರು ರಸ್ತೆ

ನಾಗಮಂಗಲ – ೫೭೧೪೩೨

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

**ಉತ್ತಮ ಗುಣ ನೀರಿನಂತೆ. ಎಲ್ಲರಿಗೂ ಒಳ್ಳೆಯದನ್ನು ಮಾಡಿ ತಾನು ತಗ್ಗಿನಲ್ಲಿಯೇ ನಿಲ್ಲುತ್ತದೆ.**

**ತಾವೋ ಗುರು ಲಾವೋತ್ಸೆ**




. –ಎನ್.ಆರ್. ಬಾಲಸುಬ್ರಹ್ಮಣ್ಯ,
ಶ್ರೀಮತಿ ಮೀನಾ
ಕು. ಶ್ರೇಯ
ಕು. ಶ್ರಾವ್ಯ
**ಮುಂಬೈ**

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ದೇವರು ಹುಲಿಯಲ್ಲಿ ಕೂಡ ಇರುತ್ತಾನೆ ನಿಜ. ಆದರೆ ಅದಕ್ಕಾಗಿ ನಾವು ಹೋಗಿ ತಬ್ಬಿಕೊಳ್ಳಬೇಕಾಗಿಲ್ಲ. ಅತ್ಯಂತ ದುಷ್ಟರಲ್ಲಿ ಕೂಡ ದೇವರು ಇರುತ್ತಾನೆಂಬುದು ನಿಜ. ಆದರೆ ಅವರೊಂದಿಗೆ ನಾವು ಸಲಿಗೆಯಿಂದಿರುವುದು ಯೋಗ್ಯವಲ್ಲ.

**– ರಾಮಕೃಷ್ಣ ಪರಮಹಂಸ**



ಸದಾನಂದ

ನಂ.೨೧, ೮ನೇ ಮತ್ತು ೯ನೇ ಕ್ರಾಸ್

ಮಲ್ಲೇಶ್ವರಂ

ಬೆಂಗಳೂರು–೫೬೦ ೦೦೩

## ಹೊಸ ಮನುಷ್ಯ ಓದುಗರೆಲ್ಲರಿಗೂ

**ಹಾರ್ದಿಕ ಶುಭಾಶಯಗಳು**

ಎಲ್ಲ ಹಕ್ಕುಗಳ ಮೂಲ ಇರುವುದು ಕರ್ತವ್ಯದಲ್ಲಿ. ನಾವು ನಮ್ಮ ಕರ್ತವ್ಯಗಳನ್ನು ಮಾಡುವ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳೋಣ

**–ಮಹಾತ್ಮಾ ಗಾಂಧಿ**



**ಬಿ. ಗಂಗಣ್ಣ,**

ನಂ. ೧೫೩, ೧೦ ನೇ ಮುಖ್ಯರಸ್ತೆ,

ಬಿ.ಸಿ.ಸಿ. ಲೇ ಔಟ್, ೩ನೇ ಹಂತ,

ಬೆಂಗಳೂರು – ೫೬೦೦೮೦

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ನಿಮ್ಮಲ್ಲಿ ನೀವು ತಿಳಿದು ನೋಡಿರೆ, ಅನ್ಯವಿಲ್ಲ ಕಾಣಿರಣ್ಣ. ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ

– ಅಲ್ಲಮ



**ಎಂ.ಎಸ್. ನಂದೀಶ್**

*ಆಡ್ಸ್ ಪ್ರಿಂಟ್ಸ್,*

ನಂ. 707, ಮಂಜು ಕಾಂಪ್ಲೆಕ್ಸ್,

73ನೇ ಕ್ರಾಸ್, 6ನೇ ಬ್ಲಾಕ್,

ರಾಜಾಜಿನಗರ, ಬೆಂಗಳೂರು–೫೬೦೦೧೦

email:adprints2008@gmail.com

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ದಾರಿದ್ರ್ಯ ಧರ್ಮವಾಗುವುದಾದರೆ, ನರಕ ಎಂದರಾದರೂ ಏನು? ದರಿದ್ರರಾಗಿರುವ ಹಕ್ಕು ಯಾರಿಗೂ ಇಲ್ಲ. ಹಾಗೆ ಇರುವುದು ಒಂದು ತಪ್ಪು. ಅದೊಂದು ಪಾಪ. ಪ್ರತಿಯೊಂದು ಮುಗುಳ್ನಗೆಯೂ ದೇವರಿಗರ್ಪಿಸಿದ ಪ್ರಾರ್ಥನೆಯೇ ಸರಿ

**– ಸ್ವಾಮಿ ವಿವೇಕಾನಂದ**

**ಜಿ. ಎಸ್.ಜಯದೇವ**

**ದೀನಬಂಧು ಟ್ರಸ್ಟ್,**

ಚಾಮರಾಜನಗರ

**ಹೊಸ ಮನುಷ್ಯ ಓದುಗರೆಲ್ಲರಿಗೂ**

**ಹಾರ್ದಿಕ ಶುಭಾಶಯಗಳು**

ಎಲ್ಲ ಕೆಲಸವೂ ನಿರರ್ಥಕವೇ, ಅಲ್ಲಿ ಪ್ರೀತಿ ಇರದ ಹೊರತು.

**– ಖಲೀಲ್ ಗಿಬ್ರಾನ್**

**ಮೆ. ಬ್ರೈಟ್ ಏಜೆನ್ಸೀಸ್**

ಎಲ್.ಎಲ್.ಆರ. ರಸ್ತೆ

ಶಿವಮೊಗ್ಗ–೫೭೭೨೦೧(ಕರ್ನಾಟಕ)

ದೂ: ೦೮೧೮೨–೨೯೦೦೫೭

ಟೆಲಿಫ್ಯಾಕ್ಸ್: ೦೮೧೮೨–೨೭೯೮೫೦

e-mail: brightagency@dataone.in

brightagenciessmg@gmail.com

**ಹೊಸ ಮನುಷ್ಯ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು**

# ಜಿಲ್ಲಾ ಬಾಲಭವನ, ದಾವಣಗೆರೆ

–:ಸಂಪನ್ಮೂಲ ವ್ಯಕ್ತಿಗಳು:–

**ದೊಗ್ಗಳ್ಳಿಗೌಡ್ರು ಪುಟ್ಟರಾಜು, ಎಂ. ಗುರುಸಿದ್ದಸ್ವಾಮಿ, ಕಲವೀರ ಕಳ್ಳೀಮನಿ,**
**ಎ. ಹೆಚ್. ವಿವೇಕಾನಂದಸ್ವಾಮಿ, ಆರ್. ಬಿ. ಹನುಮಂತಪ್ಪ, ಪ್ರಶಾಂತ್‌ರಾಜ್,**
**ಗಿರೀಶ್ ಎಸ್ ದೇವರಮನೆ, ಉಮೇಶ್‌ಬಾಬು, ಪ್ರಹ್ಲಾದ್ ಎಸ್ ಭಟ್,**
**ಮೆದಿಕೆರೆ ರಂಗಸ್ವಾಮಿ, ಕೊಟ್ರೇಶ್‌ಗೌಡ, ಮಂಜುನಾಥ ಶಾಸ್ತ್ರಿ,**
**ಪ್ರತಿಭಾ ಪಿ ದೊಗ್ಗಳ್ಳಿ, ಎನ್. ಬಿ. ಲೀಲಾ, ಆರ್. ವಿದ್ಯಾ.**

ಹೊಸ ಮನುಷ್ಯ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು

ಸ್ವರ್ಗ ನರಕಗಳೆಂಬುವು ಬೇರಿಲ್ಲ ಕಾಣೀಭೋ

ಆಚಾರವೇ ಸ್ವರ್ಗ ಅನಾಚಾರವೇ ನರಕ

–ಬಸವಣ್ಣ

**ವೀರಣ್ಣ ಯಡಳ್ಳಿ,**

**ಸಿವಿಲ್ ಕಂಟ್ರಾಕ್ಟರ್,**

ಉಪ್ಪಿನಬೆಟಗೇರಿ ಗ್ರಾಮ,

ಧಾರವಾಡ ತಾ. ಜಿ.

ಶುಭಾಶಯಗಳೊಂದಿಗೆ...

ಉತ್ತಮ ಕನ್ನಡಕಗಳಿಗಾಗಿ

**ಶಿವಾನಿ ಆಪ್ಟಿಕಲ್ಸ್,**

ನೂತನ ಮಾದರಿಯ, ವಿವಿಧ ನಮೂನೆಯ ತಂಪು ಕನ್ನಡಕಗಳು, ರೀಡಿಂಗ್ ಗ್ಲಾಸ್‌ಗಳು, ಪ್ರತಿಷ್ಠಿತ ಕಂಪೆನಿಗಳ ಕನ್ನಡಕಗಳು, ಪರೀಕ್ಷಿಸಲ್ಪಟ್ಟ ಕನ್ನಡಕಗಳ ಮಹಾಪೂರ ಒಂದೇ ಸೂರಿನಡಿ.

**ಒಮ್ಮೆ ಭೇಟಿ ಕೊಡಿ.ಶಾಪ್**

ನಂ. ೧೦, ಎಂ.ಜಿ.ಪ್ಯಾಲೇಸ್

ಗೋಪಿ ವೃತ್ತ, ಶಿವಮೊಗ್ಗ

ಶುಭಾಶಯಗಳೊಂದಿಗೆ...

**ಅಧ್ಯಕ್ಷರು ಹಾಗೂ ಸದಸ್ಯರು,**

**ಯುವ ಸಮೂಹ (ರಿ)**

**ಆವರಗೆರೆ, ದಾವಣಗೆರೆ.**

ಶುಭಾಶಯಗಳೊಂದಿಗೆ...

**ಡಾ. ಹೆಚ್. ವಿಶ್ವನಾಥ್**

**ಸಿಂಡಿಕೇಟ್ ಸದಸ್ಯರು,**

**ದಾವಣಗೆರೆ ವಿಶ್ವವಿದ್ಯಾನಿಲಯ**

**ದಾವಣಗೆರೆ**

ಶುಭಾಶಯಗಳೊಂದಿಗೆ...




**ಬನಶ್ರೀ ಸೈನೇಜಸ್**

ಮಾಲೀಕರು: ದಿನಕರ ಜೋಷಿ

ನಂ.1, ಬೆಟ್ಟದೂರು ಕಾಂಪೌಂಡ್

ಸರ್ಕಾರಿ ಶಾಲೆ ಬಳಿ, ಮಾಳಮಡ್ಡಿ

ಧಸರವಾಡ–580 007

ಶುಭಾಶಯಗಳೊಂದಿಗೆ...

## ಸಹನಾ ಎಂಟರ್‌ಪ್ರೈಸೆಸ್

ಇಂಡಿಯಾ ಸಿಮೆಂಟ್ಸ್, ದಾಸಿ,
ಕೋರಮಂಡಲ ಮತ್ತು ಶಂಕರ್ ಸಿಮೆಂಟುಗಳ

ಅಧಿಕೃತ ಮಾರಾಟಗಾರರು ಮತ್ತು ಸರ್ಕಾರಿ
ಪೂರೈಕೆದಾರರು,

ಕೆ.ಹೆಚ್.ಬಿ. ಕಾಲೋನಿ, ಗೋಪಾಳ,

**ಶಿವಮೊಗ್ಗ.**

ಶುಭಾಶಯಗಳೊಂದಿಗೆ...



ರವಿ ಸಸಿತೋಟ

**ಶಿವಮೊಗ್ಗ**

ಶುಭಾಶಯಗಳೊಂದಿಗೆ...



**ಡಿ. ಮೋಹನ್ ಶಾಸ್ತ್ರಿ**

**ಮತ್ತು ಕುಟುಂಬ**

**ಶಿವಮೊಗ್ಗ**

ಶುಭಾಶಯಗಳೊಂದಿಗೆ...



ಎನ್.ಎಸ್.ಗಂಗಾಧರ ಮೂರ್ತಿ

**ಪ್ರಜ್ಞಾ ಪರಿಸರ ವೇದಿಕೆ**

**ತುಮಕೂರು**

ಮೊ. 9343563409/9242938200